₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಬುಧವಾರ 04.12.2024 ಸಂಪುಟ:67 ಸಂಚಿಕೆ:209 ಪುಟಗಳು:12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಬರಡು ಭೂಮಿಯಲ್ಲಿ ಬಂಗಾರ ಬೆಳೆದ
ಸಾಹಸಿ ಮಹಿಳೆಯ
ಕುತೂಹಲಕರ ಜೀವನ ಕಥನ!
ವಿಶ್ವವಾಣಿ TV SPECIAL
Subscribe ಮಾಡಿ

ಪುಟ ತೆರೆದಂತೆ...

ಔಷಧವಲ್ಲ, ಇದು ಪ್ರತ್ಯಕ್ಷ ವಿಷ!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ
ಸಂ.ಪುಟ | 6

ಪ್ರಿಯಾಂಕಾ ಮಾತು ರಾಜ್ಯಕ್ಕೆ ಶಾಸನವಾಗದಿರಲಿ!
ಲೋಕಮತ
ಲೋಕೇಶ್ ಕಾಯರ್ಗ
ಸಂ.ಗಮ | 7

ಮಾತಂದ್ರೆ ಮಾತು

ಸಿಎಂ ಹುದ್ದೆ ಕೈತಪ್ಪಿರುವುದಕ್ಕೆ ಶಿವಸೇನೆ (ಶಿಂಧೆ ಬಣ) ಮುಖ್ಯಸ್ಥ ಏಕನಾಥ್ ಶಿಂಧೆ ನಿರಾಶರಾಗಿದ್ದಾರೆ. ಈ ಹಿಂದೆ ದೇವೇಂದ್ರ ಫಡ್ನವೀಸ್ ಅವರು ಶಿಂಧೆ ನೇತೃತ್ವದ ಸರಕಾರದಲ್ಲಿ ಡಿಸಿಎಂ ಆಗಿ ಸೇವೆ ಸಲ್ಲಿಸಿದ್ದರು. ಅದೇ ರೀತಿ ಶಿಂಧೆ ಕೂಡ ಮಹಾಯುತಿಯಲ್ಲಿ ಡಿಸಿಎಂ ಅಥವಾ ಪ್ರಮುಖ ಸ್ಥಾನ ಸ್ವೀಕರಿಸಬೇಕು.

- ರಾಮದಾಸ್ ಅಠಾವಳೆ ಕೇಂದ್ರ ಸಚಿವ

ದಾರಿದೀಪೋಕ್ತಿ

ನಾವು ಹೇಳಿದ ಸಂಗತಿಯೇ ಸರಿ ಎಂದು ವಾದ ಮಾಡುವುದಕ್ಕಿಂತ, ಸುಮ್ಮನಿರುವುದು ಅಥವಾ ಬೇರೆಯವರ ವಾದವನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ನೀವು ವಾದದಲ್ಲಿ ಸೋತರೂ ನಿಮಗೆ ಏನೂ ಆಗುವುದಿಲ್ಲ. ಗೆದ್ದರೆ ಕೆಲವೊಮ್ಮೆ ಸ್ನೇಹಿತರನ್ನು ಕಳೆದುಕೊಳ್ಳಬೇಕಾಗುತ್ತದೆ.

ವಕ್ರತುಂಡೋಕ್ತಿ

'ನಗುವೇ ದಿವ್ಯ ಔಷಧ' ಎಂದು ಭಾವಿಸುವುದರಲ್ಲಿ ತಪ್ಪೇನಿಲ್ಲ. ಆದರೂ ನಮಗೆ ಅನಾರೋಗ್ಯವಾದಾಗ ವೈದ್ಯರನ್ನು ಸಂಪರ್ಕಿಸಬೇಕು.

ನೋಟಿಸ್ ಬಳಿಕವೂ ವಿಜಯೇಂದ್ರ ವಿರುದ್ಧ ದೆಹಲಿಯಲ್ಲಿ ಸಮರ ಸಾರಿದ ಯತ್ನಾಳ

ಕೋರ್ ಕಮಿಟಿ ಸಭೆಯಲ್ಲಿ ಒಳಜಗಳ ಕುರಿತು ಚಕಾರವೆತ್ತದ ಕೇಂದ್ರ ನಾಯಕರು

ಬಣದಾಟಕ್ಕೆ ಬಳಲಿದ ಬಿಜೆಪಿ

ಬೆಂಗಳೂರು/ದೆಹಲಿ: ಶಿಸ್ತು ಸಮಿತಿಯಿಂದ ಶಾಸಕ ಬಸನಗೌಡ ಯತ್ನಾಳ ಅವರಿಗೆ ಶೋಕಾಸ್ ನೋಟಿಸ್ ನೀಡಿದ ನಂತರವೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಿರುದ್ಧ ಯತ್ನಾಳ ಬಣದ ಸದಸ್ಯರು ದೆಹಲಿಯಲ್ಲಿ ಸಭೆ ನಡೆಸಿ ಸಡ್ಡು ಹೊಡೆದಿದ್ದಾರೆ. ಇತ್ತ ಪಕ್ಷದ ಕೇಂದ್ರ ನಾಯಕರು ರಾಜ್ಯದ ಬಿಜೆಪಿ ಕಚೇರಿಯಲ್ಲಿದ್ದರೂ ಯತ್ನಾಳ ವಿಚಾರವಾಗಿ ಯಾವುದೇ ತಾರ್ಕಿಕ ಅಂತ್ಯಕ್ಕೆ ಬರಲು ಸಾಧ್ಯವಾಗದೇ ದೆಹಲಿಗೆ ತೆರಳಿದ್ದಾರೆ. ಹೀಗಾಗಿ ಬಣ ಬಡಿದಾಟದಲ್ಲಿ ಬಿಜೆಪಿ ಬಳಲುತ್ತಿದೆ.

ಸಂಘಟನಾ ಪರ್ವದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ಕರ್ನಾಟಕದ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಕೇಂದ್ರದ ಮಾಜಿ ಸಚಿವ ರಾಧಾಕೃಷ್ಣನ್ ಸುಮಾರು 4 ಗಂಟೆ ಕಾಲ ಬೆಂಗಳೂರಿನ ಪಕ್ಷದ ಕಚೇರಿಯಲ್ಲಿ ಸಭೆ ನಡೆಸಿದರು. ಈ ಸಭೆಯಲ್ಲಿ ಯತ್ನಾಳಗೆ ಸಂಬಂಧಿಸಿದಂತೆ ಯಾವುದೇ ವಿಚಾರ ಪ್ರಸ್ತಾಪವಾಗಿಲ್ಲ. ಆದರೆ ವಿಜಯೇಂದ್ರ ಅವರ ಪರ ಸಭೆ ನಡೆಸಿದ್ದ ಜಿಲ್ಲಾಧ್ಯಕ್ಷರು ಯತ್ನಾಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ಕೇಂದ್ರ ನಾಯಕರು ಯಾವುದೇ ಭರವಸೆ ನೀಡಿಲ್ಲ ಎನ್ನಲಾಗಿದೆ.

ಪಕ್ಷ ಸಂಘಟನೆ ಸಂಬಂಧ ಸಭೆ ನಡೆಸಿರುವ ತರುಣ್ ಚುಗ್ ಸದಸ್ಯತ್ವ ಅಭಿಯಾನ ಸೇರಿದಂತೆ ಹಲವು ವಿಚಾರ ಚರ್ಚಿಸಿದ್ದಾರೆ. ಸಕ್ರಿಯ ಸದಸ್ಯತ್ವ ಮುಂದುವರಿಕೆ, ಬೂತ್ ಸಮಿತಿಗಳ ರಚನೆ, ಮಂಡಲ ಸಮಿತಿಗಳ ರಚನೆ ಕುರಿತು ಸಮಗ್ರವಾಗಿ ಚರ್ಚೆ ಮಾಡಿದ್ದಾರೆ. ಸಂಘಟನಾ ಪರ್ವ ಯಶಸ್ಸಿಗೆ ಸಂಬಂಧಿಸಿ ಮಾರ್ಗದರ್ಶನ ನೀಡಿದ್ದಾರೆ. ನಂತರ ಕೋರ್ ಕಮಿಟಿ ಸಭೆಯೂ ನಡೆದಿದೆ. ಸಂಘಟನೆ ಬಲಪಡಿಸುವ ನಿಟ್ಟಿನಲ್ಲಿ ಕೆಲವು ಸಲಹೆಗಳನ್ನು ನೀಡಿದ್ದಾರೆ. ಜಿಲ್ಲಾಧ್ಯಕ್ಷರು ಮತ್ತು ರಾಜ್ಯದ ಪದಾಧಿಕಾರಿಗಳು ಸಂಘಟನೆ ಗಟ್ಟಿಗೊಳಿಸುವ ಕೆಲಸಗಳ ಸಂಬಂಧ ಸಭೆಯಲ್ಲಿ ಚರ್ಚೆ ನಡೆದಿದೆ.

→ 4

ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ನಡೆದ ಕೋರ್ ಕಮಿಟಿ ಸಭೆಯಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ಕರ್ನಾಟಕದ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಕೇಂದ್ರದ ಮಾಜಿ ಸಚಿವ ರಾಧಾಕೃಷ್ಣನ್, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಪ್ರತಿಪಕ್ಷದ ನಾಯಕ ಆರ್.ಅಶೋಕ ಭಾಗವಹಿಸಿದ್ದರು.

ಯತ್ನಾಳಗೆ ಲಕ್ಷ್ಮಣ ರೇಖೆ?

ರಾಜ್ಯದಲ್ಲಿ ನಡೆಯುತ್ತಿರುವ ಬಣದಾಟಕ್ಕೆ ಅಂತ್ಯ ಹಾಡಲು ಆಸಕ್ತಿ ತೋರಿರುವ ವರಿಷ್ಠರು, ಇನ್ನುಂದೆ ಪಕ್ಷದ ನಾಯಕರ ವಿರುದ್ಧ ಯಾವುದೇ ಹೇಳಿಕೆ ನೀಡಬಾರದೆಂದು ಸೂಚಿಸುವ ಮೂಲಕ ಯತ್ನಾಳ ಅವರಿಗೆ ಲಕ್ಷ್ಮಣ ರೇಖೆ ಹಾಕುವ ಸಾಧ್ಯತೆ ಇದೆ. ಆ ಮೂಲಕ ಎರಡೂ ಬಣದವರೊಂದಿಗೆ ಸಮತೋಲನ ಸಾಧಿಸಲು ಮುಂದಾಗಿದೆ ಎನ್ನಲಾಗಿದೆ. ಇನ್ನೊಂದೆಡೆ ಯತ್ನಾಳ ಮತ್ತು ವಿಜಯೇಂದ್ರ ಅವರನ್ನು ಪರಸ್ಪರ ಮುಖಾಮುಖಿ ಕೂರಿಸಿ ಬಿಕ್ಕಟ್ಟು ಇತ್ಯರ್ಥಪಡಿಸಬೇಕು. ಇಲ್ಲಿ ಯಾರೊಬ್ಬರ ಕೈ ಮೇಲಾಗುವುದಾಗಲಿ ಅಥವಾ ಹಿನ್ನಡೆಯಾಗದಂತೆ ಅತ್ಯಂತ ಜಾಗರೂಕತೆಯಿಂದ ಸಮಸ್ಯೆ ಪರಿಹರಿಸುವಂತೆ ರಾಷ್ಟ್ರಿಯ ನಾಯಕರಿಗೆ ಮನವಿ ಮಾಡಲು ಹಲವು ಸಂಸದರು ಮುಂದಾಗಿದ್ದಾರೆ.

7ರಂದು ಕೋರ್ ಕಮಿಟಿ ಸಭೆ

ಕೇಂದ್ರದ ನಾಯಕರು ಬಂದಾಗ ಕೋರ್ ಕಮಿಟಿ ಸಭೆ ನಡೆಯುವುದು ವಾಡಿಕೆ. ಅದರಂತೆ ಮಂಗಳವಾರ ಸಭೆ ನಡೆದಿದೆ. ಆದರೆ, ಪಕ್ಷದ ಪ್ರಮುಖ ವಿಚಾರಗಳನ್ನು ಚರ್ಚಿಸಲು ಡಿ.7ರಂದು ಬಿಜೆಪಿ ಕೋರ್ ಕಮಿಟಿ ಸಭೆ ನಡೆಯಲಿದೆ. ಈ ಸಭೆಯಲ್ಲಿ ಬಣಬಡಿದಾಟ ಪರಿಹಾರಕ್ಕೆ ಮಾರ್ಗೋಪಾಯ, ಉಪಚುನಾವಣೆಯ ಪರಾಮರ್ಶೆ, ವರಿಷ್ಠರ ಆದೇಶಗಳ ಜಾರಿ, ವಕ್ಫ್ ಜಿಲ್ಲಾವಾರು ಸಭೆ, ಅಧಿವೇಶನದಲ್ಲಿ ಚರ್ಚಿಸಬೇಕಾದ ವಿಚಾರಗಳು ಹಾಗೂ ಸರಕಾರದ ವಿರುದ್ಧ ಹೋರಾಟ ಸೇರಿದಂತೆ ಮತ್ತಷ್ಟು ಪ್ರಮುಖ ವಿಚಾರಗಳ ಬಗ್ಗೆ ಚರ್ಚೆಯಾಗಲಿದೆ.

ಯತ್ನಾಳರ ನಡೆ ಕುರಿತು ಕೇಂದ್ರದ ವರಿಷ್ಠರು ಗಮನಿಸುತ್ತಿದ್ದಾರೆ. ಶಿಸ್ತು ಕ್ರಮ ಕೈಗೊಳ್ಳಬೇಕೇ ಅಥವಾ ಹೀಗೇ ಸುಮ್ಮನೇ ಬಿಡಬೇಕೇ ಎಂಬುದನ್ನು ನಿರ್ಧರಿಸಲಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಅವರು ಯಾವುದೇ ಅಭಿಪ್ರಾಯ ಸಂಗ್ರಹಕ್ಕೆ ರಾಜ್ಯಕ್ಕೆ ಬಂದಿಲ್ಲ. ಸದಸ್ಯತ್ವ ಅಭಿಯಾನ ಪರ್ವದಲ್ಲಿ ಭಾಗಿಯಾಗಲು ರಾಜ್ಯಕ್ಕೆ ಬಂದಿದ್ದಾರೆ. **- ಬಿ.ವೈ.ವಿಜಯೇಂದ್ರ** ಬಿಜೆಪಿ ರಾಜ್ಯಾಧ್ಯಕ್ಷ

ದೆಹಲಿಯಲ್ಲಿ ಬೀಡುಬಿಟ್ಟ ಬಸನಗೌಡ ಯತ್ನಾಳ ಬಣ

ಜನಜಾಗೃತಿ ಹೋರಾಟದ ಮಧ್ಯಂತರ ವರದಿ ಸಲ್ಲಿಸಲು ಸಿದ್ಧತೆ

ಶೋಕಾಸ್ ನೋಟಿಸ್ ಬಗ್ಗೆ ಚರ್ಚಿಸಲು ಸಭೆ ನಡೆಸುವ ಸಾಧ್ಯತೆ

ಬೆಂಗಳೂರು/ದೆಹಲಿ: ಬಸನಗೌಡ ಪಾಟೀಲ್ ಯತ್ನಾಳಗೆ ಶೋಕಾಸ್ ನೋಟಿಸ್ ನೀಡಿದ ಬೆನ್ನಲ್ಲೇ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಸಮಯ ಕೇಳಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ವಕ್ಫ್ ಮಧ್ಯಂತರ ವರದಿಯನ್ನು ಕೇಂದ್ರ ಸರಕಾರ ರಚಿಸಿರುವ ಜಂಟಿ ಸದನ ಸಮಿತಿಗೆ ಸಲ್ಲಿಸಲು ದೆಹಲಿಯಲ್ಲಿರುವ ಯತ್ನಾಳ ಬಣ, ಇದೀಗ ಬಜೆಪಿ ವರಿಷ್ಠರನ್ನು ಭೇಟಿಯಾಗುವ ಲೆಕ್ಕಾಚಾರದಲ್ಲಿದೆ. ಈ ಬಗ್ಗೆ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ಸುಳಿವು ಬಿಟ್ಟುಕೊಟ್ಟಿದ್ದಾರೆ. ದೆಹಲಿಯಲ್ಲಿ ಮಾತನಾಡಿರುವ ಅವರು, ವಕ್ಫ್ ಕುರಿತ ಜಂಟಿ ಸಂಸದೀಯ ಸಮಿತಿಗೆ ವರದಿ ಸಲ್ಲಿಸಲು ರಾಷ್ಟ್ರ ರಾಜಧಾನಿಗೆ ಆಗಮಿಸಿದ್ದೇವೆ. ಬೇರೆ ಯಾವುದೇ ಉದ್ದೇಶಕ್ಕಾಗಿ ಅಲ್ಲ. ಆದರೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಹಾಗೂ ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಲು ನಾವು ಸಮಯಾವಕಾಶ ಕೋರಿದ್ದೇವೆ. ಅವರು ಸಮಯ ನೀಡಿದರೆ, ನಾವು ಅವರನ್ನು ಭೇಟಿ ಮಾಡುತ್ತೇವೆ. ಇಲ್ಲದಿದ್ದರೆ ಮತ್ತೆ ಬರುತ್ತೇವೆ ಎಂದು ಹೇಳುವ ಮೂಲಕ ವಿಜಯೇಂದ್ರ ಬಣಕ್ಕೆ ಶಾಕ್ ನೀಡಿದ್ದಾರೆ.

ನಾಳೆ ಮಧ್ಯಂತರ ವರದಿ ಸಲ್ಲಿಕೆ

ಮೊದಲ ಹಂತದಲ್ಲಿ ಯತ್ನಾಳ ತಂಡದಿಮದ ನಡೆದಿರುವ ವಕ್ಫ್ ಜನಾಂದೋಲನ ಯಾತ್ರೆಯ ಮಧ್ಯಂತರ ವರದಿಯನ್ನು ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರಿಗೆ ಸಲ್ಲಿಸಲು ಸಜ್ಜಾಗಿದ್ದಾರೆ. ಅರವಿಂದ ಲಿಂಬಾವಳಿ, ಯತ್ನಾಳ ಸೇರಿದಂತೆ ಹಲವರು ಜೆಪಿಸಿಯ ಸದಸ್ಯರನ್ನು ಅನೌಪಚಾರಿಕವಾಗಿ ಭೇಟಿಯಾಗಿ ಚರ್ಚೆ ನಡೆಸಿದ್ದಾರೆ. ಗುರುವಾರ ಅಧಿಕೃತವಾಗಿ ವರದಿ ಸಲ್ಲಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಜಯೇಂದ್ರ ಅವರೇ ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿದ್ದಾರೆ. ವಕ್ಫ್ ಮಂಡಳಿ ವಿರುದ್ಧ ಜೆಪಿಸಿಗೆ ವರದಿ ಸಲ್ಲಿಸಲು ನಾವು ಇಲ್ಲಿಗೆ ಬಂದಿದ್ದೇವೆ, ಇಡೀ ಸಮಿತಿಯು ಡಿಸೆಂಬರ್ 5 ರಂದು ಸಭೆ ನಡೆಸಲಿದೆ. ನಾವು ಖುದ್ದಾಗಿ ಜೆಪಿಸಿಯನ್ನು ಭೇಟಿ ಮಾಡುತ್ತೇವೆ.
- ರಮೇಶ್ ಜಾರಕಿಹೊಳಿ ಮಾಜಿ ಸಚಿವ

ಇಂದು ಮಹಾ ಸಿಎಂ ಹೆಸರು ಘೋಷಣೆ

ಮುಂಬೈ: ಮಹಾರಾಷ್ಟ್ರದ ನೂತನ ಸಿಎಂ ಯಾರು ಎಂಬ ಕುತೂಹಲಕ್ಕೆ ಸದ್ಯದಲ್ಲಿಯೇ ಬುಧವಾರ ತೆರಬೀಳಲಿದೆ. ಬಿಜೆಪಿ ಶಾಸಕಾಂಗ ಸಭೆ ಬುಧವಾರ ಆಯೋಜಿತವಾಗಿದ್ದು, ಸಭೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗೆ ವರಿಷ್ಠರು ಒಪ್ಪಿಗೆ ಸೂಚಿಸಿದ ಬಳಿಕ ಸಿಎಂ ಹೆಸರನ್ನು ಘೋಷಿಸಲಾಗುತ್ತದೆ ಎಂದು ತಿಳಿದುಬಂದಿದೆ.

ಇಎಸ್‌ಎ ನಿರ್ಮಿಸಿರುವ ಪ್ರೊಬಾ-3 ನೌಕೆ ಇಂದು ಉಡ್ಡಯನ

ಆದಿತ್ಯ ಎಲ್1 ಯೋಜನೆ ನಂತರ ಮತ್ತೆ ಸೂರ್ಯನ ಅಧ್ಯಯನ

ಇಸ್ರೊ ವಾಣಿಜ್ಯ ಉದ್ದೇಶದ ಪ್ರಯತ್ನಕ್ಕೆ ಕ್ಷಣಗಣನೆ ಶುರು

ಶ್ರೀಹರಿಕೋಟಾ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ವಾಣಿಜ್ಯ ಉದ್ದೇಶಕ್ಕಾಗಿ ಪ್ರಾರಂಭಿಸಿರುವ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಮೂಲಕ ಐರೋಪ್ಯ ಬಾಹ್ಯಾಕಾಶ ಸಂಸ್ಥೆಯ (ಇಎಸ್‌ಎ) ಉಪಗ್ರಹದ ಉಡ್ಡಯನಕ್ಕೆ ಕ್ಷಣಗಣನೆ ಆರಂಭಗೊಂಡಿದೆ.

ಇಎಸ್‌ಎ ನಿರ್ಮಿಸಿರುವ ಪ್ರೊಬಾ (ಪ್ರಾಜೆಕ್ಟ್ ಫಾರ್ ಆನ್‌ಬೋರ್ಡ್ ಆಟೊನೊಮಿ)-3 ನೌಕೆಯನ್ನು ಇಸ್ರೊ ತನ್ನ ಉಡ್ಡಯನ ಕೇಂದ್ರದಿಂದ ಡಿ.4 ರಂದು ಹಾರಿಸಲಿದೆ. ಇದರ ಮೂಲಕ ಇಸ್ರೊ ತನ್ನ ವಾಣಿಜ್ಯ ಉದ್ದೇಶದ ಯೋಜನೆಯನ್ನೂ ಕಾರ್ಯರೂಪಕ್ಕೆ ತರುತ್ತಿದೆ. ಈ ಯೋಜನೆಯಲ್ಲಿ ಎರಡು ಉಪಗ್ರಹ ಹೊತ್ತ ಎರಡು ನೌಕೆಗಳು ಒಂದಾಗಿ ಉಡ್ಡಯನಗೊಳ್ಳುವ ಅಪರೂಪದ ಕಾರ್ಯಾಚರಣೆ ಇದಾಗಿದೆ. ಸೂರ್ಯನ ಮೇಲ್ಮೈ ವಾತಾವರಣದ ಅಧ್ಯಯನ ನಡೆಸುವ ಯೋಜನೆ ಇದಾಗಿದೆ.

ಯೋಜನೆಯ ಕಾರ್ಯಾಚರಣೆಯನ್ನು ಐರೋಪ್ಯ ಬಾಹ್ಯಾಕಾಶ ಏಜೆನ್ಸಿ ನಡೆಸಲಿದೆ. 2023ರ ಸೆಪ್ಟೆಂಬರ್‌ನಲ್ಲಿ ಇಸ್ರೊ ಕೈಗೊಂಡ ಆದಿತ್ಯ ಎಲ್1 ಯೋಜನೆ ನಂತರದಲ್ಲಿ ಸೂರ್ಯನ ಅಧ್ಯಯನ ನಡೆಸುವ ಯೋಜನೆ ಇದಾಗಿದೆ.

ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಕೇಂದ್ರದಲ್ಲಿ ಉಡ್ಡಯನಕ್ಕೆ ಸಜ್ಜಾಗಿರುವ ಪಿಎಸ್‌ಎಲ್‌ವಿ ಹಾಗೂ ಪಿಎಸ್‌ಎಲ್‌ವಿ-ಎಕ್ಸ್‌ಎಲ್ ಒಳಗೊಂಡ ರಾಕೆಟ್.

ಲೋಕಸಭೆ: ಪ್ರತಿಪಕ್ಷಗಳ ಸಭಾತ್ಯಾಗ

ದೆಹಲಿ: ಅದಾನಿ ಲಂಚ ಪ್ರಕರಣ, ಸಂಭಾಲ್ ಘಟನೆ ಕುರಿತು ಲೋಕಸಭೆ ಯಲ್ಲಿ ಚರ್ಚೆಗೆ ಸ್ಪೀಕರ್ ಅವಕಾಶ ನೀಡಲಿಲ್ಲ ಎಂದು ಸಿಟ್ಟಿಗೆದ್ದ ಪ್ರತಿಪಕ್ಷಗಳ ಒಕ್ಕೂಟ 'ಇಂಡಿಯ'ದ ಸಂಸದರು ಮಂಗಳವಾರ ಸಭಾತ್ಯಾಗ ಮಾಡಿದರು.

ಪ್ರಶ್ನೋತ್ತರ ಅವಧಿ ಆರಂಭವಾಗುತ್ತಿದ್ದಂತೆಯೇ ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ಮಸೀದಿ ಸರ್ವೆ ವಿರೋಧಿಸಿ ಇತ್ತೀಚೆಗೆ ನಡೆದ ಹಿಂಸಾಚಾರ, ಪೊಲೀಸರ ಗೋಲಿಬಾರ್‌ಗೆ ಐವರು ಬಲಿಯಾದ ಘಟನೆ ಕುರಿತು ಮಾತನಾಡಲು ಅವಕಾಶ ನೀಡುವಂತೆ ಪಟ್ಟು ಹಿಡಿದರು. ಆದರೆ, ಸ್ಪೀಕರ್ ಓಂ ಬಿರ್ಲಾ ಅವರು ಪ್ರಶ್ನೋತ್ತರ ಅವಧಿ ಮುಗಿದ ಬಳಿಕ ಚರ್ಚೆಗೆ ಅವಕಾಶ ನೀಡಲಾಗುವುದು ಎಂದರು.

ಆದರೆ, ಆದ್ಯತೆ ಮೇರೆಗೆ ಚರ್ಚೆಗೆ ಈಗಲೇ ಅವಕಾಶ ಮಾಡಿಕೊಡುವಂತೆ ಎಸ್‌ಪಿ ಸಂಸದ ಆಗ್ರಹಿಸಿದರು. ಸ್ಪೀಕರ್ ಒಪ್ಪದೇ ಇದ್ದುದರಿಂದ ರಾಹುಲ್ ಗಾಂಧಿ ನೇತೃತ್ವದಲ್ಲಿ ಇಂಡಿ ಒಕ್ಕೂಟದ ಪಕ್ಷಗಳು ಸದನದಿಂದ ಹೊರನಡೆದವು. ಈ ಮಧ್ಯೆ ಎಸ್‌ಪಿಯ ಕೆಲ ಸದಸ್ಯರು ಸದನದ ಬಾವಿಗಿಳಿದು ಘೋಷಣೆ ಕೂಗಿದರು. ಪ್ರತಿಭಟನೆ ಮಧ್ಯೆಯೇ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಅಖಿಲೇಶ್ ಯಾದವ್ ಬಳಿ ಹೋಗಿ ಪ್ರತಿಭಟನೆ ನಿಲ್ಲಿಸಲು ಕೋರಿದರು. ಆದರೆ, ಯಾದವ್ ತಮ್ಮ ಪಕ್ಷದ ಸಂಸದರಿಗೆ ಸಭಾತ್ಯಾಗಕ್ಕೆ ಸನ್ನೆಮಾಡಿ ತಾವೂ ಹೊರನಡೆದರು.



- 'ಮೋದಿ-ಅದಾನಿ ಏಕ್ ಹೆ' ಎಂದು ಬರೆದಿದ್ದ ಬ್ಯಾನರ್ ಪ್ರದರ್ಶಿಸಿದ ಪ್ರತಿಪಕ್ಷಗಳ ಸದಸ್ಯರು
- ಸಂಭಾಲ್ ಘಟನೆ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಪ್ರತಿಪಕ್ಷಗಳ ಸದಸ್ಯರ ಪಟ್ಟು
- ಸದನದ ಬಾವಿಗಿಳಿದು ಘೋಷಣೆ ಕೂಗಿದ ಸಮಾಜವಾದಿ ಪಕ್ಷದ ಸದಸ್ಯರು

ಅದಾನಿ ವಿರುದ್ಧದ ಗಂಭೀರ ಆರೋಪಗಳ ಕುರಿತಂತೆ ಪ್ರಶ್ನೆಗಳನ್ನು ಎದುರಿಸಲು ಮೋದಿ ಸರಕಾರ ಸಿದ್ಧವಿಲ್ಲ. ಏಕೆಂದರೆ ಹಗರಣದಲ್ಲಿ ಅವರೂ ಭಾಗಿಯಾಗಿದ್ದಾರೆ. ಸಂಸತ್ತು, ಅವರನ್ನು ಹೊಣೆಗಾರರನ್ನಾಗಿ ಮಾಡಬೇಕಾದ ವೇದಿಕೆಯಾಗಿದೆ.
ಕೆ.ಸಿ.ವೇಣುಗೋಪಾಲ ಕಾಂಗ್ರೆಸ್ ಸಂಸದ

ರಾಜ್ಯಸಭೆಯಲ್ಲೂ ಕಲಾಪ ಬಹಿಷ್ಕಾರ

ಪ್ರತಿಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲೂ ಎರಡು ಸಲ ಕಲಾಪ ಬಹಿಷ್ಕರಿಸಿದರು. ಸಂಭಾಲ್ ವಿಷಯ ಪ್ರಸ್ತಾಪಿಸಿದ ಎಸ್‌ಪಿ ಸಂಸದ ರಾಮಗೋಪಾಲ್ ಯಾದವ್ ಅವರು ಸದನದಿಂದ ಹೊರನಡೆದರು. ಟಿಎಂಸಿ ಸದಸ್ಯರು ಅವರಿಗೆ ಸಾಥ್ ನೀಡಿದರು. ಪಶ್ಚಿಮ ಬಂಗಾಳದಲ್ಲಿ ರೋಹಿಂಗ್ಯಾ ಸಮುದಾಯದವರ ಉಪಸ್ಥಿತಿಯ ಬಗ್ಗೆ ಬಿಜೆಪಿ ಸಂಸದರು ನೀಡಿದ್ದ ಹೇಳಿಕೆಯನ್ನು ವಿರೋಧಿಸಿ ಟಿಎಂಸಿ ಸದಸ್ಯರು ಪ್ರತ್ಯೇಕವಾಗಿ ಸಭಾತ್ಯಾಗ ಮಾಡಿದರು.

ಭಾರತಕ್ಕೆ 9908 ಕೋಟಿ ಮೌಲ್ಯದ ಹೆಲಿಕಾಪ್ಟರ್

ವಾಷಿಂಗ್ಟನ್: ಭಾರತಕ್ಕೆ 117 ಕೋಟಿ ಡಾಲರ್ (9908 ಕೋಟಿ ರು.) ಮೌಲ್ಯದ ಎಂಎಚ್-60ಆರ್ ಮಲ್ಟಿಮಿಷನ್ ಹೆಲಿಕಾಪ್ಟರ್‌ನ ಉಪಕರಣಗಳು, ಅದಕ್ಕೆ ಜೋಡಿಸಬಲ್ಲ ಶಸ್ತ್ರಗಳು ಮತ್ತು ಅಗತ್ಯ ಬಿಡಿಭಾಗಗಳ ಮಾರಾಟಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ, ಅಲ್ಲಿನ ಸಂಸತ್‌ನಲ್ಲಿ ಅನುಮೋದನೆ ನೀಡಿದೆ.

ವಿಚಾರಣೆಯಿಂದ ಹಿಂದೆ ಸರಿದ ಸಿಜೆಐ ನ್ಯಾ.ಖನ್ನಾ

ದೆಹಲಿ: ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ) ಮತ್ತು ಚುನಾವಣಾ ಆಯುಕ್ತರ (ಇಸಿ) ನೇಮಕಕ್ಕೆ ಸಂಬಂಧಿಸಿದ ಕಾಯಿದೆಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮಂಗಳವಾರ ಹಿಂದೆ ಸರಿದಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪಕ್ಷದಲ್ಲಿ ಆಂತರಿಕ ಬಿಕ್ಕಟ್ಟು ಶಾಸಕನಿಗೆ ಶೋಕಾಸ್ ನೋಟಿಸ್ ಜಾರಿ

ಸುದ್ದಿ



ಪ್ರಬಂಧ ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಪಾಠ

ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ಸಿದ್ದರಾಮಯ್ಯ

ಸಂವಿಧಾನದ ಮೇಷ್ಟ್ರಾದ ಸಿಎಂ

ಬೆಂಗಳೂರು: ಸಿದ್ದರಾಮಯ್ಯ ಅವರು ಆಗಾಗ ಮೇಷ್ಟ್ರು ರೀತಿಯಲ್ಲಿ ಪಾಠ ಮಾಡುವುದನ್ನು ಅನೇಕರು ನೋಡಿದ್ದೇವೆ. ಅದರಲ್ಲಿಯೂ ಕನ್ನಡ ವ್ಯಾಕರಣ ಹಾಗೂ ಭಾಷೆಗೆ ಸಂಬಂಧಿಸಿದಂತೆ ಸದನದಲ್ಲಿ ಅಥವಾ ಸಾರ್ವಜನಿಕ ಸಮಾವೇಶದಲ್ಲಿ ಪಾಠ ಮಾಡಿರುವುದನ್ನು ನೋಡಿದ್ದೇವೆ. ಇಷ್ಟು ಕನ್ನಡ ರಾಮಯ್ಯರಾಗಿದ್ದ ಸಿದ್ದರಾಮಯ್ಯ ಮಂಗಳವಾರ 'ಸಂವಿಧಾನ'ದ ಮೇಷ್ಟ್ರಾಗಿ ಬದಲಾಗಿದ್ದರು.

ಇತ್ತೀಚೆಗೆ ರಾಜ್ಯಾದ್ಯಂತ ನಡೆದ ಸಂವಿಧಾನ ಓದು ಅಭಿಯಾನದಲ್ಲಿ ಪ್ರಬಂಧ ಸ್ಪರ್ಧೆ ಬರೆದು ವಿಜೇತರಾಗಿದ್ದ 50ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಹಿರಿಯ ಅಧಿಕಾರಿಗಳು, ಸಚಿವರಿಗೆ ಒಂದು ಗಂಟೆಯ ಕಾಲ ಸಂವಿಧಾನದ ಕುರಿತು ಪಾಠ ಮಾಡಿದರು. ಈ ಒಂದು ಗಂಟೆಯಲ್ಲಿ ಸಂವಿಧಾನ ನೀಡಿರುವ ಅವಕಾಶಗಳು, ಜಾತ್ಯತೀತ ಸಮಾಜ ನಿರ್ಮಾಣ, ಕಂದಾಚಾರ ನಿರ್ಮೂಲನೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಸುಧೀರ್ಘವಾಗಿ ಮಾತನಾಡಿದರು. ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಸುಮಾರು 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳು, ಪ್ರಶ್ನೆಗಳ ಮೂಲಕ ಸಂವಿಧಾನದ ಹಲವು ಮಾಹಿತಿ ತಿಳಿದುಕೊಂಡರು.

→ 4

ಕಂದಾಚಾರಕ್ಕೆ ಅವಕಾಶವಿಲ್ಲ

ಸಂವಿಧಾನದಲ್ಲಿ ಕಂದಾಚಾರಗಳಿಗೆ ಅವಕಾಶವಿಲ್ಲ. ಒಂದು ಜಾತಿ, ಒಂದು ಧರ್ಮಕ್ಕೆ ಮಾತ್ರ ಈ ದೇಶ ಸೀಮಿತವಲ್ಲ. ಸಂವಿಧಾನ ದ್ರೋಹಿಗಳು ಸಮಾಜ ದ್ರೋಹಿಗಳು, ಜನ ವಿರೋಧಿಗಳೂ ಹೌದು. ಜಾತಿ, ಧರ್ಮದ ಹೆಸರಲ್ಲಿ ಒಬ್ಬರನ್ನು ಅಗೌರವದಿಂದ ಕಾಣುವುದು, ಮತ್ತೊಬ್ಬರು ಸಂವಿಧಾನೇತರ ಗೌರವ ನಿರೀಕ್ಷಿಸುವುದು ತಪ್ಪು. ಬಸವಣ್ಣನವರು 850 ವರ್ಷಗಳ ಹಿಂದೆಯೇ ಜಾತಿ ವ್ಯವಸ್ಥೆ ಮತ್ತು ಕರ್ಮಸಿದ್ಧಾಂತವನ್ನು ಧಿಕ್ಕರಿಸಿದ್ದಾರೆ. ಆದರೆ, ಇವತ್ತಿಗೂ ಇದು ಪೂರ್ತಿ ಹೋಗಿಲ್ಲ ಎಂದು ಸಿಎಂ ಬೇಸರ ವ್ಯಕ್ತಪಡಿಸಿದರು.

ಸಂವಿಧಾನ ಓದು ಅಭಿಯಾನದಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾಗಿದ್ದ ವಿದ್ಯಾರ್ಥಿಗಳಿಗೆ ಸಿಎಂ ಸಿದ್ದರಾಮಯ್ಯ ಪ್ರಮಾಣಪತ್ರ ವಿತರಿಸಿದರು.

ಸಿದ್ದು ಪಾಠದ ಹೈಲೈಟ್ಸ್

- ಸಂವಿಧಾನ ನಮಗೆ ನೀಡಿರುವ ಹಕ್ಕುಗಳು ಗೊತ್ತಿದ್ದರೆ ಮಾತ್ರ ಬಳಸಿಕೊಳ್ಳಲು ಸಾಧ್ಯ
- ಸಂವಿಧಾನದ ಪೀಠಿಕೆಯಲ್ಲಿ ಇಡೀ ಸಂವಿಧಾನದ ಆಶಯ ಅಡಗಿದೆ
- ವಿದ್ಯೆ, ಸಂಪತ್ತು ಗಳಿಸುವ ಅವಕಾಶ ಶೂದ್ರ ಹಾಗೂ ಮಹಿಳೆಯರಿಗೆ ಕೊಟ್ಟಿದ್ದು ಸಂವಿಧಾನ
- ಭಾರತ ಬಹುತ್ವದ ದೇಶ; ಎಲ್ಲ ಜಾತಿ, ಧರ್ಮಕ್ಕೆ ಸಮಾನ ಅವಕಾಶ ನೀಡುವುದು ನಮ್ಮ ಗುಣ
- ಯಾರ ಕೈಯಲ್ಲಿ ಸಂವಿಧಾನವಿದೆ ಎನ್ನುವುದರ ಮೇಲೆ ಸಂವಿಧಾನದ ಶ್ರೇಷ್ಠತೆ, ವಿಫಲತೆ ಅವಲಂಬಿಸಿದೆ

ಗೌತಮ್ ಅದಾನಿ ಲಂಚ ಆರೋಪ ಪ್ರಕರಣವನ್ನು ಜಂಟಿ ಸದನ ಸಮಿತಿಯ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿ 'ಇಂಡಿ' ಒಕ್ಕೂಟದ ಪಕ್ಷಗಳ ಸಂಸದರು ಸಂಸತ್ತಿನ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಫೆಂಗಲ್: ವಿವಿಧ ಜಿಲ್ಲೆಗಳಲ್ಲಿ ನಿರಂತರ ಮಳೆ

ಬೆಂಗಳೂರು: ಫೆಂಗಲ್ ಚಂಡಮಾರುತದ ಪರಿಣಾಮ ರಾಜ್ಯದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದೆ. ಬೆಂಗಳೂರು, ದಕ್ಷಿಣ ಕನ್ನಡ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಮಂಗಳವಾರವೂ ಬಿಡುವು ಕೊಟ್ಟಿಲ್ಲ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮಳೆರಾಯನ ಅಬ್ಬರ ಜೋರಾಗಿದ್ದು, ಹೆದ್ದಾರಿ ಕುಸಿದಿದೆ. ಮನೆಗಳಿಗೆ ನೀರು ನುಗ್ಗಿದೆ. ಸೋಮವಾರ ಬೆಳ್ತಂಗಡಿಯ ನೇತ್ರಾವತಿ ನದಿಯಲ್ಲಿ ಮುಳುಗಿ ನಾಪತ್ತೆಯಾಗಿದ್ದ ವ್ಯಕ್ತಿಯ ಮೃತದೇಹ ಮಂಗಳವಾರ ದೊರೆತಿದೆ. ಮೈಸೂರಿನಲ್ಲಿ ಚಾಮುಂಡಿ ಬೆಟ್ಟದ ರಸ್ತೆಯಲ್ಲಿ ಗುಡ್ಡ ಕುಸಿದು ಸಣ್ಣ ಬಂಡೆಯೊಂದು ರಸ್ತೆಗೆ ಉರುಳಿದೆ. ಸದ್ಯ, ಬಂಡೆ ತೆರವುಗೊಳಿಸಲಾಗಿದ್ದು, ವಾಹನ ಸಂಚಾರ ಎಂದಿನಂತಿದೆ. ರಾಜ್ಯದ ಅನೇಕ ಕಡೆ ಬೆಳೆಗಳು ಹಾಳಾಗಿದ್ದು, ರೈತರು ಕಂಗಾಲಾಗಿದ್ದಾರೆ.

ಉತ್ತರ ಪ್ರದೇಶಕ್ಕೆ ಗರಿಷ್ಠ 7008 ಕೋಟಿ ರು. | ಕರ್ನಾಟಕಕ್ಕೆ ಕನಿಷ್ಠ 2273 ಕೋಟಿ ರು.

23 ರಾಜ್ಯಗಳಿಗೆ 50,571 ಕೋಟಿ ಅನುದಾನ

ದೆಹಲಿ: ಕೇಂದ್ರ ಸರಕಾರ ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೂ ವಿಶೇಷ ಅನುದಾನದಡಿ 23 ರಾಜ್ಯಗಳಿಗೆ 50,571 ಕೋಟಿ ರು. ಬಿಡುಗಡೆ ಮಾಡಿದೆ.

2024-25ನೇ ಹಣಕಾಸು ವರ್ಷದ ಮೊದಲ 8 ತಿಂಗಳಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳ ವೆಚ್ಚ ಹೆಚ್ಚಿಸಲು ಬಂಡವಾಳ ಹೂಡಿಕೆ ಯೋಜನೆಯ ಭಾಗವಾಗಿ ವಿಶೇಷ ನೆರವನ್ನು ಕೇಂದ್ರದಿಂದ ರಾಜ್ಯಗಳಿಗೆ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ಸಹಾಯಕ ಸಚಿವ ಪಂಕಜ್ ಚೌಧರಿ ಲೋಕಸಭೆಯಲ್ಲಿ ಮಂಗಳವಾರ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದ್ದಾರೆ.

ಕೇಂದ್ರ ಸರಕಾರ ಒದಗಿಸುವ ಬಡ್ಡಿ ರಹಿತ ಸಾಲ ಸೌಲಭ್ಯವನ್ನು 28 ರಾಜ್ಯಗಳ ಪೈಕಿ 23 ರಾಜ್ಯಗಳು ಬಳಸಿಕೊಂಡಿವೆ. ಆದರೆ, ಅರುಣಾಚಲ ಪ್ರದೇಶ, ಹರಿಯಾಣ, ಕೇರಳ, ಪಂಜಾಬ್ ಮತ್ತು ತೆಲಂಗಾಣ ರಾಜ್ಯಗಳು ಮಾತ್ರ ಈ ಸೌಲಭ್ಯವನ್ನು ಬಳಸಿಕೊಂಡಿಲ್ಲ ಎಂದು ಸಚಿವರು ಲಿಖಿತ ಉತ್ತರ ನೀಡಿದ್ದಾರೆ.

'ರಾಜ್ಯಗಳಲ್ಲಿ ಬಂಡವಾಳ ಹೂಡಿಕೆಗಾಗಿ ಕೇಂದ್ರದ ವಿಶೇಷ ನೆರವು' ಯೋಜನೆಯಡಿ 2024-25ರ ಬಜೆಟ್‌ನಲ್ಲಿ 1.50 ಲಕ್ಷ ಕೋಟಿ ರು. ಮೀಸಲಿಡಲಾಗಿದೆ. ಬಡ್ಡಿ ರಹಿತ ಸಾಲವಾಗಿ ಕೇಂದ್ರದಿಂದ ಈ ನೆರವು ರಾಜ್ಯಗಳಿ ಲಭ್ಯವಾಗುತ್ತಿದೆ. ಆರೋಗ್ಯ, ಶಿಕ್ಷಣ, ನೀರಾವರಿ, ಕುಡಿವ ನೀರು ಸರಬರಾಜು, ವಿದ್ಯುತ್ ಸಂಪರ್ಕ, ರಸ್ತೆ-ಸೇತುವೆಗಳು, ರೈಲ್ವೆ ಸೇರಿದಂತೆ ವಿವಿಧ ವಲಯಗಳಲ್ಲಿನ ಬಂಡವಾಳ ಹೂಡಿಕೆ ಯೋಜನೆಗಳಿಗೆ ಕೇಂದ್ರದ ನೆರವು ಯೋಜನೆಯಡಿ ಹಣ ಒದಗಿಸಲಾಗುತ್ತಿದೆ. ಜಲಜೀವನ್ ಮಿಷನ್ ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗಳಲ್ಲಿ ರಾಜ್ಯದ ಪಾಲು ಪೂರೈಸಲು ಈ ಹಣ ಬಳಸಬಹುದಾಗಿದೆ.

ಅಲ್ಲದೇ, ಈ ಯೋಜನೆಯಡಿಯೇ ರಾಜ್ಯ ಸರಕಾರದ ವಾಹನಗಳು, ಆಂಬ್ಯುಲೆನ್ಸ್ ಹಳೆ ವಾಹನಗಳನ್ನು ಹೊಸ ವಿದ್ಯುಚ್ಛಕ್ತಿ ಚಾಲಿತ ವಾಹನಗಳಿಗೆ ಬದಲಿಸಲೂ, ವಿದ್ಯುಚ್ಛಕ್ತಿ ಚಾಲಿತ ವಾಹನಗಳಿಗೆ ತೆರಿಗೆ ರಿಯಾಯಿತಿ ಒದಗಿಸಲೂ ರಾಜ್ಯಗಳು ಬಳಸಿಕೊಳ್ಳಬಹುದಾಗಿದೆ.

- ಕೇಂದ್ರ ಒದಗಿಸುವ ಬಡ್ಡಿ ರಹಿತ ಸಾಲ ಸೌಲಭ್ಯವನ್ನು 28 ರಾಜ್ಯಗಳ ಪೈಕಿ 23 ರಾಜ್ಯಗಳು ಬಳಸಿಕೊಂಡಿವೆ.
- ಅರುಣಾಚಲ ಪ್ರದೇಶ, ಹರಿಯಾಣ, ಕೇರಳ, ಪಂಜಾಬ್, ತೆಲಂಗಾಣ ರಾಜ್ಯಗಳು ಈ ಸೌಲಭ್ಯವನ್ನು ಬಳಸಿಕೊಂಡಿಲ್ಲ

ವಿಶೇಷ ಅನುದಾನ ಪಡೆದ ರಾಜ್ಯಗಳು

ರಾಜ್ಯ	ಕೋಟಿ ರು.
ಉತ್ತರ ಪ್ರದೇಶ	7,007.93
ಮಧ್ಯಪ್ರದೇಶ	5,074.94
ಬಿಹಾರ	5,408.88
ರಾಜಸ್ಥಾನ	4,552.01
ಪಶ್ಚಿಮ ಬಂಗಾಳ	4,416.23
ಅಸ್ಸಾಂ	3.181.97
ಒಡಿಶಾ	3,085.44
ಮಹಾರಾಷ್ಟ್ರ	2, 617.70
ಆಂಧ್ರಪ್ರದೇಶ	2, 616.27
ಕರ್ನಾಟಕ	2, 272.87

ಸಮಾಚಾರ ಸಣ್ಣದಲ್ಲ

ಭೂಗರ್ಭಕ್ಕೆ ಹೋಗುವವರೆಗೂ ಸಮಾಜಮುಖಿಯಾಗಬೇಕು

ಶಿಗ್ಗಾವಿ: ಮನುಷ್ಯ ತಾಯಿಗರ್ಭದಿಂದ ಹಿಡಿದು ಭೂಗರ್ಭಕ್ಕೆ ಹೋಗುವ ವರೆಗೂ ಸಾಮಾಜ ಮುಖಿಯಾಗಿರಬೇಕು, ವಕೀಲರು ಆತ್ಮವಿಶ್ವಾಸವನ್ನ ಇಟ್ಟುಕೊಳ್ಳಿ, ಕಠಿಣ ಪರಿಶ್ರಮ ಸತತ ಪ್ರಯತ್ನ, ಆತ್ಮವಿಶ್ವಾಸ ಕಳೆದುಕೊಳ್ಳದೇ ಮುಂದುವರೆಯಿರಿ ಎಂದು ನಿವೃತ್ತ ಉಚ್ಚನ್ಯಾಲಯದ ಹಿರಿಯ ನ್ಯಾಯಾದೀಶರಾದ ಅರಳಿ ನಾಗರಾಜ ಹೇಳಿದರು.

ಪಟ್ಟಣದ ಜೆಎಂಎಂಸಿ ನ್ಯಾಯಾಲಯದಲ್ಲಿ ಶಿಗ್ಗಾವಿ ವಕೀಲರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಎಫ್ ಎಸ್ ಕೋಣನವರ, ಜಿಐ ಸಜ್ಜನಗೌಡ್ರ ಮಾತನಾಡಿದರು. ಈ ಸಂದರ್ಭದಲ್ಲಿ ನಿವೃತ್ತ ಉಚ್ಚನ್ಯಾಲಯದ ಹಿರಿಯ ನ್ಯಾಯಾದೀಶರಾದ ಅರಳಿ ನಾಗರಾಜ ಅವರನ್ನ ಶಿಗ್ಗಾವಿ ವಕೀಲರ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಹಿರಿಯ ದೀವಾಣಿ ನ್ಯಾಯಾದೀಶರಾದ ಸುನೀಲ ಶಾಂತಪ್ಪ ತಳವಾರ, ಕಿರಿಯ ದಿವಾಣಿ ನ್ಯಾಯಾಧೀಶರಾದ ಅಶ್ವಿನಿ ಚಂದ್ರಕಾಂತ, ಅದ್ಯಕ್ಷ ಎಫ್ ಬಿ ಗಂಜೀಗಟ್ಟಿ, ಕಾರ್ಯದರ್ಶಿ ಆರ್ ಯು ಕುಬಸದ, ಸರಕಾರಿ ಅಭಿಯೋಜಕ ಎಂ ಎಂ ಮಲ್ಲಾಡದ, ಮಿರಾಬಾಯಿ, ಬಿ ಪಿ ಗುಂಡಣ್ಣವರ, ಎಂ ಜಿ ವಿಜಾಪುರ ಪ್ರಕಾಶ ಗೊಂದಕರ, ಸಿ.ಬಿ.ವಾಲ್ಮೀಕಿ ಸೇರಿದಂತೆ ಸಂಘದ ಸರ್ವ ಹಿರಿಯ, ಕಿರಿಯ ಮತ್ತು ಮಹಿಳಾ ನ್ಯಾಯವಾದಿಗಳು ಇದ್ದರು. ಕಾರ್ಯಕ್ರಮದಲ್ಲಿ ನಿವೃತ್ತ ಉಚ್ಚನ್ಯಾಲಯದ ಹಿರಿಯ ನ್ಯಾಯಾದೀಶರಾದ ಅರಳಿ ನಾಗರಾಜ ಅವರನ್ನ ಸನ್ಮಾನಿಸಲಾಯಿತು.

ಡಾ.ಬಿ.ಆರ್.ಅಂಬೇಡ್ಕರ್ ಮಹಾಪರಿನಿರ್ವಾಣ ಡಿ.6ಕ್ಕೆ

ಹಾವೇರಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನಾಚರಣೆ ಅಂಗವಾಗಿ ಡಿಸೆಂಬರ್ 6 ರಂದು ಬೆಳಗ್ಗೆ 10.30ಕ್ಕೆ ಹಾವೇರಿ ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಅವರು ತಿಳಿಸಿದ್ದಾರೆ.

ಡಿ.5ರಂದು ನಗರದಲ್ಲಿ ವಿದ್ಯುತ್ ವ್ಯತ್ಯಯ

ಹಾವೇರಿ: ಅಡವಿಸೋಮಪುರ (ದುಂಡಸಿ) 110/11ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಡಿಸೆಂಬರ್ 05 ರಂದು ಗುರುವಾರ ನಿರ್ವಹಣಾ ಕಾಮಗಾರಿ ಇರುವುದರಿಂದ ಈ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಲ್ಲ 11 ಕೆ. ವಿ ಮಾರ್ಗಗಳಲ್ಲಿ, ಬೆಳಗ್ಗೆ 10 ರಿಂದ ಸಾಯಂಕಾಲ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಈ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಗೆ ಬರುವ ಅಡವಿ ಸೋಮಪುರ, ಕುನ್ನೂರು, ತರಲಘಟ್ಟ, ಮಮದಾಪುರ, ಶ್ಯಾಡಂಬಿ, ಹೊನ್ನಾಪುರ, ಮಡ್ಲಿ, ದುಂಡಸಿ ತಾಂಡಾ, ದುಂಡಸಿ, ಶೀಲವಂತ ಸೋಮಪುರ, ಪಿ.ಆರ್.ಎಸ್ ವಾಟರ್ ಪಾರ್ಕ್ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾನಪದ ಕಲಾ ಪ್ರಕಾರಗಳ ತರಬೇತಿಗೆ ಅರ್ಜಿ ಆಹ್ವಾನ

ಹಾವೇರಿ: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಡಿ ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರಕ್ಕೆ ಪರಿಶಿಷ್ಟ ಜಾತಿಯ ಯುವಕ ಮತ್ತು ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಯುವಜನ ಮೇಳ ಹಾಗೂ ಯುವಜನೋತ್ಸವ ಕಾರ್ಯಕ್ರಮಗಳಲ್ಲಿ ಭಾಗಹಿಸಲು ಉತ್ತೇಜಿಸುವ ಹಿತದೃಷ್ಟಿಯಿಂದ ಪರಿಶಿಷ್ಟ ಜಾತಿ ಯುವಜನರಿಗೆ ದಿ.ಡಿ.10,ರಿಂದ 17 ರವರೆಗೆ ಬೆಂಗಳೂರಿನಲ್ಲಿ ತರಬೇತಿ ಶಿಬಿರ ಆಯೋಜಿಸಲಾಗಿದೆ. ತರಬೇತಿ ಶಿಬಿರದಲ್ಲಿ ಭಾಗಹಿಸುವ ಯುವಕ/ಯುವತಿಯರಿಗೆ ಲಘು ಉಪಹಾರ ಒದಗಿಸಲಾಗುವುದು. ವ್ಯವಸ್ಥೆ ಕಲ್ಪಿಸಲಾಗುತ್ತದೆ. ಆಸಕ್ತ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಹಾವೇರಿ ಕಛೇರಿಯಲ್ಲಿ ದಿನಾಂಕ ಡಿ.6ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಸಾಹಿತ್ಯ ಸಸಿಯಾಗಿ, ಕೃಷಿಯಾಗಲಿ

ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷ ಆರ್.ಡಿ. ಹೆಗಡೆ ಆಲ್ಮನೆ ಅಭಿಪ್ರಾಯ

ಶಿರಸಿ (ವಿಷ್ಣು ನಾಯಕ ವೇದಿಕೆ): ಸಾಹಿತ್ಯ ಸಮಾಜ ಮುಖಿಯಾಗದಿದ್ದರೆ ಅದು ಜನರಿಂದ ದೂರವಾಗುತ್ತದೆ.ಈಗ ಓದುಗರ ಸಂಖ್ಯೆ ಇಳಿಮುಖವಾಗಲು ಲೇಖಕ ಮತ್ತು ಓದುಗರ ನಡುವೆ ಸಂವಾದದ ಕೊರತೆ ಕಾರಣವಾಗಿದೆ ಎಂದು ಉತ್ತರ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷ ಆರ್. ಡಿ. ಹೆಗಡೆ ಆಲ್ಮನೆ ಹೇಳಿದರು.

ನಗರದ ನೆಮ್ಮದಿ ರಂಗಧಾಮದ ವಿಷ್ಣು ನಾಯ್ಕ ವೇದಿಕೆಯಲ್ಲಿ ನಡೆಯುತ್ತೀರುವ 24ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಾಮಾಜಿಕ ಜಾಲತಾಣಗಳು ಮತ್ತು ಅಂತರ್ಜಾಲ ಪತ್ರಿಕೆಗಳು ಬರಹಗಾರರ ಸೇವೆಗೆ ತುದಿಗಾಲಿನಲ್ಲಿ ನಿಂತಿರುವ ಸುಖದ ಕಾಲವಿದು. ಇದರಿಂದ ಕವಿತೆಯನ್ನೋ ಕತೆಯನ್ನೋ ಬರೆದು ತಕ್ಷಣ ಲೋಕಾರ್ಪಣೆ ಮಾಡುವ ಸ್ವಯಂ ಪ್ರಕಟಣೆಯ ಸೌಲಭ್ಯ ಸಿಕ್ಕಿದೆ. ಸಗಟು ಖರೀದಿಯ ಅವಕಾಶವಿರುವ ಕಾರಣ ಪುಸ್ತಕ ಪ್ರಕಾಶಕರು ಈಗ ದುರ್ಲಭರಲ್ಲ.ಕೃತಿಯ ಗುಣಮಟ್ಟವನ್ನು ಬಹಳ ಸಂದರ್ಭಗಳಲ್ಲಿ ಪ್ರಕಾಶಕರು ಪರಿಶೀಲಿಸುವ ಕಷ್ಟ ತೆಗೆದುಕೊಳ್ಳುವುದಿಲ್ಲ ಎಂದರು.

ಕನ್ನಡ ಸಾಹಿತ್ಯದಲ್ಲಿ ಈಗ ಸಾಹಿತ್ಯವಿಮರ್ಶೆಗೆ ಹಿನ್ನಡೆಯಾಗಿದೆ. ಇದಕ್ಕೆ ಉತ್ತರಕನ್ನಡ ಕೂಡ ಅಪವಾದವಾಗಿಲ್ಲ. ಕಾರಣ ಬರಹಗಾರರು ವಿಮರ್ಶೆಯನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಿದರೆ ಕೃತಿಗೆ ನ್ಯಾಯ ಸಿಗಲು ವಿಳಂಬವಾಗುವುದಿಲ್ಲ. ವಿಮರ್ಶೆಯ ಪ್ರಕಾರದ ಹಿನ್ನಡೆಗೆ ಇದು ಕಾರಣವಾದ್ದರಿಂದ ಬರಹಗಾರರು ತಮ್ಮ ಕೃತಿಯ ವಿಮರ್ಶೆಯನ್ನು ಸ್ವಾಗತಿಸುವಂತಾಗಬೇಕು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ನೆಮ್ಮದಿ ರಂಗಧಾಮದಲ್ಲಿ ಮಂಗಳವಾರ ಉದ್ಘಾಟನೆಗೊಂಡ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ.

ಈ ಜಿಲ್ಲೆಯ ಜನರ ಪ್ರೀತಿ ಈ ಜಿಲ್ಲೆಯ ಉಸಿರು. ಈ ಜನರ ಪ್ರಜ್ಞೆ ಈ ನೆಲದ ಪರಂಪರೆ ಮತ್ತು ಒಡನಾಟದಿಂದ ಹುಟ್ಟಿದ್ದು.ಇವರ ಪರಂಪರೆಯ ಪ್ರೇಮವೇ ಈ ಜಿಲ್ಲೆಗೆ ಶ್ರೀರಕ್ಷೆ. ಉತ್ತರ ಕನ್ನಡದ ಜನರು ಎಲ್ಲಾದರೂ ಇರಲಿ, ಏನಾದರೂ ಇರಲಿ,ಅವರ ಹೃದಯ ಈ ನೆಲದ ಸುದ್ದಿಗೆ ಹಂಬಲಿಸುತ್ತದೆ ಎಂದರು.

ಉತ್ತರ ಕನ್ನಡಿಗರ ಬಹು ಬೇಡಿಕೆಯ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಎರಡು ರೈಲ್ವೆ ಯೋಜನೆ ಜತೆ ಉನ್ನತ ಶಿಕ್ಷಣಕ್ಕೆ ಪೂರಕ ವಿಶ್ವವಿದ್ಯಾಲಯ ಸ್ಥಾಪನೆ ತ್ವರಿತವಾಗಿ ಆಗಬೇಕು ಎಂದು ಒತ್ತಾಯಿಸಿದರು.

'ಈ ಹಿಂದೆ ಕರಾವಳಿ ಮತ್ತು ಮಲೆನಾಡಿನ ತಾಲೂಕುಗಳ ನಡುವೆ ಶೈಕ್ಷಣಿಕವಾಗಿ ಬಹಳ ಅಂತರವಿತ್ತು. ಆದರೆ ಅದು ನಾಲ್ಕೈದು ದಶಕಗಳಲ್ಲಿ ಕಡಿಮೆಯಾಗಿ ಇಡೀ ಜಿಲ್ಲೆ ಏಕಪ್ರಕಾರವಾಗಿ ಬೌದ್ಧಿಕವಾದ ಮುನ್ನಡೆಯನ್ನು ಸಾಧಿಸುತ್ತಿದೆ. ಆದಾಗ್ಯೂ ಜಿಲ್ಲೆಯಲ್ಲಿ ಉನ್ನತ ಶಿಕ್ಷಣಕ್ಕೆ ಅಗತ್ಯ ವಿಶ್ವವಿದ್ಯಾಲಯವಿಲ್ಲ' ಎಂದರು. ಜಿಲ್ಲೆಯ ಅಭಿವೃದ್ಧಿ ಸಂಬಂಧ ಹುಬ್ಬಳ್ಳಿ- ಅಂಕೋಲಾ ಹಾಗೂ ತಾಳಗುಪ್ಪ- ಹುಬ್ಬಳ್ಳಿ ರೈಲ್ವೆ ಯೋಜನೆ ತಕ್ಷಣ ಅನುಷ್ಠಾನ ಮಾಡಬೇಕು. ಜಿಲ್ಲೆಯ ಬಹುದಿನದ ಹೋರಾಟಕ್ಕೆ ಕಾರಣವಾದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ತ್ವರಿತವಾಗಿ ಜಾರಿ ಮಾಡಬೇಕು' ಎಂದರು.

'ಕನ್ನಡ ಸಾಹಿತ್ಯದಲ್ಲಿ ಈಗ ಸಾಹಿತ್ಯವಿಮರ್ಶೆಗೆ ಹಿನ್ನಡೆಯಾಗಿದೆ. ಇದಕ್ಕೆ ಉತ್ತರಕನ್ನಡ ಕೂಡ ಅಪವಾದವಾಗಿಲ್ಲ. ಕಾರಣ ಬರಹಗಾರರು ವಿಮರ್ಶೆಯನ್ನು ಕ್ರೀಡಾ ಮನೋಭಾವದಿಂದ ಸ್ವೀಕರಿಸಿದರೆ ಕೃತಿಗೆ ನ್ಯಾಯ ಸಿಗಲು ವಿಳಂಬವಾಗುವುದಿಲ್ಲ. ವಿಮರ್ಶೆಯ ಪ್ರಕಾರದ ಹಿನ್ನಡೆಗೆ ಇದು ಕಾರಣವಾದ್ದರಿಂದ ಬರಹಗಾರರು ತಮ್ಮ ಕೃತಿಯ ವಿಮರ್ಶೆಯನ್ನು ಸ್ವಾಗತಿಸುವಂತಾಗಬೇಕು ಎಂದರು.

'ಉತ್ತರ ಕನ್ನಡದ ಘಟ್ಟದ ಮೇಲಿನ ಭಾಗಕ್ಕೆ ಮಳೆನೀರಿನ ಕೊಯ್ಲು ಮಾಡಲು ಅಲ್ಲಲ್ಲಿ ಗುಡ್ನಾಪುರದಲ್ಲಿ ಇರುವಂತಹ ದೊಡ್ಡ ಜಲಾಶಯಗಳು ಬೇಕು. ಈ ಭಾಗದ ಜನಪ್ರತಿನಿಧಿಗಳು ಮತ್ತು ಸರ್ಕಾರೇತರ ಸಂಸ್ಥೆಗಳು ಘಟ್ಟದ ಮೇಲಿನ ಮಳೆಯನ್ನು ಜಲಾಶಯಗಳಲ್ಲಿ ಸಂಗ್ರಹಿಸಲು ಗಮನ ಹರಿಸಿದರೆ ಇದರಿಂದ ಕರಾವಳಿಯಲ್ಲಿ ಸಂಭವಿಸುವ ಮಳೆಗಾಲದ ದುರಂತಗಳು ತಗ್ಗಬಹುದು. ಘಟ್ಟದ ಮೇಲಿನ ಬೇಸಿಗೆಯ ನೀರಿನ ಬವಣೆಯೂ ತಪ್ಪಬಹುದು' ಎಂದರು.

ಉತ್ತರ ಕನ್ನಡದ ಭಾಷೆ, ಸಾಹಿತ್ಯ, ಯಕ್ಷಗಾನ ಸಾಹಿತ್ಯ, ಜಾನಪದ ಸಾಹಿತ್ಯ, ಲಲಿತಕಲೆಗಳ ಸ್ಥಿತಿಗತಿಗಳ ಚಿಂತನೆ ನಡೆಯಬೇಕು ಎಂದರು.

ಸಾಹಿತ್ಯ ಪತ್ರಿಕೆಯ ಅವಶ್ಯ

ಜಿಲ್ಲೆಗೊಂದು ಒಳ್ಳೆಯ ಸಾಹಿತ್ಯ ಪತ್ರಿಕೆಯ ಅವಶ್ಯಕತೆ ಇದೆ. ಜಿಲ್ಲೆಯಲ್ಲಿ ಒಳ್ಳೆಯ ಪ್ರಕಾಶನದ ಅವಶ್ಯಕತೆ ಸಹ ಇದೆ. ಆದರೆ ಯಾರೂ ಮುಂದೆ ಬರುತ್ತಿಲ್ಲ. ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ಮೂಲಭೂತ ಸೌಲಭ್ಯಗಳಿಂದ ನಮ್ಮ ಜಿಲ್ಲೆ ವಂಚಿತವಾಗಿದೆ. ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಅವಶ್ಯಕತೆ ನಮ್ಮ ಜಿಲ್ಲೆಗಿದೆ. ಉನ್ನತ ಶಿಕ್ಷಣಕ್ಕೆ ಪೂರ್ಣ ಪ್ರಮಾಣದ ವಿಶ್ವ ವಿದ್ಯಾಲಯದ ಬೇಕಿದೆ. ಇಂದು ನಮ್ಮ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಕನಿಷ್ಠ 7ನೇ ತರಗತಿವರೆಗಾದರೂ ಕನ್ನಡ ಮಾಧ್ಯಮದಲ್ಲೇ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುವಂತಾಗಬೇಕು. ಆಗ ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷೆ ಮೇಲಿನ ಅಭಿಮಾನ ಹೆಚ್ಚುತ್ತದೆ.

-ಆರ್. ಡಿ. ಹೆಗಡೆ ಆಲ್ಮನೆ. ಸಮ್ಮೇಳನಾಧ್ಯಕ್ಷರು

ನಾಡನ್ನು ಭ್ರಮೆಯಿಂದ ಮುಕ್ತಗೊಳಿಸೋಣ

ಜಿಲ್ಲಾ 24ನೇ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಿದ ಬಿ.ಟಿ. ಲಲಿತಾ ನಾಯಕ ಆಶಯ

ಶಿರಸಿ: ಪಾಶ್ಚಾತ್ಯ ಹಾಗೂ ಸಾಂಪ್ರದಾಯಿಕ ಸಂಸ್ಕೃತಿ ನಡುವೆ ಸಮಾಜ ಕಟ್ಟುವ ಕೆಲಸ ಆಗಬೇಕು ಎಂದು ಹಿರಿಯ ಸಾಹಿತಿ ಬಿ.ಟಿ ಲಲಿತಾ ನಾಯಕ ಹೇಳಿದರು.

ನಗರದ ರಂಗಧಾಮದಲ್ಲಿ ಆಯೋಜಿಸಿರುವ ಎರಡು ದಿನಗಳ ಉತ್ತರ ಕನ್ನಡ ಜಿಲ್ಲಾ 24ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಂಗಳವಾರ ಚಾಲನೆ ನೀಡಿ ಅವರು ಮಾತನಾಡಿದರು.

ಬ್ರಿಟಿಷ್ ಆಡಳಿತ ಮುಕ್ತಾಯಗೊಂಡರೂ ಗುಲಾಮಿ ಮನಸ್ಥಿತಿ ಇಂದಿಗೂ ಮುಂದುವರಿದಿದೆ. ನಾಡಿನ ಪ್ರತಿಯೊಬ್ಬರ ತಲೆಯಿಂದ ಇದನ್ನು ತೆಗೆಯಬೇಕಿದೆ. ನಾಡನ್ನು ಭ್ರಷ್ಟಾಚಾರ, ಭ್ರಮೆಯಿಂದ ಮುಕ್ತ ಮಾಡಬೇಕು ಎಂದರು.

ಕನ್ನಡ ನಾಡನ್ನು ಮನೆ ಎಂದು ಪರಿಗಣಿಸಬೇಕು. ಆಗ ಮಾತ್ರ ಭಾಷೆ ಗಟ್ಟಿಯಾಗುತ್ತದೆ'. ಸ್ವಾತಂತ್ರ್ಯದ ಜವಾಬ್ದಾರಿ ಹೊರಲು ಶಕ್ತಿ ಬೇಕು. ಅಂಥ ಶಕ್ತಿ ಬರಲು ಉತ್ತಮ ಸಾಹಿತ್ಯ ರಚನೆ ಆಗಬೇಕು' ಎಂದ ಅವರು, ಮೃಗತ್ವ ಕಳೆಯುತ್ತ ಮನುಷ್ಯತ್ವ ಹೆಚ್ಚಿಸಿಕೊಳ್ಳುವ ಅನಿವಾರ್ಯತೆ ಇಂದಿದೆ ಎಂದರು.

ಯಲ್ಲಾಪುರ ಕ್ಷೇತ್ರದ ಶಾಸಕ ಶಿವರಾಮ ಹೆಬ್ಬಾರ ಮಾತನಾಡಿ, ಕನ್ನಡದ ಮೊದಲ ರಾಜಧಾನಿ ಆದಿಕವಿ ಪಂಪ ಆಳಿದ ನಾಡು ಸೊದೆರಾಜರು ಆಳಿದ ಪುಣ್ಯ ಭೂಮಿಯಿದು . ಇಂತಹ ನಾಡಿನಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿರುವುದು ಸಂತಸದ ತಂದಿದೆ. ಸಾಹಿತ್ಯ ಕ್ಷೇತ್ರವೇ ನನ್ನ ಮನೆ ಎಂದು ತಿಳಿದ ಸಾಕಷ್ಟು ಸಾಹಿತಿಗಳು ನಮ್ಮ ನಾಡಿನಲ್ಲಿದ್ದಾರೆ. ಕನ್ನಡ ಭಾಷೆ ಸಾಹಿತ್ಯ ವನ್ನು ಜೀವಂತ ವಾಗಿಟ್ಟಿರುವ ಜಿಲ್ಲೆ ನಮ್ಮ ಉತ್ತರ ಕನ್ನಡ ಜಿಲ್ಲೆಯಾಗಿದೆ. ಈ ಸಮ್ಮೇಳನದ ಅಧ್ಯಕ್ಷರ ಆಯ್ಕೆ ಈ ಜಿಲ್ಲೆಯ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಆಗಿದೆ ಎಂದರು. ಶಿರಸಿ- ಸಿದ್ದಾಪುರ ಕ್ಷೇತ್ರದ ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, ಕನ್ನಡ ರಾಜ್ಯದಲ್ಲಿ ಕನ್ನಡ ಕ್ಕೇ ಅಗ್ರಸ್ಥಾನ ವಿದೆ.ಇದನ್ನುಮರೆಯಲು ಸಾಧ್ಯವಿಲ್ಲ. ಶಿರಸಿಯಲ್ಲಿ ಇಷ್ಟು ದೊಡ್ಡ ಮಟ್ಟದಲ್ಲಿ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ ಎಂದರೆ ಇದಕ್ಕೆ ಸಾಕಷ್ಟು ಜನರ ಕೊಡುಗೆಯಿದೆ ಎಂದರು. ಜಿಲ್ಲಾಧ್ಯಕ್ಷ ಬಿ.ಎನ್. ವಾಸರೆ, ಆಶಯನುಡಿಗಳನ್ನಾಡಿದರು. ಹಿರಿಯ ಸಾಹಿತಿ ಭಾಗೀರಥಿ ಹೆಗಡೆ ಮಾತನಾಡಿದರು.

ಹಿರಿಯ ಸಾಹಿತಿ ಎನ್. ಆರ್. ನಾಯಕ, ಶ್ರೀಪಾದ ಶೆಟ್ಟಿ, ಸಹಾಯಕ ಆಯುಕ್ತೆ ಕಾವ್ಯರಾಣಿ ಕೆ. ಮಾತನಾಡಿದರು.

ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ. ಶ್ರೀಪಾದ ಶೆಟ್ಟಿ ಕನ್ನಡ ಧ್ವಜವನ್ನು ಸಮ್ಮೇಳನಾಧ್ಯಕ್ಷ ಆರ್. ಡಿ. ಹೆಗಡೆ ಆಲ್ಮನೆ ಯವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಕೆನರಾ ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ವಸಂತ ರೆಡ್ಡಿ, ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ನಾಯ್ಕ, ನಗರಸಭೆ ಪೌರಾಯುಕ್ತ ಕಾಂತರಾಜ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡ, ನಗರಸಭೆ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ, ಉಪಾಧ್ಯಕ್ಷ ರಮಾಕಾಂತ ಭಟ್, ಹಿರಿಯ ಸಾಹಿತಿ ಸೈಯದ್ ಝುಮಿರುಲ್ಲಾ ಷರೀಫ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಗಲಾ ನಾಯ್ಕ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಚಾರ್ಜ್ ಫರ್ನಾಂಡಿಸ್, ಕಸಾಪ ಶಿರಸಿ ಘಟಕದ ಅಧ್ಯಕ್ಷ ಜಿ.ಸುಬ್ರಾಯ ಭಟ್ ಬಕ್ಕಳ, ಹಿರಿಯ ಸಾಹಿತಿ ಎನ್.ಆರ್. ನಾಯಕ್ ಹಾಗೂ ಉತ್ತರ ಕನ್ನಡ ಜಿಲ್ಲಾ ಕಸಾಪ ದ ಎಲ್ಲಾ ತಾಲೂಕು ಘಟಕದ ಅಧ್ಯಕ್ಷರು, ಕನ್ನಡಪರ ಸಂಘಟನೆಗಳ ಅಧ್ಯಕ್ಷರು ಸೇರಿ ಹಲವರು ಇದ್ದರು.

ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಪಿ.ಆರ್ ನಾಯ್ಕ ಸ್ವಾಗತಿಸಿದರು. ಕೆ.ಎನ್. ಹೊಸಮನಿ ಹಾಗೂ ಭವ್ಯ ಹಳೆಯೂರ ನಿರೂಪಿಸಿದರು. ಕಸಾಪ ಶಿರಸಿ ಘಟಕದ ಅಧ್ಯಕ್ಷ ಜಿ.ಸುಬ್ರಾಯ ಭಟ್ ಬಕ್ಕಳ ವಂದಿಸಿದರು.

ವಿಶ್ವವಾಣಿ ಪುಸ್ತಕದ ಹೊಸಮುಖ ಅನಾವರಣ

ಶಿರಸಿಯಲ್ಲಿ ನಡೆಯುತ್ತಿರುವ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ವಿಶ್ವವಾಣಿ ಪುಸ್ತಕ ಪ್ರಕಟಿಸಿದ, ಲೋಕಧ್ವನಿಯಲ್ಲಿ ಪ್ರಕಟವಾದ ಅಂಕಣ ಬರಹಗಳ ಗುಚ್ಛ ಹೊಸಮುಖ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಕೃತಿಕಾರ, ಹಿರಿಯ ಪತ್ರಕರ್ತ ರಾಜು ಅಡಕಳ್ಳಿ, ಸಮ್ಮೇಳನಾಧ್ಯಕ್ಷ ಆರ್. ಡಿ. ಹೆಗಡೆ ಆಲ್ಮನೆ, ಜಿಲ್ಲಾ ಕಸಾಪ ಅಧ್ಯಕ್ಷ ಬಿ.ಎನ್. ವಾಸರೆ ಹಾಗೂ ಗಣ್ಯರು ಇದ್ದರು.

ಪುಸ್ತಕ ಬಿಡುಗಡೆ

ಹಿರಿಯ ಸಾಹಿತಿಗಳಾದ ಭಾಗೀರಥಿ ಹೆಗಡೆ ಅವರ ಶೋಕಚಕ್ರ, ಭೀಮಾಶಂಕರ ಅಜನಾಳರವರ ಹಳ್ಳಿಯ ಹೊಲ್ದಾಗ, ಪಿಎಸ್ಐ ನಾಗಪ್ಪ ಅವರ ನೆತ್ತರಲಿ ನೆಂದ ಹೂವು, ಕೃಷ್ಣ ಪದಕಿಯವರ ಭರವಸೆಯ ಬೆಳಕು, ರಾಜು ಅಡಕಳ್ಳಿಯವರ ಹೊಸಮುಖ, ನಾಗರತ್ನ ನಾಯ್ಕ ಅವರ ಕನಸು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಬೆಳೆ ಹಾನಿ ಪರಿಹಾರ ನೀಡದಿದ್ದರೆ ಅರೆ ಬೆತ್ತಲೆ ಹೋರಾಟ

ಕನಕಾಪುರ ಯುಟಿಪಿ ಕಾಲುವೆ ಒಡೆದು ಹಾಳಾದ ರೈತರ ಕೃಷಿ ಭೂಮಿ | ರಾಜಕಾರಣಿಗಳಿಂದ ಸಿಕ್ಕಿದ್ದು ಭರವಸೆ ಮಾತ್ರ

ಹಾವೇರಿ: ಕಳೆದ ಒಂದುವರೆ ತಿಂಗಳ ಹಿಂದೆ ಅತಿಯಾದ ಮಳೆಗೆ ಕನಕಾಪುರ ಬಳೆಯಿರುವ ಯುಟಿಪಿ ಕಾಲುವೆಗೆ ಅಪಾರ ಪ್ರಮಾಣದ ನೀರು ಹರಿದು ಬಂದು ಕಾಲುವೆಯು ಒಡೆದು ರೈತ ಜಮೀನುಗಳಿಗೆ ನುಗ್ಗಿ ಕಟಾವಿಗೆ ಬಂದ ನೂರಾರು ಎಕರೆ ಬೆಳೆಗಳಿಗೆ ಜಲಾವೃತಗೊಂಡು ಸಂಪೂರ್ಣ ನಾಶವಾಗಿ ಬೆಳೆ ಹಾನಿ ಜಮೀನು ಹಾನಿಯಾದ ರೈತರಿಗೆ ಜಿಲ್ಲಾಡಳಿತ ಇದುವರೆಗೂ ಒಂದು ನಯಾ ಪೈಸೆ ಹಣ ನೀಡದೇ ರೈತರಿಗೆ ಘೋರ ಅನ್ಯಾಯ ಮಾಡಿದೆ.

ಯುಟಿಪಿ ಕಾಲುವೆ ಒಡೆದ ನಂತರದಲ್ಲಿ ಜಿಲ್ಲಾಧಿಕಾರಿ ವಿಜಯ ಮಾಹಂತೇಶ ದಾನಮ್ಮನವರ ಯುಟಿಪಿ ಎಂಜಿನೀಯರ್ ಗಳು, ಕೃಷಿ ಅಧಿಕಾರಿಗಳು ಸೇರಿದಂತೆ ಸಂಸದರಾದ ಬಸವರಾಜ ಬೊಮ್ಮಾಯಿ ಅವರು ಬೇಟಿ ನೀಡಿ ಹಾನಿಯಾದ ಪ್ರದೇಶವನ್ನು ಪರಿಶೀಲನೆ ನಡೆಸಿ ನಷ್ಟವಾದ ರೈತರಿಗೆ ಪರಿಹಾರ ವ್ಯವಸ್ಥೆ ಮಾಡಲಾಗುವುದು ಎಂದು ಹೇಳಿ ಹೋದವರು ಇದುವರೆಗೂ ಒಡೆದ ಕಾಲುವೆಯನ್ನು ಇದುವರೆಗೂ ದುರಸ್ತಿ ಕೂಡಾ ಮಾಡದೇ ಹಾಗಯೇ ಕೈ ಬಿಡಲಾಗಿದೆ. ಸುಮಾರು 300 ಎಕರೆಗೂ ಹೆಚ್ಚು ಹಲವು ಯುಟಿಪಿ ಕಾಲುವೆ ಕಾಮಗಾರಿ ಅಂದು ಗುಣಮಟ್ಟದಿಂದ ಅಭಿವೃದ್ಧಿ ಪಡಿಸಿದ್ದರೆ ರೈತರು ಈ ನಷ್ಟ ಅನುಭವಿಸುವ ಪ್ರಶ್ನೆಯೇ ಬರುತ್ತಿರಲಿಲ್ಲ.

ನೀರಾವರಿ ಮಾಡುವುದಾಗಿ ಹೇಳಿ ರೈತರ ಜಮೀನು ವಶಕ್ಕೆ ಪಡೆದು ನೂರಾರು ಕೋಟಿ ಸಾರ್ವಜನಿಕ ತೆರಿಗೆ ಹಣ ಖರ್ಚು ಮಾಡಿದ್ದು ಪ್ರಯೋಜನವಾಗದೇ ರೈತರಿಗೆ ವರಮಾನ ವಾಗಬೇಕಾದ ಈ ಯೋಜನೆ ಕಟು ಶಾಪವಾಗಿದೆ. ನೀರಾವರಿ ನಿಗಮದವರು ಅಂದು ಆಡಳಿತದಲ್ಲಿದ್ದ ಶಾಸಕರು, ಸಚಿವರು ಅಧಿಕಾರಿಗಳು ಸೇರಿ ಈ ಯುಟಿಪಿ ಕಾಲುವೆಯನ್ನ ಕಳಪೆ ಮಾಡಿ ಹತ್ತಾರು ಕೋಟಿ ಲೂಟಿ ಮಾಡಿ ರೈತರ ಜೀವನವನ್ನೇ ಹಾಳು ಮಾಡಿದ್ದಾರೆ.

ಯುಟಿಪಿ ಮೇಲಾಧಿಲಾರಿಗಳು ಕಾಲುವೆ ಒಡೆದಾಗ ಬಂದು ಈ ಕಾಲುವೆಯನ್ನು ಸುಸಜ್ಜಿತವಾಗಿ ನಿರ್ಮಿಸಿ ಮತ್ತೆ ಈ ರೀತಿ ಆಗದಂತೆ ಕಾಮಗಾರಿ ಮಾಡುತ್ತೇವೆ. ನಷ್ಟ ವಾಗಿರು ರೈತರ ಬೆಳೆ ಮತ್ತು ಜಮೀನಿಗೆ ಪರಿಹಾರ ನೋಡುತ್ತೇವೆ ಎಂದವರೂ ಇಂದಿಗೂ ಬಂದು ನೋಡಿಲ್ಲ ಕಾಲುವೆ ಕಟ್ಟಿಲ್ಲ. ಇದನ್ನು ಜಿಲ್ಲಾಡಳಿತ ತಕ್ಷಣವೇ ರೈತರಿಗೆ ಪರಿಹಾರ ಬಿಡುಗಡೆ ಮಾಡಬೇಕು. ತೊಂದರೆಯಲ್ಲಿರುವ ರೈತರ ಸಂಕಷ್ಟಕ್ಕೆ ನ್ಯಾಯ ನೀಡಬೇಕು.

ಈ ಬಾರಿ ಮಳೆ ಚನ್ನಾಗಿ ಆಗಿದೆ. ಕೈಗೆ ಬೆಳೆ ಬಂದಿವೆ. ಮಾಡಿರುವ ಸಾಲ ತೀರಿಸಬಹುದು ಎಂದು ಆಶಯಲ್ಲಿದ್ದ ನಮ್ಮ ರೈತರಿಗೆ ಕಾಲುವೆ ಒಡೆದು ದೊಡ್ಡ ನಷ್ಟ ವಾಗಿದೆ. ಕಾಲುವೆ ಒಡೆದು ಸುಮಾರು 300 ಎಕರೆ ಜಮೀನಿನಲ್ಲಿ ನೀರು ನುಗ್ಗಿ ಕೈಗೆ ಬಂದ ಬೆಳೆ ನೀರು ಪಾದವು. ಕಾಲುವೆ ಮಾಡುವ ಸಮಯದಲ್ಲಿ ನಾವೆಲ್ಲಾ ರೈತರು ಇದು ಅವೈಜ್ಞಾನಿಕ ಇಲ್ಲಿ ಬೇಡ ಅಂತಾ ಕೂಡಾ ವಿರೋಧ ಮಾಡಿದ್ದೇವು. ಅಧಿಕಾರ ಬಳಿಸಿಕೊಂಡು ನಮ್ಮ ಬದುಕನ್ನು ಹಾಳು ಮಾಡಿದ್ದಾರೆ.

ಜಿಲ್ಲಾಡಳಿತ ಭೇಟಿಕೊಟ್ಟು ಒಂದುವರೆ ತಿಂಗಳ ಕಳೆದರೂ ನಮ್ಮ ರೈತರಿಗೆ ಒಂದು ನಯಾ ಪೈಸೆ ನೀಡಿಲ್ಲ. ಒಂದು ವಾರದಲ್ಲಿ ಪರಿಹಾರ ನೀಡದೇ ಹೋದರೆ ಡಿ.ಸಿ ಕಚೇರಿ ಮುಂದೆ ಅರೆಬತ್ತಲೆ ಹೋರಾಟ ಮಾಡುತ್ತೇವೆ. ಪರಿಹಾರ ನೋಡುವವರೆಗೂ ಹೋರಾಟ ಹಿಂದಕ್ಕೆ ಪಡೆಯುವುದಿಲ್ಲವೆಂದು ಪಕ್ಕೀರಗೌಡ ಗಾಜೀಗೌಡ್ರ ಹೇಳಿದ್ದಾರೆ.

ಒಂದುವರೆ ತಿಂಗಳ ಹಿಂದೆ ಮಹಾಮಳೆಗೆ ಅಪಾರ ಪ್ರಮಾಣದಲ್ಲಿ ಯುಟಿಪಿ ಕಾಲುವೆಗೆ ನೀರು ಹರಿದು ಬಂದು ಕಾಲುವೆ ಒಡೆದು ರೈತರ ಜಮೀನಿಗೆ ನುಗ್ಗಿದ ಈ ಕಾಲುವೆಯನ್ನು ಇಂದಿಗೂ ದುರಸ್ತಿ ಮಾಡದೆ ಇರುವುದು.

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಪನಹಳ್ಳಿ
ಕ್ರಿಮಿನಲ್ ಮಿಸ್ ನಂ.291/2024

ಅರ್ಜಿದಾರರು : . ಶ್ರೀ ಬಸವಣ್ಣಪ್ಪ ಹೆಚ್. ತಂದೆ ಲೇಟ್ ಬೆಟ್ಟಪ್ಪ ವಯಸ್ಸು 70 ವರ್ಷ, ವೃತ್ತಿ: ವ್ಯವಸಾಯ, ವಾಸ:ಅರಸನಾಳು ಗ್ರಾಮ, ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು : .ಮಾನ್ಯ ತಹಶಿಲ್ದಾರರು ಜನನ ಮತ್ತು ಮರಣ ನೊಂದಣಾಧಿಕಾರಿಗಳು,ತಾಲೂಕು ಕಛೇರಿ ಹರಪನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆ.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಅರ್ಜಿದಾರನ ತಂದೆಯಾದ ಶ್ರೀ ಬೆಟ್ಟಪ್ಪ @ ಹಮ್ಮಿಗಿ ಬೆಟ್ಟಪ್ಪ , ತಂದೆ ಲೇಟ್ ದೊಡ್ಡ ಮಲ್ಲಪ್ಪ ಇವರು ವಿಜಯನಗರ ಜಿಲ್ಲೆ , ಹರಪನಹಳ್ಳಿ ತಾಲೂಕು,ಅರಸನಾಳು ಗ್ರಾಮದಲ್ಲಿ ದಿನಾಂಕ:10.05.1955 ರಂದು ಅರ್ಜಿದಾರರ ತಮ್ಮ ಸ್ವ-ಗೃಹದಲ್ಲಿ ಮರಣ ಹೊಂದಿದ್ದು, ಅವರ ಮರಣ ಪ್ರಮಾಣ ಪತ್ರ ಕೋರಿ ಹರಪನಹಳ್ಳಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲು ಮಾಡಿದ್ದು, ಪ್ರಕರಣವು ದಿನಾಂಕ 24.12.2024 ರಂದು ವಿಚಾರಣೆಗೆ ಇರುತ್ತದೆ. ಸದರಿ ಮೇಲ್ಕಂಡ ಪ್ರಕರಣವು ಬೆಳಗ್ಗೆ 11-00 ಗಂಟೆಗೆ ಈ ನ್ಯಾಯಾಲಯದ ಮುಂದೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಸಲ್ಲಿಸಬಹುದು, ಇಲ್ಲವಾದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ನ್ಯಾಯಾಲಯದ ಆದೇಶದ ಮೇರೆಗೆ
ಹಿರಿಯ ಶಿರಸ್ತೆದಾರರು
ಮಾನ್ಯ ,ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಹರಪನಹಳ್ಳಿ.
ಅರ್ಜಿದಾರರ ಪರ ವಕೀಲರು
ಶ್ರೀ.ಹನುಮಂತಪ್ಪ. ಸಿ.
ಸ್ಥಳ: ಹರಪನಹಳ್ಳಿ ದಿನಾಂಕ: 02/12/2024

ಶ್ರದ್ಧೆಯಿಂದ ಹಚ್ಚುವ ದೀಪವೇ ದೀಪೋತ್ಸವ

ವೈಜನಾಥ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯ

ಸವಣೂರು: ಶ್ರದ್ಧಾಭಕ್ತಿಯಿಂದ ಲಕ್ಷ ಕೊಟ್ಟು ದೀಪ ಹಚ್ಚಿದಾಗ ದೀಪೋತ್ಸವದ ಸಂಕಲ್ಪ ಸಾಕಾರಗೊಳ್ಳುತ್ತದೆ ಎಂದು ಗಂಜಿಗಟ್ಟಿ ಚರಮೂರ್ತೇಶ್ವರ ಮಠದ ಡಾ. ವೈಜನಾಥ ಶಿವಲಿಂಗೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲೂಕಿನ ಸುಕ್ಷೇತ್ರ ಕಾರಡಗಿ ಶ್ರೀ ವೀರಭದ್ರೇಶ್ವರ ದೇವರ ದೇವಸ್ಥಾನದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ತಿಕೋತ್ಸವ ಹಾಗೂ 2ನೇ ವರ್ಷದ ಲಕ್ಷ ದೀಪೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಆಶೀರ್ವಚನ ನೀಡಿದರು.

ಸಂಧ್ಯಾಕಾಲದ ಗೋಧೂಳಿ ಸಮಯದಲ್ಲಿ ದೀಪ ಹಚ್ಚುವುದರಿಂದ ಮನುಷ್ಯನ ಮನಸು ಪರಿವರ್ತನೆಗೊಳ್ಳುತ್ತದೆ. ಅಂತಹ ಭಕ್ತಿ ದೇವರಿಗೆ ತಲುಪುತ್ತದೆ. ಇಂದಿನ ಆಧುನಿಕ ದಿನಗಳಲ್ಲಿ ನಾವೆಲ್ಲರೂ ನಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವುದನ್ನು ಮರೆಯುತ್ತಿದ್ದೇವೆ. ಸಂಸ್ಕಾರವಿಲ್ಲದ ಮಕ್ಕಳಿಗೆ ಎಷ್ಟು ಸಂಪತ್ತನ್ನು ಗಳಿಸಿದರೂ ಅದು ನಿರರ್ಥಕ ಎಂದರು.

ಮಕ್ಕಳಿಗೆ ಶಿಸ್ತು, ಸಮಯ ಪ್ರಜ್ಞೆ, ಉತ್ತಮ ಸಂಸ್ಕಾರ ನೀಡುವ ಪಾಠಶಾಲೆಯನ್ನು ತೆರೆಯುವ ಮೂಲಕ ಧಾರ್ಮಿಕ ಜಾಗೃತಿ ಮೂಡಿಸಬೇಕು. ಮಕ್ಕಳಲ್ಲಿ ಶ್ರಮದ ಶಕ್ತಿ ಕಡಿಮೆಯಾಗಿದೆ. ನಾವೇ ಅವರನ್ನು ಸೋಮಾರಿಗಳನ್ನಾಗಿ ಮಾಡುತ್ತಿದ್ದೇವೆ. ಅದ್ದರಿಂದ, ಸ್ವಚ್ಛತೆಯಿಂದ ಕಾರ್ಯಗಳಲ್ಲಿ ತೊಡಗಿಸಿ ಶಿಸ್ತನ್ನು ಕಲಿಸಬೇಕು. ನಮ್ಮ ಸುತ್ತಲಿನ ವಾತಾವರಣ ಸ್ವಚ್ಛವಾಗಿಟ್ಟುಕೊಳ್ಳಲು ಕಲಿಸಬೇಕು ಎಂದರು.

ಶ್ರೀ ವೀರಭದ್ರೇಶ್ವರ ದೇವಸ್ಥಾನ ಕಮಿಟಿಯ ನಿರಂತರ ಪರಿಶ್ರಮ ಹಾಗೂ ಜನಪ್ರತಿನಿಧಿಗಳ ಇಚ್ಛಾಶಕ್ತಿ, ಭಕ್ತರ ಸಹಕಾರದಿಂದ ಸುಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಆಗಿವೆ. ಲಕ್ಷ ದೀಪೋತ್ಸವದಲ್ಲಿ ಪಾಲ್ಗೊಂಡು ಆತ್ಮ ಶುದ್ಧಿ ಹೊಂದಿ ಸದ್ಭಕ್ತರಿಗೆ ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿ ಕಾರುಣ್ಯ ಪ್ರಾಪ್ತಿಯಾಗಲಿ ಎಂದರು. ಕುಂದಗೋಳ ಕಲ್ಯಾಣಪುರಮಠದ ಶ್ರೀಅಭಿನವ ಬಸವಣ್ಣಜ್ಜನವರು ಮಾತನಾಡಿ, ಭಾರತ ಧಾರ್ಮಿಕ ಸಂಸ್ಕಾರಗಳಿಂದ ಖ್ಯಾತಿ ಪಡೆದಿದೆ. ಭಕ್ತರೇ ಮಠ, ದೇವಸ್ಥಾನಗಳ ನಿಜವಾದ ಆಸ್ತಿ. ಅವರಿಂದ ಮಾತ್ರ ದೇವಸ್ಥಾನಗಳ ಅಭಿವೃದ್ಧಿ ಸಾಧ್ಯ ಎಂದರು. ವಿಜಯಪುರ- ಜತ್ತ ವಿರಕ್ತಮಠದ ಶ್ರೀಮಹಾಂತ ಸ್ವಾಮೀಜಿ ಆಶೀರ್ವಚನ ನೀಡಿದರು. ಪತ್ರಕರ್ತರ ಸಂಘದ ಅಧ್ಯಕ್ಷ ಆನಂದ ಮತ್ತಿಗಟ್ಟಿ, ದೇವಸ್ಥಾನದ ಆಡಳಿತ ಮಂಡಳಿ ಕಾರ್ಯದರ್ಶಿ ರಾಘವೇಂದ್ರಗೌಡ ಪಾಟೀಲ ಮಾತನಾಡಿದರು. ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷ ಬಸನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು ದೇವಸ್ಥಾನದ ಭಕ್ತರನ್ನು ಮತ್ತು ಸ್ಥಳೀಯ ವರದಿಗಾರರನ್ನು ಸನ್ಮಾನಿಸಲಾಯಿತು. ದೇವಸ್ಥಾನದ ಆಡಳಿತ ಮಂಡಳಿ ಪದಾಧಿಕಾರಿಗಳಾದ ಗುರುಪಾದಪ್ಪ ಶಿರೂರ, ಲಾವಪ್ಪ ಕುರವತ್ತಿ, ರೇವಣಸಿದ್ದಪ್ಪ ಕಾಳಶೆಟ್ಟಿ, ವಿ.ಸಿ. ಪಾಟೀಲ, ಮಹೇಶ ಮುದಗಲ್, ವೆಂಕಟರಾವ್ ಕುಲಕರ್ಣಿ, ಬಸಟಿಪ್ಪ ಅತ್ತಿಗೇರಿ, ವೀರಪ್ಪ ತೊಂಡೂರ, ಶಂಕ್ರಪ್ಪ ಅಗಸಿಬಾಗಿಲ, ಕಲ್ಲಪ್ಪ ಆಜೂರ ಇತರರಿದ್ದರು. ಮುಖ್ಯಗುರು ವಿ.ಎಚ್. ಸಣ್ಣಶಿವಣ್ಣನವರ, ಪ್ರಾಚಾರ್ಯ ಚಂದ್ರಗೌಡ ಪಾಟೀಲ ಹಾಗೂ ಬಸವರಾಜ ಸಜ್ಜನ ಕಾರ್ಯಕ್ರಮ ನಿರ್ವಹಿಸಿದರು.

ಗ್ರಾಮೀಣ ಶಿಕ್ಷಣ ಸಂಸ್ಥೆಗಳು ಉಳಿಯಲಿ

ಸೋಂದಾ ಸ್ವರ್ಣವಲ್ಲೀ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಅಭಿಪ್ರಾಯ

ಯಲ್ಲಾಪುರ: ಈ ಪ್ರಾಂತದಲ್ಲಿ ಲಕ್ಷ್ಮಿ, ಸರಸ್ವತಿ ದೇವಿಯರ ಅನುಗ್ರಹ ಸಮಪಾಲು ಪಡೆದಿದ್ದು ಶೈಕ್ಷಣಿಕ, ಆರ್ಥಿಕ ಪ್ರಗತಿ ಅತ್ಯುತ್ತಮ ಮಟ್ಟದಲ್ಲಿದೆ. ಗ್ರಾಮೀಣ ಭಾಗದ ಶಿಕ್ಷಣ ಸಂಸ್ಥೆಗಳು ಉಳಿಯಲಿ ಬೆಳೆಯಲಿ ಎಂದು ಸೋಂದಾ ಸ್ವರ್ಣವಲ್ಲಿ ಶ್ರೀ ಗಂಗಾಧರೇಂದ್ರ, ಸರಸ್ವತಿ ಸಾಮೀಜಿ ಹೇಳಿದರು.

ಅವರು ಮಂಗಳವಾರ ತಾಲೂಕಿನ ಭರತನಹಳ್ಳಿ ಸಹಕಾರಿ ಸಂಘದ ಸಭಾಭವನದಲ್ಲಿ ಭರತನಹಳ್ಳಿ ಪ್ರಗತಿ ಶಿಕ್ಷಣ ಅಭಿವೃದ್ಧಿ ಸಂಸ್ಥೆಯ ಸುವರ್ಣ ಮಹೋತ್ಸವದ ಪ್ರಾರಂಭೋತ್ಸವವನ್ನು ಹಾಗೂ ಪ್ರಗತಿ ವಿದ್ಯಾಲಯದ ನೂತನ ಕಟ್ಟಡದ ಶಿಲಾನ್ಯಾಸ ನೇರವೇರಿಸಿ ಆಶೀರ್ವಚನ ನೀಡಿ ಸುವರ್ಣ ಮಹೋತ್ಸವದ ನಿಮಿತ್ತ ವರ್ಷದಾದ್ಯಂತ ನಡೆಯುವ ಕಾರ್ಯಕ್ರಮ ಗಳೆಲ್ಲವೂ ಯಶಸ್ವಿಯಾಗಲಿ ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಈ ವಿದ್ಯಾಲಯದಲ್ಲಿ ಶಿಕ್ಷಣದೊಂದಿಗೆ ಸಂಸ್ಕಾರ ನೀಡುವ ಕಾರ್ಯ ಮಾಡಿದ್ದಾರೆ. ಇಲ್ಲಿನ ಮಕ್ಕಳು ಸುಶ್ರಾವ್ಯವಾಗಿ ಭಗವದ್ಗೀತೆ ಪಠಣ ಮಾಡಿರುವದು ಸಾಕ್ಷಿಕರಿಸಿದೆ. ಶೈಕ್ಷಣಿಕ ಪ್ರಗತಿಗೆ ಒತ್ತುಕೊಟ್ಟು 50ವರ್ಷಗಳ ಹಿಂದೆಯೇ ಇಂತಹ ದಟ್ಟ ಕಾಡಿನಲ್ಲಿ ಶಿಕ್ಷಣ ಸಂಸ್ಥೆಯನ್ನು ಕಟ್ಟಿದ ಎನ್ಎಸ್ ಹೆಗಡೆ ಅವರ ಕಾರ್ಯ ಶ್ಲಾಘನೀಯ. ಪ್ರಗತಿ ವಿದ್ಯಾಲಯಯೆಂಬ ಹೆಸರುಸಾರ್ಥಕಪಡೆದುಕೊಂಡಿದೆ. ಇಂದು ಸಾಮಾನ್ಯವಾಗಿ ಎಲ್ಲ ಪಾಲಕರು ತಮ್ಮ ಮಕ್ಕಳು ಎಂಜಿನೀಯರ ಡಾಕ್ಟರ್ ಆಗಬೇಕೆಂದು ಬಯಸುತ್ತಾರೆ ಆದರೆ ಶಿಕ್ಷಕರಿಂದಲೇ ಮಕ್ಕಳಿಗೆ ಸಂಸ್ಕಾರ ದೊರೆಯುತ್ತಿದೆ ಎಂಬುದನ್ನು ಮರೆತಂತೆ ಇರುವುದು ವಿಪರ್ಯಾಸವೇ ಸರಿ. ಶಿಕ್ಷಕರು ಸೇರಿದಂತೆ ಇತರ ವೃತ್ತಿಗಳ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಬೇಕು ಎಂದರಲ್ಲದೇ ವಿದ್ಯಾಲಯದ ನೂತನ ಕಟ್ಟಡಕ್ಕೆ ಶಾಸಕರ ಅನುದಾನದಲ್ಲಿ 10ಲಕ್ಷ ರು. ನೀಡುವುದಾಗಿ ಹೇಳಿದರು.

ಶಾಸಕ ಶಿವರಾಮ ಹೆಬ್ಬಾರ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ವಿಕೇಂದ್ರೀಕರಣ ಯೋಜನೆ ಪಂಚಾಯತರಾಜ ಸಮಿತಿ ಉಪಾಧ್ಯಕ್ಷ ಪ್ರಮೋದ ಹೆಗಡೆ ಮಕ್ಕಳ ಕೈಬರಹ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದರು. ಕ್ಷೇತ್ರಶಿಕ್ಷಣಾಧಿಕಾರಿ ಎನ್ ಆರ್ ಹೆಗಡೆ, ಕುಂದರಗಿಗ್ರಾಪಂ ಅಧ್ಯಕ್ಷೆ ಯಮುನಾ ಸಿದ್ದಿ, ಪಿಡಿಓ ರವಿಪಟಗಾರ, ನಿವೃತ್ತ ಶಿಕ್ಷಕ ಎಂ ಟಿ ಪಟಗಾರ ಇತರರು ವೇದಿಕೆಯಲ್ಲಿದ್ದರು. ಸಂಸ್ಥೆಯ ಅಧ್ಯಕ್ಷ ಹೇರಂಬ ಪಿ. ಹೆಗಡೆ ಸ್ವಾಗತಿಸಿದರು. ಶಿಕ್ಷಕ ಆದಿತ್ಯಶಂಕರ ಜಿ.ಎ ನಿರ್ವಹಿಸಿದರು. ಶಿಕ್ಷಕ ಪ್ರಕಾಶ ಭಟ್ಟ ಸನ್ಮಾನ ಪತ್ರ ವಾಚಿಸಿದರು. ಮುಖ್ಯೋಪಾಧ್ಯಾಪಕವಿನಯ ಹೆಗಡೆ ವಂದಿಸಿದರು. ಇದೇ ಸಂದರ್ಭದಲ್ಲಿ ಸಂಸ್ಥೆಗೆ ಸ್ಥಳದಾನ ಮಾಡಿದಗಣ್ಯರಿಗೆ, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು ಸಂಸ್ಥೆಯಿಂದ ಗೌರವಿಸಿ ಸಮ್ಮಾನಿಸಿದರು. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಾಧನೆಗೈದವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಪುರಸ್ಕಾರ ನೀಡಿದರು.

ಸಮಾಚಾರ ಸಣ್ಣದಲ್ಲ

ಜಿಲ್ಲಾ ಮಟ್ಟದ ಕೃಷಿ ತರಬೇತಿ ನಾಳೆ

ಧಾರವಾಡ: ಸಿರಿಧಾನ್ಯ ಮತ್ತು ಸಾವಯವ ಅಂತರಾಷ್ಟ್ರೀಯ ವಾಣಿಜ್ಯ ಮೇಳ-2025 ಅಂಗವಾಗಿ ರಾಜ್ಯಮಟ್ಟದ ಸಿರಿಧಾನ್ಯ ಮತ್ತು ಮರೆತುಹೋದ ಖಾದ್ಯಗಳ (ಲ್ಯಾಂಡ್ ರೇಸೆಸ್ ಪ್ರೊಡೆಕ್ಟ್) ಪಾಕ ಸ್ಪರ್ಧೆಯ ಪೂರ್ವಭಾವಿಯಾಗಿ ಜಿಲ್ಲಾ ಮಟ್ಟದಲ್ಲಿ ಪಾಕ ಸ್ಪರ್ಧೆಯನ್ನು ಕೃಷಿ ಇಲಾಖೆಯಿಂದ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು, ಕೃಷಿಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಹೊರತುಪಡಿಸಿ, ಜಿಲ್ಲೆಯ ಎಲ್ಲಾ ಸಾರ್ವಜನಿಕರಿಗೆ ಭಾಗವಹಿಸಲು ಅವಕಾಶವಿರುತ್ತದೆ. ಸ್ಪರ್ಧೆಯನ್ನು ಡಿ.5, 2024ರಂದು ಬೆಳಗ್ಗ 11 ಗಂಟೆಗೆ ಧಾರವಾಡ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಜರುಗಿಸಲಾಗುವುದು. ಅಭ್ಯರ್ಥಿಗಳು ತಮ್ಮ ಭಾವಚಿತ್ರದೊಂದಿಗೆ ಹೆಸರು, ವಿಳಾಸ ಮತ್ತು ತಯಾರಿಸುವ ಖಾದ್ಯ ಬೇಕಾಗುವ ಸಾಮಗ್ರಿಗಳು, ತಯಾರಿಸಲು ಬೇಕಾಗುವ ಸಮಯ ಹಾಗೂ ತಯಾರಿಸುವ ವಿಧಾನದ ಸಂಕ್ಷಿಪ್ತ ಮಾಹಿತಿಯೊಂದಿಗೆ ತಯಾರಿಸಿದ ಖಾದ್ಯದೊಂದಿಗೆ ಹಾಜರಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8277931285ಗೆ ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮರಗಳ ತೆರವಿಗೆ ಬಹಿರಂಗ ಹರಾಜು

ಧಾರವಾಡ: ಭಾಣತಿಕಟ್ಟಿ ನೇಕಾರನಗರ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಅಡ್ಡಲಾಗಿರುವ ನಿಂತ 15 ವಿವಿಧ ಜಾತಿಯ ಮರಗಳನ್ನು ತೆರುವುಗೊಳಿಸಲು ಹುಬ್ಬಳ್ಳಿ ವಲಯ ಅರಣ್ಯ ಅಧಿಕಾರಿ ಕಛೇರಿಯಲ್ಲಿ ಡಿಸೆಂಬರ 9 ರಂದು ಮಧ್ಯಾಹ್ನ 3 ಗಂಟೆಗೆ ಬಹಿರಂಗ ಹರಾಜು ಮಾಡಲಾಗುವುದು. ಮರ ಸಂರಕ್ಷಣಾ ಕಾಯ್ದೆ ಸೆಕ್ಷನ್‌ಗಳಲ್ಲಿ ಅಗತ್ಯ ಪಡಿಸಿರುವಂತೆ ಈ ಬಗ್ಗೆ ತಕರಾರು ಸಲ್ಲಿಸ ಬಯಸುವವರು ತಮ್ಮ ತಕರಾರನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಧಾರವಾಡ ಉಪ ವಿಭಾಗ, ಧಾರವಾಡ ಹಾಗೂ ಧಾರವಾಡದ ಕೆ.ಸಿ.ಪಾರ್ಕ್ ಎದುರು ಅರಣ್ಯ ಸಂಕೀರ್ಣದಲ್ಲಿರುವ ಮರ ಅಧಿಕಾರಿಯವರಿಗೆ ಲಿಖಿತ ರೂಪದಲ್ಲಿ ಡಿ.8 ರ ಒಳಗಾಗಿ ಸಲ್ಲಿಸಬಹುದಾಗಿದೆ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಮಾಧ್ಯಮ ಪ್ರಶಸ್ತಿಗಾಗಿ ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಗದಗ: ಭಾರತ ಚುನಾವಣಾ ಆಯೋಗವು ಚುನಾವಣೆಗೆ ಸಂಬಂಧಿಸಿದಂತೆ, ಮತದಾರರ ಶಿಕ್ಷಣ ಮತ್ತು ಅರಿವು ಮೂಡಿಸುವಲ್ಲಿ 2024ನೇ ಸಾಲಿನಲ್ಲಿ ಅತ್ಯತ್ತಮ ಪ್ರಚಾರ ಕಾರ್ಯಕ್ರಮ ಹಮ್ಮಿಕೊಂಡ ಮಾಧ್ಯಮಗಳಾದ ಮುದ್ರಣ ಮಾಧ್ಯಮ, ವಿದ್ಯುನ್‌ಮಾನ ಮಾಧ್ಯಮದ ಟಿ.ವಿ ಮತ್ತು ರೇಡಿಯೋ ಹಾಗೂ ಸಾಮಾಜಿಕ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಭಾರತ ಚುನಾವಣಾ ಆಯೋಗವು ಮೀಡಿಯಾ ಅವಾರ್ಡ್-2024 ನೀಡಲು ಅರ್ಜಿ ಆಹ್ವಾನಿಸಿದೆ. ರಾಜ್ಯದ ಆಸಕ್ತ ಮಾಧ್ಯಮ ಸಂಸ್ಥೆಗಳು ಭಾಗವಹಿಸಬಹುದು. ಮಾಧ್ಯಮ ಸಂಸ್ಥೆಗಳು ಡಿ.12, 2024 ರೊಳಗಾಗಿ ನೇರವಾಗಿ ಭಾರತ ಚುನಾವಣಾ ಆಯೋಗಕ್ಕೆ ತಮ್ಮ ಮಾಧ್ಯಮದ ಮೂಲಕ ಮತದಾರರ ಶಿಕ್ಷಣ ಮತ್ತು ಅರಿವು ಮೂಡಿಸುವಲ್ಲಿ 2024ನೇ ಸಾಲಿನಲ್ಲಿ ಅತ್ಯತ್ತಮ ಪ್ರಚಾರ ಕಾರ್ಯಕ್ರಮ ಹಮ್ಮಿಕೊಂಡ ಬಗ್ಗೆ ಪ್ರಸ್ತಾವನೆಯನ್ನು ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ನಿರ್ವಾಚನಾ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560001 ಇಲ್ಲಿಗೆ ಸಲ್ಲಿಸಬಹುದಾಗಿದೆ ಎಂದು ಸಹಾಯಕ ಮುಖ್ಯ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ ಜ.7ಕ್ಕೆ

ಗದಗ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಎಕ್ಸಪ್ಲೋರಿಂಗ್ ನೇಚರ್‌ಸ್ ಫಾರ್ಮಸಿ ಪೊಟೆನ್ಸಿಯಲ್ ಆಫ್ ಮೆಡಿಟೇಷನಲ್ ಮತ್ತು ಏರೋಮೆಟಿಕ್ ಪ್ಲಾಂಟ್ಸ್ ಮತ್ತು ದೇರ್ ಕನ್ವರ್ವೇಶನ್ ವಿಷಯದ ಮೇಲೆ ಜ.7ರಿಂದ 9 ರವರೆಗೆ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ . ಈ ಸಮ್ಮೇಳನದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ತಾಂತ್ರಿಕ ಉಪನ್ಯಾಸಗಳನ್ನು ನೀಡಲಿದ್ದಾರೆ. ಈ ಸಮ್ಮೇಳನದಲ್ಲಿ ಯುವ ವಿಜ್ಞಾನಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ರಿಸರ್ಚ ಪೇಪರ್ ಪ್ರಸೆಂಟೇಶನ್ ಮಂಡಿಸಲು ಅವಕಾಶ ಕಲ್ಪಿಸಲಾಗಿದ್ದು, ಆಯ್ಕೆಯಾದ ರಿಸರ್ಚ್ ಪೇಪರ್‌ಗಳಿಗೆ ನಗದು ಬಹುಮಾನವನ್ನು ನೀಡಲಾಗುವುದು. ಈ ಸಮ್ಮೇಳನದಲ್ಲಿ ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಯುವ ವಿಜ್ಞಾನಿಗಳು, ಶೈಕ್ಷಣಿಕ ತಜ್ಞರು, ಯುವ ಉದ್ಯಮದಾರರು ಭಾಗವಹಿಸಬಹುದಾಗಿದ್ದು, ಆಸಕ್ತ ಪ್ರತಿನಿಧಿಗಳು ಡಿ. 31 ರೊಳಗಾಗಿ ನೊಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಕಾಡೆಮಿಯ ಅಧಿಕಾರಿಗಳನ್ನು ದೂ. 9845258894 9880405181 ಸಂಪರ್ಕಿಸಬಹುದಾಗಿದೆ ಅಥವಾ ಅಕಾಡೆಮಿ ವೆಬ್ ಸೈಟ್ https //:kstacademy.in ವೀಕ್ಷಿಸಬಹುದಾಗಿದೆ.

ರಾಮ್ ಪ್ರಸಾತ್ ಜಿಲ್ಲಾ ಪ್ರವಾಸ ನಾಳೆ

ಧಾರವಾಡ: ಬೆಂಗಳೂರು ಜಲಮಂಡಳಿ ಅಧ್ಯಕ್ಷರು ಹಾಗೂ ಧಾರವಾಡ ಜಿಲ್ಲಾ ನೂತನ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ. ರಾಮ್ ಪ್ರಸಾತ್ ಮನೋಹರ್.ವಿ. ಅವರು ಡಿಸೆಂಬರ 5 ರಂದು ಧಾರವಾಡ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಡಿಸೆಂಬರ್ 5ಕ್ಕೆ ಬೆಳಗ್ಗೆ 10.30 ಕ್ಕೆ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳೊಂದಿಗೆ ಎಲ್ಲಾ ಇಲಾಖೆ, ನಿಗಮ ಮಂಡಳಿಗಳ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 3 ಗಂಟೆಗೆ ವಿವಿಧ ಕಾಮಗಾರಿಗಳ ಕಾರ್ಯಕ್ರಮಗಳ ಸ್ಥಳೀಯ ಪರಿವೀಕ್ಷಣೆ ಕೈಗೊಳ್ಳುವರು ಎಂದು ಅವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆರೋಗ್ಯಕೇಂದ್ರಕ್ಕೇ ಬೇಕು ಚಿಕಿತ್ಸೆ

ನಗರದ ಆಸ್ಪತ್ರೆಗೆ ರೋಗಿಗಳು ಬರಲು ಹಿಂದೇಟು | ಗಲೀಜು ತುಂಬಿ ರೋಗ ಬರುವಂತಿರುವ ಆವಾರ

ಮಾಲಿಂಗರಾಯ ಪೂಜಾರ

ಗದಗ: ನಗರದ ಹೃದಯ ಭಾಗದಲ್ಲಿರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವಾರ ಗಲೀಜಿನಿಂದ ತುಂಬಿದ್ದು, ರೋಗಿಗಳು ಬರಲು ಹಿಂದೇಟುಹಾಕುತ್ತಿದ್ದಾರೆ.

ಆರೋಗ್ಯ ಕೇಂದ್ರವೇ ಸಮಸ್ಯೆಯ ಸುಳಿಗೆ ಸಿಲುಕಿ ರೋಗಿಗಳಿಗಿಂತಲೂ ಮೊದಲು ಆಸ್ಪತ್ರೆಗೆ ಚಿಕಿತ್ಸೆ ನೀಡಬೇಕಿದೆ.

ನಗರದ ಕೇಂದ್ರದಲ್ಲಿರುವ ಈ ಕಟ್ಟಡದಲ್ಲಿ ಈ ಮೊದಲು ಜಿಲ್ಲಾ ಆಸ್ಪತ್ರೆ ಇತ್ತು ನಂತರ ಜಿಮ್ಸ್ ಲಕ್ಷ್ಮೇಶ್ವರ ರಸ್ತೆಯ ಮಲ್ಲಸಮುದ್ರಕ್ಕೆ ಸ್ಥಳಾಂತರವಾಯಿತು. ಇದರಿಂದ ಕಟ್ಟಡ ಖಾಲಿ ಇರಬಾರದು ಎನ್ನುವ ದೃಷ್ಟಿಯಿಂದ ಇಲ್ಲಿ ನಗರ ಆರೋಗ್ಯ ಕೇಂದ್ರವನ್ನು ತೆರೆಯಲಾಗಿದೆ ಸುಮಾರು ಹತ್ತು ವರ್ಷಗಳಿಂದ ಈ ಆಸ್ಪತ್ರೆ ಸಮಸ್ಯೆಗಳಿಂದ ತುಂಬಿದೆ.

ನಗರ ಪ್ರದೇಶಗಳಲ್ಲಿ ಇರುವ ಬಡ ರೋಗಿಗಳಿಗೆ ಚಿಕಿತ್ಸೆ ಅನುಕೂಲವಾಗಬೇಕಾಗಿದ್ದ ಈ ಆಸ್ಪತ್ರೆಯಲ್ಲಿ ವೈದ್ಯರ ಹಾಗೂ ಸಿಬ್ಬಂದಿ ಕೊರತೆ ಜತೆಗೆ ಅಶುಚಿತ್ವದ ಆಗರವಾಗಿದೆ. ಇದರಿಂದ ರೋಗಿಗಳು ನಿತ್ಯ ನರಕಯಾತನೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಮುಖ್ಯ ವೈದ್ಯಾಧಿಕಾರಿ ತಲೆಕೆಡಿಸಿಕೊಂಡಿಲ್ಲ ಎಂದು ರೋಗಿಗಳು ದೂರುತ್ತಿದ್ದಾರೆ.

ನಗರದಲ್ಲಿ ಇರುವ ಏಕೈಕ ಸರ್ಕಾರಿ ಆಸ್ಪತ್ರೆ ಎಂದರೆ ನಗರ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿದ್ದು, ಈ ಆಸ್ಪತ್ರೆಯ ಸುತ್ತಮುತ್ತ ಜಿಮ್ಸ್ ಹಾಗೂ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವೈದ್ಯರ ಒಡೆತನದ ಆಸ್ಪತ್ರೆ ಹಾಗೂ ಕ್ಲಿನಿಕ್ (ಖಾಸಗಿ) ಆಸ್ಪತ್ರೆಯ ಹಾವಳಿ ಹೆಚ್ಚಾಗಿದೆ. ಇದರಿಂದ ಈ ಆರೋಗ್ಯ ಕೇಂದ್ರದ ಬಗ್ಗೆ ಸಂಬಂಧ ಪಟ್ಟವರು ಗಮನ ಹರಿಸುತ್ತಿಲ್ಲ ಎನ್ನುವ ಆರೋಪಗಳು ಕೇಳಿ ಬರುತ್ತಿವೆ.

ಈ ಕಟ್ಟಡ ಬಹಳ ಹಳೆಯ ಕಟ್ಟಡ ಆಗಿರುವುದರಿಂದ ಮೇಲ್ಛಾವಣಿ ಪದರು ಬೀಳುವಂತಿದೆ. ಸಮರ್ಪಕ ನೀರು ಪೂರೈಕೆ ಇಲ್ಲದೇ ಶೌಚಾಲಯ ಗಬ್ಬೆದ್ದು ನಾರುತ್ತಿದೆ. ಆರೋಗ್ಯ ಕೇಂದ್ರದ ಆವರಣ ಹಾಗೂ ಸುತ್ತಮುತ್ತ ಸ್ವಚ್ಛತೆ ಇಲ್ಲದೆ ಪ್ರತಿನಿತ್ಯ ನೂರಾರು ರೋಗಿಗಳು ಪರೀಕ್ಷೆ ಹಾಗೂ ಚಿಕಿತ್ಸೆ ಪಡೆಯಲು ಸರ್ಕಾರಿ ಆಸ್ಪತ್ರೆಗೆ ಬರುತ್ತಾರೆ ಬರುವವರು ಮೂಗು ಮುಚ್ಚಿಕೊಂಡು ಬರುವ ಸ್ಥಿತಿ ಇದೆ. ಆಸ್ಪತ್ರೆಯ ಆವರಣ ಹಾಗೂ ಸುತ್ತಮುತ್ತ ಘನತ್ಯಾಜ್ಯ ವಸ್ತುಗಳನ್ನು ಬಿಸಾಡಿರುವುದರಿಂದ ತಿಪ್ಪೆಗುಂಡಿಯಾಗಿ ಮಾರ್ಪಟ್ಟಿದೆ.

ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳನ್ನು ಕೇಳಿದರೆ ಈ ಆಸ್ಪತ್ರೆ ಕಟ್ಟಡ ದೊಡ್ಡದಾಗಿದೆ ಇದನ್ನು ಸ್ವಚ್ಛತೆಗೆ ಸಿಬ್ಬಂದಿ ಕೊರತೆ ಇದೆ. ಅಲ್ಲದೆ ನಿರ್ವಹಣೆ ಮಾಡಲು ಅನುದಾನದ ಕೊರತೆ ಇದೆ ಆದ್ದರಿಂದ ಕೇಂದ್ರವನ್ನು ಬೇರೆಡೆ ಸ್ಥಳಾಂತರ ಮಾಡಲು ಕಟ್ಟಡ ಹುಡುಕುತ್ತಿದ್ದೇವೆ. ಇದನ್ನು 100 ಹಾಸಿಗೆಯಾಗಿ ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎನುತ್ತಿದ್ದಾರೆ ಒಟ್ಟಾರೆ ಕಳೆದ ಅನೇಕ ವರ್ಷಗಳಿಂದ ಇದೇ ಸಮಸ್ಯೆಯನ್ನು ಅನುಭವಿಸುತ್ತಿದ್ದು ಆಸ್ಪತ್ರೆ ಸುಧಾರಿಸಿಲ್ಲ, ರೋಗಿಗಳು ಹೈರಾಣಾಗುವುದು ತಪ್ಪಿಲ್ಲ.

ಗದಗ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಕಟ್ಟಡ ಬಹಳ ದೊಡ್ಡದಾಗಿದ್ದು, ಸ್ವಚ್ಛತೆ ಮಾಡಲು ಸಿಬ್ಬಂದಿಯ ಕೊರತೆ ಇದೆ. ಕಟ್ಟಡ ನಿರ್ವಹಣೆಗೆ ಅನುದಾನದ ಕೊರತೆ ಇದೆ ಇದರಿಂದ ಈ ಆಸ್ಪತ್ರೆಯನ್ನು ಬೇರೆಡೆ ಸ್ಥಳಾಂತರ ಮಾಡಲಾಗುವುದು.

-ಡಾ.ಎಸ್.ಎಸ್.ನೀಲಗುಂದ, ಡಿ.ಎಚ್.ಓ ಗದಗ

ನಗರದ ಪ್ರಾಥಮಿಕ ಆರೋಗ್ಯ ಕೇಂದ್ರ ಅವ್ಯವಸ್ಥೆಯ ಆಗರವಾಗಿದೆ. ಅಲ್ಲದೆ ವೈದ್ಯ, ಸಿಬ್ಬಂದಿ ಕೊರತೆ ಇದೆ ಬಡ ರೋಗಿಗಳಿಗೆ ಈ ಆಸ್ಪತ್ರೆಗೆ ಸೂಕ್ತ ಚಿಕಿತ್ಸೆ ನೀಡಲು ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಸಂಘಟನೆಯಿಂದ ಹೋರಾಟ ಮಾಡಲಾಗುವುದು.

-ಚಂದ್ರಕಾಂತ ಚವ್ಹಾಣ ಜಕಸಂ ರಾಜ್ಯ ಪ್ರಧಾನ ಕಾರ್ಯದರ್ಶಿ

ಸಂಚಾರ ನಿಯಮ ಪಾಲನೆಯಿಂದ ಸಂಚಾರಿಗಳು ಸುರಕ್ಷಿತ: ದಿವ್ಯಪ್ರಭು

ಧಾರವಾಡ: ರಸ್ತೆ ಸಂಚಾರಿ ನಿಯಮಗಳನ್ನು ಪ್ರತಿಯೊಬ್ಬರು ಪಾಲಿಸುವದರಿಂದ ಎಲ್ಲ ಸಂಚಾರಿಗಳು ಸುರಕ್ಷಿತವಾಗಿರುತ್ತಾರೆ. 2024 ರ ಜನೆವರಿಯಿಂದ ನವೆಂಬರವರಗೆ ಅವಳಿನಗರದಲ್ಲಿ 118 ವಾಹನ ಅಪಘಾತ ಪ್ರಕರಣಗಳಾಗಿದ್ದು, ಇದರಲ್ಲಿ 126 ಜನ ಸಾವಿಗೀಡಾಗಿದ್ದಾರೆ ಎಂದು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಅಧ್ಯಕ್ಷರು ಆಗಿರುವ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಆಯೋಜಿಸಿದ್ದ ಎಲ್.ಇ.ಡಿ ಸ್ಕ್ರೀನ್ ಹೊಂದಿರುವ ವಾಹನಗಳ ಮೂಲಕ ಸಾರ್ವಜನಿಕರಲ್ಲಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಮಾತನಾಡಿದ ಅವರು, ರಸ್ತೆ ಸಾರ್ವಜನಿಕರಿಗೆ ಸೇರಿದ್ದು, ಸ್ವೆಚ್ಛಾಚಾರಿಗಳಾಗಿ ತಮಗೆ ತಿಳಿದಂತೆ ರಸ್ತೆಗಳಲ್ಲಿ ವಾಹನ ಓಡಿಸಬಾರದು ಎಂದರು.

ಧಾರವಾಡ ಜಿಲ್ಲೆಯಲ್ಲಿ ರಸ್ತೆ ಸಂಚಾರ ನಿಯಮಗಳ ಕುರಿತು ಸಾರ್ವಜನಿಕರ ಜಾಗೃತಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಜಿಲ್ಲಾ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಆಯೋಜಿಸಲಾಗಿದೆ. ಕರಪತ್ರ, ಪೋಸ್ಟರ್‌ಗಳ ಮೂಲಕ ಸಂಚಾರಿ ನಿಯಮಗಳ ಮಾಹಿತಿ ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಯುವಕ, ಯುವತಿಯರು ರಸ್ತೆ ಸಂಚಾರ ನಿಯಮಗಳನ್ನು ಪಾಲಿಸಬೇಕು. ವಾಹನ ಓಡಿಸುವಾಗ ತಲೆಗೆ ಹೆಲ್ಮೆಟ್, ಸೀಟ್ ಬೆಲ್ಟ್ ಧರಿಸಬೇಕು. ಸೂಚಿತ ವೇಗದ ಮಿತಿಯನ್ನು ಪಾಲಿಸಬೇಕು. ರಸ್ತೆ ಬದಿಯಲ್ಲಿ ಅಳವಡಿಸಿರುವ ಸೂಚನಾ ಫಲಕಗಳನ್ನು ಗಮನಿಸಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರೂ ರಸ್ತೆ ಸುರಕ್ಷತೆ ಪಾಲನೆ ಕುರಿತು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆ ಅಪರ ಸಾರಿಗೆ ಆಯುಕ್ತ ಕೆ.ಟಿ. ಹಾಲಸ್ವಾಮಿ, ಉಪ ಪೊಲೀಸ ಆಯುಕ್ತ ರವೀಶ ಸಿ.ಆರ್. ಅವರು ಮಾತನಾಡಿದರು. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಆಯುಕ್ತ ಡಾ. ಈಶ್ವರ ಉಳ್ಳಾಗಡ್ಡಿ ಹಾಗೂ ಸಾರಿಗೆ ಇಲಾಖೆ ಅಧಿಕಾರಿಗಳು ಇದ್ದರು.

ಪ್ರಾದೇಶಿಕ ಸಾರಿಗೆ ಅಧಿಕಾರಿ ಕೆ.ದಾಮೋದರ ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಕಚೇರಿ ಸಿಬ್ಬಂದಿ ಜಿ.ವಿ.ದಿನಮನಿ ವಂದಿಸಿದರು. ಕಾರ್ಯಕ್ರಮದಲ್ಲಿ ಸಾರ್ವಜನಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸವಾರನ ಜತೆಗೆ ಸಂಚರಿಸುವವರಿಗೆ ಮತ್ತು ಇತರ ಸಹ ಪ್ರಯಾಣಿಕರ ಪ್ರಾಣಕ್ಕೂ ತೊಂದರೆ ಆಗುತ್ತದೆ. ರಸ್ತೆ ಸಂಚಾರ ನಿಯಮಗಳನ್ನು ಗೌರವಿಸಿ, ಪ್ರತಿಯೊಬ್ಬರು ಪಾಲಿಸಬೇಕು.

-ದಿವ್ಯಪ್ರಭು ಜಿಲ್ಲಾಧಿಕಾರಿ ಧಾರವಾಡ

ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ ಇಂದು

ಗದಗ : ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್. ಕೆ.ಪಾಟೀಲ ಅವರು ಡಿ.4 ರಂದು ಗದಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದು ವಿವರ ಈ ಕೆಳಗಿನಂತಿದೆ.

ಡಿ. 4ರಂದು ಬೆಳಗ್ಗ 10 ಗಂಟೆಗೆ ನಗರದ ಲಯನ್ಸ ಶಾಲೆ ಆವರಣದಲ್ಲಿನ ಸನ್ಮಾರ್ಗ ಪದವಿ ಪೂರ್ವ ಮಹಾವಿದ್ಯಾಲಯಲ್ಲಿ ಜರುಗುವ 2024-25ನೇ ಸಾಲಿನ ಗದಗ ಜಿಲ್ಲಾ ಮಟ್ಟದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬೆಳಗ್ಗ 10.30 ಗಂಟೆಗೆ ನಗರದ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಶಿವಾನುಭವ ಮಂಟಪದಲ್ಲಿ ಸಂತರಾಜಕಾರಣಿ ಡಿ ಆರ್ ಪಾಟೀಲ ರವರ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸುವರು. ಸಂಜೆ 5 ಗಂಟೆಗೆ ಹುಬ್ಬಳ್ಳಿಗೆ ಪ್ರಯಾಣ ಬೆಳೆಸುವರು ಎಂದು ಸಚಿವರ ಕಾರ್ಯಲಯದ ಪ್ರಕಟಣೆ ತಿಳಿಸಿದೆ.

ಚಕ್ಕಡಿ ದಾರಿ ಸಮರ್ಪಕ ವ್ಯವಸ್ಥೆ; ರೈತರಿಂದ ಶಾಸಕರಿಗೆ ಮೆಚ್ಚುಗೆ

ಅಣ್ಣಿಗೇರಿ: ಅಣ್ಣಿಗೇರಿ ತಾಲೂಕಿನಲ್ಲಿ ಪಕ್ಷಾತೀತ ರೈತ ಹೋರಾಟ ಸಮಿತಿಯಿಂದ ಚಕ್ಕಡಿ ದಾರಿ ಹರಿಕಾರ ಎಂದೇ ಖ್ಯಾತಿ ಆಗಿರುವ ಶಾಸಕರಾದ ಎನ್ ಎಚ್ ಕೋನರಡ್ಡಿ ಅವರಿಗೆ ಸನ್ಮಾನ ಹಮ್ಮಿಕೊಂಡಿದ್ದರು.

ಗ್ರಾಮೀಣ ಹೊಲದ ರಸ್ತೆಗಳು ಸುಧಾರಣೆ ಆಗಿ ರೈತರಲ್ಲಿ ಮಂದಹಾಸ ವ್ಯಕ್ತವಾಗಿ ಶಾಸಕರಿಗೆ ಗೌರವಿಸಿ ಕೃತಜ್ಞತೆ ತಿಳಿಸಿದರು.

ನವಲಗುಂದ ದಾರಿ, ಇನ್ನು ಎರಡು ಹೊಲದ ದಾರಿ ಸರಿ ಪಡಿಸಲು ಮನವಿ ನೀಡಿದ ಬೆನ್ನಲ್ಲೆ, ರಸ್ತೆ ಕಾಮಗಾರಿ ಪ್ರಾರಂಭ ವಾಗುತ್ತಿದ್ದು, ಎಲ್ಲ ರೈತರು ಶಾಸಕರಿಗೆ ಗೌರವಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಕೋನರಡ್ಡಿ, ರೈತರೆಲ್ಲರ ಸಂಪೂರ್ಣ ಸಹಕಾರದಿಂದ ಚಕ್ಕಡಿ ದಾರಿ ಮಾಡಲು ಅನುಕೂಲವಾಯಿತು. ಒಟ್ಟಾರೆ ದೇಶದಲ್ಲಿ ಮಾದರಿ ತಾಲೂಕು ಮಾಡಲು ಮಹದಾಶೆ ಹೊಂದಿದ್ದೇನೆ ಎಂದರು. ಕಾರ್ಯಕ್ರಮದಲ್ಲಿ ಕಾಟನ್ ಕಾರ್ಪೋರೇಷನ್ ಲಿಮಿಟೆಡ್ ಮಾರ್ಕೆಟ್ ಸಹಾಯಕ ಅಧಿಕಾರಿ ಜಿ ರಮೇಶ್ ಅವರು, ಈ ಭಾಗದ ರೈತರ ಹತ್ತಿ ತೆಗೆದುಕೊಳ್ಳುವಲ್ಲಿ ಎಲ್ಲಾ ರೈತರಿಗೆ ಅನುಕೂಲತೆ ಮಾಡಿದ್ದಾರೆ ಎಂದು ರೈತರು ಗೌರವಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ, ಚಂಬಣ್ಣ ಹಾಳದೋರ್ಟ, ಪ್ರವೀಣ ನಾವಳ್ಳಿ, ಭಗವಂತಪ್ಪ ಪುಟ್ಟನವರ, ದ್ಯಾಮಣ್ಣ ಕೋಗ್ಗಿ, ವಿ ಪಿ ಗುರಿಕಾರ, ಯಲ್ಲಪ್ಪ ಮೊರಬಸಿ, ಗುರುಸಿದ್ದಪ್ಪ ಕೊಪ್ಪದ, ಹೂಗಾರ, ಹಸನ್ ಘುಡುನಾಯ್ಕರ್ ಸೇರಿದಂತೆ ಎಲ್ಲ ರೈತ ಸಮಿತಿಯವರು ಉಪಸ್ಥಿತರಿದ್ದರು.

ಖುದಿರಾಮ್ ಬೋಸ್ ಜನ್ಮದಿನಾಚರಣೆ ಸಂಪನ್ನ

ಧಾರವಾಡ: ಸ್ವಾತಂತ್ರ್ಯ ಸಂಗ್ರಾಮದ ಮಹಾನ್ ಕ್ರಾಂತಿಕಾರಿ, ಅಗ್ನಿಯುಗದ ಹರಿಕಾರ ಖುದಿರಾಮ್ ಬೋಸ್ ರ 135ನೇ ಜನ್ಮ ವಾರ್ಷಿಕ ಕಾರ್ಯಕ್ರಮವನ್ನು ಎಐಡಿವೈಓ ಧಾರವಾಡ ಜಿಲ್ಲಾ ಕಚೇರಿಯಲ್ಲಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪದಾಧಿಕಾರಿಗಳು, ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಜಿರಹಿತವಾಗಿ ಹೋರಾಡಿ ತನ್ನ 18ನೇ ವಯಸ್ಸಿನಲ್ಲಿ ಗಲ್ಲಿಗೇರಿದ ಮೊದಲ ಕ್ರಾಂತಿಕಾರಿ ಖುದಿರಾಮ್ ಬೋಸ್ ಅದೆಷ್ಟೋ ಕ್ರಾಂತಿಕಾರಿಗಳಿಗೆ ಆದರ್ಶವಾಗಿ ನಿಂತರು. ಅಂತಹ ಕ್ರಾಂತಿಕಾರಿಯ ಆದರ್ಶ ಇಂದಿಗೂ ಯುವಜನರಿಗೆ ಅವಶ್ಯಕವಾಗಿದೆ. ಇಂದಿಗೂ ನಮ್ಮ ದೇಶದಲ್ಲಿ ನಡೆಯುತ್ತಿರುವ ಅನ್ಯಾಯಗಳ ವಿರುದ್ಧ ಸಿಡಿದೇಳಲು, ರಾಜಿರಹಿತ ಹೋರಾಟ ಕಟ್ಟಲು ಯುವಜನರಿಗೆ ಖುದಿರಾಮ್ ಬೋಸ್ ರವರ ಜೀವನ ಸಂಘರ್ಷ ಸ್ಫೂರ್ತಿಯಾಗಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಎಐಡಿವೈಓ ಅಖಿಲ ಭಾರತ ಸೆಕ್ರೆಟರಿಯೇಟ್ ಸದಸ್ಯರಾದ ಕಾಮ್ರೆಡ್ ಮಲಯ್ ಪಾಲ್, ರಾಜ್ಯಾಧ್ಯಕ್ಷರಾದ ಶರಣಪ್ಪ ಉದ್ಬಾಳ್, ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ, ಜಿಲ್ಲಾಧ್ಯಕ್ಷರಾದ ಭವಾನಿ ಶಂಕರ್ ಗೌಡ, ಜಿಲ್ಲಾ ಕಾರ್ಯದರ್ಶಿ ರಣಜಿತ್ ದೂಪದ್, ಪ್ರೀತಿ ಸಿಂಗಾಡಿ ಉಪಸ್ಥಿತರಿದ್ದರು.

ರೈತರಿಗೆ ಸಮರ್ಪಕ ವಿದ್ಯುತ್ ಪೂರೈಕೆಗೆ ಆದ್ಯತೆ: ಖಾದ್ರಿ

ಕುಂದುಕೊರತೆ ನಿವಾರಣೆಗೆ ಫೋನ್ ಇನ್ ಕಾರ್ಯಕ್ರಮ | ಮಾಧ್ಯಮಗೋಷ್ಠಿಯಲ್ಲಿ ಸೈಯದ್ ಅಜ್ಜಂಪೀರ್ ಮಾಹಿತಿ

ಹುಬ್ಬಳ್ಳಿ: ಹೆಸ್ಕಾಂ ವ್ಯಾಪ್ತಿಯ 7 ಜಿಲ್ಲೆಯ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವುದರ ಜತೆಗೆ ರೈತರಿಗೆ ಗುಣಮಟ್ಟ ಹಾಗೂ ಸಮರ್ಪಕ ವಿದ್ಯುತ್ ಪೂರೈಕೆ ನಮ್ಮ ಮೊದಲ ಆದ್ಯತೆ ಎಂದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ (ಹೆಸ್ಕಾಂ)ನೂತನ ಅಧ್ಯಕ್ಷರಾದ ಸೈಯದ್ ಅಜೀಮಪೀರ್ ಎಸ್ ಖಾದ್ರಿ ಹೇಳಿದರು.

ನವನಗರದ ಹೆಸ್ಕಾಂ ನಿಗಮ ಕಚೇರಿಯಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕದ ಭಾಗದ ಧಾರವಾಡ, ಹಾವೇರಿ, ಗದಗ, ಉತ್ತರ ಕನ್ನಡ, ಬೆಳಗಾವಿ, ಬಾಗಲಕೋಟ ಹಾಗೂ ವಿಜಯಪುರ ಸೇರಿ ಒಟ್ಟು 7 ಜಿಲ್ಲೆಗಳನ್ನು ಒಳಗೊಂಡಿರುವ ಹೆಸ್ಕಾಂನಲ್ಲಿ 62 ಲಕ್ಷ ಗ್ರಾಹಕರಿದ್ದು, ಅದರಲ್ಲಿ 10.49 ಲಕ್ಷ ನೀರಾವರಿ ಪಂಪ್ ಸೆಟ್‌ಗಳಿವೆ. 33.54 ಲಕ್ಷ ಗ್ರಾಹಕರು ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳಾಗಿದ್ದಾರೆ ಎಂದು ತಿಳಿಸಿದರು.

ಹೆಸ್ಕಾಂ ವ್ಯಾಪ್ತಿಯಲ್ಲಿ ಒಟ್ಟು 467 ವಿವಿಧ ವಿದ್ಯುತ್ ಉಪ-ಕೇಂದ್ರಗಳಿದ್ದು, 11 ಕೆವಿ ಸಾಮರ್ಥ್ಯದ 4,329 ಫೀಡರ್‌ಗಳು ಹಾಗೂ 3.18 ಲಕ್ಷ ವಿತರಣಾ ಪರಿವರ್ತಕಗಳಿವೆ. ಒಟ್ಟು 3,937 ಗ್ರಾಹಕರು ಸೌರ ಮೇಲ್ಛಾವಣಿ ಯೋಜನೆಯಡಿ ಸೌರ ವಿದ್ಯುತ್ ಪ್ಯಾನಲ್ ಗಳನ್ನು ಅಳವಡಿಸಿಕೊಂಡು, 89.93 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುತ್ತಿದ್ದಾರೆ. ಈಗ ಪಿಎಂ-ಸೂರ್ಯ ಘರ್ ಯೋಜನೆ ಜಾರಿಯಲ್ಲಿದ್ದು ಗ್ರಾಹಕರು ಅದರ ಪ್ರಯೋಜನ ಪಡೆಯಬೇಕು ಎಂದರು.

ನೀರಾವರಿ ಪಂಪ್ ಸೆಟ್‌ಗಳಿಗೆ ಸೌರ ವಿದ್ಯುತ್ ಒದಗಿಸುವ ಕುಸುಮ್-ಬಿ ಯೋಜನೆಯಡಿ 748 ಗ್ರಾಹಕರು ನೋಂದಾಯಿಸಿದ್ದು, ಅದರಲ್ಲಿ 13 ನೀರಾವರಿ ಪಂಪ್ ಸೆಟ್‌ಗಳು ಕಾರ್ಯಾರಂಭಗೊಂಡಿವೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ. ನೀರಾವರಿ ಪಂಪ್ ಸೆಟ್‌ಗಳಿಗೆ ಹೆಚ್ಚಿನ ವಿದ್ಯುತ್ ಲೋಡ್ ಇರುವ ಉಪ-ಕೇಂದ್ರಗಳ ಸಮೀಪ ಪಿಎಂ ಕುಸುಮ್-ಸಿ ಯೋಜನೆಯಡಿ 415.62 ಮೆಗಾ ವ್ಯಾಟ್ ಸೌರ ವಿದ್ಯುತ್‌ನ್ನು ಉತ್ಪಾದಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಹೆಸ್ಕಾಂನಲ್ಲಿ ಪ್ರತಿ ತಿಂಗಳು ಸರಿ ಸುಮಾರು 1,595.51 ಮಿಲಿಯನ್ ಯುನಿಟ್‌ಗಳಷ್ಟು ವಿದ್ಯುತ್ ಬಳಕೆಯಾಗುತ್ತಿದ್ದು, ಪ್ರತಿ ತಿಂಗಳು ಸರಾಸರಿ 1,016 ಕೋಟಿ ರುಪಾಯಿ ಕಂದಾಯ ಬೇಡಿಕೆ ಇದೆ. ಮುಂಬರುವ ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆಯು ಹೆಚ್ಚಾಗುವ ನೀರಿಕ್ಷೆ ಇದ್ದು, ಅದನ್ನು ಪೂರೈಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ನಿಗಮ ಕಚೇರಿಯಲ್ಲಿ ಗ್ರಾಹಕರ ಸೇವಾ ಕೇಂದ್ರವು 3 ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಗ್ರಾಹಕರು 1912 ಹಾಗೂ 18004251033 ಮತ್ತು 18004254754 ಟೋಲ್ ಫ್ರೀ ನಂಬರ್ ಗಳಿಗೆ ಕರೆ ಮಾಡಿ ವಿದ್ಯುತ್ ಸಮಸ್ಯೆಗಳನ್ನು ತಿಳಿಸಿದಲ್ಲಿ ತಕ್ಷಣ ಪರಿಹರಿಸಲು ಕ್ರಮ ವಹಿಸಲಾಗುತ್ತಿದೆ. ರೈತರ ನೀರಾವರಿ ಪಂಪ್ ಸೆಟ್ ಗಳಿಗೆ ವಿದ್ಯುತ್ ಸರಬರಾಜು ಮಾಡುವ ವಿದ್ಯುತ್ ಪರಿವರ್ತಕಗಳು (TC) ವಿಫಲವಾಗಿದ್ದಲ್ಲಿ ಅವುಗಳನ್ನು ತ್ವರಿತವಾಗಿ ಬದಲಾಯಿಸಲು ಕ್ರಮ ವಹಿಸುತ್ತೇವೆ. ವಿದ್ಯುತ್ ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲು ಹಾಗೂ ವಿದ್ಯುತ್ ಅಪಘಾತ ಪ್ರಕರಣಗಳಲ್ಲಿ ಪರಿಹಾರಗಳನ್ನು ತ್ವರಿತವಾಗಿ ನೀಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ವಿವರಿಸಿದರು.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹ ಜ್ಯೋತಿ ಯೋಜನೆಯು ಬಡವರಿಗೆ ಆಸರೆಯಾಗಿದೆ. ಪ್ರತಿ ಜಿಲ್ಲೆ, ತಾಲೂಕುಗಳಿಗೆ ಭೇಟಿ ನೀಡಿ,ಫಲಾನುಭವಿಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದು ತಿಳಿಸಿದರು.

ಹೆಸ್ಕಾಂ ಅನ್ನು ಮಾದರಿ ಇಲಾಖೆಯನ್ನಾಗಿ ಮಾಡಲು ಮುಂದಾಗುತ್ತೇನೆ. ಈಗಾಗಲೇ ಹೆಸ್ಕಾಂನಲ್ಲಿ 560 ಲೈನ್ ಮೆನ್ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ. ನನಗೆ ನೀಡಿರುವ ಕೆಲಸವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ. ಮುಂದಿನ ದಿನಗಳಲ್ಲಿ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡು, ಸಮಸ್ಯೆಗಳನ್ನು ಪರಿಹರಿಸಲಾಗುವುದು. ವಿದ್ಯುತ್ ಬಿಲ್ ಬಾಕಿ ಇರುವುದು ಗಮನಕ್ಕೆ ಬಂದಿದ್ದು, ತ್ವರಿತಗತಿಯಲ್ಲಿ ಬಾಕಿ ವಸೂಲಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಈ ವೇಳೆ ಹಣಕಾಸು ನಿರ್ದೇಶಕರಾದ ಪ್ರಕಾಶ ಪಾಟೀಲ, ತಾಂತ್ರಿಕ ನಿರ್ದೇಶಕರಾದ ಎಸ್. ಜಗದೀಶ, ಆರ್ಥಿಕ ಸಲಹೆಗಾರರಾದ ರುದ್ರೇಶ ಸಬರದ ಸೇರಿದಂತೆ ಇತರರು ಇದ್ದರು.

ಗ್ರಾಹಕರ ಕುಂದುಕೊರತೆಗಳನ್ನು ನಾನೇ ಖುದ್ದು ಆಲಿಸಿ ಅವುಗಳ ನಿವಾರಣೆಗಾಗಿ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಳ್ಳುತ್ತೇನೆ. ನೇರವಾಗಿ ಗ್ರಾಹಕರ ಜತೆ ಮಾತನಾಡಿ, ಅವರ ಕುಂದುಕೊರತೆಗಳ ನಿವಾರಣೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

-ಸೈಯದ್ ಅಜ್ಜಂಪೀರ ಎಸ್ ಖಾದ್ರಿ ಹೆಸ್ಕಾಂ ಅಧ್ಯಕ್ಷ.

ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಡಿ.6ಕ್ಕೆ

ಧಾರವಾಡ: ಸರಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಕಾರ್ಯ ವಿಧಾನಗಳು ಹಾಗೂ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಪ್ರಾಧಿಕಾರದ ಅಧ್ಯಕ್ಷ ಎಸ್. ಆರ್. ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಡಿಸೆಂಬರ 6ಕ್ಕೆ , ಬೆಳಗ್ಗೆ 11 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಎಲ್ಲ ಗ್ಯಾರಂಟಿ ಯೋಜನೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಪ್ರಗತಿ ಪರಿಶೀಲನಾ ಸಭೆಗೆ ತಮ್ಮ ಇಲಾಖೆಯ ಪ್ರಗತಿ ವರದಿ ಮತ್ತು ಅನುಪಾಲನಾ ವರದಿಯೊಂದಿಗೆ ಹಾಜರಾಗಲು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭರತನಾಟ್ಯ ಭಾರತೀಯ ಸಂಸ್ಕೃತಿ ಬಿಂಬಿಸುವ ಅದ್ಭುತ ಕಲೆ: ಬಸವರಾಜ

ಲಕ್ಷ್ಮೇಶ್ವರ: ಕಲೆ, ಸಾಹಿತ್ಯ, ಸಂಸ್ಕೃತಿ, ಸಂಪ್ರದಾಯ, ಆಚರಣೆ, ಜಾತ್ರೆ, ಹಬ್ಬ-ಉತ್ಸವಗಳು ನಮ್ಮ ದೇಶ-ನಾಡಿನ ಸಂಸ್ಕೃತಿಯನ್ನು ಬಿಂಬಿಸುತ್ತವೆ, ಅದರಲ್ಲಿ ಭರತನಾಟ್ಯವು ಭಾರತಿಯ ಸಂಸ್ಕೃತಿಯನ್ನು ಬಿಂಬಿಸುವ ಅದ್ಭುತ ಕಲೆಯಾಗಿದೆ ಎಂದು ಧಾರವಾಡದ ಕರ್ನಾಟಕ ಕೃಷಿ ವಿಶ್ವವಿದ್ಯಾಲಯ ನಾಮ ನಿರ್ದೇಶಕ ಸದಸ್ಯ ಬಸವರಾಜ ಕುಂದಗೋಳಮಠ ಅಭಿಪ್ರಾಯಪಟ್ಟರು.

ಅವರು ಪಟ್ಟಣದ ವೇದಿಕಾ ಭರತನಾಟ್ಯ ಶಾಲೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶನಿವಾರ ರಂಭಾಪುರಿ ಜ. ವೀರಗಂಗಾಧರ ಸಮುದಾಯ ಭವನದಲ್ಲಿ ನೃತ್ಯ-ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ವೇದಿಕಾ ನೃತ್ಯ ಶಾಲೆಯ ಶಿಕ್ಷಕಿ ವಿದೂಷಿ ಡಾ.ಹೇಮಾ ವಾಘಮೋಡೆ, ಕೆಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಸುನೀಲ ಮಹಾಂತಶೆಟ್ಟರ ಮಾತನಾಡಿದರು. ಅಧ್ಯಕ್ಷ ಮಹದೇವಪ್ಪ ಚಕ್ರಸಾಲಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಸರೋಜಾ ಎಂ ಗೌಡರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಶಿಕ್ಷಕಿ ನಯನಾ ದಳವಾಯಿ, ವಿಜಯ ಕುಂಬಾರ, ಪ್ರವೀಣ ಬೋಮಲೆ, ಅನಿಲ ಹೆಬ್ಬಾಳ, ವೀರೇಶ ಸಾಸಲವಾಡ, ರವಿ ಚಕ್ರಸಾಲಿ, ಸಂತೋಷ ಡಟಬಳ ಸಂಜೀವ ಪೂಜಾರ, ಗಂಗಾಧರ ಮೆಣಸಿನಕಾಯಿ, ಮಂಜುನಾಥ ಹೊಗೆಸೊಪ್ಪಿನ ಸೇರಿದಂತೆ ಅನೇಕರು ಇದ್ದರು ರತ್ನಾ ಕುಂಬಾರ ಕಾರ್ಯಕ್ರಮ ನಿರೂಪಿಸಿದರು.

ಕನ್ನಡ ನೆಲ, ಜಲ ಭಾಷೆ ರಕ್ಷಣೆಗೆ ಪರಿಷತ್ತು ಸಿದ್ಧ

ಕಸಾಪ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಅಭಿಪ್ರಾಯ

ಕಲಘಟಗಿ: ಕನ್ನಡ ಸಾಹಿತ್ಯ ಪರಿಷತ್ತು ರಾಜ್ಯದ ಪ್ರಾತಿನಿಧಿಕ ಸಂಸ್ಥೆಯಾಗಿದ್ದು ಪರಿಷತ್ತು ರಚನಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸುವುದರ ಮೂಲಕ ಕನ್ನಡದ ಉಳುವಿಗೆ ಶ್ರಮಿಸುತ್ತಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಲಿಂಗರಾಜ ಅಂಗಡಿ ಅಭಿಪ್ರಾಯ ಪಟ್ಟರು.

ಪಟ್ಟಣದ ಸರಕಾರಿ ನೌಕರರ ಸಂಘದ ಸಭಾಭವನದಲ್ಲಿ ತಾಲೂಕಾ ಮಟ್ಟದ ಕಸಾಪ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಮಾಜಿ ಜಿಪಂ ಅಧ್ಯಕ್ಷ ಕೆಪಿಸಿಸಿ ಸದಸ್ಯ ಎಸ್ ಆರ್ ಪಾಟೀಲ, ಮಾಜಿ ಜಿಪಂ ಸದಸ್ಯ ಐ ಸಿ ಗೋಕುಲ ಮಾತನಾಡಿದರು.

ತಾಲೂಕ ನೂತನ ಕಸಾಪ ಅಧ್ಯಕ್ಷ ರಮೇಶ್ ಸೋಲಾರಗೊಪ್ಪ ಅವರಿಗೆ ಜಿಲ್ಲಾ ಅಧ್ಯಕ್ಷ ಡಾ ಲಿಂಗರಾಜ್ ಅಂಗಡಿ ಪರಿಷತ್ತಿನ ಧ್ವಜ ಹಸ್ತಾಂತರ ಮಾಡಿದರು. ಅಧಿಕಾರ ಸ್ವೀಕರಿಸಿ ಮಾತನಾಡಿದ ನೂತನ ಅಧ್ಯಕ್ಷ ರಮೇಶ್ ಸೋಲಾರಗೊಪ್ಪ, ಮುಂದಿನ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶಾಲಾ ಕಾಲೇಜುಗಳಲ್ಲಿ ಮತ್ತು ಗ್ರಾಮೀಣ ಮಟ್ಟದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ನನಗೆ ಮಾರ್ಗದರ್ಶನ, ಸಲಹೆ ನೀಡಬೇಕು ಎಂದರು.

ಸಮಾರಂಭದಲ್ಲಿ ನೂತನವಾಗಿ ಆಯ್ಕೆಯಾದ ತಾಲೂಕಾ ಕಸಾಪ ಅಧ್ಯಕ್ಷ ರಮೇಶ ಸೋಲಾರಗೊಪ್ಪ ಗೌರವ ಕಾರ್ಯದರ್ಶಿಗಳಾದ ಗಿರೀಶ್ ಮುಕ್ಕಲ್ ಪ್ರಭುಲಿಂಗ ರಂಗಾಪುರ್ ಕೋಶ್ಯಾಧ್ಯಕ್ಷ ಬಸವರಾಜ ದಾಸನಕೊಪ್ಪ ಜೊತೆಗೂಡಿ ಎಲ್ಲ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳಿಗೆ ಜಿಲ್ಲಾ ಅಧ್ಯಕ್ಷರು ಪ್ರಮಾಣವಚನ ಬೋಧಿಸಿದರು.

ಮುಕ್ಕಲ್ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳಾದ ನಾಗರಾಜಕುಮಾರ್ ಬಿದರಳ್ಳಿ ಅವರು ಡಾ ಎಚ್ ಎಸ್ ಅನುಪಮಾ ಅವರ ಭೀಮಯಾನ, ಪ್ರೊ ಎಂ ಅಬ್ದುಲ್ ರೆಹಮಾನ್ ಪಾಷಾ ಅವರ ಸರಳ ಓದಿಗಾಗಿ ಭಾರತದ ಸಂವಿಧಾನ ಒಂದು ಲಕ್ಷ ರು. ಮೌಲ್ಯದ ಪುಸ್ತಕಗಳನ್ನ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಡುಗೆಯಾಗಿ ನೀಡಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಅಭಿನವ ಮಡಿವಾಳೇಶ್ವರ ಮಹಾ ಸ್ವಾಮಿಗಳು ಹನ್ನೆರಡು ಮಠ ವಹಿಸಿದ್ದರು. ಸಮ್ಮೇಳನದ ಸರ್ವಾಧ್ಯಕ್ಷರುಗಳಾದ ಸಾಹಿತಿ ವೈ.ಜಿ.ಭಗವತಿ, ಅಶೋಕ ಅರ್ಕಸಾಲಿ, ಕೆ.ಬಿ.ಪಾಟೀಲ ಕುಲಕರ್ಣಿ ತಾಲೂಕು ನೌಕರ ಸಂಘದ ಅಧ್ಯಕ್ಷ ಜಗದೀಶ್ ವಿರಕ್ತಮಠ, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪುರ, ತಾಪಂ ಇ ಓ.ಪಿ.ವೈ ಸಾವಂತ್, ಸಿಎಸ್ ಗ್ಯಾನಪ್ಪನವರ್ ಎಂ ವೈ ಅಂಚಟಗೇರಿ ಡಾ ಮಹೇಶ್ ಮಹೇಶ ಹೊರಕೇರಿ ಮಂಜುನಾಥ್ ಅಂಗಡಿ ನವೀನ ಗೋಳೇರ್ ರಫೀಕ್ ಸುಂಕದ ವೃಷಭೇಂದ್ರ ಪಟ್ಟಣಶೆಟ್ಟಿ ಮಹೇಶ್ ಅಲಗೂರು ಹಸನಸಾಬ್ ಗುಂಜಿಗಟ್ಟಿ ಶೌಕತಅಲಿ ತೆರೆಗಾವ್ ಅಣ್ಣಪ್ಪ ಓಲೆಕಾರ್ ಪುಂಡಲೀಕ್ ಯಲ್ಲಾರಿ ಮಂಜುನಾಥ್ ಮಾಳಗಿ ಕಿರಣ ಅಳಗವಾಡಿ ರಾಮಣ್ಣ ವಾಲಿಕಾರ್ ಶಶಿಕುಮಾರ್ ಕಟ್ಟಿಮನಿ ವಿಜಯಲಕ್ಷ್ಮಿ ದೇಶಪಾಂಡೆ ಸೀತಾ ಚಿನ್ನಪ್ಪನವರ್ ರಮೇಶ್ ಭಜಂತ್ರಿ ಬಸವರಾಜ್ ಮಾದರ್ ಯಲ್ಲಪ್ಪ ಮೇಲಿನಮನಿ ಮಾಲಾ ತುರಿಹಾಳ ಸಂಪತ್ತ ಕಿಚಡಿ ಸೇರಿದಂತೆ ಕಸಾಪ ಸದಸ್ಯರು ಕನ್ನಡಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಮಾಡಲಾಯಿತು. ಮಕ್ಕಳಿಂದ ಮನರಂಜನೆ ಕಾರ್ಯಕ್ರಮಗಳು ಜರುಗಿದವು.

ಸ್ವಾಮೀಜಿಗೆ ಬೆದರಿಸಿ ಸುಲಿಗೆ ನಾಲ್ವರು ಆರೋಪಿಗಳ ಬಂಧನ

ಬಾಗಲಕೋಟೆ: ಇಲ್ಲಿನ ರಾಮಾರೂಢ ಮಠದ ಪರಮ ರಾಮಾರೂಢ ಸ್ವಾಮೀಜಿಗೆ ಬೆದರಿಕೆ ಹಾಕಿ, ಲಕ್ಷಾಂತರ ರೂ. ಸುಲಿಗೆ ಮಾಡಿದ್ದ ಆರೋಪ ಪ್ರಕರಣವನ್ನು ಪೊಲೀಸರು ಭೇದಿಸಿದ್ದು, ನಾಲ್ವರನ್ನು ಬಂಧಿಸಿ ದ್ದಾರೆ. ಆರೋಪಿಗಳಿಂದ 80 ಲಕ್ಷ ರು., ಎರಡು ಕಾರು ಹಾಗೂ ಇತರ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ ಎಂದು ಬೆಳಗಾವಿ ವಿಭಾಗದ ಐಜಿಪಿ ವಿಕಾಸ್ ಕುಮಾರ್ ತಿಳಿಸಿದ್ದಾರೆ.

ಬಾಗಲಕೋಟೆಯ ಎಸ್.ಪಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪರಮ ರಾಮಾರೂಢ ಸ್ವಾಮೀಜಿ ಅವರು, ಸೆ.27ರಂದು ದೂರು ನೀಡಿದ ಹಿನ್ನೆಲೆಯಲ್ಲಿ, ಎಸ್.ಪಿ ಅಮರನಾಥ ರೆಡ್ಡಿ ನೇತೃತ್ವದಲ್ಲಿ ತನಿಖೆ ನಡೆಸಿದ್ದು, ನಾಲ್ವರನ್ನು ಬಂಧಿಸಲಾಗಿದೆ ಎಂದರು.

ಚುನಾವಣೆಗೆ ಸ್ಪರ್ಧಿಸಿದ್ದ ಆರೋಪಿ: ಆರೋಪಿ 2023ಯಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿದ್ದ. ಈ ಹಿಂದೆ ಒಂದು ಶಾಲೆ ಕೂಡ ಆರಂಭಿಸಿದ್ದ, ಕೃಷಿಯಲ್ಲಿ ತೊಡಗಿಸಿಕೊಂಡಿದ್ದ. ಆದರೆ ಪ್ರಸ್ತುತ ಆತ ನಿರುದ್ಯೋಗಿಯಾಗಿದ್ದಾನೆ. ಈತನ ಮೇಲಿನ ತನಿಖೆ ವೇಳೆ ಈಗಾಗಲೇ ಆರೋಪಿ ವಿರುದ್ಧ 12 ಕೇಸ್ ದಾಖಲಾಗಿದೆ. ತನಿಖೆಯಲ್ಲಿ ಈ ಆರೋಪಿಯು ಸ್ವಾಮೀಜಿಗೆ ಈ ಮೊದಲಿಂದ ಪರಿಚಯವಿರುವುದು ತಿಳಿದು ಬಂದಿದೆ. ಸೆ. 12 ರಂದು ಅವರ ಆರೋಗ್ಯ ವಿಚಾರಿಸುವ ನೆಪದಲ್ಲಿ ಅವರಿಂದ ಮೊಬೈಲ್ ನಂಬರ್ ತೆಗೆದುಕೊಂಡು ಹೋಗಿದ್ದಾನೆ. ಆ ದಿನದಿಂದ ಆರೋಪಿ ತನ್ನ ಯೋಜನೆ ಜಾರಿಗೆ ತರಲು ಆರಂಭಿಸಿದ ಎಂದು ಪೊಲೀಸರು ವಿವರಿಸಿದ್ದಾರೆ.

ಸ್ವಾಮೀಜಿ ಏಕೆ ಹಣ ನೀಡಿದರು ಎಂಬುದು ಸೇರಿದಂತೆ ಇತರ ಅಂಶಗಳ ಬಗ್ಗೆ ತನಿಖೆ ನಡೆಸಲಾಗುತ್ತದೆ ಎಂದು ಐಜಿಪಿ ವಿಕಾಸ್ ಕುಮಾರ್ ತಿಳಿಸಿದರು.

ವಿರಾಮ ಪ್ರತಿ ಭಾನುವಾರ

ಬಾಗಲಕೋಟೆ ಜಿಲ್ಲೆಯ ಮುಖಂಡರಿಂದ ಅನಿರ್ದಿಷ್ಟಾವಧಿಯ ಹೋರಾಟ

ಯುಕೆಪಿ 3ನೇ ಹಂತದ ಯೋಜನೆ ಪೂರ್ಣಗೊಳಿಸಿ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿ ನಗರದ ಜಿಲ್ಲಾಡಳಿತದ ಎದುರು ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ವೇದಿಕೆಯಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಗಿದೆ.

ಬಾಗಲಕೋಟೆ, ಜಮಖಂಡಿ, ಮುಧೋಳ ಹಾಗೂ ಬೀಳಗಿ ತಾಲೂಕಿನ ಮುಖಂಡರು , ಹಾಲಿ ಶಾಸಕರು ಹಾಗೂ ಮಾಜಿ ಶಾಸಕರು ಪಕ್ಷಾತೀತವಾಗಿ ಹೋರಾಟ ಪ್ರಾರಂಭಿಸಿದ್ದಾರೆ.

ಯುಕೆಪಿಯ 3ನೇ ಹಂತವನ್ನು ಪೂರ್ಣಗೊಳಿಸಿ 15 ಲಕ್ಷ ಎಕರೆ ಭೂಮಿ ನೀರಾವರಿಗೆ ಒತ್ತು ನೀಡಬೇಕು. 60 ವರ್ಷ ಕಳೆದರೂ ಯೋಜನೆ ಕುಂಟುತ್ತ ಸಾಗಿದೆ. 3ನೇ ಹಂತಕ್ಕೆ 2012ರಲ್ಲಿ ಅಂದಾಜು 51,148 ಕೋಟಿ ರು. ಗಳಿಗೆ ಬೇಕಿತ್ತು. ಅದು ನೆನೆಗುದಿಗೆ ಬಿದ್ದ ಪರಿಣಾಮ 1 ಲಕ್ಷ ಕೋಟಿ ರು. ದಾಟುತ್ತಿದೆ. ರಾಜ್ಯದಲ್ಲಿ ಆಡಳಿತ ನಡೆಸಿದ ಎಲ್ಲ ಪಕ್ಷಗಳು ಕೃಷ್ಣೆಯತ್ತ ಗಮನ ಹರಿಸುತ್ತಿಲ್ಲ ಎಂಬ ಆಕ್ರೋಶ ವ್ಯಕ್ತವಾಗಿದೆ.

ಆಶ್ವಾಸನೆ ನೀಡಿದ್ದ ಸಿಎಂ ಸಿದ್ದರಾಮಯ್ಯ: ಕಳೆದ ವಿಧಾನಸಭೆ ಚುನಾವಣೆ ವೇಳೆ ವಿಜಯಪುರದಲ್ಲಿ ಹಮ್ಮಿಕೊಂಡಿದ್ದ ಯುಕೆಪಿ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಸಿಎಂ ಸಿದ್ದರಾಮಯ್ಯ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಯುಕೆಪಿ 3ನೇ ಹಂತದ ಅನುಷ್ಠಾನಕ್ಕೆ ಪ್ರತಿ ವರ್ಷ 40 ಸಾವಿರ ಕೋಟಿ ರು.ದಂತೆ ಎರಡು ವರ್ಷಕ್ಕೆ 2 ಲಕ್ಷ ರು. ಕೋಟಿ ನೀಡಲಾಗುತ್ತದೆ ಎಂದು ಭರವಸೆ ನೀಡಿ, ಇದು ನಮ್ಮ 6ನೇ ಗ್ಯಾರಂಟಿ ಎಂದು ಘೋಷಣೆ ಮಾಡಿದ್ದರು.

ಆದರೆ, ಸರಕಾರ ಅಧಿಕಾರಕ್ಕೆ ಬಂದು ಒಂದುವರೆ ವರ್ಷ ಕಳೆದರೂ ಇಲ್ಲಿಯವರೆಗೆ ನಯಾ ಪೈಸೆ ಬಿಡುಗಡೆ ಮಾಡಿಲ್ಲ ಎಂದು ಹೋರಾಟಗಾರರು ಅಸಮಾಧಾನ ಸೂಚಿಸಿದ್ದಾರೆ.

ಸೂಕ್ತ ಅನುದಾನ ಇಲ್ಲ: 60 ವರ್ಷದ ಯೋಜನೆಗೆ ರಾಜ್ಯದಲ್ಲಿ ಅಧಿಕಾ ರಕ್ಕೆ ಬಂದ ಯಾವ ಪಕ್ಷಗಳೂ ಸೂಕ್ತ ಅನುದಾನ ನೀಡುತ್ತಿಲ್ಲ. ಬಾಗಲಕೋಟೆ ಜಿಲ್ಲೆಯವರೇ ಸಚಿವರಾಗಿದ್ದಾಗ ಒಂದು ಮಾತನಾಡಿದ್ದಾರೆ. ಅಧಿಕಾರ ಕಳೆದುಕೊಂಡ ಮೇಲೆ ಈ ಗ ಮತ್ತೊಂದು ಮಾತುಗಳನ್ನಾಡುತ್ತಿದ್ದಾರೆ. ರೈತರ ವಿಷಯ ಹಾಗೂ ಸಂತ್ರಸ್ತರ ವಿಚಾರದಲ್ಲಿ ಎಲ್ಲರೂ ಅಧಿಕಾರ ಅನುಭವಿಸಿದ್ದಾರೆ. ಆದರೆ, ಯೋಜನೆ ಪೂರ್ಣಗೊಳಿಸಲು ಮಾತ್ರ ನಾಯಕರು ಮುಂದಾಗುತ್ತಿಲ್ಲ ಎನ್ನುವುದು ಬೇಸರದ ಸಂಗತಿಯಾಗಿದೆ.

ಶಾಸಕರಾದ ಎಚ್.ವೈ.ಮೇಟಿ, ಜೆ.ಟಿ. ಪಾಟೀಲ ಹಾಗೂ ಜಗದೀಶ ಗುಡಗುಂಟಿಮಠ, ಮಾಜಿ ಸಚಿವರಾದ ಎಸ್.ಆರ್.ಪಾಟೀಲ, ಎಸ್.ಕೆ.ಬೆಳ್ಳುಬ್ಬಿ, ಬಾಗಲಕೋಟೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯಕುಮಾರ್ ಸರನಾಯಕ್, ಮೇಲ್ಮನೆ ಮಾಜಿ ಸದಸ್ಯ ಜಿ. ಎಸ್.ನ್ಯಾಮಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಮೊದಲಾದವರು ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಯುಕೆಪಿ 3ನೇ ಹಂತದ ಯೋಜನೆ ಪೂರ್ಣಗೊಳಿಸಲು ಆಗ್ರಹಿಸಿ ಬಾಗಲಕೋಟೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ವೇದಿಕೆಯಿಂದ ಪಾದಯಾತ್ರೆ ನಡೆಯಿತು.

ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವ ಸಮಾವೇಶ: ಹೆಬ್ಬಾಳ್ಕರ್

ಸ್ವಾಭಿಮಾನ ಸಮಾವೇಶವಲ್ಲ, ಕಾಂಗ್ರೆಸ್ ಪಕ್ಷದ ಸಮಾವೇಶ

ಬೆಂಗಳೂರು: ಹಾಸನದಲ್ಲಿ ಗುರುವಾರ ನಡೆಯಲಿರುವುದು ಸ್ವಾಭಿಮಾನ ಸಮಾವೇಶ ಅಲ್ಲ, ಅದು ಕಾಂಗ್ರೆಸ್ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸಲು ಮಾಡುತ್ತಿರುವ ಸಮಾವೇಶ, ಇದು ಕೇವಲ ಹಾಸನದಲ್ಲಿ ಅಷ್ಟೇ ಅಲ್ಲ, ಇಡೀ ಕರ್ನಾಟಕದಲ್ಲಿ ಇಂಥ ಸಮಾವೇಶಗಳನ್ನು ಆಯೋಜಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಇದು ಪಕ್ಷ, ಅಹಿಂದ ಸಮಾವೇಶ ಅಲ್ಲ, ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದವರಾಗಿದ್ದು, ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದಾರೆ ಎಂದು ಹೇಳಿದರು. ಗ್ಯಾರಂಟಿ ಯೋಜನೆಗಳಿಗೆ ಹಣ ಪೂರೈಸಲು ಸಾರಿಗೆ ನಿಗಮಗಳ ಆಸ್ತಿ ಮಾರಾಟ ಮಾಡಲಾಗುತ್ತಿದೆ ಎಂದು ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಬಿಬಿಎಂಪಿಯನ್ನೇ ಅಡ ಇಟ್ಟಿದ್ದರು. ವಿಧಾನಸೌಧ ಒಂದನ್ನ ಬಿಟ್ಟು ಬಹುತೇಕ ಆಸ್ತಿಪಾಸ್ತಿಗಳನ್ನು ಅಡವಿಟ್ಟಿದ್ದರು ಎಂದು ತಿರುಗೇಟು ನೀಡಿದರು.

ಸಿದ್ದರಾಮಯ್ಯ ಅವರು ಆರ್ಥಿಕ ತಜ್ಞ ಎಂದು ಹೆಸರು ಗಳಿಸಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ 58 ಸಾವಿರ ಕೋಟಿ ಮೀಸಲಿಟ್ಟಿದ್ದರೂ ಯಾವುದೇ ಸಾಲ ಹೊರೆ ಹೊರಿಸಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಆಡಳಿತ ತುಂಬಾ ಚೆನ್ನಾಗಿ ನಡೆಯುತ್ತಿದೆ ಎಂದು ಸಚಿವರು ಹೇಳಿದರು.

ಹೈಕಮಾಂಡ್ ತೀರ್ಮಾನವೇ ಅಂತಿಮ

ಅಧಿಕಾರ ಹಂಚಿಕೆ ಕುರಿತಂತೆ ಕೆಪಿಸಿಸಿ ಅಧ್ಯಕ್ಷರು, ಅವರನ್ನೇ ಕೇಳಿದರೆ ಒಳಿತು. ನಾನು ಪಕ್ಷದ ಶಿಸ್ತಿನ ಸಿಪಾಯಿ. ನಾವೆಲ್ಲರೂ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿದ್ದೇವೆ. ನನಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜವಾಬ್ದಾರಿಯನ್ನು ವಹಿಸಿದ್ದಾರೆ. ಗೃಹಲಕ್ಷ್ಮೀ ಯೋಜನೆಯನ್ನು ಮನೆಮನೆಗೆ ತಲುಪಿಸುವುದೇ ನನ್ನ ಜವಾಬ್ದಾರಿ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ನನಗೆ ಗೊತ್ತಿಲ್ಲ ಎಂದರು.

ಅನುದಾನ ಕಡಿತವಿಲ್ಲ

ವಿಕಲಚೇತನರ ಇಲಾಖೆಗೆ 46 ಕೋಟಿ ಅನುದಾನ ಕಡಿತ ವಿಚಾರಕ್ಕೆ ಪ್ರತಿಕ್ರಿಯಿಸಿದ ಸಚಿವರು, ನಮ್ಮ ಇಲಾಖೆಗೆ ವಿಕಲಚೇತನರಿಂದ ಸಾಕಷ್ಟು ಅರ್ಜಿಗಳು ಬರುತ್ತವೆ. ವೀಲ್ ಚೇರ್, ಸ್ಕೂಟರ್, ಲ್ಯಾಪ್ ಟಾಪ್ , ಬ್ರೈಲ್ ಕಿಟ್ ಕೊಡಬೇಕು. ಹೀಗೆ ಸಾಕಷ್ಟು ಅರ್ಜಿಗಳು ಬಂದಾಗ ಇದಕ್ಕೆಲ್ಲಾ ಹಣಕಾಸು ಬೇಕಾಗಿದೆ. ಇದಕ್ಕೆ ಈಗಾಗಲೇ 14 ಕೋಟಿ ರುಪಾಯಿ ಬಿಡುಗಡೆಯಾಗಿದ್ದು, ಉಳಿದ ಹಣ ಶೀಘ್ರವೇ ಬಿಡುಗಡೆಯಾಗಲಿದೆ ಎಂದು ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಬಾಂಗ್ಲಾ ಘಟನೆ: ಈಶ್ವರಪ್ಪ ವಾಗ್ದಾಳಿ

ಶಿವಮೊಗ್ಗ: ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ಘಟನೆ ನೋಡಿದರೆ ಅನ್ನ ತಿಂದ ಮನೆಗೆ ಕನ್ನ ಹಾಕುವವರು ಎಂಬುದು ಗೊತ್ತಾಗುತ್ತದೆ. ಚಿನ್ಮಯ್ ದಾಸ್ ಅವರು ಇಸ್ಕಾನ್ ಮೂಲಕ ಎಲ್ಲರಿಗೂ ಅನ್ನ ಹಾಕುತ್ತಿದ್ದರು, ಆದರೆ ಇದೀಗ ಅವರ ಮೇಲೆ ಕತ್ತಿ ಮಸೆಯುತ್ತಿದ್ದಾರೆ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದುಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸಿ ಶಿವಮೊಗ್ಗದಲ್ಲಿ ಹಿಂದೂ ಹಿತರಕ್ಷಣಾ ಸಮಿತಿಯ ವತಿಯಿಂದ ನಡೆಸಲಾದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ಹಿಂದೂಗಳು ಶಾಂತಿಪ್ರಿಯರು. ಇದೇ ರೀತಿ ಮುಂದುವರಿದರೆ ಬಾಂಗ್ಲಾದೇಶ, ಪಾಕಿಸ್ತಾನ ಮುಂದೊಮ್ಮೆ ಇರುವುದಿಲ್ಲ, ಅಖಂಡ ಭಾರತ ಆಗುತ್ತದೆ. ಬಾಂಗ್ಲಾದಲ್ಲಿ ಹಿಂದು ದೇವಸ್ಥಾನವನ್ನು ಧ್ವಂಸ ಮಾಡಿದ್ದಾರೆ. ಹೀಗಾಗಿ, ಸಾಧು-ಸಂತರು ಹೋರಾಟಕ್ಕೆ ಬಂದಿದ್ದಾರೆ ಎಂದರು.

ಸ್ವಾಮೀಜಿ ವಿರುದ್ಧ ಕ್ರಮ ಸರಿಯಲ್ಲ: ಒಕ್ಕಲಿಗ ಮಠದ ಚಂದ್ರಶೇಖರ ಸ್ವಾಮೀಜಿ ಮುಸ್ಲಿಮರಿಗೆ ಮತದಾನದ ಹಕ್ಕು ಕೊಡಬಾರದು ಎಂದರೂ, ಅವರು ತನ್ನ ಮಾತನ್ನು ವಾಪಸ್ ಪಡೆದಿದ್ದಾರೆ. ಆರೋಗ್ಯ ಸರಿ ಇಲ್ಲದಿದ್ದರೂ ಅವರ ಮೇಲೆ ಎಫ್.ಐ.ಆರ್ ಹಾಕಿ, ವಿಚಾರಣೆಗೆ ಕರೆಯುತ್ತಿದ್ದಾರೆ. ಹಿಂದೂ ದೇವಸ್ಥಾನ ಧ್ವಂಸ, ಹಿಂದುಗಳ ಮೇಲೆ ದಬ್ಬಾಳಿಕೆ ನಡೆಯುತ್ತಿದ್ದರೂ ನಾವು ಸುಮ್ಮನಿದ್ದೇವೆ ಅಖಂಡ ಭಾರತದ ನಿರ್ಮಾಣಕ್ಕೆ ಸಾಧು- ಸಂತರ ನೇತೃತ್ವದ ಅವಶ್ಯಕತೆ ಇದೆ, ಬಾಂಗ್ಲಾದೇಶ ಸರಕಾರದ ವಿರುದ್ಧ ಎಲ್ಲರೂ ಒಗ್ಗಟ್ಟಾಗಬೇಕಿದೆ ಎಂದು ಈಶ್ವರಪ್ಪ ಹೇಳಿದರು.

ಬಿಜೆಪಿ ಮನೆಯೊಂದು, ಮೂರು ಬಾಗಿಲು

ಮೈಸೂರು: ಬಿಜೆಪಿ ಮನೆಯೊಂದು ಮೂರು ಬಾಗಿಲು ಆಗಿದೆ. ಬಿಜೆಪಿ ಜೊತೆಯಲ್ಲಿ ಯಾವ ನಾಯಕರು ಇದ್ದಾರೆ ಎಂಬುದನ್ನ ತಿಳಿಸಿ ಎಂದು ಬಿಜೆಪಿ ನಾಯ ಕರ ವಿರುದ್ಧ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಹರಿಹಾ ಯ್ದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯತ್ನಾಳ್ ಅವರು ದಿನನಿತ್ಯ ಯಡಿಯೂರಪ್ಪ ವಿರುದ್ಧ ವಾಗ್ದಾಳಿ ಮಾಡುತ್ತಿದ್ದಾರೆ.

ಇದರ ನಡುವೆ ಬಿಜೆಪಿ ನಾಯಕರು ನಮ್ಮ ಸಮಾವೇಶ ಬಗ್ಗೆ ಟೀಕೆ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಸಿಎಂಗೆ ಕೆಟ್ಟ ಹೆಸರು ತರಲು ಮುಂದಾಗಿರುವ ಬಿಜೆಪಿ, ಜೆಡಿಎಸ್ ನಾಯಕರಿಗೆ ಸಮಾವೇಶದಲ್ಲಿ ಸಿಎಂ, ಡಿಸಿಎಂ ಉತ್ತರ ಕೊಡುತ್ತಾರೆ. ನಮ್ಮ ಆಡಳಿತ ವ್ಯವಸ್ಥೆಗೆ ಅಡಚಣೆ ಮಾಡುತ್ತಿರುವ ಬಗ್ಗೆ ಜನತಾ ನ್ಯಾಯಾಲಯಕ್ಕೆ ಹೋಗುತ್ತಿದ್ದೇವೆ. ಕೇಂದ್ರದ ಅನುದಾನ ಕಡಿತ ಮಾಡಿರುವ ಬಗ್ಗೆ ತಿಳಿಸುವ ಸಮಾವೇಶ ಇದಾಗಲಿದೆ. ರಾಜ್ಯದಲ್ಲಿ ಕೋಮುವಾದ ಸೃಷ್ಟಿಸಿ ಬೇಳೆ ಬೇಯಿಸಿಕೊಳ್ಳುವ ಬಿಜೆಪಿ ನಾಯಕರ ಬಗ್ಗೆ ತಿಳಿಸಿಕೊಡುತ್ತೇವೆ. ಸರಕಾರ ಅಸ್ಥಿರಗೊಳಿಸಲು, ಇಡಿ ಐಟಿ, ಐಎನ್ಐ, ಸಿಬಿಐ ಗಳನ್ನು ದುರ್ಬಳಕೆ ಮಾಡಿಕೊಂಡು ಕಳೆದ ಮೂರು ತಿಂಗಳಿನಿಂದಲೂ ತನಿಖೆ ಮಾಡುತ್ತಿದ್ದಾರೆ ಎಂದು ಲಕ್ಷ್ಮಣ್ ಟೀಕಿಸಿದರು.

ಸಂವಿಧಾನದ ಮೇಷ್ಟ್ರಾದ ಸಿಎಂ

← ಮೊದಲಪುಟದಿಂದ

ಸಿದ್ದರಾಮಯ್ಯ ಅವರ ಪಾಠದಲ್ಲಿ ಏನಿತ್ತು?: ಸಂವಿಧಾನದ ಶ್ರೇಷ್ಠತೆ ಮತ್ತು ವಿಫಲತೆಯು 'ಯಾರ ಕೈಯಲ್ಲಿದೆ' ಎನ್ನುವುದರ ಆಧಾರದ ಮೇಲೆ ನಿರ್ಧಾರವಾಗುತ್ತದೆ ಎನ್ನುವ ಅಂಬೇಡ್ಕರ್ ಅವರ ಮಾತನ್ನು ಮತ್ತು ನಮ್ಮದು ಸರ್ವ ಜನಾಂಗದ ಶಾಂತಿಯ ತೋಟ ಎನ್ನುವ ಕುವೆಂಪು ಅವರ ಮಾತುಗಳನ್ನು ಉಲ್ಲೇಖಿಸಿದರು. ಸಂವಿಧಾನದ ಬಗ್ಗೆ ಗೌರವ ಇಲ್ಲದವರ ಕೈಗೆ ಹೋದರೆ, ಎಷ್ಟೇ ಒಳ್ಳೆ ಸಂವಿಧಾನ ಆದರೂ ಪರಿಣಾಮ ಕೆಟ್ಟದಾಗಿರುತ್ತದೆ ಎಂದರು.

ಸಂವಿಧಾನದ ಪೀಠಿಕೆಯಲ್ಲಿಯೇ ಇಡೀ ಸಂವಿಧಾನದ ಸಾರಾಂಶವಿದೆ. ಜಾತ್ಯತೀತತೆ, ಸಾಮಾಜಿಕ ನ್ಯಾಯ ಎರಡೂ ಮೂಲ ಸಂವಿಧನದಲ್ಲಿ ಇರಲಿಲ್ಲ, ಬಳಿಕ ಸೇರ್ಪಡೆಯಾಯಿತು. ಇದನ್ನು ತೆಗೆಯಬೇಕು ಎಂದು ಕೆಲವರು ಸುಪ್ರೀಂಕೋರ್ಟ್‌ಗೆ ಹೋಗಿದ್ದರು. ಆದರೆ ಸುಪ್ರೀಂಕೋರ್ಟ್ ಜಾತ್ಯತೀತತೆ ಮತ್ತು ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯಿತು ಎಂದರು. ಭಾರತ ಬಹುತ್ವದ ದೇಶ. ಎಲ್ಲ ಜಾತಿ, ಧರ್ಮದವರನ್ನು ಸಮಾನವಾಗಿ ನಡೆಸಿಕೊಳ್ಳುವುದು ನಮ್ಮ ದೇಶದ ಗುಣ. ಇದೇ ಸಂವಿಧಾನದ ಮೌಲ್ಯ ಎಂದರು.

ಭಾರತದಲ್ಲಿ ಅಸಮಾನತೆ ಸೃಷ್ಟಿಯಾಗಿದ್ದು ಜಾತಿ ವ್ಯವಸ್ಥೆಯಿಂದ. ಜಾತಿ ಆಧಾರದ ಮೇಲೆ ಒಬ್ಬರ ಯೋಗ್ಯತೆ ಅಳೆಯುವುದು ಅನಾಗರಿಕತನ. ವಿದ್ಯೆ ಮತ್ತು ಸಂಪತ್ತು ಗಳಿಸುವ ಅವಕಾಶ ಶೂದ್ರರಿಗೆ ಮತ್ತು ಮಹಿಳೆಯರಿಗೆ ಇರಲಿಲ್ಲ. ಹೀಗಾಗಿ ಅಸಮಾನತೆ ಸೃಷ್ಟಿಯಾಯಿತು. ಅಪ್ಪ ಅಮ್ಮ ವಿದ್ಯಾವಂತರಾದರೆ ಮಾತ್ರ ಮಕ್ಕಳನ್ನೂ ವಿದ್ಯಾವಂತರನ್ನಾಗಿ ಮಾಡುತ್ತಾರೆ ಎನ್ನುತ್ತಾ ತಾವು ವಿದ್ಯಾಭ್ಯಾಸದಿಂದ ವಂಚಿತರಾಗಿ ಬಳಿಕ ವಿದ್ಯೆ ಕಲಿತು ವಕೀಲರಾದ ಪ್ರಸಂಗವನ್ನು ವಿವರಿಸಿದರು.

ನಮ್ಮ ಸಂವಿಧಾನದ ಹಕ್ಕುಗಳು ಏನೇನು ಅಂತ ಗೊತ್ತಿದ್ದರೆ ಮಾತ್ರ ಅವನ್ನು ಪಡೆದುಕೊಳ್ಳಬಹುದು. ಏಳು ಸ್ವಾತಂತ್ರ್ಯಗಳನ್ನು ನಮ್ಮ ಸಂವಿಧಾನ ಪ್ರತಿಯೊಬ್ಬರಿಗೂ ನೀಡಿದೆ. ಇದನ್ನೆಲ್ಲಾ ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಹೀಗಾಗಿ ಸಂವಿಧಾನ ಓದು ಅಭಿಯಾನವನ್ನು ರಾಜ್ಯಾದ್ಯಂತ ಆರಂಭಿಸಲಾಯಿತು. ಸಂವಿಧಾನದ ಧ್ಯೇಯೋದ್ದೇಶ ಮತ್ತು ಆಶಯಗಳನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ಕರೆ ನೀಡಿದರು.

ಬಣದಾಟಕ್ಕೆ ಬಳಲಿದ ಬಿಜೆಪಿ

← ಮೊದಲಪುಟದಿಂದ

ಯತ್ನಾಳ ಉಚ್ಚಾಟಿಸಿದರೆ ಹಿಂದುತ್ವ ವಿರೋಧಿ ಪಟ್ಟ: ವಿಜಯೇಂದ್ರ ಬಣದ ಸದಸ್ಯರು ಯತ್ನಾಳ ಉಚ್ಚಾಟನೆಗೆ ಆಗ್ರಹಿಸುತ್ತಿದ್ದರೂ ಅದು ಕಷ್ಟ. ಕಾರಣ, ಯತ್ನಾಳ ವಿರುದ್ಧ ಕ್ರಮ ಕೈಗೊಂಡರೆ ಕಟ್ಟರ್ ಹಿಂದುತ್ವವಾದಿಗಳನ್ನು ತುಳಿಯುತ್ತಿರಿ ಎನ್ನುವ ಆರೋಪಗಳು ಕಾರ್ಯಕರ್ತರಲ್ಲೇ ಕೇಳಿಬರಲಿವೆ. ಈಗಾಗಲೇ ಅನಂತ್ ಕುಮಾರ್ ಹೆಗಡೆ ಸೇರಿದಂತೆ ಕಟ್ಟರ್ ಹಿಂದುತ್ವವಾದಿಗಳನ್ನು ಬಿಜೆಪಿಯಲ್ಲಿ ಮೂಲೆಗುಂಪು ಮಾಡಲಾಗಿದೆ ಎನ್ನುವ ಆರೋಪ ಕೇಳಿಬರುತ್ತಿವೆ. ಇದೀಗ ವಿಜಯೇಂದ್ರ ಮಾತು ಕಟ್ಟಿಕೊಂಡು ಯತ್ನಾಳ ವಿರುದ್ಧ ಕ್ರಮಕೈಗೊಂಡರೆ ಮತ್ತಷ್ಟು ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎನ್ನುವುದು ವರಿಷ್ಠರಿಗೆ ಗೊತ್ತಿದೆ. ಹೀಗಾಗಿ ಯತ್ನಾಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದ ಸ್ಥಿತಿ ನಿರ್ಮಾಣವಾಗಿದೆ.

ಪಕ್ಷದ ಸಣ್ಣಪುಟ್ಟ ವಿಚಾರಗಳು ಮೂರ್ನಾಲ್ಕು ದಿನಗಳಲ್ಲಿ ಸುಖಾಂತ್ಯ ಆಗಲಿವೆ. ಪಕ್ಷದಲ್ಲಿ ನಾವೆಲ್ಲ ಒಟ್ಟಾಗಿದ್ದೇವೆ. ಕೇಂದ್ರದ ನಾಯಕರಿಗೆ ಸಮಸ್ಯೆಗಳನ್ನು ಸರಿಪಡಿಸುವ ಶಕ್ತಿ ಇದೆ. ಅದನ್ನು ಮಾಡುತ್ತಾರೆ. ಈಗ ಚುನಾವಣೆ ಇಲ್ಲ. ನಮಗೂ ತಾಳ್ಮೆ ಬೇಕೆಂದು ಹೇಳಿದ್ದಾರೆ.

-ಆರ್.ಅಶೋಕ ಪ್ರತಿಪಕ್ಷ ನಾಯಕ

ಪಕ್ಷದ ಘನತೆಗೆ ಹಾನಿ ಮಾಡುವ ಕೆಲಸವನ್ನು ಯಾರೂ ಮಾಡಬಾರದು. ಪಕ್ಷದ ಅಧ್ಯಕ್ಷರು, ಹಿರಿಯರನ್ನು ಬಹಿರಂಗವಾಗಿ ಟೀಕಿಸುವುದರಿಂದ ಪಕ್ಷಕ್ಕೆ ಹೊಡೆತ ಬೀಳುತ್ತದೆ. ಪಕ್ಷವು ರಾಜ್ಯದಲ್ಲಿ ಸಾಕಷ್ಟು ಹೋರಾಟ ಮಾಡಿ ಉತ್ತಮ ಇಮೇಜ್ ಸಂಪಾದಿಸಿತ್ತು. ಕೆಲವರ ಹೇಳಿಕೆ, ಮಾತಿನಿಂದಾಗಿ ದೊಡ್ಡ ಹೊಡೆತ ಅನುಭವಿಸಬೇಕಾದ ಪರಿಸ್ಥಿತಿಗೆ ಬಂದಿದೆ.

-ಆರಗ ಜ್ಞಾನೇಂದ್ರ, ಮಾಜಿ ಸಚಿವ

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂಖ್ಯೆ: ಕಾಇಂ/ ಗ್ರಾಕುನೀ&ನೈ.ವಿ/ದಾ/ ಸ.ಇಂ-1/ಟೆಂಡರ್: 2024-25/926
ದಿನಾಂಕ:-02.12.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
("ಇ-ಪ್ರೊಕ್ಯೂರ್‌ಮೆಂಟ್"ಮೂಲಕ)
2024-25 ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಮಿಷನ್ (ಗ್ರಾ) ರಡಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳಿಗೆ ಎರಡು ಮಲತ್ಯಾಜ್ಯ ಸಂಸ್ಕರಣಾ ಘಟಕಗಳು (FSM) ರೂ.175.40ಲಕ್ಷಕ್ಕೆ ಅನುಮೋದನೆಯಾಗಿದ್ದು,ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಅನ್ವಯ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 17.12.2024 ರ ಸಂಜೆ5.00ರ ವರೆಗೆ ಇರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192-262126 ಅಥವಾ http//kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ವಾಸಾಇ/ಡಿವಿಜಿ/542/ ಕೆಎಸ್ಎಂಸಿಎ/2024-25
ಸಹಿ/- ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ & ನೈ. ವಿಭಾಗ, ದಾವಣಗೆರೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1/ವಿ.ವಿ.ಲೆ.ಶಿ /ಟೆಂಡರು/2024-25/1328
ದಿನಾಂಕ 30/11/2024.
ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **2024-25 ನೇ ಸಾಲಿನ 2515 ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡ ನಿರ್ಮಾಣ ಮತ್ತು ನಿರ್ವಹಣೆ ಮತ್ತು 2023-24 ನೇ ಸಾಲಿನ ವಿಧಾನ ಪರಿಷತ್ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ** ಒಟ್ಟು 02 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಕೆ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 00** ಮತ್ತು **ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ 00** ಕಾಮಗಾರಿಗಳನ್ನು ಕಾಯ್ದಿರಿಸಲಾಗಿದೆ.
ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 02-12-2024 ರಿಂದ ದಿನಾಂಕ 09-12-2024** ರಂದು ಸಂಜೆ 4.30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 09-12-2024** ರ 16.30 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ಆನ್ ಲೈನ್‌ನಲ್ಲಿ **ದಿನಾಂಕ: 10-12-2024** ರಂದು 17.30 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/646/ಕೆಎಸ್ಎಂಸಿಎ/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 126, ನವನಗರ, ಬಾಗಲಕೋಟೆ
ದೂರವಾಣಿ: 08354-235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354-235043
ಸಂ:ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-1/ಟೆಂಡರ್/ಎಸ್‌ಸಿಪಿ/ಟಿಎಸ್‌ಪಿ/2023-24/3457 ದಿನಾಂಕ: 30-11-2024
ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಏಕ-ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ-1 & 2 ಬಿಡ್ ಡಾಕ್ಯೂಮೆಂಟ್
ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2023-24ನೇ ಸಾಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಕಾರ್ಯಕ್ರಮದಡಿ ಲೆಕ್ಕಶೀರ್ಷಿಕೆ: 5054-03-337-0-75-422/423 ರಡಿ ಬಾಗಲಕೋಟೆ ಜಿಲ್ಲಾ ವ್ಯಾಪ್ತಿಯ ವಿವಿಧ ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆಯಾಗಿರುವ ಅನುದಾನದ ರೂ.100.00 ಲಕ್ಷ ಮುಧೋಳ ವಿಧಾನಸಭಾ ಕ್ಷೇತ್ರ 01.ನಿರ್ದೇಶಕರು, (ಗ್ರಾಮೀಣಾಭಿವೃದ್ಧಿ) ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಬೆಂಗಳೂರು ಕಛೇರಿ ಪತ್ರ ಸಂಖ್ಯೆ:ಗ್ರಾಅಪ/483/ಆರ್.ಆರ್.ಸಿ /2023 (ಇ-1145684) ದಿನಾಂಕ:12.01.2024 02.ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/483-25-2/ಆರ್.ಆರ್.ಸಿ./2023-ಬೆಂಗಳೂರು (ಇ-1486474) **ದಿನಾಂಕ:30.08.2024** 03. ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬಾಗಲಕೋಟೆ ರವರು ಕಛೇರಿ ಪತ್ರ ಸಂಖ್ಯೆ:ಜಿಪಂಬಾ/ಯೋವಿ/5054/ಎಸ್‌ಸಿಪಿ/ಟಿಎಸ್‌ಪಿ/ಅಂಪ/ವಿನಿಧಿ-113/2023-24 ದಿನಾಂಕ:29.10.2024 ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ ವಿಧಾನಸಭಾ ಕ್ಷೇತ್ರದ ಮುಧೋಳ ಉಪವಿಭಾಗ ವ್ಯಾಪ್ತಿಯ ಈ ಕೆಳಗಿನ ಕಾಮಗಾರಿಗಳಿಗೆ Standard Tender Document KW-1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಏಕ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಸಾಮಾನ್ಯ ಗುತ್ತಿಗೆಯಲ್ಲಿ ಕಾಮಗಾರಿಗಳ ಇಂಡೆಂಟ್ ನಂ: RDPR/2024-25/RD/WORK_INDENT9697, RDPR/2024-25/RD/ WORK_INDENT9704, RDPR/2024-25/RD/WORK_INDENT9706, RDPR/2024-25/RD/WORK_INDENT9707 RDPR/2024-25/ RD/WORK_INDENT9712, RDPR/2024-25/RD/WORK_INDENT9699 RDPR/2024-25/RD/WORK_INDENT9714 **ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯಲ್ಲಿ ಕಾಮಗಾರಿಯ ಇಂಡೆಂಟ್ ನಂ:** RDPR/2024-25/RD/WORK_INDENT9701, RDPR/2024-25/ RD/WORK_INDENT9709 ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯಲ್ಲಿ ಕಾಮಗಾರಿಯ ಇಂಡೆಂಟ್ ನಂ: RDPR/2024-25/RD/ WORK_INDENT9711, ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ **(ರೂ.10.00 ದಿಂದ 25.00 ಲಕ್ಷಗಳ ಮಿತಿಗೊಳಪಟ್ಟು)** ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.
ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ **ದಿನಾಂಕ ಮತ್ತು ಸಮಯ: 13.12.2024 ರ ಸಾಯಂಕಾಲ 5.30 ಗಂಟೆವರೆಗೆ.**
ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ ಮತ್ತು ಸಮಯ: 16.12.2024 ರಂದು ಮುಂಜಾನೆ 11.00 ಗಂಟೆಯ ನಂತರ.**
ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಸಂಪರ್ಕಿಸಬಹುದಾಗಿದೆ.
ವಾ.ಸಾ.ಇ/ಬಾಗಲಕೋಟ/ 362/ದೇಶಪಾಂಡೆಪಬ್ಲಿಸಿಟಿ/2024-25
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ.ವಿಭಾಗ, ಬಾಗಲಕೋಟ

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು - 560009,
ದೂರವಾಣಿ: 080-22273511-16
ಟೆಂಡರ್ ಪ್ರಕಟಣೆ
ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ/ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.
ಕಾಮಗಾರಿಯ ಹೆಸರು : ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಹಾಸನ ಜಿಲ್ಲೆ, ಹಾಸನ-ಚನ್ನಪಟ್ಟಣ ಬಡಾವಣೆಯಲ್ಲಿ ನಿರ್ಮಿಸಿರುವ ವಾಣಿಜ್ಯ ಸಂಕೀರ್ಣ ಕಟ್ಟಡದಲ್ಲಿ 1 & 2ನೇ ಮಹಡಿಯಲ್ಲಿ ಅಂಗಡಿ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ. Work Indent & IFT No : KHB/2024-25/BD/work_Indent/414 & IFT No. 183/2024-25 ದಿನಾಂಕ : 27.11.2024. ಟೆಂಡರ್‌ಗಿಟ್ಟ ಮೊತ್ತ ರೂ. ಗಳಲ್ಲಿ : 1,85,66,887/-.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 13.12.2024 ಸಂಜೆ 4.00 ಗಂಟೆವರೆಗೆ.
ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ದೂರವಾಣಿ: 080-22273511/ 080-22100077 website:https://kppp.karnataka.gov.in.
ಸಹಿ/- ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.
DIPR/CP/3598/Zen/2024-25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು-560 029
ಫೋನ್: 25536567/26096832/910/922 ಫ್ಯಾಕ್ಸ್: 080-25536105
ಇ-ಮೇಲ್: purchase@kmf.coop
ಸಂ. ಕಹಾಮ/ಖರೀದಿ/NHPP/ಟೆಂಡರ್-705/2024-25 ದಿನಾಂಕ: 30.11.2024
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ)
ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು for Supply of Spares and Services for Tetrapak Machineries at NHPP Channarayapatana on Annual Rate Contract Basis ಪಡೆಯಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ **30.12.2024** ರಂದು **03.00 ಗಂಟೆಯ** ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.
ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/- ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು (ಪೂರ್ವ) ರವರ ಕಚೇರಿ, ಸಯ್ಯಾಜಿ ರಾವ್ ರಸ್ತೆ, ಮೈಸೂರು-57 0024, ಇ-ಮೇಲ್: eeemccmys@gmail.com
ಟೆಂಡರ್ ಪ್ರಕಟಣೆ ಸಂಖ್ಯೆ: ಹೆಚ್1/ಪವಿ/101/2022-2023 ದಿನಾಂಕ: 28.11.2024
ಟೆಂಡರ್ ಪ್ರಕಟಣೆ
ಕಾಮಗಾರಿಯ ಹೆಸರುಃ / Goods Tender:
1) ಮೈಸೂರು ಮಹಾನಗರ ಪಾಲಿಕೆ ವಲಯ ಕಛೇರಿ-2 ರ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ರಡಿಯಲ್ಲಿ Transfer station ಅನ್ನು ಸ್ಥಾಪಿಸಲು ಅಗತ್ಯವಿರುವ ವಾಹನ ಯಂತ್ರೋಪಕರಣಗಳನ್ನು ಖರೀದಿಸುವುದು. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 309.92.
2) ಮೈಸೂರು ಮಹಾನಗರ ಪಾಲಿಕೆ ವಲಯ ಕಛೇರಿ-5 ರ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ರಡಿಯಲ್ಲಿ Transfer station ಅನ್ನು ಸ್ಥಾಪಿಸಲು ಅಗತ್ಯವಿರುವ ವಾಹನ ಯಂತ್ರೋಪಕರಣಗಳನ್ನು ಖರೀದಿಸುವುದು. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 309.92.
3) ಮೈಸೂರು ಮಹಾನಗರ ಪಾಲಿಕೆ ವಲಯ ಕಛೇರಿ-6 ರ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0 ರಡಿಯಲ್ಲಿ Transfer station ಅನ್ನು ಸ್ಥಾಪಿಸಲು ಅಗತ್ಯವಿರುವ ವಾಹನ ಯಂತ್ರೋಪಕರಣಗಳನ್ನು ಖರೀದಿಸುವುದು. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 309.92.
4) ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ಮತ್ತು ಕೆಡಹುವಿಕೆ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಅಗತ್ಯವಿರುವ 100 ಟಿಪಿಡಿ ಸಾಮರ್ಥ್ಯದ ಯಂತ್ರೋಪಕರಣಗಳನ್ನು ಖರೀದಿಸಿ ಅಳವಡಿಸುವುದು. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 434.50.
5) ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೆಸರೆ 200 ಟಿಪಿಡಿ ಸಾಮರ್ಥ್ಯದ ಘನತ್ಯಾಜ್ಯ ವಿಲೇವಾರಿ ಘಟಕದ ವಾಹನ ಮತ್ತು ಯಂತ್ರೋಪಕರಣಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿ. ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 38.50.
Tender: Goods Tender. No of Works: 5 (ಕ್ರ.ಸಂ.1 ರಿಂದ 5). Amount: (ರೂ.ಲಕ್ಷಗಳಲ್ಲಿ) 1402.50. Tender published: 02.12.2024 to 23.12.2024. Tender Open: 24.12.2024.
ಸಹಿ/- ಕಾರ್ಯಪಾಲಕ ಅಭಿಯಂತರರು (ಪೂರ್ವ) ಮೈಸೂರು ಮಹಾನಗರ ಪಾಲಿಕೆ, ಮೈಸೂರು.
DIPR/MYS/RO/887/2024-25

ಪುರಸಭಾ ಕಾರ್ಯಾಲಯ, ಚನ್ನರಾಯಪಟ್ಟಣ ಹಾಸನ ಜಿಲ್ಲೆ.
Email:itstaff_ulb_channarayapatna@yahoo.co.in,Phone: 08176-255411
ಸಂ:ಮುಅ/ಪುಸಚ/ಇಂ.ವಿ/ಪುಅ/2024-25 ದಿನಾಂಕ: 30-11-20242
:ಟೆಂಡರ್ ಪ್ರಕಟಣೆ: ಇ ಪ್ರೊಕ್ಯೂರ್‌ಮೆಂಟ್ ಮೂಲಕ
ಚನ್ನರಾಯಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಪುರಸಭಾ ಅನುದಾನದಡಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಆಧ್ಯಾದೇಶ 2000ದ ಅನ್ವಯ ಟೆಂಡರನ್ನು ಕರೆಯಲಾಗಿದ್ದು ಗುತ್ತಿಗೆದಾರರು ಇ-ಪ್ರೊಕ್ಯೂರಮೆಂಟ್‌ನಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:16/12/2024 ಸಂಜೆ 5.30 ಗಂಟೆಯಾಗಿದ್ದು ಕಾಮಗಾರಿಗಳು ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ಪುರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿಕೋಶ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಮತ್ತು https://kppp.karnataka.gov.in ಪಡೆಯುಬಹುದು ದೂರವಾಣಿ:08176-254544. ಕಾಮಗಾರಿಗಳ ಇಡೆಂಟ್ ವಿವರ ಕೆಳಕಂಡತಿದೆ:- ಪುರಸಭಾ ಅನುದಾನ 2024-25 ಕ್ರ.ಸಂ.1.ಕಾಮುಗಾರಿ ಹೆಸರು: ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.11 ರ ಸಿಟಿ ಕ್ಲಬ್ ಹಿಂಭಾಗ ಯುಜಿಡಿ, ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮುಗಾರಿ (DMA/2024-25/WS/WORK_INDENT31636) ಅಂದಾಜು ಮೊತ್ತ:11.00 2.ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ 02 ರ ಗದ್ದೆ ರಾಮೇಶ್ವರ ಬಡಾವಣೆಯಲ್ಲಿ ಚರಂಡಿ ನಿರ್ಮಾಣ ಮತ್ತು ಯುಜಿಡಿ ಮ್ಯಾನ್ ಹೋಲ್ ಪೈಪ್ ಲೈನ್ ಅಳವಡಿಸುವ ಕಾಮಗಾರಿ (DMA/2024-25/WS/WORK_INDENT 31637) ಅಂದಾಜು ಮೊತ್ತ:17.50 3.ಚನ್ನರಾಯಪಟ್ಟಣ ಪುರಸಭಾ ವ್ಯಾಪ್ತಿಯ ವಾರ್ಡ ನಂ.16 ರ ಉರ್ದು ಸ್ಕೂಲ್ ನಿಂದ ಮಾಜಿ ಕೌನ್ಸಿಲರ್ ರಂಗಸ್ವಾಮಿ ಮನೆಯವರೆಗೆ ರಸ್ತೆ ಅಭಿವೃದ್ಧಿ ಕಾಮುಗಾರಿ (DMA/2024-25/WS/WORK_INDENT31638) ಅಂದಾಜು ಮೊತ್ತ:04.70 ಕಾಲಾವಧಿ:3 ತಿಂಗಳು ಅನ್ವಯಿಸುವ ಟೆಂಡರ್ ದಸ್ತಾವೇಜು: ಕೆ.ಡಬ್ಲ್ಯೂ-1 ಸೂಚನೆ:- ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ದಿನಾಂಕವನ್ನು ಪರಿಗಣಿಸತಕ್ಕದ್ದು.
ಸಹಿ/-ಅಧ್ಯಕ್ಷರು, ಪುರಸಭೆ, ಚನ್ನರಾಯಪಟ್ಟಣ
ಸಹಿ/-ಮುಖ್ಯಾಧಿಕಾರಿ, ಪುರಸಭೆ, ಚನ್ನರಾಯಪಟ್ಟಣ
ವಾಸಾಸಂಇ/ಹಿಸನಿ/ಹಾಸನ/719/ಕೆಎಸ್ಎಂಸಿಎ/2024-25

ಲೋಕೋಪಯೋಗಿ ಇಲಾಖೆ
ಧಾರವಾಡ ವಿಭಾಗ, ಧಾರವಾಡ
ಕಾರ್ಯನಿವಾಹಕ ಇಂಜನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ಕ್ರಸಂ : ಕಾನಿಇಂಧಾ/ಗುತ್ತಿಗೆ/ಪಿ.ಬಿ.-2/2024-25/4571 ದಿನಾಂಕ: 02/12/2024
ಅಲ್ಪಾವಧಿ ಟೆಂಡರ ಪ್ರಕಟಣೆ I.F.T-KW-1,2, 3 &4
ಇ-ಪ್ರೊಕ್ಯೂರಮೆಂಟ್ ಟೆಂಡರ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಕೆ ಡಬ್ಲ್ಯೂ-1,2,3 & 4 ರ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ. (kppp.karnataka.gov.in) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ **ಲೆಕ್ಕಶೀರ್ಷಿಕೆ:**- 2059-80-053-4-00-200 ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 4059-80-051-0-29-386 ಇಲಾಖಾ ಕಟ್ಟಡಗಳ ನಿರ್ಮಾಣ & 5054-04-337-0-01-154 ಜಿಲ್ಲಾ ಮತ್ತು ಇತರೆ ರಸ್ತೆಗಳು-ಸುಧಾರಣೆ ಕಾಮಗಾರಿಗಳಿಗೆ ಕನಿಷ್ಠ ಮೊತ್ತ ರೂ. 40.00 ಲಕ್ಷದಿಂದ ಗರಿಷ್ಠ ರೂ. 200.00 ಲಕ್ಷಗಳ ವರೆಗೆ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಕಾಮಗಾರಿಗಳ ವಿವರ ಈ ಕೆಳಗಿನಂತಿದೆ.
ಸಾಮಾನ್ಯ
1.PWD/2024-25/BD/WORK_INDENT16306
2. PWD/2024-25/BD/WORK_INDENT15930
3. PWD/2024-25/BD/WORK_INDENT15858
4. PWD/2024-25/RD/WORK_INDENT16381
Calander of Events: (1) ಆಕ್ಷೇಪಣೆಯನ್ನು ಸಲ್ಲಿಸುವ ಕೊನೆಯ **ದಿನಾಂಕ: 17.12.2024** (ಬೆಳಿಗ್ಗೆ 12:30 ಗಂಟೆಯವರೆಗೆ) (2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 18.12.2024** (ಸಾಯಂಕಾಲ 04:00 ಗಂಟೆಯವರೆಗೆ) (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19.12.2024** (ಸಾಯಂಕಾಲ 04:30 ಗಂಟೆಯ ನಂತರ) (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20.12.2024** (ಸಾಯಂಕಾಲ 04:30 ಗಂಟೆಯ ನಂತರ)
ಕಾಮಗಾರಿಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.kppp.karnataka,gov.in ದಲ್ಲಿ ಹಾಗೂ ಲೋಕೊಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.
ವಾ.ಸಾ.ಇ/ಧಾರವಾಡ/687/ದೇಶಪಾಂಡೆಪಬ್ಲಿಸಿಟಿ/2024-25

ಟ್ವೀಟಾ-ಖಾರಾ

ಕಾಂಗ್ರೆಸ್, ಕರ್ನಾಟಕ

ಕೇಂದ್ರ ಸರಕಾರದ ರೈತ ವಿರೋಧಿ ನೀತಿಗಳು ರೈತರನ್ನು ಮತ್ತೆ ದೆಹಲಿಗೆ ಬರುವಂತೆ ಮಾಡಿವೆ. ಮೋದಿ ಸರಕಾರ ರೈತರ ಸಂಕಷ್ಟ ಆಲಿಸುವ ಬದಲು, ಅನ್ನದಾತರು ದೆಹಲಿಗೆ ಬರದಂತೆ ತಡೆಯಲು ರಸ್ತೆಗೆ ಬ್ಯಾರಿಕೇಡ್, ಮೊಳೆ ಹಾಕುವ ಕೆಲಸ ಮಾಡುತ್ತಿದೆ.ಬಿಜೆಪಿ ಸರಕಾರ ಪ್ರತಿಭಟನೆ ತಡೆಯುವ ಬದಲು ರೈತರೊಂದಿಗೆ ಮಾತನಾಡಿ, ಅವರ ಸಮಸ್ಯೆ ಅರಿತು ಪರಿಹಾರ ಒದಗಿಸಲಿ.

ಚೆಲುವೇಗೌಡ ಎಚ್.ಎನ್., ಬೆಂಗಳೂರು

ಹರಿಯಾಣದ ಚುನಾವಣೆ ಗೆಲ್ಲಿಸಲು ಆಡಬಾರದ ಆಟ ಆಡಿದಿರಿ. ಆದರೆ ಅದು ಸಾಧ್ಯವಾಗಲಿಲ್ಲ. ಈಗ ಡೆಲ್ಲಿ ಚುನಾವಣೆ ಬರ್ತಾ ಇದೆ. ಅದಕ್ಕಾಗಿ ಈಗ ಡ್ರಾಮಾ ಶುರುವಾಗಿದೆ.

ವಿಶ್ವವಾಣಿ ಕ್ಲಬ್ ಹೌಸ್

ಕಾರ್ನರ್
04.12.2024
ಸಂಜೆ 06.55 ರಿಂದ 08.15 ರವರೆಗೆ

ಬುಧವಾರದ ಅತಿಥಿ
ರಶ್ಮಿ ರೇಣು

ವಿಷಯ
ವಚನ ಗಾಯನ

vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ತುಮಕೂರು

ದೂರೇನು?: ರಸ್ತೆ ಮಧ್ಯೆದಲ್ಲಿಯೇ ಶೆಡ್ ನಿರ್ಮಾಣ; ತೆರವಿಗೆ ಅಧಿಕಾರಿಗಳ ನಿರ್ಲಕ್ಷ್ಯ

- **ಇಲಾಖೆ:** ನಗರಸಭೆ, ರಾಯಚೂರು (ಪೌರಾಡಳಿತ ಇಲಾಖೆ)
- **ಪರಿಹಾರ:** ರಸ್ತೆಗೆ ಅಡ್ಡಲಾಗಿ ನಿರ್ಮಿಸಿದ್ದ ಶೆಡ್ ಅನ್ನು ಪೊಲೀಸರ ರಕ್ಷಣೆಯೊಂದಿಗೆ ತೆರವುಗೊಳಿಸಿ, ಸಂಚಾರಕ್ಕೆ ಅನುಕೂಲ

ಸಮಾಚಾರ ಸಣ್ಣದಲ್ಲ

ಸ್ವಂತ ಮಕ್ಕಳ ಮೇಲೆ ಪೇದೆ ಲೈಂಗಿಕ ದೌರ್ಜನ್ಯ

ಕಲಬುರಗಿ: ತನ್ನ ಇಬ್ಬರು ಅಪ್ರಾಪ್ತ ವಯಸ್ಕ ಗಂಡು ಮಕ್ಕಳ ಮೇಲೆ ತಂದೆಯೇ ಲೈಂಗಿಕ ದೌರ್ಜನ್ಯ ನಡೆಸಿದ ಅಮಾನವೀಯ ಘಟನೆ ಬೆಳಕಿಗೆ ಬಂದಿದೆ. ಜಿಲ್ಲಾ ಮೀಸಲು ಪಡೆಯಲ್ಲಿ ಪೇದೆಯಾಗಿರುವ ತಾರಾಸಿಂಗ್ ರಾಠೋಡ್ ದುಷ್ಕೃತ್ಯ ನಡೆಸಿದ ತಂದೆ. ನಾನು ಪೊಲೀಸ್. ಯಾರು ಏನೂ ಮಾಡಲು ಆಗುವುದಿಲ್ಲ ಎಂದು ಹೇಳಿ ಪತ್ನಿಗೂ ಬೆದರಿಸಿ ದೌರ್ಜನ್ಯ ನಡೆಸುತ್ತಿದ್ದ. 12 ಮತ್ತು 16 ವರ್ಷದ ಮಕ್ಕಳಿಗೆ ಹಿಂಸೆ ನೀಡುತ್ತಿದ್ದ. ಸರಿಯಾಗಿ ಕರ್ತವ್ಯ ನಿರ್ವಹಿಸದೆ ಹಲವು ಸಸ್ಪೆಂಡ್ ಶಿಕ್ಷೆಗೂ ಗುರಿಯಾಗಿದ್ದ. ಮಕ್ಕಳಿಗೆ ನೀಡುತ್ತಿದ್ದ ಲೈಂಗಿಕ ಹಿಂಸೆಗೆ ಪ್ರತಿಭಟಿಸಿದಾಗ ಆಕೆ ಮೇಲೆ ಹಲ್ಲೆ ನಡೆಸಿ ಬೆದರಿಕೆ ಹಾಕುತ್ತಿದ್ದ. ಕೊನೆಗೆ ಈ ಚಿತ್ರಹಿಂಸೆ ತಾಳಲಾಗದೆ ಪತ್ನಿಯೇ ಗಂಡನ ನೀಚ ಕೃತ್ಯದ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಾರೆ.

ಲೈಂಗಿಕ ದೌರ್ಜನ್ಯ: 10 ವರ್ಷ ಕಠಿಣ ಶಿಕ್ಷೆ

ರಾಯಚೂರು: ಸಿಂಧನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2018ರ ಏಪ್ರಿಲ್‌ನಲ್ಲಿ ಬಾಲಕಿ ಮೇಲೆ ನಡೆದ ಲೈಂಗಿಕ ದೌರ್ಜನ್ಯದ ಪ್ರಕರಣ ಸಂಬಂಧ ತಪ್ಪಿತಸ್ಥ ಉಮಲೂಟಿಯ ರಮೇಶ ಮರಿಯಪ್ಪನಿಗೆ ಸಿಂಧನೂರಿನ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಪೋಕ್ಸೊ ನ್ಯಾಯಾಲಯವು 10 ವರ್ಷ ಕಠಿಣ ಶಿಕ್ಷೆ ಹಾಗೂ 15 ಸಾವಿರ ರು. ದಂಡ ವಿಧಿಸಿದೆ. ಬಾಲಕಿಯ ಅಪಹರಣಕ್ಕೆ ಸಹಕರಿಸಿದ್ದ ಉಮಲೂಟಿಯ ಇನ್ನೊಬ್ಬ ಆರೋಪಿ ರಮೇಶ ಮುದಿಯಪ್ಪಗೆ 2 ವರ್ಷಗಳ ಸಾಮಾನ್ಯ ಕಾರಾಗೃಹ ಶಿಕ್ಷೆ ಹಾಗೂ 5 ಸಾವಿರ ರು. ದಂಡ ವಿಧಿಸಿ ಪೋಕ್ಸೊ ನ್ಯಾಯಾಲಯದ ನ್ಯಾಯಾಧೀಶೆ ಬಿ.ಬಿ. ಜಕಾತಿ ಮಂಗಳವಾರ ತೀರ್ಪು ನೀಡಿದ್ದಾರೆ. ಸರ್ಕಾರದ ಸಂತ್ರಸ್ತರ ಪರಿಹಾರ ನಿಧಿಯಿಂದ ನೊಂದ ಬಾಲಕಿಗೆ 4.50 ಲಕ್ಷ ರು. ಪರಿಹಾರ ನೀಡುವಂತೆಯೂ ಕೋರ್ಟ್ ಆದೇಶ ನೀಡಿದೆ. ಬಾಲಕಿಯ ತಂದೆ ದೂರಿನ ಮೇರೆಗೆ ಆರೋಪಿಗಳ ವಿರುದ್ಧ ತನಿಖೆ ನಡೆಸಿದ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಅವರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಯತ್ನಾಳ್ ಪರ ಕೇಂದ್ರ ನಾಯಕರ ಬ್ಯಾಟಿಂಗ್?

ರೆಬೆಲ್ ನಾಯಕರ ವಿರುದ್ಧ ಶಿಸ್ತು ಕ್ರಮಕ್ಕೆ ದಿಲ್ಲಿಯಲ್ಲಿ ವಿರೋಧ

ಬಿವೈವಿ, ಯತ್ನಾಳ್ ವಿಷಯದಲ್ಲಿ ನಾಯಕರಲ್ಲೇ ಭಿನ್ನಮತ

ಬೆಂಗಳೂರು: ಒಂದೆಡೆ ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕ್ರಮಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದ ಬಣ ಒತ್ತಡವನ್ನು ಮುಂದುವರಿಸಿದ್ದರೆ, ಇನ್ನೊಂದೆಡೆ ಕರ್ನಾಟಕದ ಕೇಂದ್ರ ಸಚಿವರೊಬ್ಬರು ಯತ್ನಾಳ್ ಪರವಾಗಿ ಬ್ಯಾಟ್ ಬೀಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿವೆ.

ಹೌದು, ವಿಜಯೇಂದ್ರ ಬಣದಿಂದ ಒತ್ತಡ ವಿದ್ದರೂ ಯತ್ನಾಳ್ ಅವರಿಗೂ ರಾಜ್ಯದಲ್ಲಿ ಬೆಂಬಲವಿದೆ. ಯಡಿಯೂರಪ್ಪ ಕುಟುಂಬದ ವಿರುದ್ಧ ಯತ್ನಾಳ್ ಮಾತ್ರವಲ್ಲದೇ ಹಲವು ನಾಯಕರಿಗೆ ಅಕ್ಷೇಪವಿದೆ. ಈ ಹಂತದಲ್ಲಿ ಯತ್ನಾಳ್ ವಿರುದ್ಧ ಕ್ರಮಕ್ಕೆ ಮುಂದಾದರೆ, ಈ ಎಲ್ಲ ನಾಯಕರು ಒಂದಾಗುವ ಸಾಧ್ಯತೆಯಿದೆ. ಆದ್ದರಿಂದ ಯತ್ನಾಳ್ ವಿರುದ್ಧ ಕ್ರಮಕ್ಕೆ ಮುಂದಾಗುವುದು ಬೇಡ. ಎರಡೂ ಬಣದ ನಾಯಕರನ್ನು ಕರೆದು ಈ ವಿಷಯವನ್ನು ಇಲ್ಲಿಗೆ ಬಿಡುವಂತೆ ಸೂಚನೆ ನೀಡುವುದು ಸೂಕ್ತ ಎನ್ನುವ ಸಲಹೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಟಸ್ಥ ಬಣದಿಂದಲೂ ಯತ್ನಾಲ್‌ಗೆ ಬೆಂಬಲ: ಮೇಲ್ನೋಟಕ್ಕೆ ವಿಜಯೇಂದ್ರ ಬಣದಲ್ಲಿ ಜಿಲ್ಲಾಧ್ಯಕ್ಷರು ಸೇರಿದಂತೆ ಹಲವು ಪದಾಧಿಕಾರಿಗಳಿದ್ದಾರೆ. ಆದರೆ ತಟಸ್ಥ ಬಣದಲ್ಲಿರುವ ಅನೇಕ ನಾಯಕರು ಯತ್ನಾಳ್‌ಗೆ ಬೆಂಬಲಿಸಿದ್ದಾರೆ. ಇದರೊಂದಿಗೆ ಕಲ್ಯಾಣ ಮತ್ತು ಉತ್ತರ ಕರ್ನಾಟಕದಲ್ಲಿ ಪಂಚಮಸಾಲಿ ಸಮುದಾಯ ಪ್ರಬಲವಾಗಿದ್ದು, ಯತ್ನಾಳ್ ಅವರನ್ನು ಬಿಜೆಪಿಯಿಂದ ಉಚ್ಚಾಟನೆ ಮಾಡಿದರೆ ಮುಂಬರುವ ಚುನಾವಣೆಯಲ್ಲಿ ಸಮುದಾಯ ಪಕ್ಷಕ್ಕೆ ಕೈಕೊಡಬಹುದೆಂಬ ಆತಂಕವನ್ನು ಹೊರಹಾಕಿದ್ದಾರೆ.

ಯತ್ನಾಳ್ ವಿರುದ್ಧ ಕ್ರಮ ಕೈಗೊಂಡರೇ ಹಿಂದುತ್ವ ಎಂದು ಹೇಳಿಕೊಂಡು ತಿರುಗಾಡಿ ಕಟ್ಟರ್ ಹಿಂದುತ್ವವಾದಿಗಳನ್ನು ತುಳಿಯುತ್ತಿದ್ದೀರಿ ಎನ್ನುವ ಆರೋಪ ಕೇಳಿಬರುತ್ತದೆ. ಈಗಾಗಲೇ ಅನಂತಕುಮಾರ್ ಹೆಗಡೆ ಸೇರಿದಂತೆ ಕಟ್ಟರ್ ಹಿಂದೂ ರಾಷ್ಟ್ರಿಯವಾದಿ ನಾಯಕರನ್ನು ಕರ್ನಾಟಕ ಬಿಜೆಪಿಯಲ್ಲಿ ಮೂಲೆಗುಂಪು ಮಾಡಲಾಗಿದೆ ಎನ್ನುವ ಆರೋಪಗಳಿವೆ. ಆದ್ದರಿಂದ ಯತ್ನಾಳ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಬೇಡ ಎನ್ನುವ ವಾದವನ್ನು ನಾಯಕರು ಮಂಡಿಸಿದ್ದು, ಇದಕ್ಕೆ ಹೈಕಮಾಂಡ್ ಸಹ ಸಕಾರಾತ್ಮಕವಾಗಿ ಸ್ಪಂದಿಸಿದೆ ಎನ್ನಲಾಗಿದೆ.

ಸಂಧಾನದಲ್ಲಿ ಮುಗಿಯೋದು ಡೌಟು: ಬಿಜೆಪಿ ವರಿಷ್ಠರ ಮೇಲೆ ರಾಜ್ಯದ ಕೇಂದ್ರ ಸಚಿವರೊಬ್ಬರು ಮಾತುಕತೆಯಲ್ಲಿಯೇ ಈ ವಿಷಯವನ್ನು ಮುಗಿಸುವುದು ಸೂಕ್ತ ಎನ್ನುವ ಸಲಹೆಯನ್ನು ನೀಡುತ್ತಿದ್ದಾರೆ. ಆದರೆ ಸದ್ಯ ಪರಿಸ್ಥಿತಿಯಲ್ಲಿ ಯಡಿಯೂರಪ್ಪ ಕುಟುಂಬ ಹಾಗೂ ಯತ್ನಾಳ್ ಬಣದ ನಡುವಿನ ಕಿತ್ತಾಟ ಗಮನಿಸಿದರೆ, ಸಂಧಾನದಲ್ಲಿ ಮುಗಿಯುವ ಸಾಧ್ಯತೆ ತೀರಾ ಕಡಿಮೆ ಎನ್ನುವ ಮಾತು ಕೇಳಿಬರುತ್ತಿದೆ. ಆದ್ದರಿಂದ ಎರಡೂ ಬಣಕ್ಕೂ ಇನ್ನೊಬ್ಬರ ತಂಟೆಗೆ ಹೋಗದಂತೆ ಎಚ್ಚರಿಕೆ ನೀಡಿ ಪ್ರಕರಣ ಕೈಬಿಡುವುದು ಸೂಕ್ತ ಎನ್ನುವ ಸಲಹೆಯನ್ನು ನಾಯಕರು ನೀಡಿದ್ದಾರೆ. ಆದರೆ ಶಿಸ್ತಿನ ಪಕ್ಷವಾಗಿರುವ ಬಿಜೆಪಿಯಲ್ಲಿ ಈ ರೀತಿ ಹಾದಿ-ಬೀದಿಯಲ್ಲಿ ಮಾತಾಡಿಕೊಂಡು ಓಡಾಡುವುದನ್ನು ಒಪ್ಪಲು ಸಾಧ್ಯವಿಲ್ಲ. ಪಕ್ಷದ ಹಿತ ದೃಷ್ಟಿಯಿಂದಲಾದರೂ ಇನ್ನೊಮ್ಮೆ ಈ ರೀತಿ ಶಿಸ್ತು ಮೀರದಂತೆ ನೋಡಿಕೊಳ್ಳಲು ಕ್ರಮ ಕೈಗೊಳ್ಳಬೇಕು ಎನ್ನುವ ಅಭಿಪ್ರಾಯ ಕೇಳಿಬರುತ್ತಿದೆ.

ಯತ್ನಾಳ್ ವಿರುದ್ಧ ಕ್ರಮ ಬೇಡ ಎನ್ನಲು ಕಾರಣವೇನು?

- ವಿಜಯೇಂದ್ರ ವಿರುದ್ಧ ಮಾತನಾಡಿದ್ದಾರೆ ಹೊರತು, ಪಕ್ಷದ ನಿಷ್ಠೆಯನ್ನು ಬಿಟ್ಟಿಲ್ಲ
- ಉತ್ತರ ಕರ್ನಾಟಕ ಭಾಗದಲ್ಲಿ ಈಗಲೂ ಲಿಂಗಾಯತ ಸಮುದಾಯ ಅವರೊಂದಿಗೆ ಇದೆ
- ಜಾತಿ ಮೀರಿ, ಹಿಂದೂ ಧರ್ಮದ ವಿಷಯ ಬಂದಾಗ ಅನೇಕರು ಯತ್ನಾಳ್‌ರನ್ನು ಬೆಂಬಲಿಸುತ್ತಾರೆ
- ವಕ್ಫ್ ಜನಾಂದೋಲನದ ಸಮಯದಲ್ಲಿ ಕ್ರಮಕ್ಕೆ ಮುಂದಾದರೆ ಪಕ್ಷಕ್ಕೆ ಭಾರಿ ಡ್ಯಾಮೇಜ್ ಆಗುತ್ತದೆ
- ಕುಟುಂಬ ರಾಜಕಾರಣದ ವಿರುದ್ಧ ಹೋರಾಡಿದರೆ ಕ್ರಮ ಕೈಗೊಳ್ಳುವುದು ಕೆಟ್ಟ ಸಂದೇಶ ರವಾನೆಯಾಗಲಿದೆ.

ವರಿಷ್ಠರು ಮೌನ

ಬಸನಗೌಡ ಪಾಟೀಲ್ ಯತ್ನಾಳ್ ವಿರುದ್ಧ ಕ್ರಮವಹಿಸುವ ಬಗ್ಗೆ ಹಲವು ದಿನಗಳಿಂದ ವಿಜಯೇಂದ್ರ ಬಣ ಒತ್ತಡ ಹೇರುತ್ತಿದ್ದರೂ, ಈ ವಿಷಯದಲ್ಲಿ ವರಿಷ್ಠರು ಮೌನವಾಗಿದ್ದು ಇದೇ ಪರ-ವಿರೋಧ ಕಾರಣಕ್ಕೆ ಕ್ರಮ ಕೈಗೊಳ್ಳಿ ಎನ್ನುವ ಒತ್ತಡ ಹೇರುತ್ತಿರುವಷ್ಟೇ ಪ್ರಮಾಣದಲ್ಲಿ ಯಾವುದೇ ಕ್ರಮ ಬೇಡ ಎನ್ನುವ ಒತ್ತಡವೂ ಇದೆ. ಆದ್ದರಿಂದ ಈ ವಿಷಯದಲ್ಲಿ ಮೊದಲಿನಿಂದಲೂ ವರಿಷ್ಠರು ಮೌನವಾಗಿದ್ದರು. ಆದರೀಗ ಯಡಿಯೂರಪ್ಪ ಅವರ ಒತ್ತಡಕ್ಕೆ ಮಣಿದು ನೋಟಿಸ್ ನೀಡಲಾಗಿದೆ. ಆದರೆ ಕ್ರಮ ಕೈಗೊಳ್ಳಲು ಹಲವರು ವಿರೋಧ ಮಾಡುತ್ತಿರುವುದರಿಂದ ಇಕ್ಕಟ್ಟಿಗೆ ನಾಯಕರು ಸಿಲುಕಿಸಿದ್ದಾರೆ ಎನ್ನುವ ಮಾತುಗಳು ಕೇಳಿಬರುತ್ತಿದೆ.

ಫೆಂಗಲ್ ಚಂಡಮಾರುತದ ಪರಿಣಾಮ ನಿಲ್ಲದ ಮಳೆ | ಹಲವೆಡೆ ಭೂಕುಸಿತ, ಮನೆಗಳಿಗೆ ನೀರು ನುಗ್ಗಿ ಅವಾಂತರ | ಶಾಲಾ-ಕಾಲೇಜುಗಳಿಗೆ ರಜೆ ಘೋಷಣೆ

ನಿಲ್ಲದ ವರುಣನ ಆರ್ಭಟ

ಬೆಂಗಳೂರು: ಫೆಂಗಲ್ ಚಂಡಮಾರುತದಿಂದ ತಮಿಳುನಾಡು, ಪುದುಚೇರಿ ಮತ್ತು ಕೇರಳದಲ್ಲಿ ಭಾರಿ ಮಳೆ ಮತ್ತು ಮಳೆ ಸಂಬಂಧಿತ ಅವಘಡಗಳಿಂದ ಜನಜೀವನ ಅಸ್ತವ್ಯಸ್ತಗೊಂಡಿದೆ. ಅಂತೆಯೇ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಮಳೆ ಪರಿಸ್ಥಿತಿ ಮುಂದುವರಿದಿದೆ.ದಕ್ಷಿಣ ಕನ್ನಡ, ಉಡುಪಿ, ಬೆಂಗಳೂರು, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ವರುಣನ ಅಬ್ಬರ ಮುಂದುವರಿದಿದೆ. ನಿರಂತರ ಮಳೆಯಿಂದಾಗಿ ಹಲವೆಡೆ ಭೂಕುಸಿತ ಸಂಭವಿಸಿದೆ.

ಮೈಸೂರಿನ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಗುಡ್ಡ ಕುಸಿದು ರಸ್ತೆಗೆ ಬಂಡೆಗಲ್ಲೊಂದು ಉರುಳಿದ್ದು, ಕೆಲಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು. ನಂತರ ಬಂಡೆಯನ್ನು ತೆರವುಗೊಳಿಸಿ ವಾಹನ ಸಂಚಾರ ಸುಗಮಗೊಳಿಸಲಾಗಿದೆ.

ಕರಾವಳಿಯಲ್ಲಿ ಬಿರುಸಿನ ಮಳೆ: ಕರಾವಳಿ ಜಿಲ್ಲೆಗಳಲ್ಲಿ ಚಂಡಮಾರುತದ ಚಂಡಮಾರುತದ ಪರಿಣಾಮ ಮಳೆ ತನ್ನ ಆರ್ಭಟವನ್ನು ತೀವ್ರಗೊಳಿಸಿದ್ದು, ಸೋಮವಾರ ರಾತ್ರಿ ಸತತವಾಗಿ ಸುರಿಯಲಾರಂಭಿಸಿದ ಮಳೆ ಇದೀಗಲೂ ಮುಂದುವರಿದಿದೆ.

ಹವಾಮಾನ ಇಲಾಖೆಯು ಮಳೆ ಮುಂದುವರಿಯುವ ಮುನ್ಸೂಚನೆ ನೀಡಿದ್ದು, ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಮಂಗಳೂರಿನ ಕೆಲವೆಡೆ ಮನೆಗಳಿಗೆ ನೀರು ನುಗ್ಗಿದೆ. ಮಳೆಯಿಂದಾಗಿ ಮಂಗಳವಾರವೂ ಶಾಲೆ ಮತ್ತು ಪಿಯು ಕಾಲೇಜುಗಳಿಗೆ ರಜೆ ನೀಡಲಾಗಿತ್ತು. ಹಲವು ಕಾರ್ಯಕ್ರಮಗಳನ್ನು ಮುಂದೂಡಲಾಗಿದೆ. ಮೀನುಗಾರರು ಕಡಲಿಗೆ ಇಳಿಯದಂತೆ ಸೂಚಿಸಲಾಗಿದೆ. ಕುಕ್ಕೆ ಸುಬ್ರಹ್ಮಣ್ಯ ಸೇರಿದಂತೆ ಅನೇಕ ಕಡೆ ಪ್ರವಾಸಿಗರು ನೀರಿಗಿಳಿಯದಂತೆ ಸೂಚಿಸಲಾಗಿದೆ. ದ.ಕ. ಮತ್ತು ಉಡುಪಿ ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಗಡಿಯಲ್ಲೂ ಧಾರಾಕಾರ ಮಳೆ

ಎಲ್ಲೆಡೆ ಮಳೆಯಿಂದ ಕತ್ತಲು ಆವರಿಸಿದ್ದು ವಾಹನ ಸವಾರರು ಲೈಟ್ ಹಾಕಿಕೊಂಡು ವಾಹನ ಚಲಾಯಿಸುತ್ತಿದ್ದಾರೆ. ಸೋಮವಾರ ರಾತ್ರಿ ನಗರದ ಕೊಡಿಯಾಲ್ ಗುತ್ತು, ಕೊಟ್ಟಾರ ಚೌಕಿ ಮತ್ತಿತರ ಭಾಗಗಳಲ್ಲಿ ರಸ್ತೆಯೇ ಹೊಳೆಯಂತಾಗಿದ್ದು ರಸ್ತೆಯ ಮೇಲೆ ನಿಲ್ಲಿಸಿರುವ ವಾಹನಗಳು ನೀರಿನಲ್ಲಿ ಮುಳುಗಿವೆ. ಕೊಡಿಯಾಲ್ ಗುತ್ತು ಅಪಾರ್ಟ್‌ಮೆಂಟ್‌ನ ತಡೆಗೋಡೆ ಕುಸಿದ ಪರಿಣಾಮ ಮಳೆ ನೀರು ನೆಲಮಹಡಿಗೆ ನೀರು ನುಗ್ಗಿದ್ದು ಪರಿಹಾರ ಕಾರ್ಯ ಆರಂಭಿಸಲಾಗಿದೆ. ಮಂಗಳೂರು ಬಾಳದಲ್ಲಿ 22 ಸೆಂ.ಮೀ, ಮೂಲ್ಕಿ ಐಕಳದಲ್ಲಿ 21 ಸೆಂ.ಮೀ, ಕಿಲ್ಪಾಡಿ ಮತ್ತು ಕಿನ್ನಿಗೋಳಿಯಲ್ಲಿ 19 ಸೆಂ.ಮೀ, ಸುರತ್ಕಲ್ 18 ಸೆಂ.ಮೀ ಮಳೆ ದಾಖಲಾಗಿದೆ.

ಗೋಡೆ ಕುಸಿತ: ಜೆಪ್ಪು ವಾರ್ಡ್ ನ ಸುರಕ್ಷಾ ಹಾಸ್ಟೆಲ್ ಬಳಿ ಇರುವ ಅಬ್ದುಲ್ ರಹ್ಮಾನ್ ಎಂಬವರ ಮನೆಯ ಆವರಣ ಗೋಡೆ ಕುಸಿದಿದೆ. ಇದರಿಂದ ಮನೆಗೂ ಹಾನಿಯಾಗುವ ಭೀತಿ ಎದುರಾಗಿದೆ.ಗೋಡೆಯ ಕಲ್ಲುಗಳು ರಸ್ತೆಗೆ ಬಿದ್ದಿರುವ ಕಾರಣ ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಗಿದೆ.

ಮಂಗಳೂರಿನ ಮನೆಯೊಂದರ ಆವರಣದ ಗೋಡೆ ಕುಸಿದಿದೆ...

ಉಡುಪಿಯಲ್ಲಿ ಬಿರುಸಿನ ಮಳೆ

ಉಡುಪಿ ಜಿಲ್ಲೆಯಾದ್ಯಂತ ಮೋಡ ಕವಿದ ವಾತಾವರಣವಿದ್ದು, ಹಲವೆಡೆ ವ್ಯಾಪಕ ಮಳೆ ಮುಂದುವರೆದಿದೆ. ಉಡುಪಿಯ ರಸ್ತೆಗಳಲ್ಲೇ ಮಳೆ ನೀರು ಹರಿಯುತ್ತಿದ್ದರಿಂದ ದ್ವಿಚಕ್ರ ವಾಹನ ಸವಾರರು ಮತ್ತು ಪಾದಚಾರಿಗಳು ಸಂಚರಿಸಲು ತೀವ್ರವಾಗಿ ಪರದಾಡಿದರು. ಜಿಲ್ಲೆಯಲ್ಲಿ ಸೋಮವಾರ ಸಂಜೆ ವೇಳೆ ಮಳೆ ಆರಂಭಗೊಂಡು ರಾತ್ರಿ ಗಾಳಿಯೊಂದಿಗೆ ಗುಡುಗುಸಹಿತ ಬಿರುಸಿನ ಮಳೆ ಮುಂದುವರಿಯಿತು. ಇದರಿಂದಾಗಿ ಉಡುಪಿ, ಕಾಪು, ಪಡುಬಿದ್ರಿ, ಬ್ರಹ್ಮಾವರ, ಕಾರ್ಕಳ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿದೆ. ನಿರಂತರ ಮಳೆ ಹಿನ್ನೆಲೆಯಲ್ಲಿ ಮಂಗಳವಾರವೂ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಅಲ್ಲದೆ, ಮೀನುಗಾರರು ಕಡಲಿಗೆ ಇಳಿಯದಂತೆ ಹವಾಮಾನ ಇಲಾಖೆ ಸೂಚನೆ ನೀಡಿದೆ.

ನದಿಗೆ ಬಿದ್ದು ಆರ್‌ಎಸ್‌ಎಸ್ ಕಾರ್ಯಕರ್ತನ ಸಾವು

ಬೆಳ್ತಂಗಡ: ನೇತ್ರಾವತಿ ನದಿಗೆ ಆಯತಪ್ಪಿ ಬಿದ್ದಿದ್ದ ಆರ್‌ಎಸ್‌ಎಸ್ ಕಾರ್ಯಕರ್ತರ ಪ್ರಸಾದ್ ಮೃತದೇಹ ಮಂಗಳವಾರ ಪತ್ತೆಯಾಗಿದೆ.

ಬೆಳಾಲು ಗ್ರಾಮದ ಸುರುಳಿ ಕುಂಡಡ್ಕ ನಿವಾಸಿ ಪ್ರಸಾದ್ (38) ಸಾವನ್ನಪ್ಪಿದ ವ್ಯಕ್ತಿ. ಸೋಮವಾರ ಸಂಜೆ ಪ್ರಸಾದ್ ಮೂವರೊಂದಿಗೆ ನೀರಿಗೆ ಇಳಿದ ವೇಳೆ ಪ್ರಸಾದ್ ಮುಳುಗಿದ್ದಾರೆ, ಪ್ರಸಾದ್ ರನ್ನು ರಕ್ಷಿಸಲು ಜತೆಗಿದ್ದವರು ಯತ್ನಿಸಿದ್ದರೂ ಮುಳುಗಿ ನಾಪತ್ತೆಯಾಗಿದ್ದರಿಂದ ಸಾಧ್ಯವಾಗಿರಲಿಲ್ಲ.

ಸ್ಥಳಕ್ಕೆ ಅಗ್ನಿಶಾಮಕ ದಳ ಹಾಗೂ ಶೌರ್ಯ ವಿಪತ್ತು ನಿರ್ವಹಣೆ ತಂಡದ ಸದಸ್ಯರು ಭೇಟಿ ನೀಡಿ ಶೋಧ ಕಾರ್ಯಾಚರಣೆ ನಡೆಸಿದ್ದರು. ಮುಳುಗು ತಜ್ಞ ಈಶ್ವರ್ ಮಲ್ಪೆ ಅವರು ಕೂಡ ಆಗಮಿಸಿದ್ದರು. ಮುಳುಗು ತಜ್ಞ ಬೆಳ್ತಂಗಡಿಯ ಇಸ್ಮಾಯಿಲ್ ಹಾಗೂ ಅಗ್ನಿಶಾಮಕದಳದವರು ಸೋಮವಾರ ರಾತ್ರಿ 11 ರ ಹೊತ್ತಿಗೆ ಪ್ರಸಾದ್ ಮೃತದೇಹವನ್ನು ಮೇಲಕ್ಕೆತ್ತಿದ್ದಾರೆ. ಪ್ರಸಾದ್ ಪತ್ನಿ ಹಾಗೂ ಓರ್ವ ಪುತ್ರನನ್ನು ಅಗಲಿದ್ದಾರೆ.

ಮಂಚನಬೆಲೆ: ತಾತ್ಕಾಲಿಕ ಸೇತುವೆ ಬಿರುಕು

ಮಾಗಡಿ: ತಾಲ್ಲೂಕಿನ ಮಂಚನಬೆಲೆ ಜಲಾಶಯದ ಸಮೀಪ ಎರಡು ವರ್ಷಗಳ ಹಿಂದೆ ಭಾರೀಮಳೆಗೆ ಕೊಚ್ಚಿ ಹೋಗಿದ್ದ ಸೇತುವೆ ಪರ್ಯಾಯವಾಗಿ ನಿರ್ಮಿಸಿದ್ದ ಎರಡನೇ ತಾತ್ಕಾಲಿಕ ಸೇತುವೆ ಮಂಗಳವಾರ ಬಿರುಕು ಬಿಟ್ಟಿದೆ.ತಿಂಗಳ ಹಿಂದೆಯಷ್ಟೇ ಸುರಿದ ಮಳೆಯಿಂದಾಗಿ ಜಲಾಶಯದಿಂದ ಭಾರಿ ಪ್ರಮಾಣದ ನೀರನ್ನು ನದಿಗೆ ಬಿಡಲಾಗಿತ್ತು. ಆಗ ಮೊದಲಿದ್ದ ತಾತ್ಕಾಲಿಕ ಸೇತುವೆ ಕೊಚ್ಚಿ ಹೋಗಿ, ಒಂದು ಭಾಗದ ಸಂಪರ್ಕವೇ ಕಡಿತಗೊಂಡಿತ್ತು. ಬಳಿಕ, ಮತ್ತೊಂದು ತಾತ್ಕಾಲಿಕ ಸೇತುವೆ ನಿರ್ಮಿಸಲಾಗಿತ್ತು. ಫೆಂಗಲ್ ಚಂಡಮಾರುತದ ಪರಿಣಾಮದಿಂದಾಗಿ ಸುರಿಯುತ್ತಿರುವ ಮಳೆಯಿಂದಾಗಿ ನದಿ ನೀರಿನ ಪ್ರಮಾಣ ಹೆಚ್ಚಾಗಿದ್ದರಿಂದ ಈಗಿನ ಸೇತುವೆಯೂ ಬಿರುಕು ಬಿಟ್ಟಿದ್ದು, ಕೊಚ್ಚಿಹೋಗುವ ಆತಂಕ ಎದುರಾಗಿದೆ.ಇದರಿಂದಾಗಿ ಸ್ಥಳೀಯರು ಹಾಗೂ ಜಲಾಶಯಕ್ಕೆ ಬರುವ ಪ್ರವಾಸಿಗರು ಆತಂಕದಲ್ಲೇ ತಾತ್ಕಾಲಿಕವಾಗಿ ನಿರ್ಮಿಸಿರುವ ಸೇತುವೆ ದಾಟಿಕೊಂಡು ಹೋಗಬೇಕಿದೆ. ದ್ವಿಚಕ್ರ ವಾಹನ, ಬಸ್ಸುಗಳು ಸೇರಿದಂತೆ ಹಲವು ಬಗೆಯ ವಾಹನಗಳು ಇಲ್ಲಿ ಓಡಾಡುತ್ತವೆ.

ಜಗಳೂರು ತಾಲೂಕಿಗೆ ಸದ್ಯದಲ್ಲೇ ಭದ್ರಾ ನೀರು

ದಾವಣಗೆರೆ: ಜಗಳೂರು ತಾಲ್ಲೂಕಿನ ಸಮಗ್ರ ನೀರಾವರಿ ಕಲ್ಪಿಸಲು ರೂಪಿಸಿರುವ ಭದ್ರಾ ಮೇಲ್ದಂಡೆ ಯೋಜನೆಯನ್ನು ಕೇಂದ್ರ ಸರಕಾರ ರಾಷ್ಟ್ರೀಯ ಯೋಜನೆಯಾಗಿ ಘೋಷಿಸಿದೆ ಎಂದು ಮಾಜಿ ಶಾಸಕರು ಸುಳ್ಳು ಹೇಳಿ ಜನರ ದಿಕ್ಕು ತಪ್ಪಿಸಿದ್ದಾರೆ ಎಂದು ಶಾಸಕ ಬಿ. ದೇವೇಂದ್ರಪ್ಪ ವಾಗ್ದಾಳಿ ಮಾಡಿದ್ದಾರೆ.

ಚಿತ್ರದುರ್ಗ ಸಮೀಪ ಗೋನೂರು ಬಳಿ ನಡೆಯುತ್ತಿರುವ ಭದ್ರಾ ಮೇಲ್ದಂಡೆ ಯೋಜನೆಯ ಜಗಳೂರು ಶಾಖಾ ಕಾಲುವೆ ನಿರ್ಮಾಣ ಕಾಮಗಾರಿ ವೀಕ್ಷಿಸಿ ಶಾಸಕರು ಮಾತನಾಡಿದರು.

ರಾಜ್ಯದಿಂದ 1200 ಕೋಟಿ ರು. ಅನುದಾನ: ಭದ್ರಾ ನೀರು ಜಗಳೂರು ತಾಲೂಕಿಗೆ ಹರಿಯುವುದು ದಶಕಗಳ ಕನಸಾಗಿದೆ. ಕೇಂದ್ರ ಸರಕಾರ ತನ್ನ ಬಜೆಟ್ ನಲ್ಲಿ 5000 ಕೋಟಿ ರು. ನೀಡುವುದಾಗಿ ನೀಡಿದ್ದ ಭರವಸೆ ಈಡೇರಿಲ್ಲ. ರಾಜ್ಯ ಸರಕಾರ 1200 ಕೋಟಿ ಅನುದಾನ ನಿಗದಿಗೊಳಿಸಿದೆ. ಅದರಲ್ಲಿ 170 ಕೋಟಿ ವೆಚ್ಚದಲ್ಲಿ ಜಗಳೂರು ಶಾಖಾ ಕಾಲುವೆ ಕಾಮಗಾರಿ ನಡೆಯುತ್ತಿದೆ ಎಂದು ವಿವರಿಸಿದರು.

ಗುಡ್ಡದಲ್ಲಿ ಸುರಂಗ, ಪಿಲ್ಲರ್: ಚಿತ್ರದುರ್ಗದ ಗುಡ್ಡದ ಮಧ್ಯಭಾಗಗಳಲ್ಲಿ ಈಗಾಗಲೇ ಸುರಂಗಗಳನ್ನು ಕೊರೆದು ನಂತರ ಬೃಹತ್ ಪಿಲ್ಲರ್ ಹಾಕಿ 139 ಅಡಿ ಮೇಲಿಂದ ಭಾರಿ ಪ್ರಮಾಣದಲ್ಲಿ ನೀರು ತರುವುದು ಸವಾಲಿನ ಕೆಲಸವಾಗಿದೆ, ಇಂತಹ ಯೋಜನೆ ರಾಜ್ಯದಲ್ಲಿ ಮೊದಲ ಪ್ರಯತ್ನವಾಗಿದೆ. ಎಂಜಿನಿಯರ್ ಹಾಗು ಗುತ್ತಿಗೆದಾರರು ತೀವ್ರ ಶ್ರಮವಹಿಸಿ ಕೆಲಸ ಮಾಡುತ್ತಿದ್ದು ಮುಂದಿನ ವರ್ಷ ಅಕ್ಟೋಬರ್ ತಿಂಗಳಿಗೆ ಜಗಳೂರು ತಾಲೂಕಿಗೆ ನೀರು ಬರಲಿದೆ ಎಂಬ ಶಾಸಕರು ವಿಶ್ವಾಸ ವ್ಯಕ್ತಪಡಿಸಿದರು.

ಹಂಪಿಯ ಸಾಂಸ್ಕೃತಿಕ ಶ್ರೀಮಂತಿಕೆಗೆ ಮಾರು ಹೋದ ಟರ್ಕಿ ರಾಯಭಾರಿ

ಹೊಸಪೇಟೆ: ವಿಶ್ವ ಪಾರಂಪರಿಕ ತಾಣ ಹಂಪಿಗೆ ಪ್ರವಾಸ ಕೈಗೊಂಡಿದ್ದ ಭಾರತದಲ್ಲಿರುವ ಟರ್ಕಿ ದೇಶದ ರಾಯಭಾರಿ ಫಿರಾಟ್ ಸುನೆಲ್ ಮತ್ತು ಹೈದರಾಬಾದ್‌ನ ರಾಜತಾಂತ್ರಿಕ ಓರ್ಹನ್ ಯಲ್ಮನ್ ಓಕನ್ ಅವರು ಕ್ಷೇತ್ರದ ಶಿಲ್ಪಸೌಂದರ್ಯಕ್ಕೆ ಮಾರುಹೋಗಿದ್ದಾರೆ. ವಿರೂಪಾಕ್ಷ ದೇವಸ್ಥಾನ, ಚಕ್ರತೀರ್ಥ, ರಾಣಿಸ್ನಾನಗೃಹ, ಕಮಲಮಹಲ್‌ಗೆ ಭೇಟಿ ನೀಡಿದ ಅವರು, ಇದೊಂದು ಅದ್ಭುತ ಪ್ರವಾಸಿ ತಾಣ ಎಂದು ಮನಸಾರೆ ಪ್ರಶಂಸಿಸಿದರು.

ದೋಣಿ ವಿಹಾರ: ಈ ಸಂದರ್ಭದಲ್ಲಿ ಫಿರಾಟ್ ಸುನೆಲ್ ಮತ್ತು ಓಕನ್ ಚಕ್ರತೀರ್ಥದಲ್ಲಿ ತೆಪ್ಪದಲ್ಲಿ ವಿಹರಿಸಿ ಬಂಡೆಗಳ ನಡುವೆ ಕಾಣಿಸುವ ಹಂಪಿಯ ಪ್ರಾಕೃತಿಕ ಸೌಂದರ್ಯ ಸವಿದರು. ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ಎಸ್.ತಳಕೇರಿ, ಇತರ ಅಧಿಕಾರಿಗಳು ಇದ್ದರು.

ಸ್ಮಾರಕಕ್ಕೆ ಗೌರವ: ರಾಯಭಾರಿ ಮತ್ತು ಕಾನ್ಸುಲ್ ಜನರಲ್ ಅವರು ಬಳ್ಳಾರಿಯ ಅಲ್ಲಿಪುರದಲ್ಲಿರುವ ಟರ್ಕಿ ಯೋಧರ ಸ್ಮಾರಕ ಸ್ಥಳಕ್ಕೆ ಭೇಟಿ ನೀಡಿ ಗೌರವ ಅರ್ಪಿಸಿದರು.

1914-1918ರ ಅವಧಿಯಲ್ಲಿ ನಡೆದ ಪ್ರಥಮ ವಿಶ್ವ ಯುದ್ಧದ ವೇಳೆ ಬ್ರಿಟಿಷರು ಟರ್ಕಿಯೆಯ ಸಾವಿರಾರು ಸೈನಿಕರನ್ನು ಬಂಧಿಸಿ ಇಲ್ಲಿ ಇಟ್ಟಿದ್ದರು, ಅವರೆಲ್ಲ ಬಳಿಕ ಇಲ್ಲೇ ನಿಗೂಢವಾಗಿ ಸತ್ತು ಹೋಗಿದ್ದರು. ಬಂಧಿತ ಸೈನಿಕರ ಸಂಖ್ಯೆ 123 ಎಂದು ಬ್ರಿಟಿಷ್ ದಾಖಲೆ ಹೇಳಿದ್ದರೂ, 5 ಸಾವಿರಕ್ಕೂ ಅಧಿಕ ಯೋಧರನ್ನು ಇಲ್ಲಿ ಬಂಧಿಸಿ ಇಡಲಾಗಿತ್ತು, ಅವರೆಲ್ಲರನ್ನು ನಿಗೂಢವಾಗಿ ಸಾಯಿಸಲಾಗಿದೆ ಎಂದು ಟರ್ಕಿಯ ಗೆಜೆಟ್‌ನಲ್ಲಿ ತಿಳಿಸಲಾಗಿದೆ. ಹೀಗಾಗಿ ಟರ್ಕಿಯ ಪಾಲಿಗೆ ಈ ಸ್ಮಾರಕ ವಿಶೇಷ ಸ್ಥಳವಾಗಿದ್ದು, ಈ ಭಾಗಕ್ಕೆ ಟರ್ಕಿಯ ಯಾವುದೇ ಗಣ್ಯರು ಭೇಟಿ ನೀಡಿದಾಗ ಸ್ಮಾರಕಕ್ಕೆ ಕಡ್ಡಾಯವಾಗಿ ಅಲ್ಲಿಪುರಕ್ಕೆ ಭೇಟಿ ನೀಡುವ ಸಂಪ್ರದಾಯ ಇಟ್ಟುಕೊಂಡಿದ್ದಾರೆ.

ವಿದ್ಯುತ್ ಬೇಡಿಕೆ ಕುಸಿತ: ಆರ್‌ಟಿಪಿಎಸ್ 5 ಘಟಕ ಸ್ಥಗಿತ

ರಾಯಚೂರು: ಬೇಡಿಕೆ ಕುಸಿತ ಹಾಗೂ ತಾಂತ್ರಿಕ ಸಮಸ್ಯೆಯಿಂದ ರಾಯಚೂರು ಶಾಖೋತ್ಪನ್ನ ಕೇಂದ್ರದ ಐದು ಘಟಕಗಳಲ್ಲಿ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ. 6ನೇ ವಿದ್ಯುತ್ ಘಟಕ ವಾರ್ಷಿಕ ನಿರ್ವಹಣೆಯ ಹಿನ್ನೆಲೆಯಲ್ಲಿ ಸ್ಥಗಿತ ಗೊಂಡಿದೆ.

210 ಮೆಗಾವ್ಯಾಟ್ ಸಾಮರ್ಥ್ಯದ 3, 6 ಹಾಗೂ 250 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ 8ನೇ ಘಟಕ ಮಾತ್ರ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿವೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿಯೂ ಸೇರಿದಂತೆ ರಾಜ್ಯಾದ್ಯಂತ ಈ ಬಾರಿ ಅತ್ಯುತ್ತಮ ಮಳೆ ಬಿದ್ದ ಹಿನ್ನೆಲೆಯಲ್ಲಿ ವಿದ್ಯುತ್ ಬೇಡಿಕೆ ಕುಸಿದಿದೆ. ಹೀಗಾಗಿ ಉತ್ಪಾದನೆಯನ್ನು ತಾತ್ಕಾಲಿಕ ಸ್ಥಗಿತಗೊಳಿಸಲಾಗಿದೆ.

ಒಂದನೇ ಘಟಕ ಕಳೆದ ಎರಡು ವರ್ಷದಿಂದ ಸ್ಥಗಿತಗೊಂಡಿದೆ. ಈಗ 1720 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯದಲ್ಲಿ 516 ಮೆಗಾವ್ಯಾಟ್ ಮಾತ್ರ ಉತ್ಪಾದಿಸಲಾಗುತ್ತಿದೆ. 5 ಘಟಕಗಳ ನಿಲುಗಡೆಯಿಂದ 1 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಕಡಿಮೆಯಾಗಿದೆ.

ನಿರಾಶ್ರಿತ ಮಹಿಳೆಗೆ ಒಂದೇ ದಿನದಲ್ಲಿ ನಿವೇಶನ

ಶಿರಾದ ಮಹಿಳೆಗೆ ಡಾ. ಜಿ.ಪರಮೇಶ್ವರ್ ಅವರಿಂದ ನಿವೇಶನ ವಿತರಣೆ

ಶಿರಾದ ಮಹಿಳೆಗೆ ಆಶ್ರಯ ಯೋಜನೆಯಡಿ ನಿವೇಶನ ವಿತರಿಸಿದ ಗೃಹ ಸಚಿವ ಡಾ.ಪರಮೇಶ್ವರ್. ತುಮಕೂರು ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ಎಸ್‌ಪಿ ಅಶೋಕ್ ಇದ್ದರು.

ತುಮಕೂರು: ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಜರುಗಿದ ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಆಶ್ರಯ ಯೋಜನೆಯಡಿ ನಿವೇಶನ ಕಲ್ಪಿಸಬೇಕೆಂದು ಶಿರಾದ ರಾಬಿಯಾ ಕೋಂ ಅಸ್ಲಾಂ ಪಾಷ ಎಂಬ ಮಹಿಳೆಯ ಮನವಿಗೆ ಸ್ಪಂದಿಸಿದ ತುಮಕೂರು ಜಿಲ್ಲಾಡಳಿತ ಒಂದೇ ದಿನದಲ್ಲಿ 20X30 ಅಳತೆ ನಿವೇಶನವನ್ನು ಹಂಚಿಕೆ ಮಾಡಿದೆ.

ಮಹಿಳೆಯ ಬಡತನವನ್ನು ಮನಗಂಡು ಆಶ್ರಯ ಯೋಜನೆಯಡಿ ನಿವೇಶನ ನೀಡಲು 2024ರ ಸೆಪ್ಟೆಂಬರ್ 25ರಂದು ನಡೆದ ಶಿರಾ ಆಶ್ರಯ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ.ಪರಮೇಶ್ವರ ಅವರು ಮಂಗಳವಾರ ರಾಬಿಯಾಗೆ ನಿರ್ಣಯ ಕೈಗೊಂಡ ಆಶ್ರಯ ಸಮಿತಿ ಸಭೆಯ ನಡಾವಳಿ ಪತ್ರವನ್ನು ನೀಡಿದರು.

ಶಿರಾ ನಗರದಲ್ಲಿ ಆಶ್ರಯ ಯೋಜನೆಯಡಿ ರಚಿಸಲಾಗಿರುವ ನಿವೇಶನಗಳ ಪೈಕಿ ಸರ್ವೆ ನಂಬರ್ 100ರಲ್ಲಿನ ನಿವೇಶನವನ್ನು ರಾಬಿಯಾ ಕುಟುಂಬಕ್ಕೆ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ. ಅರ್ಜಿದಾರರ ಸೂಕ್ತ ದಾಖಲೆಗಳನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಲ್ಲಿಸಿ ನಿಯಮಾನುಸಾರ ಹಕ್ಕು ಪತ್ರ ಸೃಜಿಸಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸ್ಥಳದಲ್ಲಿದ್ದ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್ ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ. ಅಶೋಕ್ ಇದ್ದರು.

ಯಡ್ರಾಮಿಯಲ್ಲಿ ಬಂದ್ ಆಚರಣೆ

ಬಾಲಕಿ ಮೇಲೆ ಅತ್ಯಾಚಾರ ಪ್ರಕರಣ: ಕಾಮುಕನನ್ನು ಕೂಡಲೇ ಗಲ್ಲಿಗೇರಿಸಿ- ಆಂದೋಲ ಶ್ರೀ

ಯಡ್ರಾಮಿ: ತಾಲೂಕು ವ್ಯಾಪ್ತಿಯ ಶಾಲೆಯಲ್ಲಿ ಅಪ್ರಾಪ್ತ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಶಿಕ್ಷಕನನ್ನು ಗಲ್ಲಿಗೇರಿಸುವಂತೆ ಆಗ್ರಹಿಸಿ ಮಂಗಳವಾರ ವಿವಿಧ ಸಂಘಟನೆಗಳು ಯಡ್ರಾಮಿ ಬಂದ್ ಆಚರಿಸಿ ಪ್ರತಿಭಟನೆ ನಡೆಸಿದರು. ಇದರಿಂದಾಗಿ ಕೆಲಕಾಲ ಪಟ್ಟಣದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು.

ಶಾಲೆಯೊಂದರಲ್ಲಿ ಸಂತ್ರಸ್ತ ಮಗು ಐದನೇ ತರಗತಿ ಓದುತ್ತಿದ್ದು, ಶಾಲೆಯ ಮುಖ್ಯಸ್ಥ ಹಾಜಿಮಲಂಗ್ ಗಣಿಯಾರ ಎರಡು ದಿನದ ಹಿಂದೆ ಅತ್ಯಾಚಾರಗೈದಿದ್ದಾನೆ ಎಂದು ಆರೋಪಿಸಲಾಗಿದೆ. ಈ ವಿಷಯವನ್ನು ಮನೆಯಲ್ಲಿ ತಿಳಿಸದಂತೆ ಬೆದರಿಕೆ ಹಾಕಿದ್ದಾನೆ. ಹೀಗಾಗಿ ಮಗು ಮನೆಯಲ್ಲಿ ತಿಳಿಸಲು ಹಿಂಜರಿದಿದೆ. ನಂತರ ಪಕ್ಕದ ಮನೆಯವರ ಮುಂದೆ ಮಗು ವಿಷಯ ತಿಳಿಸಿದ್ದು, ಅವರು ಮಗುವಿನ ತಂದೆ, ತಾಯಿಗೆ ವಿಷಯ ತಿಳಿಸಿದ್ದಾರೆ. ನಂತರ ಪೊಲೀಸರಿಗೆ ದೂರು ನೀಡಲಾಗಿದೆ.

ಎಲ್ಲ ಸಮುದಾಯಗಳ ಪ್ರತಿಭಟನೆ: ಈ ವಿಷಯ ತಾಲೂಕಿನಾದ್ಯಂತ ಹರಡಿದ್ದು, ಮಂಗಳವಾರ ಬೆಳಗ್ಗೆ ಬಂಜಾರಾ ಸಮುದಾಯ ಸೇರಿದಂತೆ ಪಟ್ಟಣದ ಎಲ್ಲ ಸಮುದಾಯ ಹಾಗೂ ಎಲ್ಲ ಸಂಘಟನೆಗಳ ಕಾರ್ಯಕರ್ತರು ಸೇರಿ ಅಂಗಡಿ-ಮುಂಗಟ್ಟುಗಳನ್ನು ಬಂದ್ ಮಾಡಿ, ರಸ್ತೆ ತಡೆದು ಪ್ರತಿಭಟನೆ ನಡೆಸಿದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಬಿಇಒ ವೀರಣ್ಣ ಬೊಮ್ಮನಳ್ಳಿ ಸ್ಥಳೀಯ ಶಾಲೆಗಳಿಗೆ ರಜೆ ಘೋಷಿಸಿದ್ದರು.

ಈ ಸಂದರ್ಭದಲ್ಲಿ ಶ್ರೀರಾಮಸೇನೆಯ ರಾಷ್ಟ್ರೀಯ ಗೌರವಾಧ್ಯಕ್ಷ ಆಂದೋಲ ಮಠದ ಶ್ರೀ ಸಿದ್ದಲಿಂಗ ಶ್ರೀ, ಬಿಜೆಪಿ ಮುಖಂಡ ಮಣಿಕಂಠ ರಾಠೋಡ್, ಬಾಗೇಶ್ ಹೊತ್ತಿನಮಡು, ಶ್ರೀರಾಮ ಸೇನಾ ಸಂಘಟನೆ ಅಧ್ಯಕ್ಷ ಸಿದ್ದಲಿಂಗ, ಪಟ್ಟಣ ಎಲ್ಲ ಸಮುದಾಯಗಳ ಜನರು, ವಿವಿಧ ಕನ್ನಡ ಪರ ರೈತ ಪರ ಹೋರಾಟಗಾರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಾಲಕಿ ವಿರುದ್ಧ ಶಾಲಾ ಮುಖ್ಯಸ್ಥ ನಡೆಸಿದ ಅತ್ಯಾಚಾರ ಖಂಡಿಸಿ ಯಡ್ರಾಮಿಯಲ್ಲಿ ಮಂಗಳವಾರ ಬಂದ್ ಆಚರಿಸಲಾಯಿತು.

ಶಿಕ್ಷಕನ ಬಂಧನ

ಹನ್ನೊಂದು ವರ್ಷದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರಗೈದ ಘಟನೆ ತಾಲೂಕು ವ್ಯಾಪ್ತಿಯ ಖಾಸಗಿ ಶಾಲೆಯಲ್ಲಿ ನಡೆದಿದ್ದು, ಖಾಸಗಿ ಶಾಲಾ ಮುಖ್ಯಸ್ಥ ಹಾಜಿಮಲಂಗ್ ಗಣಿಯಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಗೈದ ಕಾಮುಕನನ್ನು ಕೂಡಲೇ ಗಲ್ಲಿಗೇರಿಸಬೇಕು. ಶಾಲೆಯ ಪರವಾಗಿ ರದ್ದುಪಡಿಸಿ ಬಾಲಕಿಗೆ ಸೂಕ್ತ ಪರಿಹಾರ ನೀಡಬೇಕು.

\- ಸಿದ್ದಲಿಂಗ ಶ್ರೀ
ರಾಷ್ಟ್ರೀಯ ಗೌರವ ಅಧ್ಯಕ್ಷ, ಶ್ರೀರಾಮ ಸೇನೆ

ವಿಶ್ವವಾಣಿ

ಸಂಪಾದಕೀಯ

ಕೆಇಎ ವಿಶ್ವಾಸಾರ್ಹತೆ ಹೆಚ್ಚಿಸಿಕೊಳ್ಳಲಿ

ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೂಲಕ ಪ್ರತಿಷ್ಠಿತ ಕಾಲೇಜುಗಳಲ್ಲಿ ಬಹು ಬೇಡಿಕೆ ಎಂಜಿನಿಯರಿಂಗ್ ಸೀಟ್ ಬ್ಲಾಕಿಂಗ್ ಹಗರಣಕ್ಕೆ ಸಂಬಂಧಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ 8 ಮಂದಿ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದಾರೆ ಎಂಬ ವರದಿಯಾಗಿದೆ. ಈ ಬಂಧಿತರ ಪೈಕಿ ಹಲವರು ಅನೇಕ ವರ್ಷಗಳಿಂದ ಕೆಇಎನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ತಿಳಿದುಬಂದಿದೆ. ಇದು ಕೆಇಎ ವೈಫಲ್ಯಕ್ಕೆ ಹಿಡಿದ ಮತ್ತೊಂದು ಕೈಗನ್ನಡಿ. ಈ ಹಿಂದೆಯೂ ಅನೇಕ ನೇಮಕಾತಿ ಪರೀಕ್ಷೆಗಳಲ್ಲಿ ಕೆಇಎ ಯಡವಟ್ಟು ಮಾಡಿಕೊಂಡಿರುವ ಉದಾಹರಣೆಗಳು ಸಾಕಷ್ಟಿವೆ. ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷಾ ಕೇಂದ್ರದಲ್ಲಿ ನಕಲು ಮಾಡಲು ಅವಕಾಶ ನೀಡುವುದು ಸೇರಿದಂತೆ ನೇಮಕಾತಿ ಪ್ರಕ್ರಿಯೆಯಲ್ಲಿ ತಹರೇವಾರಿ ಅಕ್ರಮಗಳನ್ನು ಮಾಡಿದೆ. ಈ ಅಕ್ರಮಗಳಿಗೆ ಮೂಲ ಕಾರಣ ಆಯಾ ಪರೀಕ್ಷೆಗಳನ್ನು ನಡೆಸುವ ಪ್ರಕ್ರಿಯೆಯಲ್ಲಿ ಭಾಗಿಯಾಗುವ ವ್ಯಕ್ತಿಗಳೇ ವಿನಾ ಅಭ್ಯರ್ಥಿಗಳಲ್ಲ ಎಂಬುದೂ ಪೊಲೀಸ್ ತನಿಖೆಯಲ್ಲಿ ಸಾಬೀತಾಗಿದೆ. ಲಿಖಿತ ಪರೀಕ್ಷೆಯ ಉತ್ತರ ಪತ್ರಿಕೆ (ಓಎಂಆರ್) ತಿದ್ದುವುದು ಸದ್ಯ ಚಾಲ್ತಿಯಲ್ಲಿರುವ ಅಡ್ಡದಾರಿಗಳ ಪೈಕಿ ಬಹುಮುಖ್ಯವಾದುದು. ಇದನ್ನು ಮಾಡಲು ಒಂದು ವ್ಯವಸ್ಥಿತ ಜಾಲವೇ ಇರಬೇಕಲ್ಲವೇ? ಅಕ್ರಮಗಳಿಗೆ ಕಡಿವಾಣ ಹಾಕುವ ಇಚ್ಛಾಶಕ್ತಿ ಅಸಲಿಗೂ ಇದ್ದರೆ ಹೊಸ ನಿಯಮಾವಳಿಗಳನ್ನು ರೂಪಿಸಿ, ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಸಾಧ್ಯವಿದೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಅಕ್ರಮಗಳ ಬೇರಿಗೆ ಕೈ ಹಾಕಲು ನೇಮಕಾತಿ ಪ್ರಕ್ರಿಯೆ ನಡೆಸುವವರಿಗೇ ಮನಸ್ಸಿರುವುದಿಲ್ಲ. ಅಷ್ಟಕ್ಕೂ ಅಕ್ರಮಗಳಲ್ಲಿ ಭಾಗಿಯಾಗುವ ಕೈಗಳು ಅವರವೇ ಅಲ್ಲವೇ? ಅಕ್ರಮಗಳಿಗೆ ಕಡಿವಾಣ ಹಾಕುವುದಕ್ಕಿಂತ ಅಕ್ರಮಗಳನ್ನು ತಡೆಯಲು ಸೂಕ್ತ ಕ್ರಮ ಕೈಗೊಂಡಿದ್ದೇವೆ ಎಂದು ಬಿಂಬಿಸುವುದರಲ್ಲೇ ಪಟ್ಟಭದ್ರರಿಗೆ ಹೆಚ್ಚು ಲಾಭ. ನೇಮಕಾತಿಯಲ್ಲಿನ ಭ್ರಷ್ಟಾಚಾರವಲ್ಲದೆ ಅದನ್ನು ತಡೆಯುವುದಕ್ಕಾಗಿ ಅನುಸರಿಸುವ ಕ್ರಮಗಳಿಂದಲೂ ಬಲಿಪಶುಗಳಾಗುವವರು ಅಭ್ಯರ್ಥಿಗಳೇ ಎಂಬುದು ವಿಪರ್ಯಾಸವಾದರೂ ವಾಸ್ತವ. ಆಮೆಗತಿಯಲ್ಲಿ ಸಾಗುವ ನೇಮಕಾತಿ ಪ್ರಕ್ರಿಯೆ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆಯ ಕಾರಣಕ್ಕೆ ನಡೆಯುವ ಮರುಪರೀಕ್ಷೆ ಇವೆಲ್ಲವೂ ಅಭ್ಯರ್ಥಿಗಳನ್ನು ಮತ್ತಷ್ಟು ಹತಾಶೆಗೆ ದೂಡುತ್ತವೆ. ಅದುಬಿಟ್ಟರೆ, ಸರಕಾರಿ ನೇಮಕಾತಿ ವ್ಯವಸ್ಥೆ ಮೇಲಿನ ವಿಶ್ವಾಸಾರ್ಹತೆಯನ್ನು ಹೆಚ್ಚಿಸಲಾರವು. ಸರಕಾರಿ ಹುದ್ದೆಗಳ ಭರ್ತಿಗಾಗಿ ನಡೆಯುವ ನೇಮಕಾತಿ ಪ್ರಕ್ರಿಯೆಯಲ್ಲಿನ ಭ್ರಷ್ಟಾಚಾರ ಮತ್ತು ಅಕ್ರಮಗಳಿಗೆ ಕಡಿವಾಣ ಹಾಕಲು ಸಂಬಂಧಪಟ್ಟ ಪರೀಕ್ಷಾ ಪ್ರಾಧಿಕಾರ, ನೇಮಕಾತಿ ಆಯೋಗ ಹಾಗೂ ಇಲಾಖೆಗಳು ಮುತುವರ್ಜಿ ತೋರಬೇಕು.

ಸೊಂಪಾದಕೀಯ

ಈ ಕಾರಣಕ್ಕೂ ರದ್ದಾಗಬಹುದು!

ವಿಮಾನಗಳು ಹಾರಾಡುತ್ತಿದ್ದರೆ ಕಂಪನಿಗಳಿಗೆ ಲಾಭ ಎನ್ನುವ ಮಾತೊಂದಿದೆ. ಅದರಲ್ಲಿಯೂ ಅಂತಾರಾಷ್ಟ್ರೀಯ ವಿಮಾನಗಳು ವಾರದಲ್ಲಿ ಮೂರು ದಿನಕ್ಕಿಂತ ಹೆಚ್ಚು ದಿನ ನೆಲದಲ್ಲಿದ್ದರೆ ಕಂಪನಿಗಳಿಗೆ 'ಲಾಸ್' ಎನ್ನುವ ಮಾತಿದೆ. ಇಷ್ಟೆಲ್ಲ ಇದ್ದರೂ, ಅನೇಕ ಬಾರಿ ವಿಮಾನಗಳು ಕ್ಯಾನ್ಸಲ್ ಆಗುತ್ತವೆ. ಇನ್ನೂ ಕೆಲವೊಮ್ಮೆ ಟೇಕ್ ಆಫ್‌ಗೆ ಸಜ್ಜಾಗಿದ್ದಾಗಲೂ ರದ್ದಾಗಿರುವ ಅದೆಷ್ಟೋ ಉದಾಹರಣೆಗಳಿವೆ. ಹವಾಮಾನ ವೈಪರೀತ್ಯ, ತಾಂತ್ರಿಕ ಸಮಸ್ಯೆ, ಪ್ರಯಾಣಿಕರ ಆರೋಗ್ಯದಲ್ಲಿ ಏರುಪೇರು, ಹುಸಿ ಬಾಂಬ್ ಕರೆ ಸೇರಿದಂತೆ ಹತ್ತು ಹಲವು ಕಾರಣಗಳನ್ನು ಈ ವಿಷಯದಲ್ಲಿ ಕೇಳಿರುತ್ತೇವೆ. ಆದರೆ ಈ ಬಾರಿ ಈ ಎಲ್ಲವನ್ನೂ ಮೀರಿಸುವ ಕಾರಣಕ್ಕೆ ವಿಮಾನವೊಂದು ಕ್ಯಾನ್ಸಲ್ ಆಗಿರುವುದು ಸದ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಅಷ್ಟಕ್ಕೂ ಆ ಕಾರಣವೇನು ಎನ್ನುವ ಕುತೂಹಲಕ್ಕೆ ಉತ್ತರ- ಮಹಿಳಾ ಪ್ರಯಾಣಿಕರೊಬ್ಬರಿಗೆ ವಿಮಾನದಲ್ಲಿನ ಎ.ಸಿ. ಚಳಿ ಹಿಡಿಸಿದ್ದಂತೆ! ಈ ಚಳಿಯಿಂದ ರಕ್ಷಿಸಿಕೊಳ್ಳಲು ಆಕೆ ಗಗನಸಖಿಯ ಬಳಿ ಬ್ಲ್ಯಾಂಕೆಟ್ ಕೇಳಿದ್ದಾಳೆ. ಹಾಗೆ ಕೇಳಿದ್ದಕ್ಕೆ ರೇಗಿದ ಗಗನಸಖಿ ಕ್ಯಾಪ್ಟನ್‌ಗೆ ದೂರು ನೀಡಲು ಮುಂದಾಗಿದ್ದಾಳೆ. ಗಗನಸಖಿ ನೀಡಿದ ದೂರನ್ನು ಗಂಭೀರವಾಗಿ ಪರಿಗಣಿಸಿದ ಕ್ಯಾಪ್ಟನ್, 'ಎಲ್ಲರೂ ಸುಮ್ಮನೆ ಕೂರಬೇಕು, ಇಲ್ಲದಿದ್ದರೆ ಪರಿಸ್ಥಿತಿ ನೆಟ್ಟಗಿರಲ್ಲ' ಎಂದು ಧಮಕಿ ಹಾಕಿದ್ದಾನೆ. ಈ ಗಲಾಟೆ ಇನ್ನಷ್ಟು ದೊಡ್ಡದಾಗುತ್ತಿರುವುದು ಖಾತ್ರಿಯಾಗುತ್ತಿದ್ದಂತೆ ವಿಮಾನವನ್ನು ಸಮೀಪದ ನಿಲ್ದಾಣದಲ್ಲಿ ಇಳಿಸಿ, ಪ್ರಯಾಣಿಕರನ್ನು ಮತ್ತೊಂದು ವಿಮಾನದಲ್ಲಿ ನಿಗದಿತ ಸ್ಥಳಕ್ಕೆ ಕಳುಹಿಸಿದ್ದಾರಂತೆ. ಅಷ್ಟಕ್ಕೂ ಇಷ್ಟೆಲ್ಲ ಆಗಿದ್ದು ಏರ್‌ಕೆನಡಾ ಸಂಸ್ಥೆಯ ವಿಮಾನದಲ್ಲಿ. ಈ ವಿಮಾನ ಮೊರಾಕ್ಕೊದಿಂದ ಮಾಂಟ್ರಿಯಲ್‌ಗೆ ಹೋಗುತ್ತಿತ್ತು. ಈ ಘಟನೆಯ ಬಳಿಕ ಏರ್‌ಕೆನಡಾದಲ್ಲಿ ಪ್ರಯಾಣಿಸುವವರು, ಗಗನಸಖಿಯನ್ನು ತಲೆಯೆತ್ತಿ ನೋಡಲೂ ಹೆದರುತ್ತಿದ್ದಾರಂತೆ. ಬಸ್ಸಿನಲ್ಲೋ, ಕಾರಿನಲ್ಲೋ ಜಗಳವಾಡಿ ಡ್ರೈವರ್ ಗಾಡಿಯನ್ನು ಯಾವುದೋ ಗೋಡೆಗೆ ಗುದ್ದಿದರೆ ಪರವಾಗಿಲ್ಲ. ಆದರೆ ವಿಮಾನದಲ್ಲಿ ಹೋಗೋವಾಗ ಕ್ಯಾಪ್ಟನ್ ತಲೆಕೆಟ್ಟು ವಿಮಾನವನ್ನು ಇನ್ನೆಲ್ಲೋ ಗುದ್ದಿದರೆ ಗತಿಯೇನು ಎನ್ನುವುದು ಹಲವರ ಆತಂಕವಂತೆ. ಅದಕ್ಕೇ ಮಳೆಯೋ, ಬಿಸಿಲೋ, ಚಳಿಯೋ ಹೇಗೋ ನಮ್ಮೂರು ಸೇರಿದ್ರೆ ಸಾಕು ಎಂದುಕೊಂಡು ಪ್ರಯಾಣಿಕರು ಗಪ್-ಚುಪ್!

ಸಂಪಾದಕರ ಸದ್ಯಶೋಧನೆ

ಫುಟ್ಬಾಲ್ ಆಟಗಾರನ ದಾರುಣ ಅಂತ್ಯ

ನಾನು ಕತಾರಿನಲ್ಲಿ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯ ನೋಡಲು ಹೋಗಿದ್ದಾಗ, ನನ್ನ ಪಕ್ಕದಲ್ಲಿ ಕುಳಿತ ಹಾಂಗ್ ಕಾಂಗ್ ಫುಟ್ಬಾಲ್ ಪ್ರೇಮಿಯೊಬ್ಬ, ಆ ಜನಜಂಗುಳಿಯಲ್ಲೂ ಕೈಯಲ್ಲಿ ಒಂದು ಪುಸ್ತಕ ಹಿಡಿದು ಕುಳಿತಿದ್ದ. ಪಂದ್ಯ ಆರಂಭವಾಗಲು ಇನ್ನೂ ಒಂದು ಗಂಟೆ ಸಮಯವಿತ್ತು. ಪ್ರೇಕ್ಷಕರೆಲ್ಲ ಬಂದು ತಮ್ಮ ತಮ್ಮ ಆಸನದಲ್ಲಿ ಕುಳಿತುಕೊಳ್ಳುತ್ತಿದ್ದರು. ನನ್ನ ಪಕ್ಕದಲ್ಲಿ ಕುಳಿತ ಆ ಕುಡುಮಿ, 'ನಾನು ರೆಸ್ಟ್ ರೂಮಿಗೆ ಹೋಗಿ ಬರ್ತೇನೆ, ದಯವಿಟ್ಟು ಈ ಪುಸ್ತಕವನ್ನು ಇಟ್ಟುಕೊಂಡಿರಿ' ಎಂದು ಹೇಳಿದ. ಆತ ಆ ಪುಸ್ತಕವನ್ನು ಕೊಡದಿದ್ದರೂ, ನಾನೇ ಅವನಿಂದ ಕೇಳಿ ಪಡೆದು, ಪುಟ ತಿರುವದೇ ಬಿಡುತ್ತಿರಲಿಲ್ಲ. ಆತನಾಗಿಯೇ ಕೊಟ್ಟಿದ್ದು ಒಳ್ಳೆಯದೇ ಆಯಿತು ಎಂದುಕೊಂಡೆ. ಅದು ಫುಟ್ಬಾಲ್ ಆಟದ ರೋಮಾಂಚಕ, ಮರೆಯಲಾಗದ ಘಟನೆ, ಪ್ರಸಂಗಗಳನ್ನೊಳಗೊಂಡ ಒಂದು ಆಸಕ್ತಿದಾಯಕ ಪುಸ್ತಕ. ಆತ ಬರುವುದರೊಳಗೆ ನಾನು ಒಂದು ಪ್ರಸಂಗವನ್ನೊಳಗೊಂಡ ಕೆಲವು ಪುಟಗಳನ್ನು, ನಂತರ ಓದಲೆಂದು, ನನ್ನ ಮೊಬೈಲ್‌ನಲ್ಲಿ ಫೋಟೋ ಹಿಡಿದಿಟ್ಟುಕೊಂಡೆ. The tragic story of Lazio's Luciano Re Cecconi ಎಂಬ ಶೀರ್ಷಿಕೆಯೇ ನನ್ನಲ್ಲಿ ಕುತೂಹಲವನ್ನು ಕೆರಳಿಸಿತ್ತು. ಪಂದ್ಯ ಮುಗಿದ ಬಳಿಕ ನನ್ನ ಮೊಬೈಲಿನಲ್ಲಿದ್ದ ಆ ಅಧ್ಯಾಯವನ್ನು ಓದಿದೆ. ಯಾಕೋ ಬೇಸರವಾಯಿತು. ಅದು ಲೂಸಿಯಾನೊ ರೇ ಚೆಕ್ಕಾನಿ ಎಂಬ ಒಬ್ಬ ಪ್ರತಿಭಾವಂತ ಫುಟ್ಬಾಲ್ ಆಟಗಾರನ ದುರಂತ ಕತೆ. ಆತ ಇಟಲಿಯ ಲಾಜಿಯೋ ಎಂಬ ಫುಟ್ಬಾಲ್ ತಂಡದ ಪರವಾಗಿ ಆಡುತ್ತಿದ್ದ. ಆ ತಂಡದ ಪ್ರಮುಖ ಆಟಗಾರರ ಪೈಕಿ ಒಬ್ಬನಾಗಿದ್ದ ಲೂಸಿಯಾನೊ, ಬಿರುಸಿನ ನಿರಂತರ ಓಟಕ್ಕೆ ಹೆಸರುವಾಸಿಯಾಗಿದ್ದ. ಮೈದಾನದ ಮಧ್ಯದಿಂದ ಚೆಂಡನ್ನು ಒಬ್ಬನೇ ಬೆನ್ನಟ್ಟಿ, ರಕ್ಷಣೆಯನ್ನು ಭೇದಿಸಿ, ಏಕಾಂಗಿಯಾಗಿ ಗೋಲ್ ತಲುಪಿಸುವ ಅಸಾಧಾರಣ ಸಾಮರ್ಥ್ಯ ಹೊಂದಿದ್ದ. ಆತ ತನ್ನ ತಂಡದ ಪ್ರಮುಖ ಮಿಡ್ ಫೀಲ್ಡರ್ ಕೂಡ ಆಗಿದ್ದ. ವಿಶಿಷ್ಟ ಕೇಶವಿನ್ಯಾಸದಿಂದ 'ದಿ ಬ್ಲಾಂಡ್ ಏಂಜಲ್' ಎಂದು ಕರೆಯಿಸಿಕೊಂಡಿದ್ದ. ಆತ ಮಹಾ ವಾಚಾಳಿ ಮತ್ತು ಹಾಸ್ಯ ಸ್ವಭಾವದವನಾಗಿದ್ದ. ಎದುರಾಳಿ ಆಟಗಾರ ಕುಪಿತನಾದಾಗ, ಒಂದು ಹಾಸ್ಯೋಕ್ತಿ, ಚಟಾಕಿ ಸಿಡಿಸಿ ವಾತಾವರಣ ತಿಳಿಗೊಳಿಸುತ್ತಿದ್ದ ಅಥವಾ ನಗೆಯುಕ್ಕಿಸುತ್ತಿದ್ದ. ಹೀಗಾಗಿ ಆತ ಆಟಗಾರರು ಮತ್ತು ಅಭಿಮಾನಿಗಳ ಮಧ್ಯೆ ಜನಪ್ರಿಯನಾಗಿದ್ದ. ಒಮ್ಮೆ ಆತ ತನ್ನ ತಂಡದ ಸಹ ಆಟಗಾರನ ಜತೆ ರೋಮ್ ನಗರದಲ್ಲಿರುವ ಪ್ರಸಿದ್ಧ ಆಭರಣ ಮಳಿಗೆಗೆ ಹೋದ. ಹಾಗಂತ ಆಭರಣವನ್ನು ಖರೀದಿಸುವುದು ಅವರ ಉದ್ದೇಶವಾಗಿರಲಿಲ್ಲ. ಸಾಯಂಕಾಲವಾಗುವ ತನಕ ಕಾಲಕ್ಷೇಪ ಮಾಡಬೇಕಿತ್ತು. ತಮಾಷೆ ಪ್ರವೃತ್ತಿಯವನಾದ ಲೂಸಿಯಾನೊ, ಆ ಆಭರಣ ಮಳಿಗೆಯಲ್ಲಿ, ತನ್ನ ಜಾಕೆಟನ್ನು ಮುಖಕ್ಕೆ ಎಳೆದುಕೊಂಡು, 'ಹ್ಯಾಂಡ್ಸಪ್! ಕದಲಿದರೆ ಹುಷಾರ್! ನಾವು ನಿಮ್ಮ ಮಳಿಗೆಯನ್ನು ದೋಚಲು ಬಂದಿದ್ದೇವೆ' ಎಂದು ಜೋರಾಗಿ ಕೂಗಿದ. ಅದಕ್ಕಿಂತ ಒಂದು ವಾರ ಮುನ್ನ, ಅದೇ ಆಭರಣ ಮಳಿಗೆ ಮೇಲೆ ದರೋಡೆಕೋರರು ದಾಳಿ ಮಾಡಿ ಆಭರಣಗಳನ್ನು ದೋಚಿ ಪರಾರಿಯಾಗಿದ್ದರು. ಆ ಘಟನೆ ಮರೆಯುವ ಮೊದಲೇ ಮತ್ತೊಂದು ಅಂಥದೇ ಘಟನೆ. ಆ ಮಳಿಗೆಯ ಮಾಲೀಕ ಕಂಗಾಲಾಗಿ ಹೋದ. ತಕ್ಷಣ ಜಾಗೃತನಾದ ಆತ ಪಿಸ್ತೂಲ್ ಹೊರತೆಗೆದ. ಇದನ್ನು ಗಮನಿಸಿದ ಲೂಸಿಯಾನೊ ಸ್ನೇಹಿತ, ಎರಡೂ ಕೈಗಳನ್ನು ಮೇಲಕ್ಕೆತ್ತಿ ಶರಣಾಗತಿ ಸೂಚನೆ ನೀಡಿದ. ಆದರೆ ಲೂಸಿಯಾನೊ ಮಾತ್ರ ತನ್ನ ಮಂಗಾಟ ಮುಂದುವರಿಸಿದ. ಇದರಿಂದ ತಲೆಕೆಟ್ಟ ಆ ಮಳಿಗೆಯ ಮಾಲೀಕ, ಲೂಸಿಯಾನೊ ಸನಿಹ ಧಾವಿಸಿದ. 'ಇದು ತಮಾಷೆ! ಇದು ಜೋಕ್!' ಎಂದು ಲೂಸಿಯಾನೊ ಕೂಗಿಕೊಳ್ಳುತ್ತಿರುವುದನ್ನು ಲೆಕ್ಕಿಸದೇ ಆ ಮಳಿಗೆಯ ಮಾಲೀಕ, ಫುಟ್ಬಾಲ್ ಆಟಗಾರನ ಎದೆಗೆ ಸನಿಹದಿಂದ ಗುಂಡು ಹಾರಿಸಿಬಿಟ್ಟ. ಲೂಸಿಯಾನೊ ಅಲ್ಲೇ ಕುಸಿದು ಬಿದ್ದು ಅಸು ನೀಗಿದ. ತಮಾಷೆ ಮಾಡಲು ಹೋದ ಇಪ್ಪತ್ತೊಂಬತ್ತು ವರ್ಷದ ಭರವಸೆಯ ಫುಟ್ಬಾಲ್ ಆಟಗಾರನೊಬ್ಬನ ಬದುಕು ಯಕಃಶ್ಚಿತವಾಗಿ ಕೊನೆಗೊಂಡಿತು.

ಔಷಧವಲ್ಲ, ಇದು ಪ್ರತ್ಯಕ್ಷ ವಿಷ!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ನಮ್ಮ ಪೂರ್ವಜರಿಗೆ, ಕಾಯಿಲೆಗಳು ಏಕೆ ಬರುತ್ತವೆ ಎನ್ನುವುದು ತಿಳಿದಿರಲಿಲ್ಲ. ಆರಂಭದ ದಿನಗಳಲ್ಲಿ ಅವರು, ದೇವರು / ದೆವ್ವಗಳು / ಹಿರಿಯರ ಆತ್ಮಗಳು ಅತೃಪ್ತಗೊಂಡಾಗ, ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಲು ನಾನಾ ಕಾಯಿಲೆಗಳನ್ನು ಶಾಪದ ರೂಪದಲ್ಲಿ ನೀಡುತ್ತಿದ್ದರು ಎಂದು ನಂಬಿದ್ದರು. ಈ ಶಕ್ತಿಗಳನ್ನು ತೃಪ್ತಿಪಡಿಸಲು, ಅವನ್ನು ಮಂತ್ರಗಳ ರೂಪದಲ್ಲಿ ಹಾಡಿ ಹೊಗಳಿದರು. ತಮ್ಮ ಮೇಲೆ ಕರುಣೆ ತೋರುವಂತೆ ಗೋಗರೆದರು. ಅವರ ತೃಪ್ತಿಗಾಗಿ ನರಬಲಿಯನ್ನು ಒಳಗೊಂಡಂತೆ ಎಲ್ಲ ರೀತಿಯ ಪ್ರಾಣಿಗಳನ್ನು ಬಲಿಗೊಟ್ಟರು. ಪ್ರತಿವರ್ಷ ಅವರ ಹೆಸರಿನಲ್ಲಿ ಪೂಜೆ, ಉತ್ಸವ, ಜಾತ್ರೆ ಇತ್ಯಾದಿಗಳನ್ನು ಏರ್ಪಡಿಸಿದರು.

ನಮ್ಮ ಪೂರ್ವಜರು, ಸಡಿಲವಾಗಿ ಹರಡಿದ್ದ ಜನ ಸಮುದಾಯಗಳನ್ನೆಲ್ಲ ಒಗ್ಗೂಡಿಸಿ ಸಂಸ್ಕೃತಿಗಳ ಉಗಮಕ್ಕೆ ಕಾರಣರಾದರು. ನಮ್ಮ ಪೂರ್ವಜರಲ್ಲಿ ಕೆಲವರು ಕಾರ್ಯ-ಕಾರಣಗಳ ಸಂಬಂಧವನ್ನು ಗಮನಿಸಿ, ಚಿಕಿತ್ಸೆಯನ್ನು ನೀಡುವ ಕಲೆಯನ್ನು ಕರಗತಗೊಳಿಸಿಕೊಂಡರು. ಮನುಷ್ಯನಿಗೆ ಬರುವ ಕಾಯಿಲೆಗಳು, ಅವುಗಳ ರೋಗ ಲಕ್ಷಣಗಳು ಹಾಗೂ ಅವು ತಗ್ಗಬಹುದಾದ ವಿವಿಧ ಚಿಕಿತ್ಸೆಗಳ ಬಗ್ಗೆ ಪ್ರಾಥಮಿಕ ಅರಿವನ್ನು ಪ್ರಯೋಗ ಮತ್ತು ತಪ್ಪುಗಳ (ಟ್ರಯಲ್ ಅಂಡ್ ಎರರ್) ಅನುಭವದಿಂದ ಗಳಿಸಿದರು. ಇಂತಹ ಅನುಭವವನ್ನು ಅಂದಿನ ಜಗತ್ತಿನ ಪ್ರಮುಖ ಸಂಸ್ಕೃತಿಗಳಾಗಿದ್ದ ಮೆಸಪೊಟೋಮಿಯನ್, ಈಜಿಪ್ಷಿಯನ್, ಗ್ರೀಕ್, ಭಾರತೀಯ ಮತ್ತು ಚೀನೀ ವೈದ್ಯಕೀಯ ಪದ್ಧತಿಗಳಲ್ಲಿ ನೋಡಬಹುದಾಗಿತ್ತು.

ಗ್ರೀಕರು ಮನುಷ್ಯನ ದೇಹದಲ್ಲಿ ರಕ್ತ, ಕಫ, ಕಪ್ಪು ಪಿತ್ತ ಹಾಗೂ ಹಳದಿ ಪಿತ್ತಗಳಿರುತ್ತವೆ ಎಂದರು. ಇವು ಸಮತೋಲನದಲ್ಲಿದ್ದಾಗ ಆರೋಗ್ಯವಿರುತ್ತದೆ; ಸಮತೋಲನವು ತಪ್ಪಿದಾಗ ಅನಾರೋಗ್ಯವುಂಟಾಗುತ್ತದೆ ಎಂಬ ತೀರ್ಮಾನಕ್ಕೆ ಬಂದರು. ಇದೇ ರೀತಿಯ ತ್ರಿದೋಷ ಸಿದ್ಧಾಂತವನ್ನು ಭಾರತೀಯ ವೈದ್ಯರು ಮಂಡಿಸಿದರು. ವ್ಯಕ್ತಿಗಳ ಪ್ರಕೃತಿಯನ್ನು ವಾತ, ಪಿತ್ತ, ಕಫಗಳೆಂದು ವರ್ಗೀಕರಿಸಬಹುದು. ಈ ದೋಷಗಳ ವೈಪರೀತ್ಯದಿಂದ ಕಾಯಿಲೆಗಳು ಬರುತ್ತವೆ; ದೋಷಗಳನ್ನು ಸರಿಪಡಿಸಿದಾಗ ಕಾಯಿಲೆಗಳು ಗುಣವಾಗುತ್ತವೆ ಎಂಬುದು ಈ ಸಿದ್ಧಾಂತದ ತಿರುಳು. ಇದೇ ರೀತಿಯಲ್ಲಿ ಚೀನೀ ಪದ್ಧತಿಯ ವೈದ್ಯರು ನಮ್ಮ ಶರೀರದಲ್ಲಿ ಯಿನ್ ಮತ್ತು ಯಾಂಗ್ ಎಂಬ ಪ್ರಾಕೃತಿಕ ಶಕ್ತಿಗಳಿರುತ್ತವೆ. ಅವು ಏರುಪೇರಾದಾಗ ಕಾಯಿಲೆಗಳು ಬರುತ್ತವೆ. ಅವುಗಳ ನಡುವೆ ಸಮತೋಲನವನ್ನು ಸಾಧಿಸುವುದೇ ಚಿಕಿತ್ಸೆಯ ಗುರಿ ಎಂದರು.

ನಮ್ಮ ಶರೀರದಲ್ಲಿರುವ ಅಧಿಕ ರಸಗಳನ್ನು ಹೊರಹರಿಸಿ, ಸಮತೋಲನೆಯನ್ನು ಸ್ಥಾಪಿಸಲು ವಿವಿಧ ವಿಧಾನಗಳನ್ನು ಗ್ರೀಕ್ ವೈದ್ಯರು ರೂಪಿಸಿದರು. ಅದಕ್ಕಾಗಿ ಶರೀರದ ಬೆವರು, ಜೊಲ್ಲು, ಕಫ, ಮೂತ್ರ, ಮಲ ಮತ್ತು ರಕ್ತಗಳನ್ನು ನಿಗದಿತ ಪ್ರಮಾಣದಲ್ಲಿ ಹೊರಹರಿಸುವುದರ ಮೂಲಕ ಸಮತೋಲನೆಯನ್ನು ಸ್ಥಾಪಿಸಿದರು. ಅಧಿಕ ಹಾಗೂ ಅಸಹಜ ರಸಗಳನ್ನು ವಿಸರ್ಜಿಸಲು ಕೃತಕ ವಿಧಾನಗಳನ್ನು ರೂಪಿಸಿದರು.

ಮೊದಲನೆಯದು ರಕ್ತ ವಿಮೋಚನ ಅಥವ ಬ್ಲಡ್ ಲೆಟಿಂಗ್. ರಕ್ತನಾಳ ಛೇದನ, ಕಪ್ಪಿಂಗ್ ಹಾಗೂ ಜಿಗಣೆಗಳ ನೆರವಿನಿಂದ ದೋಷಯುಕ್ತ ರಕ್ತವನ್ನು ಹೊರಹರಿಸಿ ಸಮತೋಲನವನ್ನು ಕಾಪಾಡುತ್ತಿದ್ದರು. ಎರಡನೆಯದು ವಿರೇಚನ. ಇಲ್ಲಿ ವಿರೇಚಕಗಳನ್ನು ಪ್ರಯೋಗಿಸುತ್ತಿದ್ದರು. ಕಪ್ಪು ಪಿತ್ತವು ಅಧಿಕವಾಗಿದ್ದರೆ ಕೋಲೋಸಿಂಥ್ ಎಂಬ ಔಷಧಿಯನ್ನು, ಹಳದಿ ಪಿತ್ತವು ಅಧಿಕವಾಗಿದ್ದರೆ ಟಾರ್ಟರ್ ಎಮಿಟಿಕ್ ಎಂಬ ಔಷಧವನ್ನು ನೀಡುತ್ತಿದ್ದರು. ಭೇದಿಯಾಗುತ್ತಿತ್ತು. ವಮನಕಾರಕವನ್ನು ನೀಡಿ ವಾಂತಿಯನ್ನು ಮಾಡಿಸಿ, ಜೊಲ್ಲು, ಕಫ ಮತ್ತು ಜಠರ ರಸಗಳ ಮೂಲಕ ಹೆಚ್ಚುವರಿ ರಸಗಳನ್ನು ಹೊರ ಹರಿಸುತ್ತಿದ್ದರು. ಸಾಮಾನ್ಯವಾಗಿ ವಾಂತಿಯನ್ನು ಮಾಡಿಸಲು ಇಪಿಕಾಕುನ ಎನ್ನುವ ಔಷಧವನ್ನು ನೀಡುತ್ತಿದ್ದರು. ಯಾವ ರಸವನ್ನು ಸಮತೋಲಿಸಬೇಕಾಗಿದೆ ಎನ್ನುವುದನ್ನು ಅನುಸರಿಸಿ ತಣ್ಣೀರಿನ ಸ್ನಾನ ಇಲ್ಲವೇ ಬಿಸಿನೀರಿನ ಸ್ನಾನವನ್ನು ಮಾಡಿಸುತ್ತಿದ್ದರು. ರಕ್ತ ಮತ್ತು ಕಫ ಅಧಿಕವಾಗಿದ್ದಾಗ ವಿಪರೀತ ವ್ಯಾಯಾಮವನ್ನು ಮಾಡಿಸಿ ಬೆವರನ್ನು ಹರಿಸುವುದರ ಮೂಲಕ ಸಮತೋಲನೆಯನ್ನು ಸ್ಥಾಪಿಸುತ್ತಿದ್ದರು. ಪಥ್ಯಾಹಾರವನ್ನು ವಿಧಿಸುತ್ತಿದ್ದರು ಹಾಗೂ ಕೆಲವು ಮೂಲಿಕೆಗಳನ್ನು ಔಷಧಗಳ ರೂಪದಲ್ಲಿ ನೀಡುತ್ತಿದ್ದರು. ನಿದ್ರೆ ಮತ್ತು ದೈನಂದಿನ ಚಟುವಟಿಕೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತಿದ್ದರು.

ಇದು ಗ್ರೀಕ್ ವೈದ್ಯಕೀಯ ಚಿಕಿತ್ಸಾ ಪದ್ಧತಿಯ ಸ್ಥೂಲ ವಿವರಣೆ. ಇಂತಹ ಚಿಕಿತ್ಸೆಯ ಪರಿಣಾಮವನ್ನು ತಿಳಿಯಲು ಅಮೆರಿಕದ ಅಧ್ಯಕ್ಷರಾದ ಜಾರ್ಜ್ ವಾಷಿಂಗ್ಟನ್ ಅವರ ಉದಾಹರಣೆಯನ್ನು ತೆಗೆದುಕೊಳ್ಳೋಣ. ಡಿಸೆಂಬರ್ 14, 1799. ವಾಷಿಂಗ್ಟನ್ ಸಾಯುವುದಕ್ಕೆ ಎರಡು ದಿನಗಳ ಮೊದಲು ಅವರಿಗೆ ಗಂಟಲು ನೋವು ಕಾಣಿಸಿಕೊಂಡಿತು. ಅವರು ಚಳಿಗಾಳಿಯನ್ನು ಓಡಾಡಿ ಥಂಡಿಯನ್ನು ಬರಿಸಿಕೊಂಡಿದ್ದರು. ಅವರ ಗಂಟಲುಪೆಟ್ಟಿಗೆ (ಲಾರಿಂಕ್ಸ್) ಹಾಗೂ ಊರ್ಧ್ವ ಜಿಹ್ವೆ (ಎಪಿಗ್ಲಾಟಿಸ್) ಬ್ಯಾಕ್ಟೀರಿಯ ಸೋಂಕಿಗೆ ಒಳಗಾಗಿ ಉರಿಯೂತಕ್ಕೆ ತುತ್ತಾಗಿತ್ತು. ಜ್ವರ ಕೆಮ್ಮಿನ ಜೊತೆಯಲ್ಲಿ ಉಸಿರಾಟದ ತೊಂದರೆಯಿತ್ತು. ವಾಷಿಂಗ್ಟನ್ ಅವರಿಗೆ ಚಿಕಿತ್ಸೆಯನ್ನು ನೀಡಲು ಡಾ.ಜೇಮ್ಸ್ ಕ್ರೈಕ್, ಡಾ.ಗುಸ್ತಾವಸ್ ರಿಚರ್ಡ್ ಬ್ರೌನ್ ಮತ್ತು ಡಾ.ಎಲೀಷಾ ಕುಲ್ಲೆನ್ ಡಿಕ್ ಬಂದರು. ಇವರೆಲ್ಲ ಸೇರಿಕೊಂಡು ವಾಷಿಂಗ್ಟನ್ ಅವರ ದೇಹದಿಂದ 80 ಔನ್ಸ್ 2365 ಎಂ.ಎಲ್ ರಕ್ತವನ್ನು, ಅಂದರೆ ಶರೀರದಲ್ಲಿದ್ದ ಒಟ್ಟು ರಕ್ತದಲ್ಲಿ ಶೇ.40ರಷ್ಟು ರಕ್ತವನ್ನು, ಅಂದರೆ ಎರಡೂಕಾಲು ಲೀಟರಿಗಿಂತಲೂ ಹೆಚ್ಚಿನ ರಕ್ತವನ್ನು ಹೊರ ಹರಿಸಿದರು. ರಸರೇಚಕ ಅಥವ ಕ್ಯಾಲೋಮೆಲ್ ಅಂದರೆ ಮರ್ಕ್ಯುರಸ್ ಕ್ಲೋರೈಡನ್ನು ನೀಡಿ ವಿರೇಚನ ಮಾಡಿಸಿದರು.



ಕ್ಯಾಲೊಮೆಲ್ ಎನ್ನುವುದು ಉಗ್ರ ಸ್ವರೂಪದ ವಿರೇಚಕ. ಜೊತೆಗೆ ಟಾರ್ಟರ್ ಎಮಿಟಿಕ್ (ಆಂಟಿಮನಿ ಪೊಟಾಷಿಯಂ ಟಾರ್ಟ್ರೇಟ್) ಎಂಬ ವಮನಕಾರಕವನ್ನೂ ನೀಡಿದರು. ಇವೆಲ್ಲವೂ ಸೇರಿ ವಾಷಿಂಗ್ಟನ್ ಅವರ ಗಂಟಲ ನೋವನ್ನು ಗುಣಪಡಿಸುವ ಬದಲು ಅವರನ್ನು ಸದ್ದಿಲ್ಲದಂತೆ ಬಲಿ ತೆಗೆದುಕೊಂಡವು. ಈ ಪ್ರಕರಣವನ್ನು ಕೆಳಕಂಡಂತೆ ವಿಶ್ಲೇಷಿಸಬಹುದು. ಉಗ್ರಸ್ವರೂಪದ ಬ್ಯಾಕ್ಟೀರಿಯ ಸೋಂಕು ಆಗಿತ್ತು.

ಶರೀರದಿಂದ 40% ರಕ್ತವು ಹೊರಹೋಗಿದ್ದ ಕಾರಣ, ಶರೀರಕ್ಕೆ ದೊರೆಯುತ್ತಿದ್ದ ಆಕ್ಸಿಜನ್ ಪ್ರಮಾಣ ಕಡಿಮೆಯಾಗಿತ್ತು. ಕ್ಯಾಲೋಮೆಲ್‌ನಲ್ಲಿದ್ದ ಪಾದರಸ ಹಾಗೂ ಟಾರ್ಟರ್ ಎಮಿಟಿಕ್‌ನಲ್ಲಿದ್ದ ಆಂಟಿಮನಿ ವಿಷವಸ್ತುಗಳು. ಇವು ಅನಿಯಂತ್ರಿತ ವಾಂತಿ ಮತ್ತು ಭೇದಿಗೆ ಕಾರಣವಾಗಿ ತೀವ್ರ ಸ್ವರೂಪದ ನೀರ್ಕಳೆತಕ್ಕೆ (ಡಿ-ಹೈಡ್ರೇಶನ್) ಎಡೆ ಮಾಡಿಕೊಟ್ಟವು. ಅನಿಯಂತ್ರಿತ ಸೋಂಕು ವಾಯುನಾಳದ ದ್ವಾರವನ್ನು ಕಿರಿದಾಗಿಸಿ, ಉಸಿರಾಟವನ್ನು ಮತ್ತಷ್ಟು ದುರ್ಬಲಗೊಳಿಸಿ, ಸಾವಿಗೆ ಕಾರಣವಾಯಿತು.

ಮರ್ಕ್ಯುರಿ ಕ್ಲೋರೈಡ್: ಕನ್ನಡದಲ್ಲಿ ರಸರೇಚಕ ಹಾಗೂ ಇಂಗ್ಲಿಷಿನಲ್ಲಿ ಕ್ಯಾಲೋಮೆಲ್ ಎಂದು ಹೆಸರಾದ ಮರ್ಕ್ಯುರಿ ಕ್ಲೋರೈಡ್ ಒಂದು ಖನಿಜ. ಅರಬ್ ವೈದ್ಯ ಮತ್ತು ದಾರ್ಶನಿಕ ಅಬು ಬಕರ್ ಅಲ್ ರಾಜ಼ಿ ಅಥವ ಅಲ್ ರಾಜೆಸ್ (864-925) ಇದನ್ನು ಮೊದಲ ಬಾರಿಗೆ ವಿವರಿಸಿದ. ರಸವಾದಿಗಳು ಅಥವಾ ಆಲ್ಕೆಮಿಸ್ಟ್ ಇದರ ಗುಣಾವಗುಣಗಳನ್ನು ಕುರಿತು ಅಧ್ಯಯನ ಮಾಡಿದರು. 1608ರಲ್ಲಿ ಆಸ್ವಾಲ್ಡ್ ಕ್ರಾಲ್ (1563-1609) ಇದನ್ನು ಯೂರೋಪಿಯನ್ ವೈದ್ಯರಿಗೆ ಪರಿಚಯವನ್ನು ಮಾಡಿದ. 1655ರಲ್ಲಿ ಥಿಯೋಡೋರ್ ಡಿ ಮೇಯಿನ್ (1563-1609) ಈ ರಾಸಾಯನಿಕಕ್ಕೆ ಕ್ಯಾಲೋಮೆಲ್ ಎಂದು ನಾಮಕರಣವನ್ನು ಮಾಡಿ, ಅದರ ರಾಸಾಯನಿಕ ಸಂಯೋಜನೆಯನ್ನು ಪ್ರಚುರಪಡಿಸಿದ. 1618ರ ಫಾರ್ಮಕೋಪಿಯೇ ಲಂಡೆನ್ಸಿಸ್ - ಲಂಡನ್ನಿನಲ್ಲಿ ಅಧಿಕೃತವಾಗಿ ಮಾರಾಟದಲ್ಲಿರುವ ಔಷಧಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಕೊಡುವ ಪುಸ್ತಕದಲ್ಲಿ- ಕ್ಯಾಲೋಮೆಲ್ ಪ್ರವೇಶವನ್ನು ಪಡೆಯಿತು.

18-19ನೆಯ ಶತಮಾನದ ಯೂರೋಪಿನಲ್ಲಿ ಅಂದರೆ ವಿಕ್ಟೋರಿಯನ್ ಯುಗ ಹಾಗೂ ಅಮೆರಿಕನ್ ಸಿವಿಲ್ ವಾರ್ ಸಮಯದಲ್ಲಿ, ಸರ್ವ ರೋಗಗಳನ್ನು ಗುಣಪಡಿಸುವ ಸಂಜೀವಿನಿ ಎಂಬ ಅಭಿದಾನವು ಕ್ಯಾಲೊಮೆಲ್ಲಿಗೆ ದೊರೆಯಿತು. ಸಿಫಿಲಿಸ್, ಬ್ರಾಂಕೈಟಿಸ್, ಕಾಲರ, ಉಗುರು ಒಳಬೆಳೆತ, ಕೀಲುವಾತಕಿ ಅಥವ ಗೌಟ್, ಕ್ಷಯ ಅಥವ ಟ್ಯುಬರ್ಕ್ಯುಲೋಸಿಸ್, ಇನ್‌ಫ್ಲುಯೆಂಜ, ಟೈಫಾಯ್ಡ್, ಮಂಪ್ಸ್, ಹಲ್ಲು ಮೊಳೆಯುವಿಕೆಗೆ ನೆರವಾಗುವ ಹಲ್ಲುಪುಡಿ, ಕ್ಯಾನ್ಸರ್ ಮುಂತಾದವನ್ನು ಗುಣಪಡಿಸುವ ಶಕ್ತಿಯು ಕ್ಯಾಲೋಮೆಲ್ಲಿಗೆ ಇದೆ ಎಂದು ಎಲ್ಲ ಕಡೆಗೆ ಪ್ರಖ್ಯಾತವಾಯಿತು. ಈ ಅವಧಿಯಲ್ಲಿ ಅಮೆರಿಕದ ವೈದ್ಯ ಮತ್ತು ರಾಜಕಾರಣಿ ಬೆಂಜಮಿನ್ ರಶ್ (1746-1745) ಭಂಡಪ್ರಮಾಣದಲ್ಲಿ (ಹೀರೋಯಿಕ್ ಡೋಸ್) ಕ್ಯಾಲೋಮೆಲ್ಲನ್ನು ನೀಡಲಾರಂಭಿಸಿದ. ಸುಮಾರು 20 ಗ್ರೇನ್ (1.3 ಗ್ರಾಮ್) ಕ್ಯಾಲೋಮೆಲ್ಲನ್ನು ದಿನಕ್ಕೆ ನಾಲ್ಕು ಬಾರಿ ಕೊಟ್ಟ. ರಶ್ ನೀಡುವ ಔಷಧ ಪ್ರಮಾಣವನ್ನು ಸ್ಯಾಮ್ಯುವಲ್ ಕಾರ್ಟ್ರೈಟ್ ಎಂಬ ಬ್ರಿಟಿಶ್ ದಂತವೈದ್ಯನು ಶಿಫಾರಸು ಮಾಡಿದ. ಔಷಧದ ಪ್ರಮಾಣವು ಹೆಚ್ಚಿದಷ್ಟು ಅದು ದೇಹದ ಮೇಲೆ ಹೆಚ್ಚು ಸೌಮ್ಯ ಸ್ವರೂಪದಲ್ಲಿ ವರ್ತಿಸುತ್ತದೆ ಎಂಬ ಅವೈಜ್ಞಾನಿಕ ವಾದವನ್ನು ಮಂಡಿಸಿದ.

ಕ್ಯಾಲೋಮೆಲ್ ಎರಡು ರೂಪದಲ್ಲಿ ದೊರೆಯುತ್ತಿತ್ತು. ನೀಲಿ ಬಣ್ಣದ ಕ್ಯಾಪ್ಸೂಲ್ ಹಾಗೂ ನೀಲಿ ಬಣ್ಣದ ಮುದ್ದೆ. ನೀಲಿ ಬಣ್ಣದ ಕ್ಯಾಪ್ಸೂಲನ್ನು ಜ್ಯೇಷ್ಠಮಧು ಅಥವ ಸಕ್ಕರೆಯ ಜೊತೆಯಲ್ಲಿ ನುಂಗಲು ಕೊಡುತ್ತಿದ್ದರು. ವೈದ್ಯರು ಕ್ಯಾಲೋಮೆಲ್ ಮುದ್ದೆಯಿಂದ ಒಂದಷ್ಟು ಮುರಿದು ನುಂಗಲು ನೀಡುತ್ತಿದ್ದರು. ಡೋಸ್ ಎನ್ನುವ ಪರಿಕಲ್ಪನೆಯೇ ಅವರಿಗೆ ಇರಲಿಲ್ಲ, ವೈದ್ಯರು ತಮ್ಮ ಮನಸ್ಸಿಗೆ ತೋಚಿದಷ್ಟು ಔಷಧವನ್ನು ನೀಡುತ್ತಿದ್ದರು.

1825ರಲ್ಲಿ ಓರ್ವ ಅಜ್ಞಾತ ಕವಿಯು ಕ್ಯಾಲೋಮೆಲ್ ಹಿತಕಾರಿಯೆಂದು ಬಂದಿತು / ಸಾವಿರಾರು ಜನರಿಗೆ ಅನಾಹುತವ ತಂದಿತು / ಸದ್ದಿಲ್ಲದೆ ಕೊಂದಿತು ಅದೆಷ್ಟು ಜನರನ್ನು / ಔಷಧವಲ್ಲ, ತಿಳಿ ಪ್ರತ್ಯಕ್ಷ ವಿಷವೆಂಬುದನ್ನು ಎಂಬ ಕವನವನ್ನು ಬರೆದು ಪ್ರಕಟಿಸಿದ. ಮದರಾಸ್ ಮೆಡಿಕಲ್ ಸರ್ವೀಸಸ್‌ನಲ್ಲಿ ಸರ್ ಜೇಮ್ಸ್ ಆನೆಸ್ಲೆ ಎಂಬ ವೈದ್ಯನಿದ್ದ. 1926ರಲ್ಲಿ ಅವನು ಕ್ಯಾಲೋಮೆಲ್ಲನ್ನು ವಿವಿಧ ಪ್ರಮಾಣದಲ್ಲಿ ನಾಯಿಗಳ ಮೇಲೆ ಪ್ರಯೋಗಿಸಿದ. ಕ್ಯಾಲೋಮೆಲ್ ವಿರೇಚಕವಾಗಿ ಮಾತ್ರ ಕೆಲಸವನ್ನು ಮಾಡುತ್ತದೆ; ಅದನ್ನು ಬಿಟ್ಟು ಉಳಿದ ಯಾವುದೇ ರೋಗಗಳನ್ನು ಗುಣಪಡಿಸುವ ಸಾಮರ್ಥ್ಯವು ಅದಕ್ಕಿಲ್ಲ ಎಂದು ಪ್ರಬಂಧವನ್ನು ಬರೆದು ಪ್ರಕಟಿಸಿದ. ಮಕ್ಕಳಿಗೆ ಹಲ್ಲು ಮೊಳೆಯುವುದು ತಡವಾದಾಗ ಕ್ಯಾಲೋಮೆಲ್ ಹಲ್ಲುಪುಡಿಯನ್ನು ನೀಡುವ ಪದ್ಧತಿಯಿತ್ತು. 1853ರಲ್ಲಿ ಸ್ಯಾಮ್ಯುವಲ್ ಜಾಕ್ಸನ್, ಮಕ್ಕಳ ಮೇಲೆ ಕ್ಯಾಲೋಮೆಲ್ ಬೀರುವ ದುಷ್ಪರಿಣಾಮವನ್ನು ಕುರಿತು ಸಂಶೋಧನೆಯನ್ನು ಮಾಡಿದ. ಕ್ಯಾಲೋಮೆಲ್ ಮಕ್ಕಳ ಚರ್ಮದಲ್ಲಿ ಗ್ಯಾಂಗ್ರಿನ್ ಉಂಟು ಮಾಡುತ್ತದೆ; ವಸಡುಗಳನ್ನು ಸಡಿಲಗೊಳಿಸುತ್ತದೆ. ಬುಡ ಭದ್ರವಿಲ್ಲದ ಹಲ್ಲುಗಳು ಉದುರಿಹೋಗುತ್ತವೆ ಎಂಬ ವಿಚಾರವನ್ನು ಪ್ರಚುರಪಡಿಸಿದ. 1863ರಲ್ಲಿ ವಿಲಿಯಂ ಅಲೆಗ್ಸಾಂಡರ್ ಹ್ಯಾಮಂಡ್ (1828-1900) ಎಂಬ ಅಮೆರಿಕದ ಸರ್ಜನ್ ಜನರಲ್ ಹಾಗೂ ನರವಿಜ್ಞಾನಿಯು ಸೈನ್ಯದಲ್ಲಿ ಕ್ಯಾಲೋಮೆಲ್ಲನ್ನು ಬಳಸುವುದನ್ನು ಸಂಪೂರ್ಣವಾಗಿ ನಿಷೇಧಿಸಿದ.

ಬೆಂಜಮಿನ್ ರಶ್ ನೀಡುತ್ತಿದ್ದ ಭಂಡ ಪ್ರಮಾಣದ ಔಷಧವು ಅಪಾರ ಸಾವು ನೋವಿಗೆ ಎಡೆ ಮಾಡಿಕೊಡುತ್ತಿತ್ತು. ಕ್ಯಾಲೋಮೆಲ್‌ನಲ್ಲಿರುವ ಮರ್ಕ್ಯುರಿ ಅಥವ ಪಾದರಸವು ಮಹಾನ್ ವಿಷವಾಗಿತ್ತು. ಇದು ಹಲ್ಲನ್ನು ಉದುರಿಸಿ, ವಸಡನ್ನು ಕರಗಿಸಿ, ದವಡೆಯಲ್ಲಿ ಗ್ಯಾಂಗ್ರಿನ್ ಉಂಟು ಮಾಡಿ ಇಡೀ ಮೇಲ್ದವಡೆಯನ್ನೇ ನಾಶ ಮಾಡುತ್ತಿತ್ತು. ವಾಂತಿ, ಹೊಟ್ಟೆನೋವು, ರಕ್ತಭೇದಿಯನ್ನುಂಟು ಮಾಡುತ್ತಿತ್ತು. ಭಂಡ ಪ್ರಮಾಣದ ಔಷಧವು ಮೂತ್ರಪಿಂಡಗಳ ವೈಫಲ್ಯಕ್ಕೆ ಕಾರಣವಾಗುತ್ತಿತ್ತು. 20ನೆಯ ಶತಮಾನದ ಆರಂಭದಲ್ಲಿ ಪಾದರಸ ವಿಷ ಲಕ್ಷಣಗಳೆಲ್ಲ ಸ್ಪಷ್ಟವಾದ ಮೇಲೆ, ಕ್ಯಾಲೋಮೆಲ್ಲನ್ನು ಯಾವುದೇ ರೂಪದ ಔಷಧದಲ್ಲಿ ಬಳಸುವುದನ್ನು ವೈದ್ಯ ವಿಜ್ಞಾನವು ನಿಷೇಧಿಸಿತು.

ಓದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ನಿರುದ್ಯೋಗ ಹೆಚ್ಚಿಸಬಹುದು!

ಉದ್ಯೋಗಿಗಳು 14 ತಾಸು ಕೆಲಸ ಮಾಡಬೇಕು ಎಂದು ಇನ್ಫೋಸಿಸ್ ಸಂಸ್ಥೆಯ ನಾರಾಯಣ ಮೂರ್ತಿಯವರು ಪುನರುಚ್ಚರಿಸಿದ್ದಾರೆ. ಅವರಂತಹವರು ನಮ್ಮ ದೇಶವನ್ನು ಸಾಕಷ್ಟು ಎತ್ತರಕ್ಕೆ ಏರಿಸಿದ್ದಾರೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ವಯಸ್ಸಾಗುತ್ತಾ ಬಂದಂತೆ ನಮ್ಮ ಆಲೋಚನೆಗಳೂ ಇನ್ನಷ್ಟು ಮಾಗಬೇಕು. ಎಷ್ಟು ತಾಸೇ ಕೆಲಸ ಮಾಡಲಿ, ಯಾವ ಕ್ಷೇತ್ರವೇ ಆಗಲಿ, ಸ್ವಂತ ಉದ್ಯೋಗವೇ ಆಗಲಿ, ಮಾಡುವ ಕೆಲಸವನ್ನು ನಿಷ್ಠೆಯಿಂದ, ಚುರುಕಿನಿಂದ, ಸಮಯ ವ್ಯರ್ಥ ಮಾಡದೆ ಮಾಡುವುದು ಅಗತ್ಯ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಉದ್ಯೋಗಿಯು ದಿನಕ್ಕೆ 8 ತಾಸು ದುಡಿಯಬೇಕಾದುದು ಸಾಮಾನ್ಯವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲೂ ಚಾಲ್ತಿಯಲ್ಲಿರುವುದು. ಮಾಹಿತಿ ತಂತ್ರಜ್ಞಾನ ಕಂಪನಿಗಳ ಪ್ರವರ್ತಕರು, ಉದ್ಯೋಗಿಗಳು ಕಷ್ಟಪಟ್ಟು ಕೆಲಸ ಮಾಡುವ ಕಾರಣವೇ ಅಲ್ಲವೇ ವರ್ಷದಿಂದ ವರ್ಷಕ್ಕೆ ಅವರ ಲಾಭದ ಗಳಿಕೆಯು ಹೆಚ್ಚುತ್ತಾ ಹೋಗುವುದು. ಇಂತಹ ಕಂಪನಿಗಳು ಒಂದು ಕೋಟಿ ಹೊಸ ಉದ್ಯೋಗಿಗಳನ್ನು ನೇಮಿಸುವ ನಿರ್ಧಾರ ತೆಗೆದುಕೊಂಡರೆ ಸರಿ ಸುಮಾರು ನಾಲ್ಕು ಕೋಟಿ ಕುಟುಂಬದವರ ಜೀವನಮಟ್ಟ ಉತ್ತಮಗೊಳ್ಳುವುದಿಲ್ಲವೇ? ಆಗ ತನ್ನಿಂದ ತಾನಾಗಿಯೇ ಹಲವು ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗಿ ದೇಶವು ಇನ್ನಷ್ಟು ಅಭಿವೃದ್ಧಿಗೊಳ್ಳಲಿದೆ. ಮಾಹಿತಿ ತಂತ್ರಜ್ಞಾನದಲ್ಲಿ ಪದವಿ ಪಡೆದ ಯುವ ಜನಾಂಗ ಸೂಕ್ತ ಕೆಲಸ ಸಿಗದೆ ನಿರುದ್ಯೋಗಿಗಳಾಗಿಯೇ ಉಳಿದೋ, ತಮ್ಮ ಓದಿಗೆ ಸಂಬಂಧಪಡದ ಕ್ಷೇತ್ರಗಳಲ್ಲಿ ಕಡಿಮೆ ಸಂಬಳಕ್ಕಾಗಿ ದುಡಿಯುವ ಹಲವು ಉದಾಹರಣೆಗಳಿವೆ. 14 ತಾಸಿನ ಕೆಲಸ ಎನ್ನುವುದು ಸಾಮಾಜಿಕ ದೌರ್ಜನ್ಯ ಅಷ್ಟೇ ಅಲ್ಲ, ನಿರುದ್ಯೋಗ ಸಮಸ್ಯೆ ಇನ್ನಷ್ಟು ಉಲ್ಬಣಗೊಳಿಸಲು ಕಾರಣವಾದೀತು. ಸರಕಾರ ಇಂತಹ ಕೆಲಸಕ್ಕೆ ಬಾರದ ಸಲಹೆಗಳಿಗೆ, ಆಗ್ರಹಗಳಿಗೆ ಸೊಪ್ಪು ಹಾಕಬಾರದು.

-ಬಿ.ಎನ್.ಭರತ್, ಬೆಂಗಳೂರು

ಸದನದಲ್ಲಿ ಬ್ಯಾಟಿಂಗ್ ತಯಾರಿ!

ತುಮಕೂರು ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಶಂಕುಸ್ಥಾಪನೆ ಮಾಡಿದ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ರಿಕೆಟ್ ಬ್ಯಾಟ್ ಹಿಡಿದು ಬ್ಯಾಟಿಂಗ್ ಮಾಡುತ್ತಿರುವ ಸಚಿತ್ರ ವರದಿ ಪ್ರಕಟವಾಗಿದೆ. ಜೊತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಜಿ. ಪರಮೇಶ್ವರ, ಸಹಕಾರ ಸಚಿವ ಕೆ. ಎನ್. ರಾಜಣ್ಣ ಮೊದಲಾದವರು ಜೊತೆಗಿದ್ದರು. ಇನ್ನು ಕೆಲವೇ ದಿನಗಳಲ್ಲಿ ವಿಧಾನಸಭೆಯ ಅಧಿವೇಶನ ಆರಂಭವಾಗಲಿದೆ. ಮೂಡಾ ಸೇರಿದಂತೆ ಹಲವು ಹಗರಣಗಳ ಕುರಿತು ವಿರೋಧಪಕ್ಷವು ಎಸೆಯುವ ಬೌನ್ಸರ್‌ಗಳನ್ನು ನಾನು ಔಟಾಗದೆ ಹೇಗೆ ಎದುರಿಸಿ ಸಿಕ್ಸರ್‌ಗೆ ಅಟ್ಟುತ್ತೇನೆ ನೋಡಿ ಎಂದು ಪರೋಕ್ಷ ಸಂದೇಶವನ್ನು ವಿರೋಧ ಪಕ್ಷಗಳಿಗೆ ಮುಖ್ಯಮಂತ್ರಿಗಳು ನೀಡುತ್ತಿರಬಹುದೇ? ಇವೆಲ್ಲಾ ಒತ್ತೊಟ್ಟಿಗಿರಲಿ. ಅಧಿವೇಶನದಲ್ಲಿ ವೃಥಾ ಕೂಗಾಟ ಅರಚಾಟಗಳು ಆಗದೆ ಜನಪರ ಕಾಳಜಿಯಿಂದ ಅರ್ಥಪೂರ್ಣ ಚರ್ಚೆ ನಡೆದು ಆದೇಶಗಳು, ತಿದ್ದುಪಡಿಗಳು, ಜನಪರ ಯೋಜನೆಗಳು ಮುಂತಾದವು ಹೊರಹೊಮ್ಮಿ ಅಧಿವೇಶನ ಯಶಸ್ವಿಯಾಗಲಿ. ಆ ಮೂಲಕ ಜನರ ತೆರಿಗೆ ಹಣ ಅಪವ್ಯಯ ಆಗದೆ ಸದ್ಬಳಕೆ ಆಗಲಿ ಎಂಬುದಾಗಿ ನಾವು ನಿರೀಕ್ಷಿಸುತ್ತೇವೆ.

-ಪತ್ತಂಗಿ ಎಸ್ ಮುರಳಿ, ಬೆಂಗಳೂರು

ಪೋಷಕರು ಎಚ್ಚರವಾಗಿರಬೇಕು

ಮೂರು ವರ್ಷದ ಮಗು ಆನ್‌ಲೈನ್ ಅಲ್ಲಿ ಮೋಟರ್ ಕಾರನ್ನು ಆರ್ಡರ್ ಮಾಡಿತ್ತು. ಅದನ್ನು ಕೊಡಲು ಬಂದ ಡೆಲಿವರಿಯವನು ಈ ರೀತಿ ಇನ್ನೊಮ್ಮೆ ಆದರೆ ನಾವು ಪೊಲೀಸರಿಗೆ ತಿಳಿಸುತ್ತೇವೆ ಎಂದು ಪೋಷಕರಿಗೆ ಹೇಳಿದ್ದಾನೆ. ಪೋಷಕರು ಮಕ್ಕಳ ಕೈಗೆ ಮೊಬೈಲ್ ಕೊಡಬೇಡಿ ಏಕೆಂದರೆ ಮಕ್ಕಳ ಮನಸ್ಸು ಬೆಳೆಯಲು ಬಾಧಿಸುತ್ತದೆ. ಮಕ್ಕಳ ಆರೋಗ್ಯಕ್ಕೆ ಹಾನಿ ಉಂಟುಮಾಡುತ್ತದೆ. ಮಕ್ಕಳು ಮೊಬೈಲ್‌ನಲ್ಲಿ ಹೆಚ್ಚು ಸಮಯ ಕಳೆಯುವುದರಿಂದ ಅವರ ಓದು, ಬರವಣಿಗೆ ಮತ್ತು ಆಟದ ಚಟುವಟಿಕೆಗಳು ಪರಿಣಾಮ ಬೀರುತ್ತವೆ. ಮಕ್ಕಳು ಮೊಬೈಲ್‌ನಲ್ಲಿ ಅಪಾಯಕಾರಿ ವಿಷಯಗಳಿಗೆ ಒಡ್ಡಿಕೊಳ್ಳಬಹುದು. ಮಕ್ಕಳ ಬೆಳವಣಿಗೆಗೆ ಸಹಾಯ ಮಾಡಲು ಮೊಬೈಲ್ ಬದಲಿಗೆ ಪುಸ್ತಕಗಳು, ಆಟಗಳು ಮತ್ತು ಸಾಮಾಜಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು. ಕಥೆ, ಕಾದಂಬರಿಗಳನ್ನು ಕೇಳುವ ಮೂಲಕ ಮಕ್ಕಳನ್ನು ಜ್ಞಾನವಂತರನ್ನಾಗಿಸಬಹುದು.

-ಗಂಗಾ ನೀಲಪ್ಪ ಅಮಾತೆಪ್ಪನವರ, ಬಾಗಲಕೋಟ

ಪರಿನಿರ್ವಾಣದ ನೆರಳಲ್ಲಿ ಸಂವಿಧಾನದ ಆತ್ಮ-ಶೋಧ

ತನ್ನಿಮಿತ್ತ

ಡಾ. ಸುಧಾಕರ ಹೊಸಳ್ಳಿ
vveditoped@gmail.com

ಡಿಸೆಂಬರ್ 6, 1956ರಂದು ಭಾರತದ ರತ್ನ ಒಂದು ಇಹಲೋಕ ತ್ಯಜಿಸಿದ ವಿಷಮ ಘಳಿಗೆ, ಭಾರತದ ನೆಲ ಕಳೆದುಕೊಂಡ ಅನರ್ಘ್ಯ ರತ್ನಗಳಲ್ಲಿ ಅಂಬೇಡ್ಕರ್ ಅವರದ್ದು ಮಾಸಿಹೋಗದ ನೆನಪಾಗಿದೆ.

ಬಾಬಾ ಸಾಹೇಬ್ ಅಂಬೇಡ್ಕರರ ಸ್ಮರಣೆ ಎಲ್ಲ ಕಾಲಕ್ಕೂ ಸ್ವೀಕೃತವೇ, ಶೋಷಿತ ಸಮಾಜ ತಂದೆ ಕಳೆದುಕೊಂಡ ಭಾವವನ್ನು ಹೊರಸೂಸಿದರೆ, ಭಾರತಾಂಬೆ ಮಗನನ್ನು ಕಳೆದುಕೊಂಡ ಕರುಳು ಬಳ್ಳಿಯ ಸಂಬಂಧವನ್ನು ತೆರೆದಿಡುತ್ತಾಳೆ.

ಈ ಬಾರಿ 2024 ಡಿಸೆಂಬರ್ 6ರ ಕಾಲಘಟ್ಟದಲ್ಲಿ ಪುನರಾವರ್ತಿತ ನಡವಳಿಕೆಗಳ, ಸಂಪ್ರದಾಯಗಳ ಜೊತೆಗೆ ಪ್ರಸ್ತುತ ಮಹಾ ಪರಿನಿರ್ವಾಣ ದಿನವೂ ಪ್ರಜ್ಞಾವಂತ ಭಾರತೀಯರಲ್ಲಿ ಹೊಸದೊಂದು ಹೊಣೆಗಾರಿಕೆಯನ್ನು ಸೃಜಿಸಿದೆ. ಅದು ಸಂವಿಧಾನಕ್ಕೆ 75 ತುಂಬಿದ ಹೊತ್ತು. ಮಹಾ ಪರಿನಿರ್ವಾಣದ ನೆಲೆಗಟ್ಟು ಸಂವಿಧಾನ ರಚನಕಾರರ, ಸಂವಿಧಾನ ಶಿಲ್ಪಿಯ ಅಂತರಾಳವನ್ನು ಅವಲೋಕಿಸುವ, ಸಮಾಜಕ್ಕೆ ನೈಜವಾಗಿ ಬಗೆದು ತೋರಿಸುವ ತುರ್ತುಂಟು ಮಾಡಿದ ಇಂತಹ ಸಂದರ್ಭದಲ್ಲಿ ಸಂವಿಧಾನ ರಚನೆಯಾಗಿ 75 ವರ್ಷಗಳು ಕಳೆದ ನಂತರವೂ ಸಂವಿಧಾನದ ಕುರಿತು, ಅದರ ಮೂಲಾಂಶಗಳ ಕುರಿತು, ಒಂದಿಷ್ಟು ಗೊಂದಲಗಳು ಇವೆ ಅಥವಾ ಆಗಾಗ ಗೊಂದಲಗಳನ್ನು ಕೃತಕವಾಗಿ ಸೃಜಿಸಲಾಗುತ್ತದೆ.

ಆದ್ದರಿಂದ ಸಂವಿಧಾನ ದಿನಾಚರಣೆಯ ಸ್ಮರಣೆ ಹಾಗೂ ಮಹಾ ಪರಿನಿರ್ವಾಣದ ಹೊತ್ತಿನಲ್ಲಿ ಸಂವಿಧಾನದ ಆತ್ಮ ಏನಾಗಿತ್ತು? ಸಂವಿಧಾನ ರಚನಕಾರರ ಮೂಲ ಉದ್ದೇಶ ಏನು? ಯಾವ ಕೆಲವು ಸಂಗತಿಗಳು ಸಂವಿಧಾನದ ಭಾಗವಾಗಲೇಬೇಕು ಎಂದು ಅಂಬೇಡ್ಕರ್ ಮತ್ತು ಸಂವಿಧಾನ ರಚನಾ ಸಭೆಯ ಸದಸ್ಯರು ಕಟಿಬದ್ಧತೆಯನ್ನು ಹೊಂದಿದ್ದರು ಎಂಬುದರ ಕುರಿತಾಗಿ ಲಿಖಿತ ಅವಲೋಕನದ ಮೂಲಕ ಕೃತಕ ಸೃಷ್ಟಿಯಾಗಬಹುದಾದ ಗೊಂದಲಗಳಿಗೆ ಉತ್ತರರೂಪಕದ ತೆರೆಯಲಿಯಬೇಕಾದದ್ದು ಪ್ರಜ್ಞಾವಂತ ನಾಗರಿಕರ, ಕರ್ತವ್ಯ.

ನಾಲ್ಕು ನವೆಂಬರ್, 1948 ರಂದು ಸಂವಿಧಾನ ರಚನಾ ಸಭೆಯು ಸುದೀರ್ಘ ಚರ್ಚೆ, ವಿಮರ್ಶೆ, ಅವಲೋಕನದ ಮುಖೇನ ರೂಪಿಸಿದ ಕರಡು ಪ್ರತಿಯನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಭೆಯ ಮುಂದೆ ಮಂಡಿಸಿದರು. ಅದೊಂದು ಮಂಡನೆಯನ್ನು ಸೂಕ್ಷ್ಮವಾಗಿ ಅಂತರ್ಗತ ಮಾಡಿಕೊಂಡರೆ ಸಂವಿಧಾನದ ಸದಾಶಯ ಏನೆಂಬುದರ ಅರಿವಾಗುತ್ತದೆ.

ಈ ದೃಷ್ಟಿಯಲ್ಲಿ ಉದಾಹರಿಸಬಹುದಾದ ಕೆಲವು ಮೂಲಾಂಶಗಳೆಂದರೆ.

'ಅಧ್ಯಕ್ಷೀಯ ಮಾದರಿಯ ತಿರಸ್ಕಾರ'': ಅಂಬೇಡ್ಕರರು ಭಾರತಕ್ಕೆ ಅಮೆರಿಕ ಮಾದರಿಯ ಅಧ್ಯಕ್ಷೀಯ ಪದ್ಧತಿಯನ್ನು ನಿರಾಕರಿಸುತ್ತಾ ಅಮೆರಿಕನ್ ಮತ್ತು ಸ್ವಿಜರ್ಲ್ಯಾಂಡ್ ವ್ಯವಸ್ಥೆಗೆ ಹೆಚ್ಚಿನ ಸ್ಥಿರತೆಯನ್ನು ಹೊಂದಿವೆ, ಆದರೂ ಅವುಗಳ ಜವಾಬ್ದಾರಿಯ ಪ್ರಮಾಣ ಕಡಿಮೆ ಇರುತ್ತದೆ ಹಾಗಾಗಿ ಬ್ರಿಟನ್ ಮಾದರಿಯ ಸಂಸದೀಯ ವ್ಯವಸ್ಥೆ ಹೆಚ್ಚಿನ ಜವಾಬ್ದಾರಿ ಬರುವ ಸೂಚಕವಾಗಿದ್ದು ನಾನು ಅದನ್ನು ಅನುಮೋದಿಸುತ್ತೇನೆ ಎಂದಿದ್ದರು.

'ಕೇಂದ್ರಕ್ಕೆ ಪರಮಾಧಿಕಾರ': ಇತ್ತೀಚೆಗೆ ಕೇರಳ ತಾನು ವಿದೇಶಾಂಗ ಅಧಿಕಾರಿಯನ್ನು ನೇಮಕ ಮಾಡಿದ್ದು, ಪಶ್ಚಿಮ ಬಂಗಾಳ ಕೇಂದ್ರದ ವಿರುದ್ಧ ಸೆಡ್ಡು ಹೊಡೆದದ್ದು, ತಮಿಳುನಾಡು ಕೇಂದ್ರದ ಪರಮಾಧಿಕಾರವನ್ನು ಒಪ್ಪುವುದಿಲ್ಲ ಎಂದದ್ದು, ಅನುದಾನದ ತಾರತಮ್ಯದ ಕಾರಣ ನೀಡಿ ಕರ್ನಾಟಕ ಸರಕಾರ ಕೇಂದ್ರದ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಮೆಟ್ಟಿಲೇರಿದ್ದು ಅರಿವಿಗಿರುವ ವಿಷಯ ವಸ್ತು, ಚಿಂತಕ ಬ್ರೈಸ್ ಅವರ ಹೇಳಿಕೆಯನ್ನು ಉದಾಹರಿಸುತ್ತಾ ಅಮೆರಿಕದಲ್ಲಿರುವ ಯಾವುದೇ ರಾಜ್ಯ ಸ್ವತಂತ್ರವಾಗಿ ತನ್ನ ಸಂವಿಧಾನವನ್ನು ಬದಲಿಸಬಹುದು ಆದರೆ ಭಾರತದ ಯಾವುದೇ ರಾಜ್ಯವು ಎಂತದ್ದೇ ಸಂದರ್ಭದಲ್ಲಿ ಇಂತಹ ಅವಕಾಶವನ್ನು ಹೊಂದಲು ಸಾಧ್ಯವೇ ಇಲ್ಲ, ಸಂವಿಧಾನವನ್ನು ರೂಪಿಸುವಾಗ ಸಂಯುಕ್ತ ವ್ಯವಸ್ಥೆಯ ಮಾದರಿಯಲ್ಲಿ ಸಂರಕ್ಷಿಸಿದ್ದರು ಕಾಲ ಮತ್ತು ಸಂದರ್ಭದಲ್ಲಿ ಅನುಗುಣವಾಗಿ ಭಾರತ ಏಕಾತ್ಮಕ ಸರ್ಕಾರದ ಮಾದರಿಯಲ್ಲಿ ಅಧಿಕಾರ ಚಲಾಯಿಸಲು ಅವಕಾಶವನ್ನು ಕಲ್ಪಿಸಲಾಗಿದೆ ಎಂಬ ಕಠಿಣ ನಿಲುವು ಮತ್ತು ಸಂದೇಶವನ್ನು ಅಂಬೇಡ್ಕರರು ವ್ಯಕ್ತಪಡಿಸಿದ್ದರು.

'ಸಂವಿಧಾನ ಎಂದರೆ ಎರವಲು ಮಾತ್ರವಲ್ಲ': ಕರಡು ಸಂವಿಧಾನವು ಆಸ್ಟ್ರೇಲಿಯಾದ ಸಂವಿಧಾನವನ್ನು ಅನುಸರಿಸಿದೆ ಅಥವಾ ಅತಿಯಾಗಿ ಅದನ್ನು ಅನುಸರಿಸಿದೆ ಎಂದಷ್ಟೇ ಹೇಳಿದರೆ ಸಾಲದು, ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಂಯುಕ್ತ ಆಡಳಿತ ವ್ಯವಸ್ಥೆಯಲ್ಲಿ ಸಹಜವಾಗಿಯೇ ಇರುವ ಅನನ್ಯತೆ ಹಾಗೂ ಅತಿ ಸೂತ್ರ ನಿಷ್ಠೆಯನ್ನು ಮೀರಲು ನಮ್ಮ ಕರಡು ಸಂವಿಧಾನವು ಹಲವು ಹೊಸ ಮಾರ್ಗಗಳನ್ನು ಅನುಸರಿಸಿದೆ ಮತ್ತು ಇವು ಅತಿ ವಿಶಿಷ್ಟವಾಗಿದೆ ಈಗಾಗಲೇ ರೂಪಿತವಾಗಿರುವ ಜಾಗತಿಕ ಸಂವಿಧಾನದ ಚೌಕಟ್ಟನ್ನು ಅಭ್ಯಾಸ ಮಾಡುವುದು ಹೊಸ ಸಂವಿಧಾನ ರಚನೆಯ ಆದ್ಯ ಕರ್ತವ್ಯವೇ ಆಗಿದೆ ಹಾಗಾಗಿ ಕೆಲವು ಅಂಶಗಳನ್ನು ವಿವಿಧ ದೇಶಗಳ ಸಂವಿಧಾನದಿಂದ ಎರವಲು ಪಡೆಯಲಾಗಿದೆ ಹಾಗಂತ ಮಾತ್ರಕ್ಕೆ ಭಾರತ ಸಂವಿಧಾನದಲ್ಲಿ ಸ್ವತಂತ್ರವಾದದ್ದು ಏನೂ ಇಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ ಎಂದು ಸದನದ ಗಮನಕ್ಕೆ ತಂದಿದ್ದರು 2019ರಲ್ಲಿ ಸಿಂಗಪುರ ಸಂವಿಧಾನ ಭಾರತ ಸಂವಿಧಾನದಲ್ಲಿನ ಬೇಸಿಕ್ ಸ್ಟ್ರಕ್ಚರ್ ನಿಯಮವನ್ನು ತನ್ನ ಸಂವಿಧಾನಕ್ಕೆ ಯಥಾವತ್ತಾಗಿ ಅಳವಡಿಸಿಕೊಂಡಿರುವುದನ್ನು ಗಮನಿಸಬಹುದು.

'ಸಂವಿಧಾನ ತಿದ್ದುಪಡಿ': ಕಾಲಕಾಲಕ್ಕೆ ಎದುರಾಗಬಹುದಾದ ಹೊಸ ನಿರೀಕ್ಷೆಗಳಿಗೆ ಅನುಗುಣವಾಗಿ 368ನೇ ವಿಧಿಯ ಅಡಿಯಲ್ಲಿ ಭಾರತ ಸಂವಿಧಾನವನ್ನು ತಿದ್ದುಪಡಿ ಮಾಡಬಹುದು ಮತ್ತು ತಿದ್ದುಪಡಿ ಮಾಡಲೇಬೇಕು, ಆಗ ಮಾತ್ರ ಸಂವಿಧಾನ ತನ್ನ ಮಹತ್ವವನ್ನು ಉಳಿಸಿಕೊಂಡು ಹೋಗಲು ಸಾಧ್ಯ ಎಂದು ಅಭಿಪ್ರಾಯಪಟ್ಟಿದ್ದಾರೆ, ಆದಾಗಿಯೂ ಹಾಗಾಗ ಸಂವಿಧಾನ ಬದಲಾವಣೆ ಮತ್ತು ಸಂವಿಧಾನ ತಿದ್ದುಪಡಿಯ ನಡುವೆ ಅನಗತ್ಯ ಗೊಂದಲ ಸೃಷ್ಟಿಯಾಗುವುದನ್ನು ಗಮನಿಸಲಾಗಿದೆ.

'ಮುಸ್ಲಿಂ ಲೀಗ್ ಬಾರದಿದ್ದರೂ ಸಂವಿಧಾನ ರಚನೆಯಾಗಲೇಬೇಕು': 17 ಡಿಸೆಂಬರ್ 1946 ರಂದು ಡಾ.ಜೈಕರ್ ಅವರು ಮುಸ್ಲಿಂ ಲೀಗ್ ಬರೋವರೆಗೂ ಸಂವಿಧಾನ ರಚನೆಯ ಕಾರ್ಯವನ್ನು ಮುಂದೂಡುವಂತೆ ಮಂಡಿಸಿದ್ದ ತಿದ್ದುಪಡಿಯನ್ನು ವಿರೋಧಿಸಿ ಮಾತನಾಡಿದ್ದ ಡಾ. ಶ್ಯಾಮ್ ಪ್ರಸಾದ್ ಮುಖರ್ಜಿ ಈ ತಿದ್ದುಪಡಿ ಮತ್ತು ನಡವಳಿಕೆ ಸಂವಿಧಾನ ರಚನಾ ಸಭೆಯ ಅಂತಿಮ ತೀರ್ಮಾನವನ್ನು ಕುರಿತು ಮುಸ್ಲಿಂ ಲೀಗ್ ನಿರಾಕರಣಾಧಿಕಾರವನ್ನು (ವೀಟೋ) ಚಲಾಯಿಸಬಹುದು ಎಂಬಂತೆ ಮುಸ್ಲಿಂ ಲೀಗ್ ಪ್ರೋತ್ಸಾಹ ಕೊಡುವಂತಿದೆ, ಈ ಸಭೆಯ ಭಾವಿ ಚಟುವಟಿಕೆಗಳಿಗೆ ಬೆದರಿಕೆ ಒಡ್ಡುವ ಪ್ರಕ್ರಿಯೆ ಇದಾಗಿದ್ದು ಇದು ಸ್ವೀಕಾರವಲ್ಲ, ಮುಸ್ಲಿಂ ಲೀಗ್ ಬಾರದೇ ಸಂವಿಧಾನ ರಚನಾ ಕಾರ್ಯ ನಿರಂತರವಾಗಿರುತ್ತದೆ ಮತ್ತು ಅದು ನಿರಂತರವಾಗಿ ಸಾಗಬೇಕು ಎಂದು ಸಂವಿಧಾನ ರಚನಾ ಸಭೆಯಲ್ಲಿ ಗುಡುಗಿದ್ದರು.

'ಭಾರತ ಒಟ್ಟಾಗುವುದನ್ನು ಜಗತ್ತಿನ ಯಾವ ಶಕ್ತಿಯು ತಡೆಯಲು ಸಾಧ್ಯವಿಲ್ಲ': ತಮಗೆ ಸಂವಿಧಾನ ರಚನಾ ಸಭೆಯಲ್ಲಿ ಮೊದಲು ಮಾತನಾಡಲು ಅವಕಾಶ ಸಿಕ್ಕ ದಿವಸದಂದು ಅಂಬೇಡ್ಕರ್ ರವರು ಇಂದು ನಾವು ರಾಜಕೀಯವಾಗಿ ಆರ್ಥಿಕವಾಗಿ ಸಾಮಾಜಿಕವಾಗಿ ಹೋಳಾಗಿರುವುದು ವಾಸ್ತವವೇ ಆಗಿದ್ದರೂ, ಸಮಯ ಮತ್ತು ಸನ್ನಿವೇಶ ಬಂದಾಗ ಈ ದೇಶ ಒಂದಾಗುವುದನ್ನು



ಜಗತ್ತಿನ ಯಾವ ಶಕ್ತಿಯು ತಡೆಯಲಾರದು, ನಮ್ಮೆಲ್ಲ ಜಾತಿ ಮತಗಳ ನಡುವೆಯೂ ನಾವು ಯಾವುದೋ ಒಂದು ರೂಪದಲ್ಲಿ ಸಂಯುಕ್ತ ಜನಾಂಗವಾಗುತ್ತೇವೆ ಎನ್ನುವುದರಲ್ಲಿ ನನಗೆ ಕಿಂಚಿತ್ತು ಅನಿಶ್ಚಿತತೆ ಇಲ್ಲ ಎಂದು ಐಕ್ಯ ಭಾರತದ ಪ್ರತಿಪಾದನೆ ಮಾಡಿದ್ದರು.

'ಪ್ರಸ್ತಾವನೆಯಲ್ಲಿ ಭಾರತೀಯರಾದ ನಾವು ಅವಳ ಪ್ರಜೆಗಳು ಎಂದು ಸಂಬೋಧಿಸಬೇಕೆಂಬ ಆಗ್ರಹ': 17 ಅಕ್ಟೋಬರ್ 1949 ರಂದು ಎಚ್.ವಿ.ಕಾಮತ್ ಅವರು ನಾನು ಪ್ರಸ್ತಾವನೆಯ ಮೂಲ ಪಟ್ಟಿದೊಡನೆ ಸ್ವಲ್ಪ ಸ್ವಾತಂತ್ರ್ಯವನ್ನು ವಹಿಸಿದ್ದೇನೆ. ನಾನು ತಿಳಿಸಿದ ರೀತಿ 1946ರ ಡಿಸೆಂಬರ್‌ನಲ್ಲಿ ನೆಹರುರವರು ಮಂಡಿಸಿದ ಗಣರಾಜ್ಯ ನಿರ್ಣಯದಲ್ಲಿ ಅವಳ ಭವಿಷ್ಯದ ಆಡಳಿತ ಎಂಬ ಪದಗಳನ್ನು ಉಪಯೋಗಿಸಿದ್ದಾರೆ ತಾಯಿನಾಡಿಗೆ ಅವಳು ಎಂಬುದು ತಕ್ಕ ಪದ, ಈಗಿರುವಾಗ ಪ್ರಸ್ತಾವನೆಯಲ್ಲಿ ನಾವು ಅವಳ ಪ್ರಜೆಗಳು ಎಂದು ಹೇಳಬೇಕೆ ಹೊರತು ಅದರ ಪ್ರಜೆಗಳು ಎಂದಲ್ಲ, ಸಂವಿಧಾನ ಸಭೆಯ ಈ ಘನತೆಯುಳ್ಳ ಸದನದಲ್ಲಿ ಭಗವದ್ಗೀತೆಯ ಸ್ಫೂರ್ತಿ ಉಲ್ಲಾಸದಲ್ಲಿ ನಾವು ಈ ಸಂವಿಧಾನವನ್ನು ಶ್ರದ್ಧಾಯುಕ್ತ ವಾಗಿ ದೇವರಿಗೆ ನಿವೇದಿಸಿ ಸಮರ್ಥಿಸೋಣ ಎಂದು ಅಗ್ರಹ ಮಾಡಿದ್ದರು.

ಅಂಬೇಡ್ಕರನ್ನು ಸೇರಿದಂತೆ ಸಂವಿಧಾನ ರಚನಾ ಸಭೆಯ ಅನೇಕ ಸದಸ್ಯರು ಭವಿಷ್ಯ ಭಾರತಕ್ಕಾಗಿ ರಚನೆಯಾಗುವ ಸಂವಿಧಾನ ಪರಕೀಯತೆ ತೊಡೆದು ಹಾಕಿ, ಭಾರತೀಯತೆಯ ಗುಣ ವಿಶೇಷಗಳನ್ನು, ನೆಲ ಧರ್ಮದ ಪರಂಪರೆಗಳನ್ನು ಆದರ್ಶವಾಗಿ ಇಟ್ಟುಕೊಂಡು ಅದು ಅಡಿಯಲ್ಲಿ ಬದುಕು ಕಟ್ಟಿಕೊಳ್ಳುವ ಪ್ರತಿಯೊಬ್ಬ ಭಾರತೀಯನಿಗೂ ಭಾರತೀಯತೆಯ ಬಗ್ಗೆ ಹೆಮ್ಮೆ ಮೂಡಿಸುವಂತಿರಬೇಕು, ಸಂವಿಧಾನವು ಭಾರತದ ಐಕ್ಯತೆಯನ್ನೇ ಪ್ರತಿಪಾದಿಸಬೇಕು, ಪ್ರಭಾವಿಸಬೇಕು, ಪ್ರೇರೇಪಿಸಬೇಕು ಎಂಬ ಸದಾಶಯವನ್ನು ಹೊಂದಿದ್ದರು.

ವಸ್ತು ಸ್ಥಿತಿ ಮತ್ತು ಶೋಧಿತ ಸತ್ಯ ಹೀಗಿದ್ದರೂ, ಭಾರತವನ್ನು ವಿಘಟಿಸುವ, ಭಾರತೀಯತೆಯನ್ನು ಕೀಳಾಗಿ ಕಾಣುವ ಆಲೋಚನೆಗಳ ಜೊತೆ ಸಂವಿಧಾನವನ್ನು ಅದರ ನಿಯಮಗಳನ್ನು ಸಮೀಕರಿಸುವ ಪ್ರಯತ್ನ ಸಾಗುತ್ತಲೇ ಬಂದಿದೆ, ಈ ಹಿನ್ನೆಲೆಯಲ್ಲಿ ಸಂವಿಧಾನ ರಚನೆಯ ಕಾಲಘಟ್ಟದಲ್ಲಿ ನಡೆದ ಚರ್ಚೆಗಳು ಹಾಗೂ ಒತ್ತಿದ ಅಂತಿಮ ಮುದ್ರೆಯ ಬಗ್ಗೆ ಸಂಶೋಧನಾತ್ಮಕವಾಗಿ ಅಭ್ಯಾಸ ಮಾಡುವ ಮೂಲಕ ಸದರಿ ಸಂಗತಿಗಳಿಗೆ ಉತ್ತರವನ್ನು ನೀಡಬಹುದು ಹಾಗೂ ಸಂವಿಧಾನ, ಅಂಬೇಡ್ಕರ್ ಶ್ರೇಷ್ಠತೆಯನ್ನು ಪೀಳಿಗೆಯಿಂದ ಪೀಳಿಗೆಗೆ ಪ್ರಸರಿಸುತ್ತ ಸಾಗಬಹುದು.

ಆ ಮೂಲಕ ದೇಶ ತುಂಡು ಮಾಡುವ ಯಾವುದೇ ನಡವಳಿಕೆಗಳಿಗೆ ಸಂವಿಧಾನ ಮತ್ತು ಸಂವಿಧಾನ ರಚನಾಕಾರರು ಅವಕಾಶ ನೀಡಿರಲಿಲ್ಲ ಎಂಬ ಸಾರ್ವತ್ರಿಕ ತತ್ವವನ್ನು ಸಾರಲು ಬಹುದು. ಇಂತಹ ತೌಲನಿಕ ಸಂಶೋಧನೆ ಅವಲೋಕನ ವಿಮರ್ಶೆ ಸಮಾಜವನ್ನು ಅಸ್ಥಿರಗೊಳಿಸಲು, ವಿಘಟನಾ ಕಾರ್ಯದ ಅಜೆಂಡಾ ಇಟ್ಟುಕೊಂಡವರಿಗೆ, ನಿಜ ರಾಷ್ಟ್ರೀಯವಾದಿಯ ಹೃದಯ ಕಿರಣಗಳನ್ನು ಭಾರತೀಯ ಯುವ ಸಮಾಜಕ್ಕೆ ಹೊಕ್ಕಿಸುವ ಮುಖಾಂತರ ಈ ನೆಲದ ವಿರೋಧಿಗಳ ಖಾಯಿಲೆಗೆ ಮದ್ದು ನೀಡಬಹುದು ಈ ಮೂಲಕ ಸಂವಿಧಾನವನ್ನು, ಅಂಬೇಡ್ಕರ್ ಅವರ ಆಶಯವನ್ನು ಸಾಣೆ ಹಿಡಿದಂತೆ ಹೊಳಪಿಸಬಹುದು.

(ಲೇಖಕರು: ಹವ್ಯಾಸಿ ಬರಹಗಾರರು)

ಭಟ್ಟರ್ ಸ್ಕಾಚ್

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಮನೆ ಬಳಿ ಮಂಗ ಬಂದ್ರೆ ಜನ ವಿಚಿತ್ರ ಚೇಷ್ಟೆ ಮಾಡ್ತಾರಲ್ಲ?
- **ಕುಲಬಾಂಧವರು ಆಗಮಿಸಿದಾಗ ಅಷ್ಟೂ ಮಾಡದಿದ್ದರೆ ಹೇಗೆ?!**

- **ಕೆ.ವಿ.ರೆಡ್ಡಿ, ಕೋರಮಂಗಲ**
ಭಟ್ರೇ, ಟ್ರಂಪ್ ಗೆದ್ದಿದ್ದಕ್ಕೆ ನೀವು ಪಾರ್ಟಿ ಕೊಡಲಿಲ್ಲ ಏಕೆ?
- **ಆತ ಗೆದ್ದರೆ ಪಾರ್ಟಿ ಕೊಡ್ತೇನೆ ಅಂತ ನಾನು ಹೇಳಿದ್ನಾ?!**

- **ಸಿರಿ, ಮೈಸೂರು**
ಭಟ್ರೇ, ಕನ್ನಡ ಸಾಹಿತ್ಯ ಬರಿದಾಗುತ್ತಿದೆ ಅಂತ ಅನಿಸುವುದಿಲ್ಲವಾ?
- **ಹುಡುಗಿಯರೆಲ್ಲ ಪ್ರೇಮಪತ್ರ ಮತ್ತು ಪ್ರೇಮಕಾವ್ಯ ಬರೆಯದಿದ್ದರೆ ಇನ್ನೇನಾಗುತ್ತದೆ?!**

- **ಸಿ.ಆರ್. ಗೋವಿಂದಯ್ಯ, ಕನ್ನಮಂಗಲ**
ಭಟ್ರೇ, ಮಲಗಿದ ಸಿಂಹವನ್ನಾದರೂ ಕೆಣಕಬಹುದು.. ಆದರೆ?
- **ಸುಮ್ಮನಿರುವ ಯತ್ನಾಳ ಅವರನ್ನು ಕೆಣಕಬಾರದು!**

- **ವಿಜೇಶ ಕಾಮತ, ಮಂಗಳೂರು**
ಭಟ್ರೇ, ನನಗೆ ವಯಸ್ಸಾಗುತ್ತಿದ್ದಂತೆ ನನ್ನ ಅಪ್ಪ ಹೇಳಿದ್ದು ನಿಜ ಎಂದು ಅನಿಸುತ್ತಿದೆಯಲ್ಲ?
- **ಈಗ ನಿಮ್ಮ ಮಗನಿಗೆ ನೀವು ಮಾಡಿದ್ದೆಲ್ಲ ತಪ್ಪು ಎಂದು ಅನಿಸುತ್ತಿರಬಹುದಲ್ಲವೇ?!**

- **ವಾದಿರಾಜ, ಬಳ್ಳಾರಿ**
ಭಟ್ರೇ, ಪಾಲಕರ ಮುಖ್ಯವಾದ ಕೆಲಸವೇನು?
- **ಮನೆ-ಮಂದಿಗೆಲ್ಲ ಸದಾ ಉಪದೇಶ ನೀಡುವುದು!**

- **ಸರೋಜಾ ಯಮಕನಮರಡಿ, (ಇಮೇಲ್ ಮೂಲಕ)**
ಭಟ್ರೇ, ಮನುಷ್ಯನ ತಲೆ ದೊಡ್ಡದಾಗಿರಬೇಕು ಅಂತಾರಲ್ಲ?
- **ಶೂ ಒಳಗೆ ಸರಿಯಾಗಿ ಫಿಟ್ ಆಗಬೇಕಲ್ಲ?!**

- **ಕೆ.ಎಲ್.ಸತ್ಯವ್ರತ, ಬೆಂಗಳೂರು**
ಭಟ್ರೇ, ಜೀವನ ಅಂದ್ರೆ ನಿತ್ಯಕರ್ಮ ಅಂತಾರಲ್ಲ?
- **ಹೂಂ.. ಇಂದೊಂದೇ ಅಲ್ಲ, ನಿತ್ಯವೂ ಶೇವ್ ಮಾಡಬೇಕು ಎಂದರ್ಥ!**

- **ರುದ್ರಪ್ಪ ಅಂಗಾರ, ಭಟ್ಕಳ**
ಭಟ್ರೇ, ಒಂದು ಹೊಡೆತವನ್ನು ಸಹಿಸಿಕೊಳ್ಳಬಹುದು ಅಂತ ನನ್ನ ಸ್ನೇಹಿತ ಹೇಳ್ತಾನಲ್ಲ?
- **ಆದರೆ ಅದು ಮಚ್ಚಿನೇಟು ಆಗಿರಬಾರದು ಅಂತ ಹೇಳಬೇಕಿತ್ತು!**

- **ಕೆರೂರು ವಿಶ್ವ, (ಈಮೈಲ್ ಮೂಲಕ)**
ಭಟ್ರೇ, ಮಕ್ಕಳನ್ನು ಬೆಳೆಸುವುದೆಂದರೆ ಅಪರಿಮಿತ ಆನಂದ ಅಂತಾರಲ್ಲ?
- **ಜತೆಗೆ ಅದೊಂದು ಗೆರಿಲ್ಲಾ ಯುದ್ಧವೂ ಹೌದು!**

- **ಕೀರ್ತಿ ಬಿ., (ಇಮೇಲ್ ಮೂಲಕ)**
ಭಟ್ರೇ, ನಿಮ್ಮ ದೃಷ್ಟಿಯಲ್ಲಿ ಅತಿ ದೊಡ್ಡ ಹುದ್ದೆ ಯಾವುದು?
- **ಅಪ್ಪ-ಅಮ್ಮ!**

ಪ್ರಿಯಾಂಕಾ ಮಾತು ಶಾಸನ ಆಗದಿರಲಿ!

ಲೋಕಮತ

ಲೋಕೇಶ್ ಕಾಯರ್ಗ

kaayarga@gmail.com

ಅಂದು ಸೋನಿಯಾ, ಇಂದು ಪ್ರಿಯಾಂಕಾ...

ಅದು 2007ರ ಆರಂಭದ ತಿಂಗಳು. ಗೋವಾ ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿದ್ದ ಕಾಲ. ಗೋವಾ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಕರ್ನಾಟಕಕ್ಕೆ ಒಂದು ಹನಿ ಮಹದಾಯಿ ನೀರು ಸಿಗದಂತೆ ನೋಡಿಕೊಳ್ಳಲಾಗುವುದು ಎಂದು ಹೇಳಲಾಗಿತ್ತು. ಪಕ್ಷದ ಪರವಾಗಿ ಚುನಾವಣೆ ಪ್ರಚಾರಕ್ಕೆ ಬಂದ ಸೋನಿಯಾ ಗಾಂಧಿ ಅವರು, ತಾವು ರಾಷ್ಟ್ರೀಯ ಪಕ್ಷವೊಂದರ ಅಧ್ಯಕ್ಷೆ ಎನ್ನುವುದನ್ನು ಮರೆತು, ''ಕರ್ನಾಟಕಕ್ಕೆ ಮಹದಾಯಿ ನದಿ ನೀರಿನ ತಿರುವಿಗೆ ಅವಕಾಶ ನೀಡಲಾರೆ'' ಎಂದು ಹೇಳಿದ್ದರು. ಮಹದಾಯಿ (ಕಳಸಾ-ಬಂಡೂರಿ) ಕುಡಿಯುವ ನೀರಿನ ಯೋಜನೆಗಾಗಿ ಹಪಹಪಿಸುತ್ತಿರುವ ಉತ್ತರ ಕರ್ನಾಟಕದ ಜನತೆ ಸೋನಿಯಾ ಗಾಂಧಿ ಅವರ ಮಾತನ್ನು ಇಂದಿಗೂ ಬೇಸರದಿಂದ ನೆನಪಿಸಿಕೊಳ್ಳುತ್ತಾರೆ. ಗೊತ್ತಿದ್ದೋ, ಗೊತ್ತಿಲ್ಲದೆಯೋ ಕಾಂಗ್ರೆಸ್ ನಾಯಕಿ ಆಡಿದ ಒಂದು ಮಾತು, ರಾಜ್ಯದ ಕಾಂಗ್ರೆಸ್ ನಾಯಕರಿಗೆ ಆಗಾಗ ಮುಜುಗರವನ್ನುಂಟು ಮಾಡುತ್ತಿದೆ. ಬಿಜೆಪಿ ನಾಯಕರ ಪಾಲಿಗೆ ಈ ಮಾತು ಇಂದಿಗೂ ಟೀಕಾಸ್ತ್ರವಾಗಿ ಉಳಿದಿದೆ.

ಇದೀಗ ಇಂಥದ್ದೇ ಸನ್ನಿವೇಶ ಮತ್ತೊಮ್ಮೆ ಎದುರಾಗಿದೆ. ವಯನಾಡು ಕ್ಷೇತ್ರದಿಂದ ಸಂಸದೆಯಾಗಿ ಆಯ್ಕೆಯಾಗಿರುವ ಸೋನಿಯಾ ಗಾಂಧಿ ಪುತ್ರಿ ಪ್ರಿಯಾಂಕಾ ಗಾಂಧಿ ವಾಡ್ರಾ ಅವರು, ಗುಂಡ್ಲುಪೇಟೆ-ಸುಲ್ತಾನ್ ಬತ್ತೇರಿ, ಎಚ್.ಡಿ. ಕೋಟೆ-ಅಂತರ ಸಂತೆ-ಮಾನಂದವಾಡಿ, ಬಂಡೀಪುರ- ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿ ವೇಳೆ ವಾಹನ ಸಂಚಾರಕ್ಕೆ ಅವಕಾಶ ಕೊಡಿಸುತ್ತೇನೆ ಎಂದು ಅಲ್ಲಿನ ಮತದಾರರಿಗೆ ಗಟ್ಟಿ ಧ್ವನಿಯಲ್ಲಿ ಭರವಸೆ ನೀಡಿದ್ದಾರೆ. ಈ ಮಾರ್ಗದಲ್ಲಿ ರಾತ್ರಿ ವೇಳೆ ಸಂಚರಿಸುವ ವಾಹನಗಳು ನೂರಾರು ವನ್ಯಜೀವಿಗಳನ್ನು ಬಲಿ ತೆಗೆದುಕೊಂಡ ಬಳಿಕ 15 ವರ್ಷಗಳ ಹಿಂದೆ ಕರ್ನಾಟಕ ಸರಕಾರ ರಾತ್ರಿ ವೇಳೆ ಈ ಮಾರ್ಗದಲ್ಲಿ ವಾಹನ ಸಂಚಾರವನ್ನು ನಿಷೇಧಿಸುವ ನಿರ್ಧಾರ ತೆಗೆದುಕೊಂಡಿತ್ತು. ಈ ಆದೇಶವನ್ನು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ಕೂಡ ಎತ್ತಿಹಿಡಿದಿವೆ. ಇಂತಹ ಸೂಕ್ಷ್ಮ ವಿಚಾರದಲ್ಲಿ ಪ್ರಿಯಾಂಕಾ ಗಾಂಧಿ ಅವರು ರಾಜ್ಯಕ್ಕೆ ಸವಾಲು ಹಾಕುವ ಧಾಟಿಯಲ್ಲಿ ಮಾತನಾಡಿದ್ದಾರೆ.

ಮತದಾನದ ಸಂದರ್ಭದಲ್ಲಿ ಮಾತಿನ ಭರದಲ್ಲಿ ಹತ್ತಾರು ಭರವಸೆಗಳನ್ನು ನೀಡುವುದು ಹೊಸದೇನಲ್ಲ. ಆದರೆ ಸಂಸದೆಯಾಗಿ ಆಯ್ಕೆಯಾದ ಬಳಿಕ ಸಹೋದರ ರಾಹುಲ್ ಗಾಂಧಿ ಜತೆ ಮೊದಲ ಬಾರಿಗೆ ವಯನಾಡಿಗೆ ಭೇಟಿ ನೀಡಿದ ಪ್ರಿಯಾಂಕಾ, ''ಬಂಡೀಪುರ ಹೆದ್ದಾರಿಯಲ್ಲಿ ರಾತ್ರಿ ಸಂಚಾರ ನಿಷೇಧ ವಿಚಾರ ನನಗೆ ಗೊತ್ತು. ಇದರಿಂದ ನಿಮಗೆ ಎಷ್ಟು ಸಮಸ್ಯೆ ಆಗಿದೆ ಎಂದು ನಾನು ಬಲ್ಲೆ. ಈ ವಿಷಯ ನನಗೆ ಬಿಡಿ. ನಿಮ್ಮೆಲ್ಲರ ಪರವಾಗಿ ನಾನು ಹೋರಾಡುತ್ತೇನೆ. ನನ್ನ ಮನೆ, ಕಚೇರಿ ನಿಮಗಾಗಿ ತೆರೆದಿರುತ್ತದೆ. ನಾನು ನಿಮ್ಮನ್ನು ನಿರಾಸೆಗೊಳಿಸಲ್ಲ'' ಎಂದು ಹೇಳಿದ್ದಾರೆ. ಅಂದರೆ, ಈ ಭರವಸೆಯನ್ನು ಪಟ್ಟು ಹಿಡಿದು ಸಾಧಿಸಲು ಪ್ರಿಯಾಂಕಾ ಮುಂದಾಗಲಿದ್ದಾರೆ ಎನ್ನುವುದು ಸ್ಪಷ್ಟ.

ತಮ್ಮ ನಾಯಕಿ ಕರ್ನಾಟಕದ ಪಾಲಿಗೆ ತೀರಾ ಘಾತಕವಾದ ಮಾತು ಆಡಿದ್ದಾರೆಂದು ತಿಳಿದ ಕೂಡಲೇ, ರಾಜ್ಯದ ನಾಯಕರು ವಸ್ತುಸ್ಥಿತಿಯನ್ನು ವಿವರಿಸಿ ಹೇಳಬೇಕಿತ್ತು. ಇದು ಕೇವಲ ರಾಜ್ಯಕ್ಕೆ ಸಂಬಂಧಿಸಿದ ವಿಚಾರವಲ್ಲ, ಅಮೂಲ್ಯ ವನ್ಯ ಸಂಕುಲದ ಸಂರಕ್ಷಣೆಯನ್ನೊಳಗೊಂಡ ಸಂಕೀರ್ಣ ವಿಚಾರ ಎನ್ನುವುದನ್ನು ಮನದಟ್ಟು ಮಾಡಿಕೊಡಬೇಕಿತ್ತು. ಒಂದು ವೇಳೆ ಕರ್ನಾಟಕ ಈ ನಿಟ್ಟಿನಲ್ಲಿ ಮುಂದಡಿ ಇಟ್ಟರೂ ನ್ಯಾಯಾಲಯದಲ್ಲಿ ಸೋಲಾಗುವುದು ಖಚಿತ ಎಂದು ಬಿಡಿಸಿ ಹೇಳಬೇಕಿತ್ತು. ಎಲ್ಲಕ್ಕಿಂತ ಮುಖ್ಯವಾಗಿ 50 ವರ್ಷಗಳ ಹಿಂದೆ ಪ್ರಿಯಾಂಕಾ ಅವರ ಅಜ್ಜಿ, ಇಂದಿರಾಗಾಂಧಿ ಪ್ರಧಾನಿಯಾಗಿದ್ದ ಅವಧಿಯಲ್ಲಿಯೇ ಬಂಡೀಪುರ ಅರಣ್ಯವನ್ನು ಹುಲಿ ಮೀಸಲು ಅರಣ್ಯ ಎಂದು ಘೋಷಿಸಿ ರಕ್ಷಣೆಗೆ ಶ್ರೀಕಾರ ಹಾಕಿದ್ದನ್ನು ತಿಳಿಸಿ ಹೇಳಬೇಕಿತ್ತು.

ಆದರೆ ಪ್ರಚಾರ ಭಾಷಣದ ವೇಳೆ ಪ್ರಿಯಾಂಕಾ ಜತೆ ವೇದಿಕೆ ಹಂಚಿಕೊಂಡಿದ್ದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮ ನಾಯಕಿಯ ಮಾತಿಗೆ ದನಿಗೂಡಿಸಿದರು. ಇದಾದ ಬೆನ್ನಿಗೇ ಗೃಹ ಸಚಿವ ಪರಮೇಶ್ವರ್ ಮತ್ತು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರೂ ಇದನ್ನು ಅನುಮೋದಿಸುವ ಧಾಟಿಯಲ್ಲಿ ಮಾತನಾಡಿದರು. ಅದೃಷ್ಟವಶಾತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ''ಇಂತಹ ಪ್ರಸ್ತಾಪ ಸರಕಾರದ ಮುಂದೆ ಇಲ್ಲ'' ಎಂದು ಹೇಳುವ ಮೂಲಕ ರಾಜ್ಯದ ಜನತೆಯ ಪರವಾಗಿ ನಿಂತರು. ಏನೇ ಇರಲಿ, ಈ ವಿಚಾರ ಸದ್ಯದಲ್ಲಿಯೇ ಮುನ್ನೆಲೆಗೆ ಬರುವುದು ಖಚಿತವಾಗಿದ್ದು, ರಾಜ್ಯ ಕಾಂಗ್ರೆಸ್ ನಾಯಕರು ಪ್ರಿಯಾಂಕಾ ಅವರ ಮಾತನ್ನು ಮೀರುವ ಧೈರ್ಯ ಪ್ರದರ್ಶಿಸಲೇ

ಬೇಕಾಗಿದೆ. ಇಲ್ಲವಾದರೆ ಮಹದಾಯಿ ವಿಚಾರದಲ್ಲಿ ಅಂಟಿಕೊಂಡ ಕಳಂಕ ಬಂಡೀಪುರದ ವಿಚಾರದಲ್ಲೂ ತಟ್ಟುವುದು ನಿಶ್ಚಿತ.

ರಾತ್ರಿ ಸಂಚಾರ ನಿಷೇಧ ಏಕೆ ?

ರಾಜ್ಯದಿಂದ ಬಂಡೀಪುರ ಮತ್ತು ನಾಗರಹೊಳೆ ಅಭಯಾರಣ್ಯ ಮಾರ್ಗವಾಗಿ ಕೇರಳ ಮತ್ತು ತಮಿಳುನಾಡಿಗೆ ಸಾಗಲು ಹಲವು ಮಾರ್ಗಗಳಿವೆ. ಗುಂಡ್ಲುಪೇಟೆ, ಬಂಡೀಪುರದಿಂದ ಮದುಮಲೈ ಮಾರ್ಗವಾಗಿ ಊಟಿ ಮತ್ತು ಸೇಲಂ ಕಡೆಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 67 ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಮುಖ್ಯ ಕೊಂಡಿ. ಗುಂಡ್ಲುಪೇಟೆ ಭಾಗದಿಂದ ಕೇರಳದ ಸುಲ್ತಾನ್ ಬತ್ತೇರಿ ಕಡೆಗೆ ಸಾಗುವ ರಾಷ್ಟ್ರೀಯ ಹೆದ್ದಾರಿ 766 ಮತ್ತು ಎಚ್.ಡಿ. ಕೋಟೆ, ನಾಗರಹೊಳೆ, ಬಾವಲಿ ಮಾರ್ಗವಾಗಿ ಮಾನಂದವಾಡಿಗೆ ಸೇರುವ ರಾಷ್ಟ್ರೀಯ ಹೆದ್ದಾರಿ ಇವುಗಳಲ್ಲಿ ಪ್ರಮುಖವಾದವುಗಳು.

ಹುಲಿ, ಆನೆ, ಕಾಡೆಮ್ಮೆ ಸೇರಿದಂತೆ ಹತ್ತಾರು ಪ್ರಾಣಿಗಳು ಅಪಘಾತದಿಂದ ಸಾವನ್ನಪ್ಪುತ್ತಿರುವ ಹಿನ್ನೆಲೆಯಲ್ಲಿ 2009ರಲ್ಲಿ ಚಾಮರಾಜನಗರ ಜಿಲ್ಲಾಡಳಿತ ಬಂಡೀಪುರ ಅಭಯಾರಣ್ಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾತ್ರಿ 9 ರಿಂದ ಬೆಳಗ್ಗೆ 6 ಗಂಟೆಯವರೆಗೆ ವಾಹನ ಸಂಚಾರವನ್ನು ನಿಷೇಧಿಸಿ ಆದೇಶ ಹೊರಡಿಸಿತ್ತು.

ರಾತ್ರಿ ಸಂಚಾರ ನಿಷೇಧಕ್ಕೂ ಮುನ್ನ 2004-09ರ ಅವಧಿಯಲ್ಲಿ ಈ ಅರಣ್ಯ ಪ್ರದೇಶದಲ್ಲಿ 86 ಪ್ರಾಣಿಗಳು ಅಪಘಾತಕ್ಕೆ ಬಲಿಯಾಗಿದ್ದವು. ನಿಷೇಧದ ಬಳಿಕ 2010-18ರ ಅವಧಿಯಲ್ಲಿ ಕೇವಲ 17 ಪ್ರಾಣಿಗಳು ಮೃತಪಟ್ಟಿವೆ. ಅಂದರೆ ರಾತ್ರಿ ವಾಹನ ಸಂಚಾರ ನಿಷೇಧದ ಬಳಿಕ ಅಪಘಾತದಲ್ಲಿ ಸಾಯುವ ಪ್ರಾಣಿಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ಇಷ್ಟರ ನಡುವೆಯೂ 2022ರ ಡಿಸೆಂಬರ್ ತಿಂಗಳಲ್ಲಿ ಟ್ರಕ್ ಡಿಕ್ಕಿ ಹೊಡೆದು ಗರ್ಭಿಣಿ ಆನೆಯೊಂದು ಸಾವನ್ನಪ್ಪಿದ್ದು ದೇಶಾದ್ಯಂತ ಸುದ್ದಿಯಾಗಿತ್ತು.

ಕೇರಳ ಲಾಬಿ

ನಿಷೇಧ ಹೇರಿದ ದಿನದಿಂದಲೇ ಈ ಆದೇಶ ತೆರವಿಗೆ ಕೇರಳ ಸರಕಾರ ಪ್ರಯತ್ನಿಸುತ್ತಲೇ ಇದೆ. ಇದರಿಂದ ವಯನಾಡು ಮತ್ತು ತಲಶ್ಶೇರಿ ಭಾಗದ ಜನತೆಗೆ ತೊಂದರೆಯಾಗುತ್ತಿದೆ ಎನ್ನುವುದು ಅಲ್ಲಿನ ಸರಕಾರದ ವಾದ. ಆದರೆ ಈ ಮಾರ್ಗದಲ್ಲಿ ಹಾಲು, ತರಕಾರಿ ಸೇರಿದಂತೆ ಅವಶ್ಯಕ ವಸ್ತುಗಳ ಸಾಗಾಟಕ್ಕೆ ರಾತ್ರಿ ವೇಳೆಯೂ ಅವಕಾಶ ಮಾಡಿಕೊಡಲಾಗಿದೆ. ಮಾತ್ರವಲ್ಲ ಗೋಣಿಕೊಪ್ಪ, ಕುಟ್ಟ ಮಾರ್ಗವಾಗಿ ಕೇರಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ರಾತ್ರಿ ವೇಳೆಯೂ ತೆರೆದಿರುವುದರಿಂದ ಜನರ ಓಡಾಟಕ್ಕೆ ಯಾವುದೇ ಸಮಸ್ಯೆಯಾಗಿಲ್ಲ. ಜನರ ಹೆಸರಿನಲ್ಲಿ ಇಲ್ಲಿನ ಟಿಂಬರ್ ಮಾಫಿಯಾ ನಿಷೇಧ ತೆರವಿಗೆ ಪ್ರಯತ್ನಿಸುತ್ತಿದೆ ಎಂಬ ಮಾತುಗಳು ಸುಳ್ಳಲ್ಲ.

ವಾಹನಗಳ ಸಂಚಾರ ನಿಷೇಧವನ್ನು ಪ್ರಶ್ನಿಸಿ ಈ ಲಾಬಿ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿತ್ತು. ಆದರೆ ಹೈಕೋರ್ಟ್ 2010ರಲ್ಲಿ ರಾತ್ರಿ ನಿಷೇಧ ಆದೇಶವನ್ನು ಎತ್ತಿ ಹಿಡಿದು ಆದೇಶ ನೀಡಿತ್ತು. ಬಳಿಕ ಈ ಆದೇಶವನ್ನು ಪ್ರಶ್ನಿಸಿ ಕೇರಳ ಸರಕಾರ ಸುಪ್ರೀಂ ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಮನವಿಯನ್ನೂ ಸರ್ವೋಚ್ಚ ನ್ಯಾಯಾಲಯ ಪುರಸ್ಕರಿಸಿಲ್ಲ.

ಈ ನಡುವೆ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಕೇರಳದ ಸಚಿವರ ನಿಯೋಗ ಬಂದು ರಾತ್ರಿ ಸಂಚಾರಕ್ಕೆ ಅವಕಾಶ ಕೋರಿತ್ತು. ಅಂದು ಕೇರಳದ ಒತ್ತಡಕ್ಕೆ ಮಣಿಯದ ಸಿದ್ದರಾಮಯ್ಯ ಇಂದು ಪ್ರಿಯಾಂಕಾ ಗಾಂಧಿ ಅವರ ಮಾತಿಗೆ ಓಗೊಟ್ಟು ರಾತ್ರಿ ಸಂಚಾರ ತೆರವು ಮಾಡುವರೇ ಎಂದು ಕಾದು ನೋಡಬೇಕಾಗಿದೆ. ಈ ನಡುವೆ ಕಾಂಗ್ರೆಸ್- ಜೆಡಿಎಸ್ ಸರಕಾರ ಇದ್ದಾಗ ಬಂಡೀಪುರದಲ್ಲಿ ಫ್ಲೈ ಓವರ್ ನಿರ್ಮಾಣದ ಪ್ರಸ್ತಾಪವೂ ಮುನ್ನೆಲೆಗೆ ಬಂದಿತ್ತು. ಆದರೆ ಆರಂಭದಲ್ಲಿಯೇ ತೀವ್ರ ವಿರೋಧ ವ್ಯಕ್ತವಾದ ಕಾರಣ ಈ ಪ್ರಸ್ತಾಪ ಮೂಲೆ ಸೇರಿತ್ತು. ಬಿಜೆಪಿ ಸರಕಾರವಿದ್ದಾಗಲೂ ಈ ಲಾಬಿ ಮುಂದುವರಿದಿತ್ತು.

ವಿಶೇಷ ಎಂದರೆ ಪರ್ಯಾಯ ರಸ್ತೆ ಇರುವ ಹೊರತಾಗಿಯೂ ವಯನಾಡು ಮಾರ್ಗದಲ್ಲಿ ರಾತ್ರಿ ಸಂಚಾರ ತೆರವಿಗೆ ಕೇರಳ ಲಾಬಿ ನಡೆಸುತ್ತಿದೆ. ಆದರೆ ಪರ್ಯಾಯ ರಸ್ತೆಯ ಇಲ್ಲದಿದ್ದರೂ ಊಟಿ ಮಾರ್ಗದಲ್ಲಿ ರಾತ್ರಿ ಸಂಚಾರ ತೆರವಿಗೆ ತಮಿಳುನಾಡು ಕಡೆಯಿಂದ ಈ ತನಕ ಯಾವುದೇ ಮನವಿ ಬಂದಿಲ್ಲ. ಕ್ಷೇತ್ರದ ಸಂಸದೆಯಾಗಿ ಪ್ರಿಯಾಂಕಾ ಗಾಂಧಿ ಆ ಭಾಗದ ಜನರ ಬೇಡಿಕೆಗೆ ಸ್ಪಂದಿಸುವುದರಲ್ಲಿ ಅಚ್ಚರಿಯೇನೂ ಇಲ್ಲ. ಆದರೆ ಹಿಂದೆ ಮುಂದೆ ಯೋಚಿಸದೆ ಪ್ರಿಯಾಂಕಾ ಅವರ ಮಾತನ್ನು ಅನುಮೋದಿಸಿದ ನಮ್ಮ ರಾಜ್ಯದ ನಾಯಕರ ಧೋರಣೆ ಪ್ರಶ್ನಾರ್ಹ. ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿ ಪ್ರಿಯಾಂಕಾ ಅವರ ಅಧ್ಯಕ್ಷತೆಯಲ್ಲಿ ಉಭಯ ರಾಜ್ಯಗಳ ನಾಯಕರ ಸಭೆ ಕರೆದು ಸೂಕ್ತ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಈ ನಾಯಕರು ನಾಗರಹೊಳೆ, ಬಂಡೀಪುರ ಎಂದರೆ 'ಬರೀ ಕಾಡು' ಎಂದು ಭಾವಿಸಿದಂತಿದೆ. ಈ ಅಭಯಾರಣ್ಯದ ಮಹತ್ವ, ವೈಶಿಷ್ಟ್ಯಗಳನ್ನು ಅರಿತ ಯಾವುದೇ ನಾಯಕರು ಈ ಪ್ರಸ್ತಾಪವನ್ನು ಒಪ್ಪುವ ಸಾಧ್ಯತೆ ಇರಲಿಲ್ಲ.

ದೇಶದ ಆಸ್ತಿ

ಬಂಡೀಪುರ, ನಾಗರಹೊಳೆಯ ವನ್ಯಪ್ರಭೇದ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೇರಿದ್ದಲ್ಲ. ಇವು ದೇಶದ ಆಸ್ತಿ. ದೇಶದ ಸಂವಿಧಾನದ ಪ್ರಕಾರವೂ ಇವುಗಳ ರಕ್ಷಣೆ ದೇಶದ ಪ್ರತಿಯೊಬ್ಬರ ನಾಗರಿಕನ ಕರ್ತವ್ಯ. ಬಂಡೀಪುರ, ಗುಂಡ್ಲುಪೇಟೆ ಮತ್ತು ಹೆಡಿಯಾಲ ಸೇರಿ ಮೂರು ಉಪವಿಭಾಗಗಳಲ್ಲಿ ಸುಮಾರು 1,036 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಬಂಡೀಪುರ ಅಭಯಾರಣ್ಯ ರಾಜ್ಯದ ಅತಿದೊಡ್ಡ ರಾಷ್ಟ್ರೀಯ ಅರಣ್ಯ ಮಾತ್ರವಲ್ಲ ದೇಶದ ಅತಿದೊಡ್ಡ ನ್ಯಾಷನಲ್ ಪಾರ್ಕ್‌ಗಳಲ್ಲಿ ಒಂದು. ಯುನೆಸ್ಕೋ 2012ರಲ್ಲಿ ವಿಶ್ವ ಪರಂಪರೆ ತಾಣ ಎಂದು ಗುರುತಿಸಿದ ಪಶ್ಚಿಮ ಘಟ್ಟದ ಅರ್ಧಕ್ಕಿಂತ ಹೆಚ್ಚಿನ ಭಾಗ ನಮ್ಮ ರಾಜ್ಯದ ವ್ಯಾಪ್ತಿಯಲ್ಲಿರುವುದು ಕನ್ನಡಿಗರ ಪಾಲಿನ ಹೆಗ್ಗಳಿಕೆ. ಪಶ್ಚಿಮ ಘಟ್ಟದ ಭಾಗವಾಗಿರುವ ಬಂಡೀಪುರ ಮತ್ತು ನಾಗರಹೊಳೆ ಅರಣ್ಯದಲ್ಲಿ ಅಳಿವಿನಂಚಿನಲ್ಲಿರುವ 325ಕ್ಕೂ ಹೆಚ್ಚು ಪ್ರಾಣಿ ಪ್ರಭೇದಗಳಿವೆ. ಇದಲ್ಲದೇ ನೂರಾರು ಅಪರೂಪದ ಪಕ್ಷಿ, ಕೀಟ ಮತ್ತು ಸಸ್ಯ ವೈವಿಧ್ಯಗಳಿಗೆ ಈ ಅಭಯಾರಣ್ಯ ಆವಾಸ ಸ್ಥಾನಗಳು.

ಹುಲಿ, ಆನೆಗಳ ಸಾಮ್ರಾಜ್ಯ

2023ರ ಹುಲಿ ಗಣತಿ ಪ್ರಕಾರ ರಾಜ್ಯದಲ್ಲಿರುವ 560ಕ್ಕೂ ಹೆಚ್ಚು ಹುಲಿಗಳ ಪೈಕಿ ಶೇ.65ಕ್ಕೂ ಹೆಚ್ಚು ಹುಲಿಗಳು ಬಂಡೀಪುರ ಮತ್ತು ನಾಗರಹೊಳೆಯಲ್ಲಿವೆ. 319 ಹುಲಿಗಳೊಂದಿಗೆ ಉತ್ತರಾಖಂಡದ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ ಅಗ್ರಸ್ಥಾನದಲ್ಲಿ ಗುರುತಿಸಿಕೊಂಡಿದೆ. ಆದರೆ ರಾಜ್ಯದ ಬಂಡೀಪುರ (191) ನಾಗರಹೊಳೆ ಉದ್ಯಾನವನ (185) ಮತ್ತು ಬಿಳಿಗಿರಿರಂಗನಾಥ ವನ್ಯಧಾಮ (60) ತಮಿಳುನಾಡಿನ ನೀಲಗಿರಿ ಜಿಲ್ಲೆಯ ಮಧುಮಲೈ (167) ಮತ್ತು ಕೇರಳದ ವಯನಾಡು ಅಭಯಾರಣ್ಯ (84) ಪ್ರದೇಶವನ್ನು ಗಣನೆಗೆ ತೆಗೆದುಕೊಂಡರೆ 687ಕ್ಕೂ ಹೆಚ್ಚು ಹುಲಿಗಳು ಮೂರು ರಾಜ್ಯಗಳ ಈ ಸಂಧಿ ಪ್ರದೇಶದಲ್ಲಿವೆ. ಅಂದರೆ ದೇಶದ ಒಟ್ಟು ವ್ಯಾಘ್ರ ಸಂತತಿಯಲ್ಲಿ ಶೇ. 26ರಷ್ಟು ಭಾಗ ಈ ಭಾಗದಲ್ಲಿದೆ. ಇಷ್ಟು ಮಾತ್ರವಲ್ಲ, ಗಜ ಸಂತತಿಯಲ್ಲೂ ಮುಂಚೂಣಿಯಲ್ಲಿರುವ (6500) ನಮ್ಮ ರಾಜ್ಯದ ಆನೆಗಳ ಪೈಕಿ ಅತಿ ಹೆಚ್ಚು ಆನೆಗಳಿರುವುದು ಕೂಡ ಬಂಡೀಪುರ (1116) ಮತ್ತು ನಾಗರಹೊಳೆ (831) ಅಭಯಾರಣ್ಯದಲ್ಲಿ.

ಈ ಕನಿಷ್ಠ ಮಾಹಿತಿಗಳಿದ್ದರೂ ಸಾಕು, ನಮ್ಮ ನಾಯಕರು ಈ ವನ್ಯ ಸಂಕುಲಕ್ಕೆ ಅಪಾಯಕಾರಿಯಾಗುವ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಅರಣ್ಯ ಸಂರಕ್ಷಣೆ ಹೆಸರಿನಲ್ಲಿ ಕಾಡಂಚಿನಲ್ಲಿ ಮನೆ ಕಟ್ಟಿಕೊಂಡವರನ್ನು ಒಕ್ಕಲೆಬ್ಬಿಸಲು ಮುಂದಾಗಿರುವ ಸರಕಾರ, ಪ್ರಿಯಾಂಕಾ ಗಾಂಧಿ ಅವರ ಮಾತನ್ನು ಶಾಸನವಾಗಿ ಸ್ವೀಕರಿಸುವ ಮುನ್ನ ಅಭಯಾರಣ್ಯದಲ್ಲಿ ರಾತ್ರಿ ವಾಹನ ಸಂಚಾರ ನಿಷೇಧಿಸಿರುವ ಔಚಿತ್ಯವನ್ನು ತಿಳಿಯಬೇಕಾಗಿದೆ.

ಕಹಿ ನೆನಪು

ರಘು ಕೋಟ್ಯಾನ್

ಮರೆಯಲಾಗದ ದುರ್ಘಟನೆ

ಡಿಸೆಂಬರ್ 3, 1984 ಭೋಪಾಲ್ ನಗರದಲ್ಲಿರುವ ಯೂನಿಯನ್ ಕಾರ್ಬೈಡ್ ಇಂಡಿಯಾ ಲಿಮಿಟೆಡ್‌ನಲ್ಲಿ ನಡೆದ ಅನಿಲ ದುರಂತದಲ್ಲಿ 8,000 ಜನ ಸಾವನ್ನಪ್ಪಿ ಆರು ಲಕ್ಷ ಜನ ಗಾಯಗೊಂಡಿದ್ದರು. ಘಟನೆಗೆ ಕಾರಣ ಆ ಕಂಪನಿಯ ಬೇಜವಾಬ್ದಾರಿ. ಈ ವಿಷಾನಿಲವನ್ನು 68,000 ಲೀಟರ್ ಸಾಮರ್ಥ್ಯದ ಮೂರು ಭೂಗತ ಟ್ಯಾಂಕ್‌ಗಳಲ್ಲಿ ಶೇಕರಿಸಲಾಗಿತ್ತು. ಸುರಕ್ಷತೆಯ ನಿಯಮದ ಪ್ರಕಾರ ಎರಡು ಟ್ಯಾಂಕ್‌ಗಳನ್ನು ಶೇ.50 ರಷ್ಟು ತುಂಬಿಸಿ ಮೂರನೇ ಟ್ಯಾಂಕ್ ಅನ್ನು ಖಾಲಿ ಬಿಡಬೇಕು. ಕಾರಣ ಯಾವುದೇ ಕಾರಣಗಳಿಂದಾಗಿ ವಿಷಕಾರಿ ಅನಿಲಗಳಿರುವ ಟ್ಯಾಂಕ್‌ನ ಒತ್ತಡ ಹೆಚ್ಚಿದ್ದಲ್ಲಿ ನೈಟ್ರೋಜೆನ್ ಅನಿಲದ ಬೆಂಬಲದೊಂದಿಗೆ ವಿಷಕಾರಿ ಅನಿಲವನ್ನು ಖಾಲಿ ಇರುವ ಟ್ಯಾಂಕಿಗೆ ವರ್ಗಾಯಿಸಿ ಒತ್ತಡವನ್ನು ಕಡಿಮೆಗೊಳಿಸಬಹುದು. ಹಾಗೂ ಒಂದು ವೇಳೆ ಅನಿಲ ಸೋರಿಕೆಯಾದಲ್ಲಿ ಆ ಅನಿಲವನ್ನು ಕ್ಯಾಸ್ಟಿಕ್ ಸೋಡಾದೊಂದಿಗೆ ಬೆರಸಿ ವಿಷಾನಿಲವನ್ನು ದುರ್ಬಲಗೊಳಿಸುವ ವ್ಯವಸ್ಥೆಯನ್ನು ಹೊಂದಿರಬೇಕು. ಜೊತೆಗೆ ಅಲ್ಲಿಂದಲೂ ಹೊರಬರುವ ವಿಷಕಾರಿ ಅನಿಲವನ್ನು ಚಿಮಿಣಿಯಲ್ಲೂ ಬೆಂಕಿಯೊಂದಿಗೆ ಉರಿಸಿ ಸಂಪೂರ್ಣವಾಗಿ ಇಂಗಾಲದ ಡೈ ಆಕ್ಸೈಡ್ ಅನ್ನಾಗಿ ಪರಿವರ್ತಿಸಲಾಗುವ ವ್ಯವಸ್ಥೆಯನ್ನು ಹೊಂದಿರಬೇಕು. ಅಲ್ಲದೆ ಸೋರಿಕೆಯಾಗುವ ಅನಿಲದ ಮೇಲೆ ನೀರನ್ನು ಚಿಮ್ಮಿಸುವ ಮೂಲಕ ಕೂಡಾ ಆ ವಿಷಾನಿಲವನ್ನು ದುರ್ಬಲಗೊಳಿಸಬಹುದು. ಇಂಥ ಕಾರಣಗಳಿಂದ ತಾಪಮಾನ ಹೆಚ್ಚಾಗದಂತೆ ಟ್ಯಾಂಕಿನ ತಾಪಮಾನವನ್ನು 0 ಡಿಗ್ರಿ ಉಷ್ಣಾಂಶದಲ್ಲಿತುಕೊಳ್ಳುವಂತೆ ಶೀತಲೀಕೃತ ವ್ಯವಸ್ಥೆಯನ್ನು ಹೊಂದುವುದು ಕಡ್ಡಾಯವಾಗಿತ್ತು.

ಆದರೆ 1980 ರಲ್ಲಿ ಸಂಸ್ಥೆ ಲಾಭದಲ್ಲಿಲ್ಲದ ಕಾರಣ ವೆಚ್ಚ ಕಡಿತದ ಸಲುವಾಗಿ ಎಲ್ಲ ಸುರಕ್ಷತಾ ನಿಯಮಗಳನ್ನು ಗಾಳಿಗೆ ತೂರಲಾಗಿತ್ತು. ಅಕ್ಟೋಬರ್ 1980 ರಲ್ಲಿ ಶೇಖರಣೆಯಲ್ಲಿದ್ದ ವಿಷಾನಿಲವನ್ನು ಕಾರ್ಖಾನೆಗೆ ಸರಬರಾಜು ಗೊಳಿಸುವ ವ್ಯವಸ್ಥೆ ಕೈ ಕೊಟ್ಟಿತ್ತು. ಶೀತಲೀಕೃತ ವ್ಯವಸ್ಥೆಯನ್ನು ವೆಚ್ಚ ಕಡಿತದ ಸಲುವಾಗಿ ನಿಲ್ಲಿಸಲಾಗಿತ್ತು. ಚಿಮಿಣಿಯಲ್ಲಿ ವಿಷಾನಿಲಕ್ಕೆ ಬೆಂಕಿ ಹಚ್ಚಿ ದುರ್ಬಲಗೊಳಿಸುವ ವ್ಯವಸ್ಥೆಯ ಪೈಪ್ ಲೈನ್‌ಗಳನ್ನೂ ಮೈಟೆನನ್ಸ್ ಸಲುವಾಗಿ ಬಿಚ್ಚಿ ಇಡಲಾಗಿತ್ತು. ಕ್ಯಾಸ್ಟಿಕ್ ಸೋಡಾದೊಂದಿಗೆ ಬೆರೆಸಿ ವಿಷಾನಿಲವನ್ನು ದುರ್ಬಲಗೊಳಿಸುವ ವ್ಯವಸ್ಥೆಕೂಡಾ ನಿರ್ವಹಣೆಯ ಕೊರತೆಯಿಂದಾಗಿ ಕಾರ್ಯನಿರ್ವಹಿಸುತ್ತಿರಲಿಲ್ಲ.

ವಿಷಾನಿಲವನ್ನು ಕಾರ್ಖಾನೆಗೆ ಸರಬರಾಜು ಗೊಳಿಸುವ ವ್ಯವಸ್ಥೆ ಕೈ ಕೊಡಲು ಮುಖ್ಯ ಕಾರಣ ಪೈಪ್ ಲೈನಿನಲ್ಲಿ ಉಂಟಾದ ಬ್ಲಾಕ್. ಹಾಗಾಗಿ ಪೈಪ್ ಲೈನಿನಲ್ಲಿ ಉಂಟಾದ ಬ್ಲಾಕ್ ಅನ್ನು ಕ್ಲೀನ್ ಮಾಡುವ ಸಲುವಾಗಿ ಹೆಚ್ಚು ಒತ್ತಡದಿಂದ ನೀರನ್ನು ಹಾಯಿಸಲಾಗಿತ್ತು. ಆದರೆ ವಿಷಾನಿಲದ ಟ್ಯಾಂಕ್ ನೊಂದಿಗೆ ಸಂಪರ್ಕಗೊಂಡಿದ್ದ ಪೈಪಿನಲ್ಲಿದ ವಾಲ್‌ಗಳು ಸರಿಯಾಗಿ ಕೆಲಸ ಮಾಡದ ಕಾರಣ ನೀರು ನೇರವಾಗಿ ವಿಷಾನಿಲದ ಟ್ಯಾಂಕ್ ಸೇರಿತ್ತು. ನೀರು ಟ್ಯಾಂಕ್ ಸೇರದಂತೆ ಕೈಗೊಂಡಿದ್ದ ಎಲ್ಲಾ ವ್ಯವಸ್ಥೆಗಳು ಏಕ ಕಾಲಕ್ಕೆ ಕೈ ಕೊಟ್ಟಿತ್ತು. ಮೀಥೈಲ್ ಐಸೊಸೈನೇಟ್ (MIC) ವಿಷಾನಿಲಕ್ಕೆ ನೀರು ಸೇರಿಕೊಂಡಿದ್ದರಿಂದಾಗಿ ರಾಸಾಯನಿಕ ಕ್ರಿಯೆ ಉಂಟಾಗಿ ಡಿಸೆಂಬರ್ 2 ರ ರಾತ್ರಿ 11: 30 ರ ಹೊತ್ತಿಗೆ ವಿಷಾನಿಲ ಟ್ಯಾಂಕಿನ ಒತ್ತಡ ಹೆಚ್ಚಿದ್ದು ಪ್ರೆಷರ್ ಮಾಪನದಲ್ಲಿ ತಾಂತ್ರಿಕ ಕೆಲಸಗಾರರಿಗೆ ಗೋಚರವಾಗುತ್ತೆ. ಆದರೆ ಅವರ ಉದಾಸೀನ ಮತ್ತು ನಿರ್ಲಕ್ಷತೆ, ಒತ್ತಡ ಮಾಪನ ಸರಿಯಾಗಿ ಕೆಲಸ ಮಾಡುತ್ತಿಲ್ಲವೋ ಏನೋ ಎಂಬ ಆಲೋಚನೆ ಮತ್ತಷ್ಟು ನೀರು ವಿಷಾನಿಲದ ಟ್ಯಾಂಕ್ ಸೇರುವಂತೆ ಮಾಡಿತು. ಆದರೆ ರಾತ್ರಿ 12:30 ಕ್ಕೆ ಮತ್ತಷ್ಟು ಹೆಚ್ಚಿದ ಟ್ಯಾಂಕಿನ ಒತ್ತಡ ಮತ್ತು ಉಷ್ಣತೆಯನ್ನು ಗಮನಿಸಿದ ಸಿಬ್ಬಂದಿಗಳಿಗೆ ದುರ್ಘಟನೆಯ ವಾಸನೆ ಗೋಚರಿಸಿತ್ತು. ತುರಾತುರಿಯಲ್ಲಿ ಒತ್ತಡದಲ್ಲಿದ್ದ ಅನಿಲವನ್ನು ಖಾಲಿಯಿದ್ದ ಟ್ಯಾಂಕಿಗೆ ವರ್ಗಾಯಿಸಲು ಪ್ರಯತ್ನಿಸಲಾಯಿತು. ಆದರೆ ದುರಾದೃಷ್ಟವಶಾತ್ ಅಲ್ಲಿನ ಪೈಪ್ ಲೈನ್ ಕೂಡಾ ಬ್ಲಾಕ್ ಆಗಿದ್ದ ಕಾರಣ ಖಾಲಿ ಟ್ಯಾಂಕಿಗೆ ವಿಷಾನಿಲವನ್ನು ವರ್ಗಾಯಿಸುವ ಕೆಲಸ ಸಫಲವಾಗಲಿಲ್ಲ. ಜೊತೆಗೆ ಶೀತಲೀಕೃತ ವ್ಯವಸ್ಥೆಯೂ ಕೈಕೊಟ್ಟ ಕಾರಣ ಟ್ಯಾಂಕಿನ ಉಷ್ಣತೆ ಒಂದೇ ಸಮನೆ ಏರಿ ಸೇಫ್ಟಿ ವಾಲ್ವ್ ಓಪನ್ ಆಗಿ ಅನಿಲ ಸೋಲಿಕೆಯಾಗಲು ಪಾರಂಭಿಸಿತು. ವಿಷಾನಿಲವನ್ನು ದುರ್ಬಲಗೊಳಿಸುವ ಮುಂದಿನ ಸರದಿಯಾಗಿ ವಿಷಾನಿಲವನ್ನು ಕ್ಯಾಸ್ಟಿಕ್ ಸೋಡಾದೊಂದಿಗೆ ಬೆರೆಸುವ ವ್ಯವಸ್ಥೆ ಕುಡಾ ಕಾರ್ಯನಿರ್ವಹಿಸಲಿಲ್ಲ ಹಾಗೆ ಕೊನೆಯದಾಗಿದ್ದ ಚಿಮಿಣಿಯಲ್ಲಿ ಬೆಂಕಿ ಹಚ್ಚುವ ವ್ಯವಸ್ಥೆ ಕೂಡ ನಿರ್ವಹಣೆಗಾಗಿ ನಿಲ್ಲಿಸಿದ ಪರಿಣಾಮ ಸೋರಿಕೆಯಾದ ಅನಿಲ ಸೀದಾ ವಾತಾವರಣದಲ್ಲಿ ಸೇರಿಕೊಂಡು ದೊಡ್ಡ ಮಟ್ಟದಲ್ಲಿ ಒಂದು ದುರಂತವನ್ನೇ ಸೃಷ್ಟಿಸಿತ್ತು. ವಿಷಾನಿಲ ಸೋರಿಕೆಯಾದ ಸಮಯದಲ್ಲಿ ನಗರದಲ್ಲೆಲ್ಲ ಮಳೆಯಾಗುತ್ತಿದ್ದ ಕಾರಣ ಸಾವಿನ ಸಂಖ್ಯೆ ಸಣ್ಣ ಮಟ್ಟಿಗೆ ಕಡಿಮೆಯಾಗಿರಬಹುದಷ್ಟೆ. ಒಟ್ಟಿನಲ್ಲಿ ಕಾರ್ಖಾನೆ ಕಾರ್ಮಿಕರ, ಅಧಿಕಾರಿಗಳ, ಆಡಳಿತವರ್ಗದ ಮತ್ತು ಅಲ್ಲಿನ ಸರಕಾರಗಳ ಬೇಜವಾಬ್ದಾರಿಯಿಂದಾಗಿ ಒಂದು ದೊಡ್ಡ ದುರಂತವೇ ನಡೆದು ಹೋಯಿತು.

ಕಾಸರಗೋಡು ಕನ್ನಡಿಗರ ಸಮಸ್ಯೆಗಳು ಮತ್ತು ಪರಿಹಾರಗಳು

ಅಭಿಮತ

ಪರಿಣಿತ ರವಿ

parinithabravigmail.com

ಗಡಿನಾಡ ಸಾಹಿತ್ಯ ಸಾಂಸ್ಕೃತಿಕ ಅಕಾಡೆಮಿ (ರಿ), ಕಾಸರಗೋಡು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಸರಕಾರ, ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು, ಕೇರಳ ಗಡಿನಾಡ ಘಟಕ, ಕಾಸರಗೋಡು, ಭಾರತ್ ಭವನ, ತಿರುವನಂತಪುರಂ, ಕೇರಳ ಸರಕಾರ ಇವುಗಳು ಸಹಯೋಗದಲ್ಲಿ ದಿನಾಂಕ ನವೆಂಬರ್ 27 ರಂದು 'ಅನಂತಪುರಿ ಗಡಿನಾಡ ಕನ್ನಡ ಸಂಸ್ಕೃತಿ ಉತ್ಸವ 2024' ಅನ್ನುವ ಸಮಾರಂಭವು ಬಹಳ ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು. ಇದರಲ್ಲಿ ಹಲವು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದವು. 'ಕಾಸರಗೋಡು ಕನ್ನಡಿಗರ ಸಮಸ್ಯೆಗಳು ಮತ್ತು ಪರಿಹಾರಗಳು' ಅನ್ನುವ ವಿಷಯದ ಕುರಿತು ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿತ್ತು. ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸುವಂತೆ ನನ್ನಲ್ಲಿ ಕೇಳಿಕೊಂಡಿದ್ದರು. ನಾನು ಕಾಸರಗೋಡಿನವಳೇ ಆದ ಕಾರಣ ಹಾಗೂ ಅಲ್ಲಿಯ ಸಮಸ್ಯೆಗಳು ಗೊತ್ತಿರುವ ವಿಚಾರವೇ ಆದ ಕಾರಣ ಒಪ್ಪಿಕೊಂಡೆ. ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಹಾಗೂ ಕಣ್ಣೂರು ವಿಶ್ವವಿದ್ಯಾನಿಲಯದ ಮೊದಲ ಕನ್ನಡಿಗ ಸೆನೆಟ್ ಸದಸ್ಯ ಆಗಿರುವ ಡಾ. ರತ್ನಾಕರ ಮಲ್ಲಮೂಲೆಯವರು ಕಾಸರಗೋಡಿನ ಶೈಕ್ಷಣಿಕ ಹಾಗೂ ಔದ್ಯೋಗಿಕ ಸಮಸ್ಯೆಗಳು ಮತ್ತು ಪರಿಹಾರಗಳ ಕುರಿತು ವಿಷಯ ಮಂಡನೆ ಮಾಡಿದರು. ಕರ್ನಾಟಕ ಬ್ಯಾರಿ ಸಾಹಿತ್ಯ ಪರಿಷತ್ತಿನ ಮಾಜಿ ಸದಸ್ಯರಾದ ಆಯಿಷಾ ಪೆರ್ಲ ಇವರು ಕಾಸರಗೋಡಿನ ಸಾಮಜಿಕ ಸಮಸ್ಯೆಗಳು ಹಾಗೂ ಪರಿಹಾರಗಳ ಕುರಿತು ಮಾತನಾಡಿದರು. ಕಾರಗೋಡಿನ ಹಿರಿಯ ಸಾಹಿತಿಗಳಾದ ರಾಧಾಕೃಷ್ಣ ಉಳಿಯತ್ತಡ್ಕ ಇವರು ಕಾಸರಗೋಡಿನ ಸಾಂಸ್ಕೃತಿಕ ಸಮಸ್ಯೆಗಳು ಹಾಗೂ ಪರಿಹಾರಗಳ ಕುರಿತು ಬಹಳ ಅರ್ಥಪೂರ್ಣವಾಗಿ ತಮ್ಮ ವಿಷಯವನ್ನು ಮಂಡನೆ ಮಾಡಿದರು. ಅಧ್ಯಕ್ಷತೆ ವಹಿಸಿದ ನಾನು ಎಲ್ಲ ಕ್ಷೇತ್ರಗಳ ಬಗ್ಗೆಯೂ ಸಮಗ್ರವಾಗಿ ಹಾಗೂ ಅಷ್ಟೇ ಚುಟುಕಾಗಿ ಮಾತನಾಡಿದೆ. ಈ ಅಧ್ಯಕ್ಷೀಯ ಭಾಷಣ ಲೇಖನವಾಗಿ ಹೊರಬರಲಿ ಎಂದು ರಾಧಾಕೃಷ್ಣ ಉಳಿಯತ್ತಡ್ಕರು ಹಾಗೂ ಇನ್ನೂ ಹಲವು ಆತ್ಮೀಯರು ಅಭಿಪ್ರಾಯ ವ್ಯಕ್ತಪಡಿಸಿದರು. ಹಾಗಾಗಿ ಈ ಲೇಖನ.

ನೆರೆದಿರುವಂತಹ ಕನ್ನಡಾಭಿಮಾನಿ ಬಂಧುಗಳಿಗೆಲ್ಲ ನನ್ನ ವಿನೀತವಾದ ವಿನಮ್ರ ವಂದನೆಗಳು... ಕನ್ನಡಕ್ಕಾಗಿ ಕೈಎತ್ತು, ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು, ಅಲ್ಲಿ ಪಾಂಚಜನ್ಯ ಮೊಳಗುತ್ತದೆ. ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು. ಅದು ಗೋವರ್ಧನ ಗಿರಿಯಾಗುತ್ತದೆ ಅನ್ನುವ ರಾಷ್ಟ್ರಕವಿ ಕುವೆಂಪುರವರ ಈ ಸಾಲುಗಳು ಕಾಸರಗೋಡು ಕನ್ನಡಿಗರಿಗೆ ಅಕ್ಷರಶಃ ಅನ್ವಯವಾಗುತ್ತದೆ. ಏಕೆಂದರೆ ಕಾಸರಗೋಡಿನಲ್ಲಿ ನಡೆಯುವಂತಹ ಕನ್ನಡಪರ ಕಾರ್ಯಕ್ರಮಗಳು ಅಷ್ಟೊಂದು ವೈವಿಧ್ಯಮಯವಾದದ್ದು. ಇಂತಹ ಕಾಸರಗೋಡು ಕನ್ನಡಿಗರ ಪಾಲಿಗೆ 1956 ನವೆಂಬರ್ ಒಂದು ಅನ್ನುವುದು ಅವಿಸ್ಮರಣೀಯ ಕಹಿ ದಿನ. ಏಕೆಂದರೆ ಅಂದು ಭಾಷಾವಾರು ಪ್ರಾಂತ್ಯ ರಚನೆಯಾದಾಗ ಅಚ್ಚ ಕನ್ನಡದ ನೆಲವಾದ ಕಾಸರಗೋಡನ್ನು ಕಡಿದು ಮಲಯಾಳದ ನಾಡಾದ ಕೇರಳಕ್ಕೆ ಸೇರಿಸಲಾಯಿತು. ಅಂದಿನಿಂದ ಇಂದಿನವರೆಗೂ ಕಡಿದ ಭಾಗದಲ್ಲಿ ರಕ್ತ ಜಿನುಗುತ್ತಲೇ ಇದ್ದು, ಸಾಕಷ್ಟು ಹೋರಾಟಗಳ ಮೂಲಕ ಕನ್ನಡದ ಈ ಭೂಮಿಯಲ್ಲಿ ಭಾಷೆ, ಸಾಹಿತ್ಯ, ಸಂಸ್ಕೃತಿಯ ಬೇರನ್ನು ನೀರೆರೆದು ಪೋಷಿಸುತ್ತಾ ಜೀವಂತವಿರಿಸುವ ಭಗೀರಥ ಪ್ರಯತ್ನ ನಡೆಯುತ್ತಲೇ ಇದೆ. ಇಂದಿಲ್ಲಿ ಮೂವರೂ ಗಣ್ಯರು ಕಾಸರಗೋಡಿನ ಶೈಕ್ಷಣಿಕ, ಔದ್ಯೋಗಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಸ್ಯೆ ಹಾಗೂ ಪರಿಹಾರಗಳ ಕುರಿತು ವಿಷಾದವಾಗಿ ತಮ್ಮ ವಿಷಯವನ್ನು ಮಂಡಿಸಿದರು.

ಇದೆಲ್ಲದರ ಕುರಿತು ಒಟ್ಟಾರೆಯಾಗಿ ನಾನು ಹೇಳುವುದೇನೆಂದರೆ, ಕಾಸರಗೋಡು ಭವ್ಯವಾದ ಕನ್ನಡ ಸಂಸ್ಕೃತಿಯ ತವರೂರು. ಇದು ಕೇವಲ ಸಪ್ತ ಭಾಷೆಗಳಲ್ಲ ಬಹು ಭಾಷೆಗಳ ಸಂಗಮ ಭೂಮಿ. ಕಲೆ ಸಾಹಿತ್ಯದ ಶ್ರೀಮಂತ ನಾಡು. ತೆಂಕುತಿಟ್ಟು ಯಕ್ಷಗಾನದ ಪಿತಾಮಹ ಕುಂಬಳೆ ಪಾರ್ತಿಸುಬ್ಬ, ನಾಡೋಜ ಕಯ್ಯಾರ ಕಿಞ್ಞಣ್ಣ ರೈ, ರಾಷ್ಟ್ರಕವಿ ಗೋವಿಂದ ಪೈ, ಧೀಮಂತ ಕನ್ನಡ ಹೋರಾಟಗಾರರಾದ ಕಳ್ಳಿಗೆ ಮಹಾಬಲ ಭಂಡಾರಿ, ಯು.ಪಿ ಕುಣಿಕುಳ್ಳಾಯರು ಮೊದಲಾದ ಮಹಾನುಭಾವರು ಕಾಸರಗೋಡಿನ ಕೀರ್ತಿಯನ್ನು ಜಗದಗಲ ಪಸರಿಸಿದವರು. ಇಲ್ಲಿರುವಷ್ಟು ಕವಿಗಳು, ಸಾಹಿತಿಗಳು, ಕಲಾವಿದರು ಬೇರೆಲ್ಲೂ ಕಾಣಲು ಸಾಧ್ಯವಿಲ್ಲ, ಶತಮಾನಗಳಿಂದಲೂ ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನೇ ಉಸಿರಾಡುತ್ತಿದೆ ನಮ್ಮ ಕಾಸರಗೋಡು. ಇಲ್ಲಿನ ಜನರ ಆಚಾರ-ವಿಚಾರ, ಜೀವನ ಪದ್ಧತಿ ಎಲ್ಲವೂ ಕನ್ನಡ ಹಾಗೂ ತುಳು ಸಂಸ್ಕೃತಿಗಳ ಪ್ರತೀಕವಾಗಿದೆ. ಒಟ್ಟಾರೆ ಕನ್ನಡಾಂಭೆಯ ಪಾದಾಂಬುಧಿಗೆ ಕಾಸರಗೋಡು ಕನ್ನಡಿಗರ ನಿಸ್ವಾರ್ಥ ಸೇವೆ ಅನನ್ಯವಾದುದು. ಹಾಗಾಗಿಯೇ ಕಾಸರಗೋಡು ಕೇರಳದಲ್ಲಿ ಲೀನವಾದರೂ ತನ್ನ ಭಾಷೆ, ಸಂಸ್ಕೃತಿ ಹಾಗೂ ಭಾವನಾತ್ಮಕವಾಗಿ ಇನ್ನೂ ಕನ್ನಡವಾಗಿಯೇ ಉಳಿದಿದೆ ಅನ್ನುವುದು ಬೆಳಕಿನಷ್ಟೇ ಸತ್ಯ. ಸರಿ..ಕಾಸರಗೋಡನ್ನು ಕೇರಳಕ್ಕೆ ಸೇರಿಸಿದ ಬಳಿಕ ಆದದ್ದಾದರೂ ಏನು? ಪ್ರತಿ ಹೆಜ್ಜೆ ಹೆಜ್ಜೆಯಲ್ಲಿಯೂ ಕನ್ನಡಿಗರಿಗೆ ಅನ್ಯಾಯ, ಹಾಗೂ ಅವಕಾಶ ವಂಚಿತರನ್ನಾಗಿ ಮಾಡಲಾಯಿತು. ಶಿಕ್ಷಣ, ಉದ್ಯೋಗ, ವಾಣಿಜ್ಯ, ವ್ಯವಹಾರ, ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಹೀಗೆ ಎಲ್ಲ ರಂಗಗಳಲ್ಲಿಯೂ ಮಲತಾಯಿ ಧೋರಣೆಯನ್ನು ಕಾಣಲಾಗುತ್ತಿದೆ. ನಿಸ್ಸಹಾಯಕರಾದ ಕನ್ನಡಿಗರು ಇತಿಹಾಸದ ದುರಂತದ ಮೂಕಸಾಕ್ಷಿಗಳಾಗಿ ಬದುಕು ಸಾಗಿಸುವಂತಾಗಿದೆ.

ಶೈಕ್ಷಣಿಕವಾಗಿ ಹೇಳುವುದಾದರೆ, ಕಾಸರಗೋಡಿನಲ್ಲಿ ಸುಮಾರು 185 ಕ್ಕಿಂತಲೂ ಅಧಿಕ ಕನ್ನಡ ಮಾಧ್ಯಮ ಶಾಲೆಗಳು, ಸುಮಾರು 25 ಸಾವಿರಕ್ಕಿಂತಲೂ ಅಧಿಕ ಕನ್ನಡ ವಿದ್ಯಾರ್ಥಿಗಳು ಹಾಗೂ 1,500 ಕ್ಕಿಂತಲೂ ಹೆಚ್ಚು ಕನ್ನಡಿಗ ಅಧ್ಯಾಪಕರಿದ್ದಾರೆ. ಆದರೆ ಈ ಕನ್ನಡ ಮಾಧ್ಯಮ ಶಾಲೆಗಳಿಗೆ ಕನ್ನಡದ ಗಂಧಗಾಳಿಯಿಲ್ಲದ ಮಲಯಾಳಿ ಅಧ್ಯಾಪಕರನ್ನು ನೇಮಿಸಲಾಗುತ್ತಿದೆ. ಹೀಗೆ ನೇಮಕಾತಿ ಆಗಿ ಬಂದವರಲ್ಲಿ 'ಕನ್ನಡ ಗೊತ್ತಿದೆ' ಎಂಬ ಪ್ರಮಾಣಪತ್ರ ಇರುವುದಂತೂ ಹಾಸ್ಯಾಸ್ಪದವೇ ಸರಿ. 2004 ರಲ್ಲಿ ನಾನೇ ಸ್ವತಃ ಇದಕ್ಕೆ ಬಲಿಪಶುವಾದ ಜ್ವಲಂತ ಸಾಕ್ಷಿ. ಕನ್ನಡ ಗೊತ್ತಿಲ್ಲದ ಶಿಕ್ಷಕರು ಮಲಯಾಳಂನಲ್ಲಿ ಪಾಠ ಮಾಡುವುದರಿಂದ ಕನ್ನಡ ಮಕ್ಕಳಿಗೆ ಏನು ಅರ್ಥವಾಗದ ಶೋಚನೀಯ ಪರಿಸ್ಥಿತಿ ಮಕ್ಕಳ ಕಲಿಯುವಿಕೆಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಕಲೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿಯೂ ಹಲವಾರು ಸಮಸ್ಯೆಗಳಿವೆ. ಉತ್ತಮ ಗ್ರಂಥಾಲಯಗಳ ಕೊರತೆ, ಸರಕಾರದ ಪ್ರೋತ್ಸಾಹ ಇಲ್ಲದಿರುವುದು, ಪ್ರತಿಭೆಯಿದ್ದರೂ ಸಹಕಾರವಿಲ್ಲದ ಕಾರಣ ಕೃತಿಗಳನ್ನು ಪ್ರಕಟಿಸಲಾಗದೇ ಇರುವುದು, ಪ್ರಕಟಿಸಿದ ಕೃತಿಗಳಿಗೆ ಸರಿಯಾದ ಮಾನ್ಯತೆ ಸಿಗದಿರುವುದು, ಸರಕಾರದ ಕನ್ನಡ ಸಾಹಿತ್ಯ ಪುಸ್ತಕ ಪ್ರಕಾಶನ ಸಂಸ್ಥೆ ಇಲ್ಲದಿರುವುದು ಮೊದಲಾದ ತೊಡರುಗಳನ್ನು ಕಾಸರಗೋಡಿನ ಸಾಹಿತ್ಯ ಕ್ಷೇತ್ರವು ಅನುಭವಿಸುತ್ತಿದೆ.

ರಾಜಕೀಯವಾಗಿ ನೋಡುವುದಾದರೆ ಮಂಜೇಶ್ವರ, ಕಾಸರಗೋಡು ಕ್ಷೇತ್ರಗಳಿಂದ ಬೇರೆ ಬೇರೆ ರಾಜಕೀಯ ಪಕ್ಷಗಳ ನೇತಾರರು ಸ್ಪರ್ಧಿಸಿ ಚುನಾಚಣೆಗಳಲ್ಲಿ ಗೆಲ್ಲುತ್ತಾರೆ. ಗೆದ್ದ ಬಳಿಕ ಕನ್ನಡದ ನೆಲವಾದ ಕಾಸರಗೋಡನ್ನು ಕೇರಳ ಸರಕಾರವು ಭಾಷಾ ಅಲ್ಪಸಂಖ್ಯಾತರ ಪ್ರದೇಶವೆಂದು ಘೋಷಿಸಿದ್ದರೂ ಇವರಿಗೆ ಸಂವಿಧಾನಬದ್ಧ ಹಕ್ಕು ಸಂರಕ್ಷಣೆಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಆರೋಗ್ಯ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವಲ್ಲಿಯೂ ಕಾಸರಗೋಡು ಕನ್ನಡಿಗರ ಪಾಡು ಹೇಳತೀರದು. ಎಲ್ಲ ಮೌಖಿಕ ಹಾಗೂ ಲಿಖಿತ ವ್ಯವಹಾರಗಳು ಮಲಯಾಳದಲ್ಲಿರುವ ಕಾರಣ ಭಾಷೆಯ ಅಜ್ಞಾನದಿಂದ ಆಗುವ ತೊಂದರೆಗಳು ಹಲವಾರು. ಹೆಚ್ಚಿನ ವೈದ್ಯಕೀಯ ಸೌಲಭ್ಯಗಳಿಗಾಗಿ ನೆರೆಯ ಮಂಗಳೂರನ್ನೇ ಆಶ್ರಯಿಸಬೇಕಾದ ಪರಿಸ್ಥಿತಿ. ಕರೋನಾ ಕಾಲದಲ್ಲಿ ಗಡಿ ಮುಚ್ಚಿದ್ದರಿಂದ ಮಂಗಳೂರಿಗೆ ಹೋಗಲು ಸಾಧ್ಯವಾಗದೇ ಜನರು ಬಹಳಷ್ಟು ತೊಂದರೆಗಳನ್ನು ಅನುಭವಿಸದ್ದನ್ನು ಕಣ್ಣಾರೆ ಕಂಡಿದ್ದೇವೆ.

ಔದ್ಯೋಗಿಕವಾಗಿ ನೋಡುವುದಾದರೆ ಕಾಸರಗೋಡಿನ ಕನ್ನಡಿಗರ ಹಿತರಕ್ಷಣೆಯ ದೃಷ್ಟಿಯಿಂದ ಅನೇಕ ಸರಕಾರಿ ಹುದ್ದೆಗಳಿಗೆ ಕನ್ನಡ ಗೊತ್ತಿರುವವರನ್ನೇ ನೇಮಿಸಬೇಕೆಂಬ ಆದೇಶವಿದ್ದರೂ ಹಾಗೂ ಸುತ್ತೋಲೆಗಳನ್ನು ಕನ್ನಡದಲ್ಲಿಯೇ ಮುದ್ರಿಸಬೇಕೆಂಬ ನಿಯಮವಿದ್ದರೂ ಇದನ್ನು ಪಾಲಿಸಲಾಗುತ್ತಿಲ್ಲ. ಹಾಗಾಗಿ ಇಲ್ಲಿ ಬರುವ ನೋಟಿಸುಗಳು, ವರದಿಗಳು, ಸುತ್ತೋಲೆಗಳು ಮಲಯಾಳ ಭಾಷೆಯಲ್ಲಿರುವ ಕಾರಣ ಆರೋಗ್ಯ, ಶಿಕ್ಷಣ, ಕೃಷಿ,ಮೊದಲಾದ ಸರಕಾರಿ ಇಲಾಖೆಗಳಲ್ಲಿ ಕನ್ನಡ ಹುದ್ದೆಗಳು ಗುರುತಿಸಲ್ಪಡದೆ ಕನ್ನಡಿಗರ ಕೈತಪ್ಪಿ ಹೋಗುತ್ತಿವೆ. ಸಾಂಸ್ಕೃತಿಕವಾಗಿ ನೋಡುವಾಗ ಹೆಚ್ಚು ಅಪಾಯಕಾರಿಯಾದುದೆಂದರೆ ಕಾಸರಗೋಡಿನ ಸ್ಥಳಪುರಾಣ ಹಾಗೂ ಚರಿತ್ರೆಗಳನ್ನು ತಿರುಚಿ ಅದೊಂದು ಶುದ್ಧ ಮಲಯಾಳಂ ಸಂಸ್ಕೃತಿಯ ನಾಡೆಂದು ಸಾಬೀತು ಪಡಿಸುವ ಯತ್ನ ಪ್ರಬಲವಾಗಿದೆ. ಉದಾ: ಬೇಕಲ ಕೋಟೆಯನ್ನು ಸ್ಥಾಪಿಸಿದ್ದು ಮಲಯಾಳ ರಾಜನಾದ ಕೋಲತ್ತಿರಿ ಅನ್ನುವ ವಾದ, ಹಾಗೂ ಊರಿನ ಹೆಸರುಗಳು ಬದಲಾದದ್ದನ್ನು ಗಮನಿಸಬಹುದು. ಕಾಸರಗೋಡು-ಕಾರ್ಸರ್‌ಕೋಟ್ ಆದದ್ದು, ಮಂಜೇಶ್ವರ- ಮಂಜೇಶ್ವರಂ ಆದದ್ದು, ಕುಂಬಳೆ- ಕುಂಬಳ ಆದದ್ದು, ಪಿಲಿಕುಂಜೆ- ಪುಲಿಕುನ್ನು ಆದದ್ದು ಇತ್ಯಾದಿ.

ಈ ಸಮಸ್ಯೆಗಳಿಗೆ ಪರಿಹಾರಗಳೇನು ಎಂದು ಯೋಚಿಸಿದಾಗ ಹಲವಾರು ಬೆಳಕಿನ ಸೆಲೆಗಳು ಅಲ್ಲಲ್ಲಿ ಮೂಡಿ ಮರೆಯಾಗುತ್ತವೆ. ಅವುಗಳೆಂದರೆ

- ಮಹಾಜನ ಆಯೋಗವು ಕಾಸರಗೋಡನ್ನು ಅಚ್ಚಕನ್ನಡದ ನೆಲವೆಂದು ಸಾಬೀತು ಪಡಿಸಿತ್ತು. ಹಾಗಾಗಿ ಕನ್ನಡಿಗರ ಹಿತದೃಷ್ಟಿಯಿಂದ ಹಾಗೂ ಕನ್ನಡ ಭಾಷೆ- ಸಂಸ್ಕೃತಿಯ ಉಳಿವಿಗಾಗಿ ಇಂದಿನ ನವ ಯುವ ಪೀಳಿಗೆಗೆ ಮಹಾಜನ ಆಯೋಗದ ವರದಿಯನ್ನು ಮನದಟ್ಟು ಮಾಡಿ ಅವರಲ್ಲಿ ಅರಿವು ಮೂಡಿಸಬೇಕು.
- ಕಾಸರಗೋಡಿನ ಸ್ಥಳಪುರಾಣ, ಸಂಸ್ಕೃತಿ, ಚರಿತ್ರೆಯ ಕುರಿತಾಗಿ ದಾಖಲೀಕರಣದ ಕೃತಿಗಳು ಕನ್ನಡ, ಇಂಗ್ಲೀಷ್, ಮಲಯಾಳಂ ಈ ಮೂರು ಭಾಷೆಗಳಲ್ಲಿಯೂ ಪ್ರಕಟವಾಗಬೇಕು.
- ಕಾಸರಗೋಡು ಕನ್ನಡಿಗರ ಭಾಷಾಭಿಮಾನವು ಆತ್ಮಾಭಿಮಾನವಾಗಿ ಪುಟಿದೆದ್ದು ನಮ್ಮಭಾಷೆ- ಸಂಸ್ಕೃತಿಯನ್ನು ಉಳಿಸಲು ಪಕ್ಷ-ಪಂಗಡ, ಜಾತಿ - ಮತ ಬೇಧಗಳನ್ನು ತೊರೆದು ಒಂದಾಗಬೇಕು.
- ಭಾಷಾ ಅಲ್ಪಸಂಖ್ಯಾತರ ಪ್ರದೇಶ ಎಂದು ಸರಕಾರ ಘೋಷಿಸಿದಲ್ಲಿ ಭಾಷಾ ಅಲ್ಪಸಂಖ್ಯಾತನೇ ಚುನಾವಣೆಯಲ್ಲಿ ಸ್ಪರ್ಧಿಸಿ ಜನಪ್ರತಿನಿಧಿಯಾಗಿ ಬರುವಂತಾಗಬೇಕು.
- ಕಾಸರಗೋಡಿನಲ್ಲಿ ಕನ್ನಡ, ಮಲಯಾಳಂ, ಇಂಗ್ಲೀಷ್ ತ್ರಿಭಾಷಾ ಪರಿಣತರು ವಿಜೇತರಾಗಿ ರಾಜ್ಯ, ಕೇಂದ್ರ ಸರಕಾರಗಳ ಮುಂದೆ ನಮ್ಮ ಸಮಸ್ಯೆಗಳನ್ನು ಸಮರ್ಥವಾಗಿ ಮನದಟ್ಟುಮಾಡಬೇಕು.
- ಕಾಸರಗೋಡಿನಲ್ಲಿ ಕನ್ನಡದ ಹೆಸರಲ್ಲಿರುವ ವಿವಿಧ ಸಂಘ, ಸಂಘಟನೆಗಳು 'ಕನ್ನಡವೇ ಉಸಿರು' ಎಂದು ಒಂದೇ ಮುಖ್ಯ ಸಮಿತಿಯನ್ನು ಮಾಡಿ ಹರಿದು ಹಂಚಿ ಹೋಗಿರುವ ಕನ್ನಡ ಮನಗಳನ್ನು ಒಗ್ಗೂಡಿಸಬೇಕು.
- ಕನ್ನಡವನ್ನು ಪ್ರತಿಷ್ಠೆಯ ಸರಕಾಗಿಸದೆ, ಹೆಸರಿಗಾಗಿ, ಪ್ರಚಾರಕ್ಕಾಗಿ ಕಾರ್ಯ ಮಾಡದೆ ಕನ್ನಡ ಸೇವೆ ಕರ್ತವ್ಯವೆಂದು ತಿಳಿದು ಪರಸ್ಪರ ಸಹಕರಿಸಬೇಕು.
- ತುಳು ಮತ್ತು ಕನ್ನಡ ಎರಡು ಪರಸ್ಪರ ಸ್ಪರ್ಧೆಗಿಳಿದು ಒಂದರ ಅಭಿವೃದ್ಧಿ ಇನ್ನೊಂದರ ಅವಗಣನೆ ಎಂದು ತಿಳಿಯದೆ, ಇವರಿಬ್ಬರ ಮಧ್ಯೆ ಒಡೆದು ಆಳುವ ನೀತಿಯ ಕುಟಿಲತೆಯನ್ನು ಅರ್ಥೈಸಿಕೊಂಡು ಎಲ್ಲರೂ ಪರಸ್ಪರ ಒಗ್ಗಟ್ಟು, ಪ್ರೀತಿ, ವಿಶ್ವಾಸಗಳಿಂದ ಜೊತೆಯಾಗಿ ನಿಲ್ಲಬೇಕು.
- ಕನ್ನಡ ಮಾಧ್ಯಮ ಮಕ್ಕಳಿಗೆ ಕನ್ನಡ ಶಿಕ್ಷಕರನ್ನೇ ನೇಮಿಸಬೇಕು ಹಾಗೂ ಪಠ್ಯಪುಸ್ತಕ ಇನ್ನಿತರ ಸೌಲಭ್ಯಗಳು ಕನ್ನಡದಲ್ಲಿಯೇ ದೊರೆಯುವಂತಾಗಬೇಕು.
- ಕೇರಳ, ಕರ್ನಾಟಕ ಎರಡೂ ಸರಕಾರಗಳು ಮುಕ್ತವಾಗಿ ಚರ್ಚಿಸಿ ಕಾಸರಗೋಡಿನ ಕನ್ನಡಿಗರನ್ನು ಪ್ರಸ್ತುತ ತ್ರಿಶಂಕು ಸ್ವರ್ಗದಿಂದ ಪಾರು ಮಾಡಬೇಕು.

ಕೊನೆಯದಾಗಿ ಹೇಳುವುದೇನೆಂದರೆ ಎಲ್ಲಾದರು ಇರು ಎಂತಾದಾರೂ ಇರು ಎಂದೆಂದಿಗೂ ನೀ ಕನ್ನಡವಾಗಿರು ಅನ್ನುವ ಕುವೆಂಪುರವರ ಸಾಲುಗಳು ಸದಾ ನಮಗೆ ಸ್ಪೂರ್ತಿಯಾಗಲಿ. ಡಿವಿಜಿಯವರು ಹೇಳಿದಂತೆ ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು। ಹೊಸಯುಕ್ತಿ ಹಳೆತತ್ವದೊಡಗೂಡೆ ಧರ್ಮ ॥ ಋಷಿವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ।ಜಸವು ಜನಜೀವನಕೆ - ಮಂಕುತಿಮ್ಮ ॥ ಎಂಬುದನ್ನು ಸದಾ ನೆನಪಿನಲ್ಲಿಡೋಣ.

(ಲೇಖಕರು: ಹವ್ಯಾಸಿ ಬರಹಗಾರ್ತಿ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 209

ಸಮಾಚಾರ ಸಣ್ಣದಲ್ಲ

ಅದಾನಿ-ಮೋದಿ ಒಂದೇ: ಪ್ರತಿಪಕ್ಷ ಆರೋಪ

ದೆಹಲಿ: ಸರಕಾರಿ ಅಧಿಕಾರಿಗಳಿಗೆ ಲಂಚ ನೀಡಲು ಯತ್ನಿಸಿದ ಆರೋಪವನ್ನು ಅಮೆರಿಕದ ನ್ಯಾಯಾಲಯದಲ್ಲಿ ಎದುರಿಸುತ್ತಿರುವ ಭಾರತದ ಉದ್ಯಮಿ ಗೌತಮ್ ಅದಾನಿ ಪ್ರಕರಣವನ್ನು ಜಂಟಿ ಸದನ ಸಮಿತಿಯ ತನಿಖೆಗೆ ವಹಿಸಬೇಕೆಂದು ಆಗ್ರಹಿಸಿ 'ಇಂಡಿ' ಒಕ್ಕೂಟದ ಪಕ್ಷಗಳ ಸಂಸದರು ಸಂಸತ್ತಿನ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್, ಎಎಪಿ, ಆರ್‌ಜೆಡಿ, ಶಿವಸೇನೆ(ಉದ್ಧವ್ ಬಣ), ಎಡರಂಗ ಸೇರಿದಂತೆ ವಿವಿಧ ಪಕ್ಷಗಳ ಸಂಸದರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. 'ಅದಾನಿ-ಮೋದಿ ಒಂದೇ' ಎಂಬ ಬ್ಯಾನರ್ ಹಿಡಿದು ಸಂಸತ್ ಭವನದ ಮೆಟ್ಟಿಲುಗಳ ಮೇಲೆ ಪ್ರತಿಭಟಿಸಿದರು. ಗೌತಮ್ ಅದಾನಿಯನ್ನು ತಕ್ಷಣ ಬಂಧಿಸಿ ಎಂದು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಒತ್ತಾಯಿಸಿದರು. ಎಎಪಿ ಸಂಸದ ಸಂಜಯ್ ಸಿಂಗ್, ಆರ್‌ಜೆಡಿ ಸಂಸದೆ ಮಿಶಾ ಭಾರತಿ ಮತ್ತು ಶಿವಸೇನೆ (ಉದ್ಧವ್ ಬಣದ) ಸಂಸದ ಅರವಿಂದ್ ಸಾವಂತ್ ಮತ್ತಿತರರಿದ್ದರು.

ಆಸ್ಪತ್ರೆಯಿಂದ ಮನೆಗೆ ಬಂದ ಸಿಎಂ ಶಿಂಧೆ

ಥಾಣೆ: ಮಹಾರಾಷ್ಟ್ರ ಉಸ್ತುವಾರಿ ಮುಖ್ಯಮಂತ್ರಿ ಏಕನಾಥ್ ಶಿಂಧೆ ಅನಾರೋಗ್ಯ ಹಿನ್ನೆಲೆ ಥಾಣೆಯಲ್ಲಿನ ಖಾಸಗಿ ಆಸ್ಪತ್ರೆಗೆ ಸೋಮವಾರ ದಾಖಲಾಗಿದ್ದವರು ಚೇತರಿಸಿಕೊಂಡಿದ್ದು, ಮಂಗಳವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿ ಸ್ವಗ್ರಾಮದ ಮನೆ ಸೇರಿಕೊಂಡಿದ್ದಾರೆ. ಕೆಲ ದಿನಗಳಿಂದ ಜ್ವರ, ಮೈಕೈ ನೋವು, ಗಂಟಲು ಸೋಂಕಿನಿಂದ ಶಿಂಧೆ ಬಳಲುತ್ತಿದ್ದರು. ಸ್ವಗ್ರಾಮದಲ್ಲಿನ ಸಿಎಂ ಮನೆಗೇ ತೆರಳಿ ಚಿಕಿತ್ಸೆ ನೀಡಿದ್ದ ವೈದ್ಯರು ಪೂರ್ಣ ಪ್ರಮಾಣದ ತಪಾಸಣೆಗೆ ಸಲಹೆ ನೀಡಿದ್ದರಿಂದ ಶಿಂಧೆ ಆಸ್ಪತ್ರೆಗೆ ತೆರಳಿದ್ದರು.

ಪ್ರಮಾಣವಚನ ಸಮಾರಂಭಕ್ಕೆ ಭರ್ಜರಿ ಸಿದ್ಧತೆ | ಮೂರೂ ಪಕ್ಷಗಳಲ್ಲಿ ಖಾತೆಗಳ ಹಂಚಿಕೆ ಚೌಕಾಸಿ

ನಾಳೆ ಮಹಾಯುತಿ 2.0 ಸರಕಾರ ರಚನೆ

ಮುಂಬೈ: ಕಡೆಗೂ ಮಹಾಯುತಿ 2.0 ಸರಕಾರ ಗುರುವಾರ ರಚನೆಯಾಗಲಿದೆ. ಬಿಜೆಪಿ-ಶಿವಸೇನೆ-ಎನ್‌ಸಿಪಿ ಮೈತ್ರಿಕೂಟ ಸರಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಹನ್ನೆರಡು ದಿನಗಳಷ್ಟು ತಡವಾಗಿ ಮುಹೂರ್ತ ಕೂಡಿಬಂದಿದೆ.

ಮುಂಬೈನ ಆಜಾದ್ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಭರ್ಜರಿ ತಯಾರಿಯೇ ನಡೆದಿದೆ. 3 ಬೃಹತ್ ವೇದಿಕೆಗಳ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಮೈದಾನಕ್ಕೆ ಮಂಗಳವಾರ ಬೆಳಗ್ಗೆ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಚಂದ್ರಶೇಖರ ಬವಾಂಕುಲೆ ಮತ್ತು ಶಿವಸೇನೆಯ ಗುಲಾಬರಾವ್ ಪಾಟೀಲ್, ಸಂಜಯ್ ಶಿರ್ಸಾತ್ ಮತ್ತು ಎನ್‌ಸಿಪಿಯ ಧನಂಜಯ ಮುಂಡೆ, ಹಸನ್ ಮುಶ್ರೀಫ್ ಸೇರಿದಂತೆ ಕೆಲ ಸ್ಥಳೀಯ ನಾಯಕರು ಸಮಾರಂಭದ ಸಿದ್ಧತಾ ಕಾರ್ಯಗಳ ಪರಿಶೀಲನೆ ನಡೆಸಿದರು. ವಾಹನಗಳ ವ್ಯವಸ್ಥೆ, ಆಸನಗಳ ಸಂಖ್ಯೆ, ಜನದಟ್ಟಣೆ ನಿರ್ವಹಣೆ ಬಗ್ಗೆ ಚರ್ಚಿಸಿದರು.

ಮಹಾಯುತಿ 2.0 ಸರಕಾರ ರಚನೆಯ ಮುಖ್ಯ ಕಾರ್ಯಕ್ರಮಕ್ಕೆ ಮೂರೂ ಪಕ್ಷಗಳೂ ಜತೆಗೂಡಿಯೇ ಕೆಲಸ ಮಾಡುತ್ತಿವೆ. ಶಿವಸೇನೆ, ಎನ್‌ಸಿಪಿ ನಾಯಕರು, ಕಾರ್ಯಕರ್ತರೂ ಬಿಜೆಪಿ ನಾಯಕರು, ಕಾರ್ಯಕರ್ತರ ಜತೆಗೂಡಿ ಸಮಾನವಾಗಿ ಶ್ರಮಿಸುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಚಂದ್ರಶೇಖರ ಬವಾಂಕುಲೆ ಸುದ್ದಿಗಾರರಿಗೆ ವಿವರಿಸಿದರು.

ಗೃಹ ಖಾತೆಯತ್ತ ವಾರೆನೋಟ: ಪ್ರಸ್ತುತ ಸನ್ನಿವೇಶದಲ್ಲಿ 132 ಶಾಸಕರ ಬಲವಿರುವ ಬಿಜೆಪಿಗೇ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡುವುದು ಅನಿವಾರ್ಯವಾಗಿರುವುದರಿಂದ 57 ಶಾಸಕರನ್ನು ಹೊಂದಿ 2ನೇ ಅತಿದೊಡ್ಡ ಪಕ್ಷವೆನಿಸಿಕೊಂಡಿರುವ ಶಿವಸೇನೆ, ಕನಿಷ್ಠ ಗೃಹ ಖಾತೆಯನ್ನಾದರೂ ತನಗೆ ನೀಡಬೇಕೆಂಬ ಬೇಡಿಕೆ ಇಟ್ಟಿದೆ. ಆದರೆ, ಪ್ರಭಾವಿ ಗೃಹ ಖಾತೆಯನ್ನು ಬಿಟ್ಟುಕೊಡಲು ಬಿಜೆಪಿ ಸಿದ್ಧವಿಲ್ಲ. ಹಾಗಾಗಿ, ಗೃಹ ಖಾತೆ ಇಲ್ಲವಾದರೆ ಕಂದಾಯ ಖಾತೆಯನ್ನಾದರೂ ನೀಡಬೇಕೆಂದು ಪಟ್ಟು ಹಿಡಿದಿದೆ ಎಂಬ ಮಾತುಗಳು ಕೇಳಿಬಂದಿವೆ.

ಎಲ್ಲಾ ಸುಳ್ಳು ಸುದ್ದಿ: ಶಿವಸೇನೆ: ಏಕನಾಥ ಶಿಂಧೆ ಅವರು ಚುನಾವಣಾ ಫಲಿತಾಂಶ ಪ್ರಕಟವಾದ ನ.23ರಂದೇ ಮಹಾಯುತಿ ನೂತನ ಸರಕಾರ ರಚನೆಗೆ ಪೂರ್ಣ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. ಅವರ ಕಡೆಯಿಂದ ಯಾವುದೇ ವಿರೋಧ ವ್ಯಕ್ತವಾಗಿಲ್ಲ. ಯಾವುದೇ ಷರತ್ತು ವಿಧಿಸಿಲ್ಲ. ಇಂಥದೇ ಖಾತೆ ಬೇಕೆಂದು ಬೇಡಿಕೆ ಇಟ್ಟಿಲ್ಲ. ಈಗ ಹರಿದಾಡುತ್ತಿರುವುದೆಲ್ಲಾ ಸುಳ್ಳು ಸುದ್ದಿಗಳು ಎಂದು ಶಿವಸೇನೆಯ ಹಿರಿಯ ನಾಯಕರೊಬ್ಬರು ಸುದ್ದಿಗಾರರ ಬಳಿ ಹೇಳಿದ್ದಾರೆ.

ಮುಂಬೈನ ಆಜಾದ್ ಮೈದಾನದಲ್ಲಿ ಮಹಾಯುತಿ 2.0 ಸರಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ವೇದಿಕೆ ನಿರ್ಮಾಣ ಕಾರ್ಯ ನಡೆದಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಚಂದ್ರಶೇಖರ ಭವಾಂಕುಲೆ ಅವರ ಜತೆಗೂಡಿ ಬಂದ ಶಿವಸೇನೆ ಮತ್ತು ಎನ್‌ಸಿಪಿ ನಾಯಕರು ಸಿದ್ಧತಾ ಕಾರ್ಯದ ಪರಿಶೀಲನೆ ನಡೆಸಿದರು.

ಎಂವಿಎ ನಾಯಕರಿಗೂ ಆಹ್ವಾನ

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತಿತರ ಕೇಂದ್ರ ಸಚಿವರು, ಬಿಜೆಪಿ ನಾಯಕರು ಭಾಗಿಯಾಗಲಿರುವ ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಪ್ರತಿಪಕ್ಷ ಒಕ್ಕೂಟವಾದ 'ಮಹಾ ವಿಕಾಸ್ ಅಘಾಡಿ' ನಾಯಕರಿಗೂ ಆಹ್ವಾನ ನೀಡಲಾಗುತ್ತಿದೆ. ಕಾಂಗ್ರೆಸ್ ರಾಜ್ಯಾಧ್ಯಕ್ಷ, ಶಿವಸೇನೆ(ಉದ್ಧವ್ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ, ಎನ್‌ಸಿಪಿ(ಶರದ್ ಬಣ) ನಾಯಕ ಶರದ್ ಪವಾರ್ ಅವರಿಗೂ ಆಹ್ವಾನ ನೀಡಲಾಗುವುದು ಎಂದು ಬಿಜೆಪಿ ನಾಯಕರು ಹೇಳಿದ್ದಾರೆ.

ಇದರೊಟ್ಟಿಗೆ ಮಹಾಯುತಿ ಮೈತ್ರಿಕೂಟದ ಮಹಾ ವಿಜಯಕ್ಕೆ ಕಾರಣವಾದ ಮಹಿಳಾ ಮತದಾರರನ್ನು ಮೆಚ್ಚಿಸಲು ಲಡ್ಕಿ ಬಹಿನ್ ಯೋಜನೆಯ 2000 ಫಲಾನುಭವಿಗಳನ್ನೂ ಸಮಾರಂಭಕ್ಕೆ ಕರೆತರಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಇಂದು ಬಿಜೆಪಿ ಶಾಸಕಾಂಗ ಸಭೆ

ಬಿಜೆಪಿ ಶಾಸಕಾಂಗ ಸಭೆ ಬುಧವಾರ ಆಯೋಜಿತವಾಗಿದ್ದು, ಶಾಸಕರೇ ತಮ್ಮ ನಾಯಕನನ್ನು ಆಯ್ಕೆ ಮಾಡಲಿದ್ದಾರೆ ಎಂದು ಬಿಜೆಪಿ ಹೇಳಿದೆ. ಈ ಸಭೆಗೆ ಕೇಂದ್ರ ವೀಕ್ಷಕರಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಗುಜರಾತ್ ಮಾಜಿ ಸಿಎಂ ವಿಜಯ್ ರೂಪಾಣಿ ಆಗಮಿಸಲಿದ್ದಾರೆ.

ಎರಡು ಬಾರಿ ಮುಖ್ಯಮಂತ್ರಿ, ಒಂದು ಬಾರಿ ಉಪ ಮುಖ್ಯಮಂತ್ರಿಯಾಗಿ ಅನುಭವ ಪಡೆದಿರುವ ದೇವೇಂದ್ರ ಫಡ್ನವಿಸ್ ಅವರೇ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಮೊದಲ ಆಯ್ಕೆಯಾಗಿದ್ದಾರೆ. ಅವರ ಹೊರತಾಗಿ ಬೇರಾವುದೇ ಹೆಸರು ಬಿಜೆಪಿ ವಲಯದಲ್ಲಿ ಕೇಳಿಬರುತ್ತಿಲ್ಲ. ಆದರೆ, ಕಡೆ ಕ್ಷಣದಲ್ಲಿ ಅಚ್ಚರಿಯ ಆಯ್ಕೆ ಪ್ರಕಟಿಸುವುದರಲ್ಲಿ ಬಿಜೆಪಿ ಹೆಸರಾಗಿದೆ. ಬುಧವಾರ ಸಂಜೆ ವೇಳೆಗೆ ನೂತನ ಮುಖ್ಯಮಂತ್ರಿ ಹೆಸರು ಅಂತಿಮಗೊಳ್ಳುವ ನಿರೀಕ್ಷೆ ಇದೆ.

ಸಂತರಿಗಾಗಿ ಸಮಾರಂಭದಲ್ಲಿ ಪ್ರತ್ಯೇಕ ವೇದಿಕೆ ರಚನೆ
ಪ್ರಮಾಣ ವಚನ ಸಮಾರಂಭ ವೇದಿಕೆಯಿಂದ ಸಂದೇಶ

ಮಹಾರಾಷ್ಟ್ರ: ಹಿಂದೂ ಸಮುದಾಯ ಸಂಘಟನೆಗೆ ಬಿಜೆಪಿ ಭರ್ಜರಿ ಪ್ಲಾನ್



ಮುಂಬೈನ ಆಜಾದ್ ಮೈದಾನದಲ್ಲಿ ಪ್ರಮಾಣವಚನ ಸಮಾರಂಭಕ್ಕೆ 3 ವೇದಿಕೆಗಳ ನಿರ್ಮಾಣ.

ಮುಂಬೈ: ಮಹಾರಾಷ್ಟ್ರದಲ್ಲಿ ಮಹಾಯುತಿ ಮೈತ್ರಿಕೂಟದ ಸರಕಾರ ರಚನೆಗೆ 11 ದಿನಗಳಷ್ಟು ವಿಳಂಬವೇ ಆಗಿದ್ದರೂ, ಬಿಜೆಪಿ ಈ ಸಂದರ್ಭವನ್ನು ಬೇರೆಯದೇ ರೀತಿಯಲ್ಲಿ ಬಳಸಿಕೊಳ್ಳಲು ಸಿದ್ಧತೆ ಮಾಡಿಕೊಳ್ಳುತ್ತಿದೆ.

ನೂತನ ಮುಖ್ಯಮಂತ್ರಿ ಆಯ್ಕೆಯೇ ಇನ್ನೂ ಆಗಿಲ್ಲ. ಆದರೂ ಡಿ.5ರಂದು ಮುಂಬೈ ಮಹಾನಗರದ ಆಜಾದ್ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಬಿಜೆಪಿ ಅದಾಗಲೇ ಸಿದ್ಧತೆ ಮಾಡಿಕೊಳ್ಳುತ್ತಿದೆ. ಈ ಪ್ರಮಾಣ ವಚನ ಸಮಾರಂಭವನ್ನೇ ಹಿಂದೂಗಳ ಒಗ್ಗಟ್ಟಿನ ಪ್ರದರ್ಶನದ ವೇದಿಕೆಯಾಗಿ ಬಳಸಿಕೊಳ್ಳಲೂ ಯೋಜಿಸಿದೆ. ಅದಕ್ಕಾಗಿ ವರಿಷ್ಠರ ಸೂಚನೆಯಂತೆಯೇ ಬಿಜೆಪಿ ಮಹಾರಾಷ್ಟ್ರ ಘಟಕ ಭರ್ಜರಿ ತಯಾರಿಯನ್ನೇ ನಡೆಸಿದೆ.

ಬಿಜೆಪಿ-ಶಿವಸೇನೆ-ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ)ದ ಮೈತ್ರಿಕೂಟ 'ಮಹಾಯುತಿ'ಯ 2ನೇ ಅವಧಿಯ ಸರಕಾರ ರಚನೆಯ ಮೊದಲ ಹಂತವಾದ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ 22 ರಾಜ್ಯಗಳಲ್ಲಿನ ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟ ಸರಕಾರದ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ. ಅಷ್ಟೇ ಅಲ್ಲದೇ, ವಿಶ್ವದೆಲ್ಲೆಡೆಯ ಹಿಂದೂ ಸಂತರನ್ನು ಕಾರ್ಯಕ್ರಮಕ್ಕೆ ಕರೆಸಲಾಗುತ್ತಿದೆ. ಸಂತರಿಗಾಗಿ ಮುಖ್ಯ ವೇದಿಕೆಯ ಪಕ್ಕದಲ್ಲೇ ಪ್ರತ್ಯೇಕವಾದ ಬೃಹತ್ ವೇದಿಕೆಯೂ ನಿರ್ಮಾಣವಾಗುತ್ತಿದೆ.

ಈ ಮೊದಲೂ ಬಿಜೆಪಿ ಆಡಳಿತಕ್ಕೆ ಬಂದ ರಾಜ್ಯಗಳಲ್ಲಿ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಸಂತರನ್ನು ಆಹ್ವಾನಿಸಿದ್ದಿದೆ. ಆದರೆ, ನೆರೆಯ ಮುಸ್ಲಿಂ ರಾಷ್ಟ್ರ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ನಡೆಯುತ್ತಿರುವ ಈ ಸಂದರ್ಭದಲ್ಲಿ ಬೇರೆಯದೇ ಸಂದೇಶ ನೀಡುವ ಸಲುವಾಗಿ ಮಹಾರಾಷ್ಟ್ರ ಸರಕಾರ ರಚನೆಯ ವೇದಿಕೆಯನ್ನು ಬಳಸಿಕೊಳ್ಳಲಾಗುತ್ತಿದೆ. ಅಲ್ಲದೇ, ಈ ಯೋಜನೆ ಮಹಾರಾಷ್ಟ್ರ ರಾಜಕೀಯದಲ್ಲಿನ 'ಹಿಂದೂ' ಪ್ರಭಾವವನ್ನು ಪ್ರದರ್ಶನ ಮಾಡಲೂ ಬಳಕೆಯಾಗಲಿದೆ ಎಂದೇ ವ್ಯಾಖ್ಯಾನಿಸಲಾಗಿದೆ.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ 3 ದೊಡ್ಡ ವೇದಿಕೆಗಳಿರಲಿವೆ. ಪ್ರಮಾಣ ವಚನ ಸ್ವೀಕಾರ, ಸಂತರಿಗೆ ಎರಡು ವೇದಿಕೆ ಮೀಸಲಾಗಿದ್ದರೆ, 3ನೇ ವೇದಿಕೆಯಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಲಿದೆ. ವೇದಿಕೆಗಳ ಹಿನ್ನೆಲೆಯಲ್ಲಿ ವೀರ ಸಾವರ್ಕರ್, ಬಾಳಾ ಸಾಹೇಬ್ ಠಾಕ್ರೆ ಹಿಂದೂ ಪರ ಹೋರಾಟಗಾರರು ಹಾಗೂ ಮಹಾಪುರುಷರ ಬೃಹತ್ ಚಿತ್ರಗಳ ಪ್ರದರ್ಶನವಾಗಲಿದೆ. ಆ ಮೂಲಕ ದೇಶ-ವಿಶ್ವದೆಲ್ಲೆಡೆಯ ಹಿಂದೂಗಳಿಗೆ 'ವಿಭಜನೆಗೊಂಡರೆ ಸಾವು-ಒಗ್ಗಟ್ಟಿನಿಂದಿದ್ದರೆ ಗೆಲುವು' ಎಂಬ ಸಂದೇಶ ಸಾರುವ ಪ್ರಯತ್ನವಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಮೆರಿಕದಿಂದ 9908 ಕೋಟಿ ರು. ಹೆಲಿಕಾಪ್ಟರ್-ಶಸ್ತ್ರ

ವಾಷಿಂಗ್ಟನ್: ಭಾರತಕ್ಕೆ 117 ಕೋಟಿ ಡಾಲರ್(9908 ಕೋಟಿ ರು.) ಮೌಲ್ಯದ ಎಂಎಚ್-60ಆರ್ ಮಲ್ಟಿಮಿಷನ್ ಹೆಲಿಕಾಪ್ಟರ್‌ನ ಉಪಕರಣಗಳು, ಅದಕ್ಕೆ ಜೋಡಿಸಬಲ್ಲ ಶಸ್ತ್ರಗಳು ಮತ್ತು ಅಗತ್ಯ ಬಿಡಿಭಾಗಗಳ ಮಾರಾಟಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ, ಅಲ್ಲಿನ ಸಂಸತ್‌ನಲ್ಲಿ ಅನುಮೋದನೆ ನೀಡಿದೆ.

ಪ್ರಸ್ತಾವಿತ ಮಾರಾಟ ವಹಿವಾಟು ಅಮೆರಿಕದ ಜಲಾಂತರ್ಗಾಮಿಗಳ ನಾಶ ಸಾಮರ್ಥ್ಯದ ಸುಧಾರಿತ ಉಪಕರಣಗಳನ್ನೂ ಒಳಗೊಂಡಿದೆ. ಇದರಿಂದ ಭಾರತದ ನೌಕಾಪಡೆಯ ಸಾಮರ್ಥ್ಯ ಉನ್ನತೀಕರಣವಾಗುತ್ತದೆ ಎಂದು ರಕ್ಷಣಾ ಭದ್ರತಾ ಸಹಕಾರ ಸಂಸ್ಥೆ ಅಧಿಸೂಚನೆಯಲ್ಲಿ ತಿಳಿಸಿದೆ.

ಇದರೊಂದಿಗೆ ಭಾರತ 30 ಬಹುಕ್ರಿಯಾತ್ಮಕ ಮಾಹಿತಿ ವಿತರಣಾ ವ್ಯವಸ್ಥೆಯನ್ನು ಒಳಗೊಂಡ ಜಾಯಿಂಟ್ ಟ್ಯಾಕ್ಟಿಕಲ್ ರೇಡಿಯೊ ಸಿಸ್ಟಂಗಳನ್ನೂ ಖರೀದಿಸಲಿದೆ. ಇದು ದತ್ತಾಂಶ ವರ್ಗಾವಣೆಯಲ್ಲಿ ಸುಧಾರಿತ ವ್ಯವಸ್ಥೆಯನ್ನು ಒಳಗೊಂಡಿದೆ.

ಬೈಡನ್ ನೇತೃತ್ವದ ಆಡಳಿತದ 4 ವರ್ಷಗಳ ಅವಧಿ ಜ.19ಕ್ಕೆ ಪೂರ್ಣಗೊಳ್ಳಲಿದೆ. ಅದಕ್ಕೆ ಒಂದೂವರೆ ತಿಂಗಳ ಮೊದಲಷ್ಟೇ ಭಾರತಕ್ಕೆ ಪ್ರಮುಖ ರಕ್ಷಣಾ ಸಾಧನಗಳನ್ನು ಮಾರಾಟ ಮಾಡಲು ಒಪ್ಪಿಗೆ ಸಿಕ್ಕಿದೆ. ಅಮೆರಿಕ 47ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಜ.20ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಸಿಇಸಿ ನೇಮಕ: ವಿಚಾರಣೆಯಿಂದ ಹಿಂದೆ ಸರಿದ ಸಿಜೆಐ

ದೆಹಲಿ: ಮುಖ್ಯ ಚುನಾವಣಾ ಆಯುಕ್ತರು(ಸಿಇಸಿ) ಮತ್ತು ಚುನಾವಣಾ ಆಯುಕ್ತರ(ಇಸಿ) ನೇಮಕಕ್ಕೆ ಸಂಬಂಧಿಸಿದ ಕಾಯಿದೆಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮಂಗಳವಾರ ಹಿಂದೆ ಸರಿದರು.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರೆ ಚುನಾವಣಾ ಆಯುಕ್ತರುಗಳ(ನೇಮಕ, ಸೇವಾ ಷರತ್ತುಗಳು ಮತ್ತು ಅಧಿಕಾರಾವಧಿ) ಕಾಯ್ದೆ-2023ರ ಸೆಕ್ಷನ್ 7 ಮತ್ತು 8ರ ಸಾಂವಿಧಾನಿಕತೆಯನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾ.ಸಂಜಯ್ ಕುಮಾರ್ ಅವರ ಪೀಠದೆದುರು ಬಂದಾಗ ಮುಖ್ಯ ನ್ಯಾಯಮೂರ್ತಿ ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ಹೇಳಿದರು. ಅರ್ಜಿಗಳ ವಿಚಾರಣೆ 2025ರ ಜ.6ರಂದು ಬೇರೊಂದು ಪೀಠದಲ್ಲಿ ನಡೆಯಲಿದೆ. ಸಿಇಸಿ ಮತ್ತು ಇಸಿ ನೇಮಕ, ಸೇವಾ ಷರತ್ತುಗಳು ಹಾಗೂ ಸೇವಾವಧಿ ಕಾಯಿದೆ-2023ರ ಜಾರಿಗೂ ಮುನ್ನ ಪ್ರಧಾನಿ, ಕೇಂದ್ರ ಸಚಿವರು ಸೇರಿ ಅರ್ಹರ ಹೆಸರು ಶಿಫಾರಸು ಮಾಡುತ್ತಿದ್ದರು. ಶಿಫಾರಸಿಗೆ ರಾಷ್ಟ್ರಪತಿ ಅಂಕಿತ ಹಾಕುತ್ತಿದ್ದರು.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್

ಪ್ರಧಾನ ಕಛೇರಿ: ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ದ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ. 10/1, 11/2 & 12/2ಬಿ ಆಫ್ ದೊಮ್ಮಲೂರು, ಕೋರಮಂಗಲ ಒಳ ವರ್ತುಲ ರಸ್ತೆ, ಇಜಿಎಲ್ ಬ್ಯುಸಿನೆಸ್ ಪಾರ್ಕ್ ಹತ್ತಿರ, ಚಳ್ಳಘಟ್ಟ, ಬೆಂಗಳೂರು-560071

ಚಿನ್ನಾಭರಣಗಳ ಹರಾಜಿಗಾಗಿ ಸಾರ್ವಜನಿಕ ಸೂಚನೆ

ಈ ಕೆಳಗೆ ಹೆಸರಿಸಿರುವ ಸಾಲಗಾರರು ಹಲವಾರು ವಿನಂತಿಯ ನಂತರವೂ ಸಾಲ ಮರು ಪಾವತಿಸಲು ವಿಫಲರಾಗಿ, ಚಿನ್ನಾಭರಣ ಪಡೆದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ಕೆಳಗೆ ಹೆಸರಿಸಿರುವ ಖಾತೆಗಳ ಸಾಲಗಾರರ ಚಿನ್ನಾಭರಣಗಳನ್ನು ಸಾರ್ವಜನಿಕ/ಆನ್‌ಲೈನ್/ಖಾಸಗಿ ಹರಾಜು ಮೂಲಕ ನಮ್ಮ ಶಾಖೆಯಲ್ಲಿ ಆನ್‌ಲೈನ್ ಆಕ್ಷನ್ ಟೈಗರ್ ಮೂಲಕ **23.12.2024ರಂದು ಬೆಳಿಗ್ಗೆ 10.30ಕ್ಕೆ** ಮಾರಾಟ ಮಾಡಲಾಗುವುದು. ಭಾಗವಹಿಸಲು ಆಸಕ್ತರಾಗಿರುವವರು ಶಾಖೆಯನ್ನು ಸಂಪರ್ಕಿಸಬಹುದಾಗಿದೆ. ಯಾವುದೇ ಕಾರಣ ನೀಡದೆ, ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿದೆ. ದಯವಿಟ್ಟು ಗಮನಿಸಬೇಕಾದುದೇನೆಂದರೆ, ಹರಾಜಿನ ದಿನದಂದು ಹರಾಜು ಪೂರ್ಣಗೊಂಡಿಲ್ಲವಾದರೆ, ಅದನ್ನು ಮರುದಿನ ಅದೇ ನಿಯಮ ನಿಬಂಧನೆಗಳಿಗನುಸಾರವಾಗಿ ನಡೆಸಲಾಗುವುದು. ಒಂದು ವೇಳೆ ಗ್ರಾಹಕ ಮೃತನಾಗಿದ್ದರೆ, ಅದೇ ನಿಯಮ ಮತ್ತು ನಿಬಂಧನೆ ಅವರ ಉತ್ತರಾಧಿಕಾರಿ/ ನಾಮನಿರ್ದೇಶಿತನಿಗೆ ಅನ್ವಯವಾಗುವುದು. ಸಾಲಗಾರರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಹರಾಜಿನ ಮೊದಲು ಎಲ್ಲ ಬಾಕಿ, ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ಪಾವತಿಸಬೇಕು. ತಪ್ಪಿದಲ್ಲಿ ಅಡಮಾನ ಮಾಡಿರುವ ಚಿನ್ನಾಭರಣಗಳನ್ನು ಮಾರಾಟ ಮಾಡಿ ಬ್ಯಾಂಕಿಗೆ ಬರಬೇಕಾಗಿರುವ ಬಾಕಿ ಹಣವನ್ನು ಬಡ್ಡಿ ಹಾಗೂ ಇತರೆ ವೆಚ್ಚಗಳನ್ನು ವಸೂಲು ಮಾಡಲಾಗುವುದು. ಯಾವುದೇ ವಿಚಾರಣೆ ಮತ್ತು ನಿಯಮ ಮತ್ತು ನಿಬಂಧನೆಗಳಿಗೆ ಶಾಖೆಯನ್ನು ಸಂಪರ್ಕಿಸಿ. ಶಾಖೆ ವಿಳಾಸಕ್ಕಾಗಿ **www.janabank.com** ಗೆ ಭೇಟಿ ನೀಡಿ.

ಕ್ರ. ಸಂ.	ಸಾಲದ ಖಾತಾ ಸಂ.	ಸಾಲಗಾರರ / ಸಹ-ಸಾಲಗಾರರ ಹೆಸರು	ಅಡಮಾನ ಮಾಡಿದ ಆಭರಣಗಳ ಒಟ್ಟು ತೂಕ
1	45488730013391	ನರಸಿಂಹ ಎಸ್	5.9
2	45488730013273	ಲಕ್ಷ್ಮಿ ಇಡಿ	5
3	45488730012398	ಜಿಂದಮದಮ ನಾಗಪ್ಪ	12.8
4	45488730012194	ಶಿವಮೂರ್ತಿ ಎಂ	110.9
5	45488730012132	ತ್ರಿವೇಣಿ ಟಿ	10.1
6	45488730012116	ವೀರೇಶ್ ಜೆ	9.9
7	45488730012066	ದೇವದಾಸ್ ಎ	11.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಡೋರ್ ನಂ.1-4-380, ಹೆಚ್ ಕೆ ದುಂಬಾ ನರ್ಸಿಂಗ್ ಹೋಂ, ಆರ್ಥೋಪೆಡಿಕ್ ಸೆಂಟರ್, ಐ ಬಿ ರಸ್ತೆ, ರೈಲ್ವೆ ನಿಲ್ದಾಣ ಸಮೀಪ, ರಾಯಚೂರು-584101, ಭಾರತ		
8	45358730014712	ಮಹೇಶ್ ಕೆ ಎನ್	6.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 558, ಬಿಡಿಎ, 1ನೇ ಮುಖ್ಯ ರಸ್ತೆ, ಕೆಂಗೇರಿ ಉಪನಗರ/ ಸ್ಯಾಟಲೈಟ್ ಟೌನ್, ವಿದ್ಯಾಗಣಪತಿ ದೇವಾಲಯದ ಎದುರು, ಜನಲಕ್ಷ್ಮಿ ಸಮೀಪ ಬೆಂಗಳೂರು-560060.		
9	33638730057180	ಪುಷ್ಪ ಶಿವಣ್ಣ	26.2
10	33638730057115	ಅರ್ಶಿಯ ಬಾನು	4.1
11	33638730057039	ಎಸ್ ಪ್ರಕಾಶ್	6.4
12	33638730056970	ಕಿರಣ್ ಎಸ್	12.5
13	33638730056878	ಕಿರಣ್ ಎಸ್	6.4
14	33638730056792	ರಾಜಲಕ್ಷ್ಮಿ ಮುನಿಯಪ್ಪ	8.5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, 2/1, ನಂ.4, ರುಕ್ಮಿಣಿ ನಿಲಯ, ಮೆಟ್ರೋ ನಿಲ್ದಾಣದ ಹತ್ತಿರ, ಮಾಗಡಿ ಮುಖ್ಯ ರಸ್ತೆ, ಬೆಂಗಳೂರು-560023.		
15	31838730051460	ದಿವ್ಯ ಡಿ ದಾಮೋದರಮ್ ವಿ	4.2
16	31838730051405	ಜಯರಾಮೇಗೌಡ ಎಂ	3.4
17	31838730051371	ಅಮ್ರೀನ್ ತಾಜ್	5
18	31838730051332	ಭಾಗ್ಯಲಕ್ಷ್ಮಿ ರಾಮಜಲುಂದು	11.3
19	31838730051230	ಅಂಜಲಿ ಪಇ	6.4
20	31838730051201	ಮುಬಾರಕ್ ಪಾಶಾ	3.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಕರ್ಣಾಟಕ ಬ್ಯಾಂಕ್ ಬ್ಯಾಂಕ್ ಮೇಲ್ಭಾಗ, ಸೈಟ್ ನಂ. 22 ಖಾತಾ ನಂ.25, ಶಾರದಾ ನಗರ, ವಸಂತಪುರ ಮುಖ್ಯರಸ್ತೆ, ಉತ್ತರಹಳ್ಳಿ ಹೋಬಳಿ, ಬೆಂಗಳೂರು-560061.		
21	32568730025347	ವೆಂಕಟೇಶ್ ಕೆ	20.7
22	32568730025284	ಹೇಮಂತ್ ಕುಮಾರ್ ಎಸ್	6.2
23	32568730025261	ಎಸ್ ಮುನಿಯಪ್ಪ	4.9
24	32568730025232	ಅಲ್ಲೆಯಪ್ಪ ಎಂ	4.7
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಒಂದನೇ ಮಹಡಿ, ಖಾತಾ ನಂ.68/63, ಕೆಸ್‌ಆರ್‌ಟಿಸಿ ಬಸ್ ನಿಲ್ದಾಣ, ಸಿಕೆಆರ್ ಕಾಂಪ್ಲೆಕ್ಸ್, ಆನೇಕಲ್ ಹತ್ತಿರಬೆಂಗಳೂರು-562106.		
25	31988730030539	ವಿ ಹುಲಿಗಯ್ಯ	5.8
26	31988730030526	ಬಿ ಅರಳೇಶ್	24.4
27	31988730030437	ವೈ ಪ್ರತಿಮ	25
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1, ಮಹಡಿ, ಮೋಕಾ ರಸ್ತೆ, ಗಾಂದಿನಗರ ಮಾರುಕಟ್ಟೆ, ಬಳ್ಳಾರಿ-583101, ಕರ್ನಾಟಕ.		
28	33648730031249	ಹೈಮಾವತಿ ಎಂ	12.7
29	33648730031160	ಗೀತಾ ಹೊನ್ನಪ್ಪ	4.1
30	33648730031061	ಜ್ಯೋತಿ ಚಂದ್ರಪ್ಪ	4.1
31	33648160001075	ಚಿಕ್ಕಮಾರೆ ಗೌಡ ಎಂ	15.2
32	33648160001052	ದಿವ್ಯ ಮಹೇಶ್ ಬಿ ಎಂ	108
33	33648160000990	ಸೋಮಶೇಖರ್ ಸಾಹೆಬ್	5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 12, 1ನೇ ಮಹಡಿ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೇಲ್ಭಾಗ, ನಾಗರಬಾವಿ 2ನೇ ಹಂತ, 11ನೇ ಬ್ಲಾಕ್, ಪಿ ಆರ್ ಪಾಳ್ಯ, ಬೆಂಗಳೂರು-560072.		
34	33458730024545	ರೂಪಾ ಎನ್	24.3
35	33458730024367	ಶೀಲಾ ಆರ್ ಡಿ	5
36	33458730024281	ಲಕ್ಷ್ಮಿ ಪಿ	55.5
37	33458160003831	ಕನ್ಯಾಕುಮಾರಿ ಯೋಗೀಶ್	59.7
38	33458160003791	ಕಾರ್ತಿಕ್ ಬಿ ಆರ್	63.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 730, ಹಿಣಕಲ್ ಹುಣಸೂರು ಮುಖ್ಯರಸ್ತೆ ಮೈಸೂರು-570017.		
39	32018730006399	ಸೋಮಪ್ಪ ಸೋಮಪ್ಪ ಮಾದಾರ್	5
40	32018730006350	ಸವಿತ ಮಹಾಂತೆಲ್ಮ	4.9
41	32018730006311	ವೇಮನ ಪಟ್ರೊಟಿ	6
42	32018730006271	ಸಂತೋಷ್ ಶಿವಾಜಿ ಕಲಾಲ್	6.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 1ನೇ ಮಹಡಿ, ನಂ. 239/2ಎ+ಬಿ/1ಡಿ, ಪ್ಲಾಟ್ ನಂ. 5, ನಂದಗೌಡ ರಸ್ತೆ, ನೂರ್ ಕೆರೂಡಿ ಆಸ್ಪತ್ರೆ, ವಿನಾಯಕ ನಗರ್, ಬಾಗಲಕೋಟೆ-587101, ದೂ: 08354-225452		
43	31138730055205	ಸಂಜೀವ್ ಜರಿಜನ್	4.4
44	31138730055142	ಶಂಸಾದ್ ಬಾನು ರಸೂಲ್ ಸಾಬ್	44.5
45	31138730054942	ಕೃಷ್ಣ ತಾನೋಜಿ ಚವನ್	5.6
46	31138730054929	ಮೊಹಮ್ಮದ್ ರಫೀಕ್ ಉಕ್ಕಲಿ	4.3
47	31138730054866	ನಸ್ರೀನ್ ಜಹಾನ್ ಎನ್ ತುರ್ಕಿ	9.7
48	31138730054840	ಜಕೀರಾ ಮೊಹಮ್ಮದ್ ಯಸಿನ್	17.3
49	31138730054688	ಹುಸೇನಬಿ ಮುಲ್ಲಾ	5.1
50	31138730053011	ಸಾತಯ್ಯ ಹಿರೇಮಠ್	4.8
51	31138730052900	ಅನಿಲ್ ನಿಜಪ್ಪ ನಲ್ಲಮನ್	9.9
52	31138160003086	ವಿನಯ್ ಕುಮಾರ್ ಸಂಗನಗೌಡ ಪೊಲೀಸ್‌ಪಾಟೀಲ್	19.9
53	31138160003073	ಶಾಂತಾಬಾಯಿ ಪಾಟೀಲ್	51.8
54	31138160002991	ಮಹೇಶ್ ಸಿದ್ದಪ್ಪ ತಂಬಗಿ	7.9
55	31138160002952	ಪ್ರವೀಣ್ ರುದ್ರಗೌಡರ್	24.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಸಿಟಿಎಸ್ ನಂ.1334/ಎ, 2ನೇ ಮಹಡಿ, ಜಯಲಕ್ಷ್ಮಿ ಟ್ರಾನ್ಸ್‌ಪೋರ್ಟ್ ಕಂ. ಮೇಲ್ಭಾಗ, ಗಣಪತಿ ಚೌಕ ಹತ್ತಿರ, ಶಹಾಪೇಟೆ, ಬಿಜಾಪುರ-586101		
56	30948730019581	ಕಿಶೋರ ಎನ್	4.9
57	30948730019492	ರವಿ ಸಿ ಹೆಚ್	3
58	30948730019476	ನೂರ್ ಆಯೇಷಾ ಆಯೇಷಾ	2.8
59	30948730019440	ರೇಣುಕ	3.7
60	30948730019424	ಗೀತಾ ಮೋಹನ್‌ಕುಮಾರ್	5
61	30948730019322	ನಾರಾಯಣ ಸ್ವಾಮಿ ಎ ಬಿ	29.9
62	30948730019309	ವಸಂತ್ ಕುಮಾರ್ ಎಂ ಕೆ	20.1
63	30948730019285	ಗೋವಿಂದ ಆರ್	28.6
64	30948730019259	ಕಾಮಾಕ್ಷಿ ಎನ್ ನಾರಾಯಣ ಜೆ	2.7
65	30948160002131	ಕಾಶಿಪತಿ ಆರ್	84.6
66	30948160002105	ರಘುವೀರ್ ನಾಯಕ ಹೆಚ್ ಆರ್	10
67	30948160002094	ರಘುವೀರ್ ನಾಯಕ ಹೆಚ್ ಆರ್	9.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., 2ನೇ ಮಹಡಿ, ನಂ. 2391/1, ಕಾಂತರಾಜ್ ಅರಸ್ ರಸ್ತೆ ಕೆ ಜಿ ಕೊಪ್ಪಲು, ಮೈಸೂರು-570009.		
68	31128730034656	ಮಮತ ಶಿವಪ್ಪ	6.58
69	31128730034643	ಶ್ರೀನಿವಾಸ ಎ	16.44
70	31128730034630	ಮುನಿಯಮ್ಮ	5.8
71	31128730034392	ರಾಮಮ್ಮ ರಂಗಪ್ಪ	7.29
72	31128730033985	ಸಲ್ಮಾನ್ ಕಾಣ್	12.8
73	31128160003430	ರಾಧಿಕಾ	31.5
74	31128160003351	ಮಂಜು	26.5
75	31128160003312	ಗೌರಿ ವೈ ಹೆಚ್	23.95
76	31128160003262	ವೈ ಸೀನಪ್ಪ ಯಲ್ಲಪ್ಪ	34.37
77	31128160002591	ಲತಾ ಜಿ ವಿ	19.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #880, 2ನೇ ಮಹಡಿ, ಎಸ್ ಎಸ್ ಕಾಂಪ್ಲೆಕ್ಸ್, ಬಿ ಹೆಚ್ ರಸ್ತೆ, ಶಿವಮೊಗ್ಗ-577202.		
78	30488730030077	ನಿಂಗಪ್ಪ ಬಸವರಾಜ್ ಮಡಿವಾಳರ್	10.51
79	30488730030064	ವಿಠಲ್ ಮಾನೆ	12.5
80	30488730030041	ಲಕ್ಷ್ಮಿ ಅಶೋಕ್	7.7
81	30488730030012	ಉಮೇಶ್ ಬಸಪ್ಪ ಬಡಿಗೇರ್	14.57
82	30488730029994	ರೇಷ್ಮಾ ಡಿ ಶಿಂಧೆ	6.99
83	30488730029866	ಆನಂದ್ ಅರ್ಜುನ್ ಸೊಬಂದ್	5.73
84	30488730029040	ಘಾಟ್ಗೆ ನೀಲವ್ವ	14.1
85	30488160000552	ಮೌಲಾಸಾಬ್ ನಡಾಫ್	15.08
86	30488160000542	ಯಲ್ಲಲಿಂಗೇಶ್ವರ ಶೇಖರ್ ಕಟ್ಟಿಮನಿ	20.68
87	30488160000450	ರೇಖಾ ಹೆಚ್ ಮರ್ದೂರ್	29
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಲಿಂಗರಡ್ಡಿ ಕಟ್ಟಡ, ಕಲಘಟಗಿ ಮುಖ್ಯರಸ್ತೆ ಸರಸ್ವತ್‌ಪುರ, ಧಾರವಾಡ-580002		
88	46988160004581	ಜ್ಯೋತಿ ನಾಗೇಶ್ ಡಿ ಎಂ	49.7
89	46988160004492	ಭೀಮರಾಜು ಎನ್	48.7
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಡೋರ್ ನಂ. 66, ಖಾತಾ ನಂ.865/66 ರೋಜಿಪುರ ಗ್ರಾಮ, ಹಸಬಾ ಹೋಬಳಿ, ನಂದಿನಿ ಆಸ್ಪತ್ರೆ ಹತ್ತಿರ, ದೊಡ್ಡಬಳ್ಳಾಪುರ, ಬೆಂಗಳೂರು-561203		
90	31888730025306	ಗೀತಾ ತಿರುಮುರುಗನ್	3.1
91	31888730025102	ಆಯೇಷಾ ಸೈಯದ್ ಜಹೀರ್	4.2
92	31888730025078	ಶಿರಾಜ್ ಬೇಗಂ	3.5
93	31888730025000	ಶಮೀಮ್ ಅಬ್ದುಲ್ ಜಹೀದ್	5.2
94	31888730024980	ಅನ್ವರಸಿ ರಾಜ್‌ಕುಮಾರ್	3.8
95	31888730023875	ಲೈಸ್ ರಾಜ್ ಎನ್ ಡಿ	13.2
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮತ್ತು 1ನೇ ಮಹಡಿ, ಪ್ಲಾಟ್ ನಂ. 22, ಪಿಐಡಿ ನಂ.85-6-22 ಸರ್ವಜ್ಞನಗರ, #01 ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-560005.		
96	31768730016572	ಶ್ರೀದೇವಿ ವಿಶ್ವನಾಥ್	12.4
97	31768730016569	ಸುಶೀಲಮ್ಮ ರಾಮುಲು	5
98	31768730016543	ಅಭಿಷೇಕ್ ಮಾರುತಿ ಎಂ	5.5
99	31768730016467	ಶಿವಾಜಿ ಕೆ	4.9
100	31768730016428	ಕವಿತ ಸುರೇಶ ಸ್ವಾಮಿ	5.1
101	31768730015760	ಕುಂದನ್ ಬಾಯಿ ಜಾನ್ ವೆಸ್ಲೆ ಜಿ	10.9
102	31768160002361	ಸಂತೋಷ್ ಶಿವರಾಜ್	21.8
103	31768160002312	ಶ್ರೀಕಾಂತ್ ಎಂ	62.3
104	31768160002298	ಪೂಜಾ ಎಸ್	42.1
105	31768160002246	ನರ್ಸ ರೆಡ್ಡಿ ಆರ್	39
106	31768160002144	ಅಗಶೆ ನಾಗೇಶ್ ಅಗಶೆ ಶರಣಪ್ಪ ಎ	15
107	31768160002094	ಶ್ರುತಿ ಹೆಚ್	30
108	31768160001332	ಮಲ್ಲಿಕಾರ್ಜುನ್ ಎಸ್	44.6
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಲಕ್ಷ್ಮಿ ಇಂಟರ್‌ನ್ಯಾಷನಲ್ ಹೋಟೆಲ್ ಕೆಳಭಾಗ, ಶಿವನಗರ, ಬೀದರ್-585401.		
109	31788730015646	ವಿಜಯ	7.59
110	31788730015596	ಡಿ ಶಿವರಾಜು	5.51
111	31788730015583	ದಯಾನಂದ ಆರ್	39.82
112	31788730015471	ಸುಮಿತ್ರ ಚಿಕ್ಕೇಗೌಡ	6.98
113	31788160011571	ವಸಂತ್ ಕುಮಾರ್	32.14
114	31788160011568	ಇಂದ್ರಮ್ಮ ಸಿ ಎನ್ ವಾಸುದೇವ್	26
115	31788160011503	ವಿಶಾಲ್ ಬಾಲಕೃಷ್ಣ	250.59
116	31788160011430	ಅಭಿಷೇಕ್	16.89
117	31788160011377	ಬಿಂದು ದೊಡ್ಡಯ್ಯ	38.22
118	31788160011364	ಸಚಿನ್ ಎನ್	9.01
119	31788160010390	ಸಂಧ್ಯಾ ಕೆ ಎಸ್	31.27
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಚಂದನ ಕಾಂಪ್ಲೆಕ್ಸ್, ಆರ್ ನಂ.102 ನಿರ್ಧರಣ ನಂ. 211, ಆಸ್ತಿ ನಂ. 8-1-501-66, ವಾರ್ಡ್ ನಂ.8-ಆರ್‌ಸಿ, ಹರ್ಷಮಹಲ್ ರಸ್ತೆ, ಹಾಸನ-573201, ಕರ್ನಾಟಕ.		
120	46458730008000	ಚಿತ್ರಾ ಎನ್	13.5
121	46458730007931	ನಚಿರಾಜು ಸಾಯಿ ಸುಬ್ಬರಾವ್	5.86
122	46458730007915	ಚಂದ್ರ ಬಿ ಎಂ	13.55
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ. 02, ಖಾನೇಶುಮಾರಿ ನಂ. 2434/2, ಎಸ್ ಎ ಕಾಂಪ್ಲೆಕ್ಸ್, ರಾಮಕೃಷ್ಣ ರಸ್ತೆ, ಎಂ ವಿ ಎಕ್ಸ್‌ಟೆನ್ಶನ್, ಹೊಸಕೋಟೆ-562114, ಭಾರತ		
123	33818730028242	ನಾಗರಾಜ್ ಒ	14.8
124	33818730028140	ಅಂಜಿನಮ್ಮ ಟಿ	29.7
125	33818160004338	ಸಂತೋಷ್ ಹೆಚ್ ಜೆ	12.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಡೋರ್ ನಂ.604/ಬಿ, ಖಾತಾ ನಂ.23/19 ಸಿದ್ದಲಿಂಗೇಶ್ವರ ಕಾಂಪ್ಲೆಕ್ಸ್, ಎಕ್ಸಿಸ್ ಬ್ಯಾಂಕ್ ಹತ್ತಿರ, ಹಾಡಾಡಿ ರಸ್ತೆ, ದಾವಣಗೆರೆ-577004		
126	46658730022617	ವಸಂತ್ ಜೆ ಎನ್	6
127	46658730022528	ಲಕ್ಷ್ಮಿದೇವಿ ಆರ್	17.8
128	46658730022502	ಮಧುಶ್ರೀನ್	19.5
129	46658730022491	ಹರೀಶ ಎನ್	28
130	46658730022481	ಅನುಪಮ ಡಿ ಎನ್	3.7
131	46658730022400	ಗಜೇಂದ್ರ ಸಿ	4.8
132	46658730021818	ಸುನಿಲ್ ವಿ	8
133	46658160002853	ಶ್ರೀಧರ್ ಕೆ ಎನ್	34
134	46658160002801	ಶ್ರೀಧರ್ ಕೆ ಎನ್	11.5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ನಂ. 5, ಹೊಸ ಖಾತಾ ನಂ. 839/3735/3735 /5, ಹಳೆ ಖಾತಾ ನಂ. 3735/3735/5, ಎಸ್ ನರಸಿಂಹಯ್ಯ ಲೇಔಟ್, ವಾರ್ಡ್ ನಂ. 22 ಬೂದಿಗೆರೆ ರಸ್ತೆ ಎಡಭಾಗ, 4ನೇ ವಿಭಾಗ, ದೇವನಹಳ್ಳಿ ಪಟ್ಟಣ, ಬೆಂಗಳೂರು-562110.		
135	34018730023359	ವಿಜಯಪ್ರಿಯ ನಾಗರಾಜು	44.76
136	34018730023231	ಸೂರ್ಯ ಪ್ರಕಾಶ್ ಎಸ್	3.8
137	34018730023205	ಸುಲೋಚನ ಶ್ರೀಧರ	12.3
138	34018730023129	ಮಣಿಕಾಂತ್ ಎಂ	15
139	34018730023116	ಚಾಂದ್ ಖಾನ್	4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ # 362, ಪಿಐಡಿ ನಂ.007-ಡಬ್ಲ್ಯು0377-73-1 ತಲಕಾವೇರಿ ಲೇಔಟ್, ಅಮೃತಹಳ್ಳಿ ಮುಖ್ಯರಸ್ತೆ ಬ್ಯಾಟರಾಯನಪುರ, ಬೆಂಗಳೂರು-560092		
140	33878730041313	ನಿತ್ಯಾನಂದ ಎಂ	4.5
141	33878730040987	ಪಾರ್ವತಿ ಸುಬ್ರಮಣ್ಯಮ್	4.5
142	33878730040922	ಚಂದನ ಮಂಜುನಾಥ್	29.1
143	33878160001851	ಪ್ರಿಯ ಶ್ರೀ ಎಸ್	49.1
144	33878160001838	ಗೌರಮ್ಮ ಪಿ ಸಿ ಉಮೇಶ್	8.5
145	33878160001752	ಆಶಾ ರಾಣಿ ಅಂಜನಪ್ಪ	28.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ. 33/34, ಖಾತಾ ನಂ.159, ಪಿಐಡಿ ನಂ.14-23-33/34, 1ನೆ ಕ್ರಾಸ್, ಮುನೇಶ್ವರ ಬ್ಲಾಕ್, ಬೆಂಗಳೂರು-560086.		
146	45398730004961	ರಮೇಶ್ ನಾಯಕ್	5
147	45398730004898	ಭಾರತಿ ರಾಜು ಕಪರಟ್ಟಿ	6.8
148	45398730004820	ರೋಹಿತ್ ಸದಾಶಿವ್ ತಲ್ವಾರ್	29
149	45398160001502	ಮಹಾವೀರ್ ಬಸ್ತ್‌ವಾದ್	37.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ಯುನಿಕ್ ಟವರ್ ಬಿಗ್ ಬಜಾರ್ ಹತ್ತಿರ, ಎಕ್ಸಿಸ್ ಬ್ಯಾಂಕ್ ಎದುರು, ಖಾನಾಪುರ ರಸ್ತೆ, ಅಂಗೋಳ್ ಎಕ್ಸ್‌ಟೆನ್ಶನ್ ಬೆಳಗಾವಿ, ಕರ್ನಾಟಕ-590003.		
150	31878730043328	ಬಿಬಿ ಹಾಜಿರಾ	4.2
151	31878730043213	ಯಲಚಮ್ಮ	4
152	31878730043192	ಪಮಿಲ ಆಸೀರ್ವಾದಮ್ ಡಿ	4.98
153	31878160001873	ಲತಾ ಕೆಂಪೇಗೌಡ	33.74
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.273-ಬಿ, 1ನೇ ಮಹಡಿ ಹೆಚ್‌ಎಂಟಿ ಎಂಪ್ಲಾಯೀಸ್ ಕೊ-ಆಪರೇಟಿವ್ ಸೊಸೈಟಿ, ಬೆಂಗಳೂರು-560054		
154	45458730023450	ಶಿವಾಜಿ ಡಿ	20.8
155	45458730023332	ಆಕಾಶ್ ಗೋವಿಂದ್ ದಿವಾರ್	5.1
156	45458730023322	ಶಿರವನ್‌ಕುಮಾರ್ ಶಿವಪುತ್ರಪ್ಪ	4.9
157	45458730023319	ನಸೆರ ಬೇಗಂ ಎಂಡಿ	5.2
158	45458730023295	ಮೊಹಮ್ಮದ್ ಅಸ್ಲಾಂ	4.9
159	45458730023081	ಅಕ್ವೀಲ್ ಅಹಮದ್	22.9
160	45458730022266	ಅಭಿಷೇಕ್	4.6
161	45458730022240	ಸಂತೋಷ್	9.9
162	45458160003466	ಪೂಜಾ ಎಂ	25.9
163	45458160003390	ಸುನತ್ ಸ್ಯಾಮುವೆಲ್	12.2
164	45458160003288	ಧನರಾಝ್ ವೈ	19.6
165	45458160002615	ಸುರೇಶ್ ಶರಣಪ್ಪ ಮನ್ನೂರ್	47.2
166	45458160002602	ನೀಲಾಬಾಯಿ ನಾಗೇಶ್	32.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲ ಮಹಡಿ, ನಂ.2-907/23/2, ಡಾ. ಸವಿತ ವಾಣಿಜ್ಯ ಸಂಕೀರ್ಣ ಬಸವೇಶ್ವರ ಆಸ್ಪತ್ರೆ ಎದುರು, ಸೇಡಂ ರಸ್ತೆ, ಗುಲಬರ್ಗ- 590003.		
167	45468730014196	ಸೌಮ್ಯ ಕೆ ಸಿ	19.8
168	45468730014160	ಸೌಮ್ಯ ಕೆ ಸಿ	12.2
169	45468730013894	ಜ್ಯೋತಿ ಟಿಟಿ	4.1
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನೆಲಮಹಡಿ, ಹಾಜೀ ಬಾಶಾ ಸಾಬ್ ಆರ್ಕೇಡ್-1, ನಂ.27, ಗಂಗೋತ್ರಿ ರಸ್ತೆ, ತುಮಕೂರು-572101.		
170	30198730036088	ಮಂಜುಳ ಹರಿನಾಥ್	4.9
171	30198730036052	ಸೆಮುರಿ ಕಲ್ಯಾಣ್	13.7
172	30198730036036	ಎಂ ವಾಸಂತಿ	3.9
173	30198730035823	ಬಾಲಾಜಿ ಬಿ	3.9
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 2/1, ನೆಲಮಹಡಿ, 2ನೇ ಮೈನ್, 2ನೇ ಮಹಡಿ ಸಿ ಕೆ ಸಿ ಗಾರ್ಡನ್, ಮಿಷನ್ ರಸ್ತೆ ಕ್ರಾಸ್, ಬೆಂಗಳೂರು-560027.		
174	32908730015588	ಸುಜಾತ ಕೃಷ್ಣ	3.8
175	32908730015473	ಮಾಮಿಡಿ ಕಮಲಮ್ಮ	5.3
176	32908730015447	ವೆಂಕಟರತ್ನ ಗುರಪ್ಪ	6.3
177	30138730032344	ವೀಣಾ	4
178	30138730032331	ಶರವಣ ಆರ್	29.3
179	30138730032268	ಸುನಿಲ್ ವಿ	4.2
180	30138160005038	ವೆಂಕಟಸ್ವಾಮಿ ಎಸ್ ಎಂ	56.3
181	30138160005012	ವೆಂಕಟಸ್ವಾಮಿ ಎಸ್ ಎಂ	55.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., #5ಸಿ-408, ಯೋಗ ಸ್ಪಂದನ ಕಾಂಪ್ಲೆಕ್ಸ್ 1ನೇ ಮಹಡಿ, ಡಿ ಮಾರ್ಟ್ ಎದುರು, ಎನ್‌ಜಿಇಎಫ್ ಲೇಔಟ್‌ನ ಪೂರ್ವ, ರಾಮಮೂರ್ತಿನಗರ ಮುಖ್ಯ ರಸ್ತೆ, ಬೆಂಗಳೂರು-560016.		
182	46448730036662	ಎಲ್ ಪ್ರಸನ್ನ ಕುಮಾರ್	4.9
183	46448730036636	ಆಶಾ ನಂಜಶೆಟ್ಟಿ	6.1
184	46448730036623	ಸಿದ್ಧರಾಜನಾಯಕ ಜಿ	7.9
185	46448730036560	ಪದ್ಮ ಕೆ	3.9
186	46448730036497	ಬಿ ಎಸ್ ಪರಶುರಾಮ	9.7
187	46448730036461	ಶಿವಕುಮಾರ್ ಆರ್	5
188	46448730035712	ರಾಮ	4.8
189	46448160006067	ಸುಶೀಲಮ್ಮ ಎಂ	24.84
190	46448160006054	ಲಕ್ಷ್ಮಿ	15.8
191	46448160005433	ಶಾಂತಮಲ್ಲಪ್ಪ	22.9
192	46448160005360	ಶಿವಮಲ್ಲಪ್ಪ ಬಿ ಸಿ	37.9
193	46448160005281	ನಾಗ ಭೂಷಣ	8.1
194	46448160005271	ನಾಗ ಭೂಷಣ	14.8
195	46448160005232	ಶಂಭು ಎಸ್	31.5
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ. 1809/1810, ಶ್ರೀ ಚಾಮುಂಡಿ ಟಿವಿಎಸ್, ಬಿಆರ್ ಹಿಲ್ಸ್, ಚಾಮರಾಜನಗರ ಪಿನ್-571313		
196	32508730042879	ಮಂಜುಪ್ರಸಾದ್ ಹೆಚ್ ಎಂ	20.4
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ನಂ.543/4, ನೆಲಮಹಡಿ, ಜಾಕಿ ಶೋರೂಂ ಹತ್ತಿರ, ಜ್ವಾಲಮಾಲ ಕೈಗಾರಿಕಾ ಎಸ್ಟೇಟ್, ದೇವರಚಿಕ್ಕನಹಳ್ಳಿ ಮುಖ್ಯ ರಸ್ತೆ, ಬೊಮ್ಮನಹಳ್ಳಿ ಬೆಂಗಳೂರು, ಕರ್ನಾಟಕ, ಪಿನ್-560068		
197	45448730004701	ಮಂಜುನಾಥ್ ನಗರಾಲ್ ನಗರಾಲ್	4.3
198	45448730004651	ಮಂಜುನಾಥ್ ಬಾಗಲಕೋಟಿ	3.8
199	45448730004572	ಅಬ್ಬಾಸ ಖಾನ್ ಬರಿಗಿದದ್	3.8
200	45448730004151	ಪ್ರಭು ಹಿರೇಮಠ್	6.95
201	45448160001270	ಅನಿಲಕುಮಾರ್ ಅಮೃತಪ್ಪ ಮಡಿವಾಳರ್	11.89
202	45448160001254	ಇಮಾಮ್‌ಹುಸೇನ್ ರಾಜೆಖಾನಾವರ್	21.5
203	45448160001241	ಪ್ರಭುರಾಜ್ ಬಿ ಹೊರಪೇಟ್	165.8
204	45448160001231	ರಾಜೇಶ್ ಜಿತುರಿ	35.7
205	45448160000942	ಅಂಜುಮ್ ಖದರ್‌ಸಾಬ್ ಸುಲ್ತಾನವರ್	45.6
206	45448160000939	ನಿಂಗಪ್ಪ ನರ್ತಿ	19.8
	ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ವಿದ್ಯಾ ನಗರ, ವಿಬಿಬಿ ಇಂಜಿನಿಯರಿಂಗ್ ಕಾಲೇಜು ಎದುರು, ಮೆಕ್ ಡೊನಾಲ್ಡ್ ಹತ್ತಿರ, ಹಳೆ ರಾಷ್ಟ್ರೀಯ ಹೆದ್ದಾರಿ, ಹುಬ್ಬಳ್ಳಿ-580021		

ಸ್ಥಳ: ಕರ್ನಾಟಕ
ದಿನಾಂಕ: 04.12.2024

ಸಹಿ/-ಅಧಿಕೃತ ಅಧಿಕಾರಿ
ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಸೈಕ್ಲೋನ್ ಹೊಡೆತಕ್ಕೆ ಕಂಗಾಲಾದ ರೈತರು!

ಮೋಡ ಕವಿದ ವಾತಾವರಣ, ಜಡಿಮಳೆಗೆ ಕಟಾವಿಗೆ ಬಂದ ಬೆಳೆ ಹಾನಿ

ಕೊಪ್ಪಳ: ಫೆಂಗಲ್ ಸೈಕ್ಲೋನ್ ನಿಂದ ಜಿಲ್ಲೆಯಲ್ಲಿ ಕಳೆದೆರಡು ದಿನದಿಂದ ಮೋಡ ಕವಿದ ವಾತಾವರಣ ಮತ್ತು ಜಡಿಮಳೆ ಶುರುವಾಗಿದ್ದು, ರೈತರು ಕಂಗಾಲಾಗಿದ್ದಾರೆ. ತುಂಗಭದ್ರ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬಹುತೇಕ ರೈತರು ಭತ್ತ ಕಟಾವು ಮಾಡಿದ್ದರೆ, ಮಳೆಯಾಶ್ರಿತ ಪ್ರದೇಶದಲ್ಲಿ ತೊಗರಿ, ಮೆಕ್ಕೆಜೋಳ ಸೇರಿ ನಾನಾ ಬೆಳೆಗಳು ಹಾನಿಗೆ ಒಳಗಾಗಿವೆ. ಮತ್ತೊಂದೆಡೆ ನಗರದ ಪ್ರದೇಶದಲ್ಲಿ ಜನಜೀವನ ಅಸ್ತವ್ಯಸ್ಥವಾಗಿದೆ.

ಜಿಲ್ಲೆಯಲ್ಲಿ ಭತ್ತ ಮತ್ತು ತೊಗರಿ ಕಟಾವು ಮಾಡಿದ ರೈತರು ಫಸಲು ಒಣಗಿಸಲು ಪರದಾಡುತ್ತಿದ್ದಾರೆ. ಇನ್ನೂ ಕಟಾವು ಮಾಡದ ರೈತರು ಮತ್ತೊಂದು ರೀತಿಯಲ್ಲಿ ಸಂಕಷ್ಟ ಎದುರಿಸುತ್ತಿದ್ದಾರೆ. ಕಟಾವು ಮಾಡದ ಭತ್ತ ಗಾಳಿ ಸಹಿತ ಜಡಿ ಮಳೆಗೆ ನೆಲಕ್ಕೆ ಉರುಳಿದ್ದು, ಕಟಾವು ಮಾಡುವ ಯಂತ್ರಕ್ಕೆ ಹೆಚ್ಚುವರಿ ಹಣ ನೀಡಬೇಕಿದೆ. ಇನ್ನು ತೊಗರಿ ಬೆಳೆ ಮಳೆಯಿಂದ ನಿಂತಲ್ಲೇ ಮೊಳಕೆ ಆಗುವುದು ಮತ್ತು ಫಸಲು ಕಪ್ಪು ಬಣ್ಣಕ್ಕೆ ತಿರುಗುತ್ತಿದೆ.

ಭತ್ತ ನೀರು ಪಾಲು: ತುಂಗಭದ್ರ ಅಚ್ಚುಕಟ್ಟು ವ್ಯಾಪ್ತಿಯ ರೈತರು ರಸ್ತೆಯಲ್ಲಿ ಭತ್ತ ಒಣಗಿಸುತ್ತಿದ್ದಾರೆ. ಮಳೆಯಿಂದ ರೈತರು ದೊಡ್ಡ ತಾಡಪಲ್ ಹಾಕಿ, ಭತ್ತ ಸುರಕ್ಷಿತವಾಗಿಡಲು ಹರಸಾಹಸ ಮಾಡುತ್ತಿದ್ದಾರೆ. ಆದಾಗ್ಯೂ ಭತ್ತ ಮಳೆ ನೀರಿಗೆ ಕೊಚ್ಚಿ ಹೋಗಿವೆ. ಕೆಲ ಕಡೆ ಭತ್ತ ನೀರಿನಲ್ಲಿ ತೊಯ್ದಿದ್ದರಿಂದ ಮೊಳಕೆ ಒಡೆಯುವ ಸ್ಥಿತಿಯಲ್ಲಿದೆ.

ಕೊಪ್ಪಳ ಜಿಲ್ಲೆ ಆನೆಗೊಂದಿ ಸಮೀಪದ ಭತ್ತದ ಬೆಳೆ ಫೆಂಗಲ್ ಸೈಕ್ಲೋನ್ ನಿಂದ ನೆಲಕ್ಕೆ ಬಿದ್ದಿರುವುದು.

> ಒಂದು ಎಕರೆಗೆ ಕನಿಷ್ಠ 20 ಸಾವಿರ ರೂ. ಖರ್ಚು ಮಾಡಿ, ಭತ್ತ ಬೆಳೆದಿದ್ದೇವೆ. ಇನ್ನೇನು ಕಟಾವು ಮಾಡಿ, ಮಾರಾಟ ಮಾಡಬೇಕು ಎಂಬ ಸಮಯಕ್ಕೆ ಮಳೆಯಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ.
> – ಸಂಗಪ್ಪ ಭತ್ತ ಬೆಳದ ರೈತ

ಗಂಗಾವತಿ, ಕಾರಟಗಿ ಮತ್ತು ಕೊಪ್ಪಳ ತಾಲೂಕಿನ ಹಿಟ್ನಾಳ್ ಸೇರಿ ನಾನಾ ಕಡೆ ಇಂಥ ಸ್ಥಿತಿ ಸಹಜವಾಗಿದೆ. ಜಿಲ್ಲೆಯಲ್ಲಿ ಸುಮಾರು 69 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರೈತರು ಭತ್ತ ಬೆಳೆದಿದ್ದು, ಬಹುತೇಕ ರೈತರಿಗೆ ರೈತರ ಸಮಸ್ಯೆಯೂ ಇದೆ ಆಗಿದೆ. ಈ ಬಾರಿ ನೀರಿನ ಸಮಸ್ಯೆ ಇಲ್ಲದ್ದರಿಂದ ಉತ್ತಮ ಫಸಲಿನ ನಿರೀಕ್ಷೆಯಲ್ಲಿದ್ದರು. ಆದರೆ, ಸೈಕ್ಲೋನ್ ಮತ್ತೊಂದು ಚಿಂತೆಗೆ ದೂಡಿದೆ. ರಸ್ತೆ ಮೇಲಿನ ನೀರು ಭತ್ತದ ರಾಶಿಗೆ ಹೋಗಿದ್ದರಿಂದ ಸಾಕಷ್ಟು ಭತ್ತ ಕೊಚ್ಚಿಕೊಂಡು ಹೋಗಿದೆ.

ಖುಷ್ಕಿ ಪ್ರದೇಶದಲ್ಲೂ ಹಾನಿ: ಮೋಡ ಕವಿದ ವಾತಾವರಣ ಮತ್ತು ಜಡಿಮಳೆಯಿಂದ ಮಳೆಯಾಶ್ರಿತ ಪ್ರದೇಶದಲ್ಲೂ ಭಾರಿ ಪ್ರಮಾಣದಲ್ಲಿ ತೊಗರಿ ಬೆಳೆ ನಾಶವಾಗಿದೆ. ಒಟ್ಟಿನಲ್ಲಿ ಫೆಂಗಲ್ ಸೈಕ್ಲೋನ್ ಕೊಪ್ಪಳ ಜಿಲ್ಲೆಯ ರೈತರಿಗೆ ದೊಡ್ಡ ಮಟ್ಟದ ಶಾಕ್ ನೀಡುತ್ತಿದೆ. ಇನ್ನು ಮಳೆ ಇದೇ ರೀತಿ ಮುಂದುವರಿದರೆ ರೈತರು ಇನ್ನಷ್ಟು ಸಂಕಷ್ಟಕ್ಕೆ ಒಳಗಾಗಲಿದ್ದು, ಸರಕಾರ ರೈತರ ನೆರವಿಗೆ ಬರಬೇಕಿದೆ.

ವಕೀಲರು ನ್ಯಾಯ ವ್ಯವಸ್ಥೆಯ ಆಧಾರ ಸ್ಥಂಭ

ವಕೀಲರ ದಿನ ಆಚರಣೆ | ನ್ಯಾಯಾಧೀಶ ಕುಮಾರ ಡಿ.ಕೆ. ಸಲಹೆ

ಕೊಪ್ಪಳ: ವಕೀಲರು ಹಾಗೂ ನ್ಯಾಯಾಧೀಶರು ನ್ಯಾಯ ವ್ಯವಸ್ಥೆಯ ಆಧಾರ ಸ್ಥಂಬ ಇದ್ದಂತೆ. ವಕೀಲರು ಒಂದೇ ಪ್ರಕರಣಕ್ಕೆ ಅಂಟಿಕೊಳ್ಳದೆ ಹೊಸ ಸವಾಲುಗಳೊಂದಿಗೆ ನಿರಂತರವಾಗಿ ಹರಿವ ನೀರಾಗಬೇಕು ಎಂದು ಫೋಕ್ಸೊ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕುಮಾರ ಡಿ.ಕೆ. ಸಲಹೆ ನೀಡಿದರು.

ನಗರದ ನ್ಯಾಯಾಲಯದ ಆವರಣದಲ್ಲಿ ಜಿಲ್ಲಾ ವಕೀಲರ ಸಂಘದಿಂದ ಆಯೋಜಿಸಿದ್ದ ವಕೀಲರ ದಿನಾಚರಣೆ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಂಗಳವಾರ ಮಾತನಾಡಿದರು.

ವಕೀಲಿಕೆ ವೃತ್ತಿ ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠ ವೃತ್ತಿಯಾಗಿದೆ. ವಕೀಲರು ಮಾತ್ರ ನ್ಯಾಯಾಧೀಶರಾಗಲು ಸಾಧ್ಯ. ಸಣ್ಣ ಪ್ರಕರಣಗಳನ್ನು ವಕೀಲರು ಪ್ರಾರಂಭಿಕವಾಗಿ ತಮ್ಮಲ್ಲಿಯೇ ಪರಿಹರಿಸುವುದರಿಂದ ಶಾಂತಿ, ಸೌಹಾರ್ದತೆ ನೆಲೆಸಲು ಸಾಧ್ಯವಾಗುತ್ತದೆ. ಇನ್ನು ವಕೀಲ ವೃತ್ತಿ ಸತತ ಓದನ್ನು ಅಪೇಕ್ಷಿಸುತ್ತದೆ. ನಿರಂತರ ಓದಿನಿಂದ ಮಾತ್ರ ಉತ್ತಮ ವಕೀಲರಾಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿ, ಸಮಾಜವನ್ನು ಸರಿ ದಾರಿಗೆ ತರುವ ಶಕ್ತಿ ವಕೀಲರಿಗೆ ಇದೆ. ವಕೀಲರು ಮನಸ್ಸು ಮಾಡಿದರೆ ಆಯಾ ಗ್ರಾಮದ ಸಮಸ್ಯೆಯಲ್ಲಿ ಅಲ್ಲಿಯೇ ಪರಿಹರಿಸಬಹುದು. ಈ ಕುರಿತು ಜನರಲ್ಲಿಯೂ ಅರಿವು ಮೂಡಿಸಬೇಕು. ಜಿಲ್ಲಾ ಕೇಂದ್ರದಲ್ಲಿ 50 ರೂ. ಕೋಟಿ ವೆಚ್ಚದಲ್ಲಿ ಹೊಸ ನ್ಯಾಯಾಲಯ ಕಟ್ಟಡ ನಿರ್ಮಾಣವಾಗಲಿದೆ ಎಂದರು.

ಕೊಪ್ಪಳದ ನ್ಯಾಯಾಲಯದ ಆವರಣದಲ್ಲಿ ಆಯೋಜಿಸಿದ್ದ ವಕೀಲರ ದಿನಾಚರಣೆ, ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

> ರಾಜ್ಯ ಸರಕಾರ ವಕೀಲರ ಅಕಾಡೆಮಿ ಆರಂಭಿಸು ಚಿಂತನೆ ಹೊಂದಿದೆ. ಉದ್ದೇಶಿತ ಅಕಾಡೆಮಿ ಕೊಪ್ಪಳದಲ್ಲಿಯೇ ಸ್ಥಾಪಿಸಬೇಕು. ಇದರಿಂದ ಯುವ ವಕೀಲರಿಗೆ ಅನುಕೂಲವಾಗುತ್ತದೆ.
> – ಎ.ವಿ. ಕಣವಿ ಅಧ್ಯಕ್ಷ, ಜಿಲ್ಲಾ ವಕೀಲರ ಸಂಘ

ಮಾಜಿ ಸಂಸದ ಸಂಗಣ್ಣ ಕರಡಿ ಮಾತನಾಡಿ ವಕೀಲರ ದಿನ ಭವಿಷ್ಯದ ಸಂಕೇತದ ದಿನವಾಗಿದೆ. ಶ್ರೇಷ್ಠ ವೃತ್ತಿಯಾದ ವಕೀಲಿಕೆಯ ಘನತೆ ಎತ್ತಿ ಹಿಡಿಯಬೇಕು. ರಾಜ್ಯ ಸರಕಾರ ವಕೀಲರಿಗೆ ನಿಧಿ ಘೋಷಣೆ ಮಾಡಬೇಕು. ವಕೀಲರು ವಿಚ್ಛೇದನ ಪ್ರಕರಣಗಳಲ್ಲಿ ಸಾಧ್ಯವಾದಷ್ಟು ಸಂಧಾನಕ್ಕೆ ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ದರಗದ, ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸ್ ಗುಪ್ತಾ, ಹಿರಿಯ ಕಾನೂನು ಅಧಿಕಾರಿ ಬಿ.ಎಸ್. ಪಾಟೀಲ್, ರಾಜ್ಯ ಮಹಿಳಾ ನ್ಯಾಯವಾದಿಗಳ ಒಕ್ಕೂಟದ ಅಧ್ಯಕ್ಷೆ ಸಂಧ್ಯಾ ಬಿ. ಮಾದಿನೂರ, ವಕೀಲರ ಸಂಘದ ಉಪಾಧ್ಯಕ್ಷ ಬಿ.ವಿ. ಸಜ್ಜನ್, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಲ್. ಹಾದಿಮನಿ, ಜಂಟಿ ಕಾರ್ಯದರ್ಶಿ ಸಂತೋಷ ಸಿ. ಕವಲೂರ, ಖಜಾಂಚಿ ರಾಜಾಸಾಬ ಬುದಗುಂಪಾ ಹಾಗೂ ವಿವಿಧ ನ್ಯಾಯಾಲಯಗಳ ನ್ಯಾಯಾಧೀಶರು ಇದ್ದರು.

ಇನ್ನರ್ ವ್ಹೀಲ್ ಕ್ಲಬ್ ಪ್ರಶಸ್ತಿ

ಕೊಪ್ಪಳ: ವಿಶೇಷಚೇತನರ ಪುನಃಶ್ಚೇತನ ಹಾಗೂ ಕಳೆದ 29 ವರ್ಷದ ಸಾಮಾಜಿಕ ಸೇವೆ ಪರಿಗಣಿಸಿ ಕೊಪ್ಪಳದ ಇನ್ನರ್ ವ್ಹೀಲ್ ಕ್ಲಬ್ ರಾಜ್ಯ ಸರಕಾರ 2024ನೇ ಸಾಲಿನ ಉತ್ತಮ ಸಂಸ್ಥೆಯ ವಿಭಾಗದಡಿ ರಾಜ್ಯ ಪ್ರಶಸ್ತಿ ನೀಡಿದೆ. ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪ್ರಶಸ್ತಿ ಪ್ರಧಾನ ಮಾಡಿದರು. ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷೆ ಉಮಾ ಮಹೇಶ ತಂಬ್ರಳ್ಳಿ ಪ್ರಶಸ್ತಿ ಸ್ವೀಕರಿಸಿ ಹರ್ಷ ವ್ಯಕ್ತಪಡಿಸಿದರು.

ಸಮಾಚಾರ ಸಣ್ಣದಲ್ಲ

ಇನ್ ಸೈಟ್ಸ್ ಅಕಾಡೆಮಿ ಉಚಿತ ಕಾರ್ಯಾಗಾರ

ಸಿಂಧನೂರು: ಇನ್ ಸೈಟ್ಸ್ ಅಕಾಡೆಮಿ ಬೆಂಗಳೂರು ಹಾಗೂ ವಿವೇಕ ಐ.ಎ.ಎಸ್ ಮತ್ತು ಕೆ.ಎ.ಎಸ್ ಅಕಾಡೆಮಿ ಸಿಂಧನೂರು ಸಹಯೋಗದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಒಂದು ದಿನದ ಉಚಿತ ಕಾರ್ಯಾಗಾರ ಆಯೋಜನೆ ಮಾಡಿದ್ದು, ಉನ್ನತ ಪರೀಕ್ಷೆ ಬರೆಯಲು ಇಚ್ಛಿಸುವ ಆಕಾಂ ಕ್ಷಿಗಳು ಪದವೀಧರರು ಸದುಪಯೋಗ ಪಡಿಸಿಕೊಳ್ಳಿ ಎಂದು ಮಾಜಿ ಸಂಸದ ಹಾಗೂ ವಿವೇಕ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಕೆ.ವಿರೂಪಾಕ್ಷಪ್ಪ ತಿಳಿಸಿದರು. ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತ ನಾಡಿದ ಅವರು, ನಗರದ ಕುಷ್ಟಗಿ ರಸ್ತೆಯಲ್ಲಿರುವ ಕನಕದಾಸ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ ಜಿಲ್ಲಾಧಿಕಾರಿ ನೀತಿನ್ ಕೆ ಹಾಗೂ ಬೆಂಗಳೂರಿನ ಇನ್ ಸೈಟ್ಸ್ ಐ.ಎ.ಎಸ್ ಅಕಾಡೆಮಿ ಸಂಸ್ಥಾಪಕರಾದ ಜಿ.ವಿನಯ ಕುಮಾರ್ ಜಂಟಿಯಾಗಿ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ ದಂಡಿನ್, ಶಾಂತಪ್ಪ ಕುರುಬರು ಐ.ಆರ್.ಎಸ್ ಬೆಂಗಳೂರು ಮತ್ತು ಮುಖಂಡರಾದ ಕೆ.ಕರಿಯಪ್ಪ, ಎಂ.ದೊಡ್ಡ ಬಸವರಾಜ, ವಾಯ್ ನರೇಂದ್ರನಾಥ, ಆರ್.ಸಿ ಪಾಟೀಲ್, ಪ್ರಾಚಾರ್ಯ ರಾದ ಶಿವರಾಜ, ಉಪನ್ಯಾಸಕ ಶರಣಪ್ಪ ಹೊಸಳ್ಳಿ ಭಾಗವಹಿಸಲಿದ್ದಾರೆ ಎಂದರು. ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ ನಡೆಯಲಿದ್ದು ಸದು ಪಯೋಗ ಪಡೆಯುವಂತೆ ಕರೆ ನೀಡಿದರು.

ರೈಲ್ವೇ ಮೇಲು ಸೇತುವೆ ಲೋಕಾರ್ಪಣೆ

ಕುಕನೂರು: ತಾಲೂಕಿನ ಭಾನಾಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 367ಕ್ಕೆ ನಿರ್ಮಿಸಲಾದ ರೈಲ್ವೇ ಮೇಲು ಸೇತುವೆಯನ್ನು ಸಂಸದ ರಾಜಶೇಖರ ಹಿಟ್ನಾಳ ಹಾಗೂ ಶಾಸಕ ಬಸವರಾಜ ರಾಯರೆಡ್ಡಿ ಸೋಮವಾರ ಲೋಕಾರ್ಪಣೆ ಮಾಡಿದರು. ಬಸವರಾಜ ರಾಯರೆಡ್ಡಿ ಮಾತನಾಡಿ, ಸುಮಾರು 150 ಕೋಟಿ ರು. ಅನುದಾನದಲ್ಲಿ ತಾಲೂಕಿನ ಎಲ್ಲ ರಸ್ತೆಗಳ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಕಲ್ಯಾಣ ಪಥ ಯೋಜನೆ ಮತ್ತು ರಾಜ್ಯ ಸರಕಾರದ ಪ್ರಗತಿ ಪಥ ಯೋಜನೆಗಳಲ್ಲೂ ಕ್ಷೇತ್ರ ಸಾಕಷ್ಟು ಅಭಿಪ್ರಾಯವನ್ನು ಕಾಣಲಿದೆ ಎಂದು ಹೇಳಿದರು. ಸಂಸದ ರಾಜಶೇಖರ ಹಿಟ್ನಾಳ ಮಾತನಾಡಿ, ಜನಪರ ಅಭಿವೃದ್ಧಿಯ ಇಚ್ಛಾಶಕ್ತಿ ಇರುವವರೇ ನಿಜವಾದ ರಾಜಕಾರಣಿ. ಇದಕ್ಕೆ ಬಸವರಾಜ ರಾಯರೆಡ್ಡಿ ಉತ್ತಮ ಉದಾಹರಣೆ. ಬಸವರಾಜ ರಾಯರೆಡ್ಡಿ ಅವರ ಸಹಕಾರ ಹಾಗೂ ಸಂಗಣ್ಣ ಕರಡಿ ಅವರ ಮಾರ್ಗ ದರ್ಶನದಲ್ಲಿ ಮುಂದೆ ಹಲವಾರು ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುವುದು ಎಂದು ಹೇಳಿದರು. ಮಾಜಿ ಸಂಸದ ಸಂಗಣ್ಣ ಕರಡಿ ಮಾತನಾಡಿದರು. ಗ್ರಾಪಂ ಅಧ್ಯಕ್ಷ ಕರಿಯಪ್ಪ ಹಳ್ಳಿಕೇರಿ, ವೀರನಗೌಡ ಬಳುಟಗಿ, ಹನುಮಂತ ಗೌಡ ಚಂಡೂರು, ಸಂಗಮೇಶ ಗುತ್ತಿ, ಚಂದ್ರಶೇಖರಯ್ಯ ಹಿರೇಮಠ, ಮಂಜುನಾಥ ಕಡೆಮನಿ, ನೂರುದ್ದೀನ್ ಸಾಬ್ ಗುಡಿ ಹಿಂಡಲ ಅಧಿಕಾರಿಗಳಾದ ಕೃಷ್ಣಮೂರ್ತಿ, ಗಿರೀಶ, ಪ್ರಾಣೇಶ ಎಚ್, ಸಂತೋಷ್ ಇದ್ದರು.

ರೈತರ ಜಾಗೃತಿ ಸಮಾವೇಶ ಇಂದು

ರಾಯಚೂರು: ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಘಟಕದ ಸಂಯುಕ್ತ ಆಶ್ರಯದಲ್ಲಿ ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಮಟ್ಟದ ರೈತರ ಜಾಗೃತಿ ಸಮಾವೇಶವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧ್ಯಕ್ಷ ಶಿವಾರ್ಜುನ ನಾಯಕ ಹೇಳೀದರು. ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ರೈತರ ಸಮಸ್ಯೆಗಳ ಕುರಿತು ಸರಕಾರದ ಗಮನ ಸೆಳೆಯುವ ಉದ್ದೇಶದಿಂದ ಸಮಾವೇಶ ಆಯೋಜಿಸಲಾಗಿದೆ. ಸಮಾವೇಶವನ್ನು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಕುರುಬೂರು ಶಾಂತಕುಮಾರ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಪ್ರಧಾನ ಕಾರ್ಯದರ್ಶಿ ಬಲ್ಲೂರ್ ರವಿಕುಮಾರ ಅವರು ರೈತಸಂಘಟನೆಅವಶ್ಯಕತೆ ಕುರಿತು ಮಾತನಾಡಲಿದ್ದಾರೆ ಎಂದು ಹೇಳಿದರು. ಪಶು ಸಂಗೋಪಾನ ಇಲಾಖೆಯಲ್ಲಿ ವೈದ್ಯರ ಹಾಗೂ ಸಿಬ್ಬಂದಿಗಳ ಕೊರತೆಯ ಬಗ್ಗೆ ಸರಕಾರ ಗಮನಹರಿಸಬೇಕು. ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದಿಂದ ರೈತರಿಗೆ ವಂಚನೆಮಾಡಲಾಗುತ್ತಿದ್ದು, ಅಂಥ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬುವುದು ಸೇರಿದಂತೆ ಇನ್ನೂ ಅನೇಕ ರೈತ ಸಮಸ್ಯೆಗಳ ಕುರಿತು ಚರ್ಚೆ ನಡೆಸಿ, ಸರಕಾರದ ಗಮನಕ್ಕೆ ತರಲಾಗುತ್ತಿದೆ ಎಂದರು. ಹನುಮೇಶ, ಸಂಗಮೇಶ, ರಂಗಸ್ವಾಮಿ, ರೆಹಮಾನ, , ತಾಯಪ್ಪ, ಮಹೇಶ ಮತ್ತಿತರರು ಉಪಸ್ಥಿತರಿದ್ದರು.

ಒಳಮೀಸಲು ನಿರ್ಲಕ್ಷ್ಯ: ಪಾದಯಾತ್ರೆ ಎಚ್ಚರಿಕೆ

ರಾಯಚೂರು: ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವರ್ಗೀಕರಣ ನಿರ್ಲಕ್ಷಿಸಿದರೆ ಮುಖ್ಯಮಂತ್ರಿ ಸಿದ್ಧರಾಮಯ್ಯ ತವರು ಕ್ಷೇತ್ರ ವರುಣಾದಿಂದ ವಿಧಾನಸೌಧಕ್ಕೆ ಪಾದಯಾತ್ರೆ ಮಾಡಬೇಕಾಗುತ್ತದೆ ಎಂದು ಮಾದಿಗ ದಂಡೋರಾ ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ನರಸಪ್ಪ ದಂಡೋರಾ ಹೇಳಿದರು.

{ ಕೆ.ಎನ್.ರಾಜಣ್ಣ } ಸಚಿವ

> ಬಡವರ ಹಸಿವು ನೀಗಿಸುವ ಮನಸ್ಥಿತಿ ನಮ್ಮ ಸರ್ಕಾರಕ್ಕಿದೆ. ಗ್ಯಾರಂಟಿ ಯೋಜನೆಗಳ ಜಾರಿಯಿಂದ ಸರಕಾರ ನಡೆಸಲು ಸಾಧ್ಯವಿಲ್ಲವೆಂಬ ಟೀಕಾಕಾರರ ಮಾತುಗಳಿಗೆ ಬೀಗ ಹಾಕಿದಂತಾಗಿದೆ. ರಾಜ್ಯದ ಇತರೆ ಜಿಲ್ಲೆಗಳಲ್ಲಿಯೂ ಇಂತಹ ಕಾರ್ಯಕ್ರಮ ಆಯೋಜಿಸುವ ಮೂಲಕ ಟೀಕಾಕಾರರಿಗೆ ಉತ್ತರ ನೀಡುತ್ತೇವೆ.

ಡೇರಿಯ ಅನ್ಯಾಯ ಸರಿಪಡಿಸಿ

ಸುದ್ದಿಗೋಷ್ಠಿಯಲ್ಲಿ ಹಾಲು ಉತ್ಪಾದಕ ರೈತರಾದ ಎಂ.ಪ್ರಕಾಶ ಮಾತನಾಡಿದರು.

ರಾಯಚೂರು: ಮಾನವಿ ತಾಲೂಕಿನ ಅಮರೇಶ್ವರ ಕ್ಯಾಂಪ್ ಹಾಲು ಉತ್ಪಾದಕರ ಸಂಘದಲ್ಲಿ ಅನ್ಯಾಯವಾಗುತ್ತಿದ್ದು ಅದನ್ನು ಸರಿಪಡಿಸುವಂತೆ ಹಾಲು ಉತ್ಪಾದಕ ರೈತ ಎಂ.ಪ್ರಕಾಶ ಒತ್ತಾಯಿಸಿದರು.

ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿ ಮಾತನಾಡಿದ ಅವರು, 1987 ರಿಂದ ಅಮರೇಶ್ವರ ಕ್ಯಾಂಪ್ ಹಾಲು ಉತ್ಪಾದಕರ ಸಂಘ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಐದು ವರ್ಷಕ್ಕೊಮ್ಮೆ ನಾವು ಚುನಾವಣೆ ನಡೆಸದೆ ರೈತರು ಸೇರಿ ಒಮ್ಮತದಿಂದ ಪದಾಧಿಕಾರಿಗಳನ್ನು ನೇಮಕ ಮಾಡುತ್ತಿದ್ದೆವು ಎಂದರು. 2016 ರಿಂದ ಎರಡು ವರ್ಷ ಸಂಘದ ಹೆಸರಲ್ಲಿದ್ದ ನ್ಯಾಯಬೆಲೆ ಅಂಗಡಿಯ ಆದಾಯ ದುರುಪಯೋಗ ಮಾಡಿಕೊಂಡಿದ್ದಾರೆ ಎಂದ ಅವರು ಹಾಲು ಹಾಕದೆ ಇರುವ ರೈತರನ್ನು ಸದಸ್ಯರನ್ನಾಗಿ ಮಾಡಿಕೊಂಡು ಚುನಾವಣೆಯಲ್ಲಿ ನಕಲಿ ಸದಸ್ಯರಿಂದ ಮತದಾನ ಹಕ್ಕು ಪಡೆದಿದ್ದಾರೆ. ಈಗಾಗಲೆ ಇದರ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಲಾಗಿದೆ. ಇತ್ತಿಚೆಗೆ ನಡೆದ ಸಭೆಯೊಂದರಲ್ಲಿ ನಮ್ಮನ್ನು ಕಿಡಿಗೇಡಿಗಳೆಂದು ಹೇಳಿ ನಿಜವಾದ ಹಾಲು ಉತ್ಪಾದಕ ರೈತರಿಗೆ ಅವಮಾನ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಪಿ.ವಿರೇಶ, ನಾಗೇಂದ್ರ ಚೌದರಿ, ಶಿವಾರ್ಜುನ ನಾಯಕ ಉಪಸ್ಥಿತರಿದ್ದರು.

ಜಗತ್ತಿನ ಮೊದಲ ಸಮಾಜವಾದಿ ಬಸವಣ್ಣ: ಶ್ರೀಗಳು

ಯಲಬುರ್ಗಾ: ಜಗತ್ತಿನ ಮೊದಲ ಸಮಾಜವಾದಿ ಬಸವಣ್ಣನ ಹೆಸರಿನಲ್ಲಿ ಇತ್ತೀಚೆಗೆ ಬುಸ್ ಬುಸ್ ಅಂತ ಬುಸುಗುಡುವವರೇ ಹೆಚ್ಚಿದ್ದಾರೆ. ಬಸವಾನುಯಾಯಿಗಳು ಅಂಥವರ ಮಾತಿಗೆ ಗಮನ ಕೊಡದೇ ಜಾತ್ಯತೀತವಾಗಿ ಬದುಕುವ ಬಗ್ಗೆ ಯೋಚಿಸಬೇಕು ಎಂದು ಕುದರಿಮೋತಿ ಸಂಸ್ಥಾನ ಮೈಸೂರು ಮಠದ ವಿಜಯಮಹಾಂತೇಶ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಕಾತ್ರಾಳ ಗ್ರಾಮದಲ್ಲಿ ನಡೆದ ಬಸವೇಶ್ವರ ದೇವಸ್ಥಾನದ ಕಾರ್ತಿಕೋತ್ಸವದ ನಿಮಿತ್ಯ ನೂತನವಾಗಿ ನಿರ್ಮಿಸಿರುವ ಲಘು ರಥೋತ್ಸವ, ಕುಂಭಮೇಳ ಮತ್ತು ಧಾರ್ಮಿಕ ಸಭೆಯ ಸಾನಿಧ್ಯ ವಹಿಸಿ ಮಾತನಾಡಿದರು.

ಭಕ್ತಿಯ ಮತ್ತೊಂದು ಹೆಸರಾಗಿರುವ ಬಸವಣ್ಣ 12ನೇ ಶತಮಾನದಲ್ಲಿ ಕೈಗೊಂಡ ಮಹಾನ್ ಕ್ರಾಂತಿಯನ್ನು ಪಾಶ್ಚಾತ್ಯ ದೇಶಗಳೂ ಗುರುತಿಸಿವೆ. ಕಳಬೇಡ-ಕೊಲಬೇಡ ಎಂಬ ಒಂದೇ ಒಂದು ವಚನ ಇಂದಿನ ಹಲವು ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರವಾಗಿದೆ. ಅಂತೆಯೇ ಕಳೆದ 900 ವರ್ಷದಲ್ಲಿ ಕರ್ನಾಟಕದಲ್ಲಿ ಹಲವು ಧರ್ಮ ಗುರುಗಳು ಆಗಿ ಹೋಗಿದ್ದರೂ, ಬಸವಣ್ಣನಂಥ ಗುರು ಮತ್ತೆ ಜನಿಸಿಯೇಲೇ ಇಲ್ಲ ಎಂದು ಪ್ರತಿಪಾದಿಸಿದರು.

ಕತ್ತಲೆಯಿಂದ ಬೆಳಕಿನತ್ತ ಪಯಣಿಸಬೇಕು ಎಂಬ ಉದ್ದೇಶದಿಂದ ಎಲ್ಲೆಡೆ ಕಾರ್ತಿಕೋತ್ಸವ ನಡೆಯುತ್ತದೆ.

ಯಲಬುರ್ಗಾ ತಾಲೂಕಿನ ಕಾತ್ರಾಳ ಗ್ರಾಮದಲ್ಲಿ ಕಾರ್ತಿಕೋತ್ಸವದ ಧಾರ್ಮಿಕ ಸಭೆಯಲ್ಲಿ ವಿಜಯಮಹಾಂತೇಶ ಮಹಾಸ್ವಾಮಿಗಳು ಸಾನಿಧ್ಯ ವಹಿಸಿ ಸೋಮವಾರ ಮಾತನಾಡಿದರು.

> ಇಂದಿನ ಮಕ್ಕಳು-ಯುವಕರನ್ನು ಮೊಬೈಲ್-ಟಿ.ವಿ. ಗೀಳಿನಿಂದ ಪಾರು ಮಾಡಲು ಇಂಥ ಸಾಮಾಜಿಕ-ಸಾಂಸ್ಕೃತಿಕ ಕಾರ್ಯಕ್ರಮಗಳ ಅವಶ್ಯವಿದೆ ಸರ್ವ ಸಮುದಾಯ ದವರನ್ನು ಒಳಗೊಂಡು ಆಯೋಜಿಸುವ ಇಂಥ ಉತ್ಸವಗಳಿಂದ ಸದೃಢ ಪೀಳಿಗೆ ರೂಪಿಸಲು ಸಾಧ್ಯ.
> -ಸಂಗಮೇಶ ಮೆಣಸಿನಕಾಯಿ ಪತ್ರಕರ್ತ

ದೇವರು ಸಂಪತ್ತು ಕೊಡೋದೇ ಒಳ್ಳೆಯ ಕೆಲಸ ಮಾಡಲು. ಸತ್ಯಶುದ್ಧ ಕಾಯಕದಿಂದ ಗಳಿಸಿದ ಸಂಪತ್ತಿನ ಒಂದು ಭಾಗವನ್ನು ಇಂಥ ಉತ್ಸವಗಳಿಗೆ ವ್ಯಯಿಸುವುದರಿಂದ ಅಂಥವರ ಸಂಪತ್ತು ವೃದ್ಧಿಯಾಗುತ್ತದೆಯೇ ಹೊರತು, ಕಡಿಮೆಯಾಗುವುದಿಲ್ಲ ಎಂದು ಅಭಿಪ್ರಾಯಪಟ್ಟರು.

ಯಲಬುರ್ಗಾ ತಾಪಂ ಸಹಾಯಕ ನಿರ್ದೇಶಕ ಫಕೀರಪ್ಪ ಕಟ್ಟಿಮನಿ, ಸಂಕನೂರ ಗ್ರಾಪಂ ಸದಸ್ಯರಾದ ಎಸ್.ಎಸ್. ಸಂಗಳದ, ಸುಮಿತ್ರಾ ಪೊಲೀಸ್ ಪಾಟೀಲ್, ಗಣ್ಯರಾದ ಬಸವರಾಜ ಸಂಗಳದ, ಹನಮಂತ ಗಂಜ್ಯಾಳ, ಶೇಖರಪ್ಪ ದೇಸಾಯಿ, ಈರನಗೌಡ ಪೊಲೀಸಪಾಟೀಲ್, ಅಂದಪ್ಪ ಸಂಗಳದ, ಹುಸೇನಸಾಬ ನದಾಫ್, ಮಹಾಂತೇಶ ಹರಿಜನ, ಬಾಲಪ್ಪ ಗಂಜ್ಯಾಳ, ಮಂಜುನಾಥ ರೋಣದ ಇದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪತ್ರಕರ್ತಗೆ ಸನ್ಮಾನ

ಕಾರಟಗಿ: ಪ್ರಸಕ್ತ ಸಾಲಿನ ಪ್ರತಿಷ್ಠಿತ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಹಿರಿಯ ಪತ್ರಕರ್ತ ಎ.ಜಿ ಕಾರಟಗಿಯವರಿಗೆ ಕಾರಟಗಿ ತಾಲೂಕಾ ಹೋರಾಟ ಸಮಿತಿ ಪದಾಧಿಕಾರಿಗಳು ಸನ್ಮಾನಿಸಿ ಗೌರವಿಸಿದರು.

ಇಲ್ಲಿನ ವಾಸವಿನಗರದ ವಾಸವಿ ದೇವಸ್ಥಾನದಲ್ಲಿ ಸೇರಿದ್ದ ಕಾರಟಗಿ ತಾಲೂಕು ಹೋರಾಟ ಸಮಿತಿ ಪದಾಧಿಕಾರಿಗಳು ಶಾಲು ಹೊದೆಸಿ, ಮೈಸೂರು ಪೇಟ ತೊಡಿಸಿ, ಸಿಹಿ ತಿನ್ನಿಸಿ ಸನ್ಮಾನಿಸಿ ಗೌರವಿಸಿದರು.

ಬಳಿಕ ಹೋರಾಟ ಸಮಿತಿ ಅಧ್ಯಕ್ಷ ಪ್ರಹ್ಲಾದ ಶ್ರೇಷ್ಠಿ ಮಾತನಾಡಿ, ಕಳೆದ ನಾಲ್ಕೈದು ದಶಕಗಳಿಂದ ಕನ್ನಡ ಪತ್ರಿಕೆಗಳನ್ನು ವಿತರಿಸಿ, ಈ ಭಾಗದಲ್ಲಿ ಓದುಗ ಅಭಿರುಚಿ ಹತ್ತಿಸಿದವರು ಹಿರಿಯ ಪತ್ರಕರ್ತ ಎಜಿ ಕಾರಟಗಿಯವರು. ಉತ್ತರ ಕರ್ನಾಟಕ ಭಾಗದಲ್ಲಿ ಪತ್ರಿಕೆಗಳ ಮುದ್ರಣ ಕಚೇರಿಗಳು ಇಲ್ಲದ ಸಂದರ್ಭದಲ್ಲಿ ಬೆಂಗಳೂರಿನಿಂದ ಬರುತ್ತಿದ್ದ ಪತ್ರಿಕೆಗಳನ್ನು ಸಾರಿಗೆ ಸಂಪರ್ಕ ಇಲ್ಲದ ಸುತ್ತಮುತ್ತಲಿನ ಗ್ರಾಮಗಳಿಗೆ ಸೈಕಲ್ಗಳಲ್ಲಿ ಪತ್ರಿಕೆಗಳನ್ನು ತಲುಪಿಸಿ ಓದುಗರಿಸಿ ಮುಟ್ಟಿಸಿದ ಕೀರ್ತಿ ಎಜಿ ಅವರಿಗೆ ಸಲ್ಲುತ್ತದೆ. ಈ 85ರ ಇಳಿವಯಸ್ಸಿನಲ್ಲೂ ಚಿರ ಯುವಕರನ್ನು ನಾಚಿಸುವಂತೆ ಇಂದಿಗೂ ಕೂಡಾ ಪತ್ರಿಕೆಗಳನ್ನು ಹಂಚುವ ಕಾಯಕದಲ್ಲಿ ನಿರತರಾಗಿರುವುದು ಈ ಪೀಳಿಗೆಯ ಪತ್ರಕರ್ತರಿಗೂ, ವಿತರಕರಿಗೂ ಸ್ಫೂರ್ತಿ ಮತ್ತು ಮಾದರಿಯ ಕಾರ್ಯವಾಗಿದೆ ಎಂದು ಬಣ್ಣಿಸಿದರು.

ಹೋರಾಟ ಸಮಿತಿಯಿಂದ ಪತ್ರಕರ್ತ ಎ.ಜಿ.ಕಾರಟಗಿಗೆ ಸನ್ಮಾನಿಸಲಾಯಿತು.

ನಂತರ ಹೋರಾಟ ಸಮಿತಿ ಪ್ರದಾನ ಕಾರ್ಯದರ್ಶಿ ಪ್ರಹ್ಲಾದ ಜೋಷಿ, ಶಿವರೆಡ್ಡಿ ನಾಯಕ ವಕೀಲರು, ಕಸಾಪ ಅಧ್ಯಕ್ಷ ಶರಣಪ್ಪ ಕೋಟ್ಯಾಳ, ರಾಘವೇಂದ್ರ ಶ್ರೇಷ್ಠಿ ಗುಂಡೂರು ಮಾತನಾಡಿ ಎಜಿಯವರು ಪತ್ರಿಕಾರಂಗಕ್ಕೆ ಸಲ್ಲಿಸಿದ ಅಪಾರ ಕೊಡುಗೆಗೆ ರಾಜ್ಯದ ಅತ್ಯುನ್ನತ ಪ್ರಶಸ್ತಿ ಪಡೆದಿರುವುದರ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹೋರಾಟ ಸಮಿತಿಯ ಪದಾಧಿಕಾರಿಗಳಾದ ಪಿ. ಗೋವಿಂದರಾಜ್ ಶ್ರೇಷ್ಠಿ, ಜಿ. ನಾಗರೆಡ್ಡೆಪ್ಪ, ಯಂಕಾರೆಡ್ಡೆಪ್ಪ ಚನ್ನಳ್ಳಿ, ತಾಯಪ್ಪ ಕೋಟ್ಯಾಳ, ಸಂದೀಪಗೌಡ, ಜಾಗೃತ ಯುವಕ ಸಂಘದ ಅಧ್ಯಕ್ಷ ಬಸವರಾಜ ಶೆಟ್ಟರ್, ಗದ್ದೆಪ್ಪ ನಾಯಕ, ಸೋಮಶೇಖರ್ ಗ್ಯಾರೇಜ್, ಎಸ್. ಸಿ ರಾಘವೇಂದ್ರ ಶ್ರೇಷ್ಠಿ ಇನ್ನಿತರರು ಇದ್ದರು.

ಮಾನಸಯ್ಯ ಗಡಿಪಾರಿಗೆ ಶ್ರೀರಾಮ ಸೇನೆ ಆಗ್ರಹ

ಲಿಂಗಸೂಗೂರು: ಶ್ರೀರಾಮ ಸೇನೆ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ ಮುತಾಲಿಕರ ಬಗ್ಗೆ ಹಗುರವಾಗಿ ಮಾತನಾಡಿರುವ ಟಿಯುಸಿಐ ರಾಷ್ಟ್ರೀಯ ಪ್ರದಾನ ಕಾರ್ಯದರ್ಶಿ ಆರ್ ಮಾನಸಯ್ಯ ಅವರನ್ನ ಗಡಿಪಾರು ಮಾಡುವಂತೆ ಶ್ರೀರಾಮ ಸೇನೆ ಮುಖಂಡರು ಒತ್ತಾಯಿಸಿ ಲಿಂಗಸುಗೂರು ಸಹಾಯಕ ಆಯುಕ್ತರಿಗೆ ಮನವಿ ಸಲ್ಲಿಸಿದರು.

ಲಿಂಗಸುಗೂರಿನಲ್ಲಿ ಪ್ರತಿಭಟನೆ ನಡೆಸಿ, ಆರ್ ಮಾನಸಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಶ್ರೀ ರಾಮ ಸೇನೆ ಮುಖಂಡರು,

ಹಟ್ಟಿ ಪಟ್ಟಣದಲ್ಲಿ ಸೇನೆಯ ಪಥ ಸಂಚಲನ ವೇಳೆ ಪ್ರಮೋದ ಮುತಾಲಿಕ್ ರವರು ರಾಜ್ಯ, ರಾಷ್ಟ್ರ ಹಾಗೂ ಹಿಂದೂತ್ವದ ಮತ್ತು ರಾಜ್ಯದಲ್ಲಿ ನಡೆಯುತ್ತಿರುವ ರೈತರ ಭೂಮಿ ಕಬಳಿಸುತ್ತಿರುವ, ವಕ್ಫ ಮಂಡಳಿ ಜನತೆಯ ಭೂಮಿಯನ್ನು ಕಸೆದುಕೊಳ್ಳುತ್ತಿರುವ ವಿರುದ್ಧ ಭಹಿರಂಗ ಸಭೆಯಲ್ಲಿ ಮಾತನಾಡಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಆರ್ ಮಾನಸಯ್ಯ ಪ್ರಮೋದ ಮುತಾಲಿಕ ಒಬ್ಬ ಹುಚ್ಚನಾಯಿ ಎಂದು ಅವಹೇಳನ ಮಾಡಿದ್ದರು.

ಲಿಂಗಸುಗೂರಿನಲ್ಲಿ ಶ್ರೀರಾಮ ಸೇನೆ ಮುಖಂಡರು ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಮಾನಸಯ್ಯ ಅವರ ಹೇಳಿಕೆಯನ್ನ ಖಂಡಿಸಿ ಇಂದು ಪ್ರತಿಭಟನೆ ನಡೆಸಿ ಕ್ಷಮೆ ಕೇಳುವಂತೆ ಆಗ್ರಹಿಸಿದರು. ಆರ್. ಮಾನಸಯ್ಯ ರೈತರ ಮತ್ತು ಅರಣ್ಯ ಭೂಮಿಯನ್ನು ಕಬ್ಜಾ ಮಾಡಿರುದನ್ನು ಇಲ್ಲಿಯವರೆಗೆ ಯಾವೊಬ್ಬ ಅಧಿಕಾರಿಯು ಅವರ ಮೇಲೆ ಪ್ರಕರಣ ದಾಖಲಿಸಲು ಮುಂದಾಗಿಲ್ಲ. ಭೂಗಳನ ವಿರುದ್ಧ ಆದಷ್ಟು ಬೇಗನೇ ಪ್ರಕರಣ ದಾಖಲಿಸಿ ಆರ್.ಮಾನಸಯ್ಯನನ್ನು ಜಿಲ್ಲೆಯಿಂದ ಗಡಿಪಾರು ಮಾಡುವಂತೆ ಒತ್ತಾಯಿಸಿದ್ದಾರೆ.

ಪ್ರತಿಭಟನೆಯಲ್ಲಿ ಶ್ರೀರಾಮ ಸೇನೆ ಅಧ್ಯಕ್ಷ ರಘುಗೌಡ ನಾಯಕ, ಹನುಮಂತ ಅಂಬಿಗೇರ, ರಾಜು ರೆಡ್ಡಿ, ಅಂಬರೀಷ್ ಸೇರಿದಂತೆ ಶ್ರೀರಾಮ ಸೇನೆ ಕಾರ್ಯಕರ್ತರು ಭಾಗಿಯಾಗಿದ್ದರು.

ಮಾತೃ ಭಾಷೆಗೆ ಪ್ರಾಮುಖ್ಯತೆ ನೀಡಿ

ಮುದಗಲ್: ಮಕ್ಕಳ ಇಂಗ್ಲೀಷ್ ಕಲಿಕೆಯ ಜೊತೆಗೆ ಮಾತೃಭಾಷೆ ಕನ್ನಡಕ್ಕೂ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದು ಮಾಜಿ ಸಚಿವ ಹಾಗೂ ಕೊಪ್ಪಳ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಅಮರೇಗೌಡ ಪಾಟೀಲ್ ಬಯ್ಯಾಪುರ ಹೇಳಿದರು. ಪಟ್ಟಣದ ಅನ್ನದಾನಗೌಡ ಪಾಟೀಲ್ ಪದವಿ ಕಾಲೇಜಿನ ಆವರಣದಲ್ಲಿ ಜರುಗಿದ ಸಾಣೇಹಳ್ಳಿಯ ಶಿವಸಂಚಾರ ತಂಡದ ನಾಟಕೋತ್ಸವದ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಮಕ್ಕಳಿಗೆ ಉತ್ತಮ ಶಿಕ್ಷಣದ ಜತೆ ಜತೆಗೆ ಸಂಸ್ಕಾರ, ಸಂಸ್ಕೃತಿ ಹಾಗೂ ಮಾನವೀಯ ಗುಣಗಳ ಬಗ್ಗೆ ತಿಳಿ ಹೇಳುವಂತೆ ಪಾಲಕರಿಗೆ ಕರೆ ನೀಡಿದರು. ಸಾಣೇಹಳ್ಳಿಯ ಶಿವಸಂಚಾರ ತಂಡದಿಂದ ಪ್ರದರ್ಶನಗೊಳ್ಳುತ್ತಿರುವ ಎಲ್ಲಾ ನಾಟಕಗಳು ಬಹುತೇಕ ಮಾನವೀಯ ಮೌಲ್ಯಾಧಾರಿತ ಮತ್ತು ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತ ನಾಟಕಗಳಾಗಿದ್ದು ಜೀವನದ ಸಾರ್ಥಕತೆಗೆ ಇಂತಹ ಸಾಮಾಜಿಕ ನಾಟಕ ಪ್ರದರ್ಶನ ಅವಶ್ಯ ಎಂದರು. ಸ್ಪರ್ಧಾತ್ಮಕ ಯುಗದಲ್ಲಿ ಕನ್ನಡ ಮಾತೃಭಾಷೆಯನ್ನು ಕಡ್ಡಾಯವಾಗಿ ಅಭ್ಯಸಿಸಿ ಕನ್ನಡ ನಾಡು ನುಡಿ ಮತ್ತು ಕನ್ನಡ ಶಾಲೆ ಉಳಿಸಲು ಶ್ರಮಿಸುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಅನಿಲ್ ಕುಮಾರ್ ಬುಶೆಟ್ಟಿ, ಸಂಗಮೇಶ ಸರಗಣಾಚಾರಿ, ಜಾನಪದ ಪರಿಷತ್ ನ ಜಿಲ್ಲಾ ಗೌರವಾಧ್ಯಕ್ಷ ಅಶೋಕಗೌಡ ಪಾಟೀಲ್, ಮಲ್ಲಿಕಾರ್ಜುನ ಗೌಡರ್, ಕಸಾಪ ಮುದಗಲ್ ಘಟಕಾಧ್ಯಕ್ಷ ಹಾಜಿ ಮಲಂಗ ಬಾಬಾ, ಜೀವನ್ ಪಾಲ್ಗೊಂಡಿದ್ದರು.

ಸರಕಾರದ ಯೋಜನೆ ಸದ್ಬಳಕೆಗೆ ಸಲಹೆ

ಮಸ್ಕಿ : ಜನರು ಸರಕಾರದ ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮಸ್ಕಿ ಶಾಸಕ ಹಾಗೂ ಖಾದಿ ಗ್ರಾಮದ್ಯೋಗ ನಿಗಮದ ಅಧ್ಯಕ್ಷ ಆರ್ ಬಸನಗೌಡ ತುರ್ವಿಹಾಳ ಕರೆ ನೀಡಿದರು.

ಮಸ್ಕಿ ಪಟ್ಟಣದಲ್ಲಿ ಪಿಎಂ ಸೂರ್ಯ ಘರ್ ಮುಫ್ತ ಬೀಜಲಿ (ಮನೆಗಳಿಗೆ) ಯೋಜನೆ ಹಾಗೂ ಪಿ ಎಂ ಕುಸುಂಬಿ (ಪಂಪ್ ಸೆಟ್) ಯೋಜನೆಯ ಬಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ಸರಕಾರಗಳು ಬಡ ಜನರಿಗಾಗಿ ಅನೇಕ ಸೌಲಭ್ಯಗಳನ್ನು ನೀಡುತ್ತಿದ್ದು, ಅವುಗಳ ಸದುಪಯೋಗ ಪಡಿಸಿಕೊಂಡಾಗ ಮಾತ್ರ ಸರಕಾರ ಜಾರಿಗೆ ತಂದ ಯೋಜನೆಗಳು ಸಾರ್ಥಕವಾಗುತ್ತವೆ. ಮಸ್ಕಿ ಕ್ಷೇತ್ರದಲ್ಲಿ ಪಿಎಂ ಸೂರ್ಯ ಘರ್ ಮುಫ್ತ ಬೀಜಲಿ ಯೋಜನೆ ಹಾಗೂ ಪಿ ಎಂ ಕುಸುಂಬಿ ಯೋಜನೆಯಡಿಯಲ್ಲಿ ಫಲಾನುಭವಿಗಳು ಅರ್ಜಿ ಸಲ್ಲಿಸಿ ಮನೆಗಳಿಗೆ ಹಾಗೂ ಹೊಲಗಳ ಪಂಪ್ ಸೆಟ್ ಗಳಿಗೆ ಸೋಲಾರ್ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಿ ಇದರಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸಬ್ಸಿಡಿ ದರದಲ್ಲಿ ಸೋಲಾರ್ ವಿದ್ಯುತ್ ಸಂಪರ್ಕವನ್ನು ಒದಗಿಸುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಸೋಲಾರನ್ನು ಬಳಕೆ ಮಾಡಿಕೊಳ್ಳಿ ಎಂದರು. ಸಿಂದನೂರು ವಿಭಾಗದ ಇ ಇ ವಿಷ್ಣು ಮಾತನಾಡಿ,

ರಾಜ್ಯ ಸರಕಾರದಿಂದ ಈ ಯೋಜನೆ ಶೇ.50 ರಷ್ಟು ಸಬ್ಸಿಡಿ ದೊರೆಯಲಿದೆ. ಹಾಗೂ ಕೇಂದ್ರ ಸರಕಾರದಿಂದ 30 ರಷ್ಟು ಸಬ್ಸಿಡಿ ದೊರೆಯಲಿದ್ದು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜೆ ಇ ಶ್ರೀಶೈಲ ಪಾಟೀಲ, ಶಿವಣ್ಣ ನಾಯಕ, ಬಲವಂತರಾಯ ವಟಗಲ್, ಸಿದ್ದನಗೌಡ ಮಾಟೂರ್ ಸೇರಿದಂತೆ ಇತರರಿದ್ದರು.

> ಸೂರ್ಯ ಘರ್ ಮುಫ್ತ ಬೀಜಲಿ ಯೋಜನೆ ಹಾಗೂ ಪಿ ಎಂ ಕುಸುಂಬಿ ಯೋಜನೆಗೆ ಅರ್ಜಿ ಸಲ್ಲಿಸಲು ಇಚ್ಚಿಸುವ ಗ್ರಾಹಕರು ಹೆಚ್ಚಿನ ಮಾಹಿತಿಗಾಗಿ ಶಾಖಾ ಕಚೇರಿ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಿ .
> – ವೆಂಕಟೇಶ್ ಎಇಇ

ಮಸ್ಕಿ ಪಟ್ಟಣದಲ್ಲಿ ಪಿಎಂ ಸೂರ್ಯ ಘರ್ ಮುಫ್ತ ಬೀಜಲಿ (ಮನೆಗಳಿಗೆ) ಯೋಜನೆ ಹಾಗೂ ಪಿ ಎಂ ಕುಸುಂಬಿ (ಪಂಪ್ ಸೆಟ್) ಯೋಜನೆಯ ಬಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು.

ವನಸಿರಿ ಫೌಂಡೇಷನ್ ಕಾರ್ಯ ಆದರ್ಶ

ಸಿಂಧನೂರು: ತಂದೆ - ತಾಯಿ ಪುಣ್ಯ ಸ್ಮರಣೆ ಅಂಗವಾಗಿ ತಾಲೂಕಿನ ಪತ್ರಕರ್ತರಿಗೆ ಹೆಲ್ಮೆಟ್ ವಿತರಣೆ ಮಾಡಿದ ವನಸಿರಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಅಮರೇಗೌಡ ಮಲ್ಲಾಪುರ ಹಾಗೂ ಅವರ ತಂಡ ಕಾರ್ಯ ನಿಜಕ್ಕೂ ಮೆಚ್ಚುವಂತದ್ದು ಎಂದು ಡಿವೈಎಸ್ಪಿ ಬಾಳಪ್ಪ ತಳವಾರ ಅಭಿಪ್ರಾಯಪಟ್ಟರು. ನಗರದ ಪಿಡಬ್ಲೂಡಿ ಕ್ಯಾಂಪ್ ನಲ್ಲಿ ಜೀವ ಹೋದ ಆಲದ ಮರಕ್ಕೆ ಮರು ಜೀವ ಪಡೆದ ಸ್ಥಳದಲ್ಲಿ ಹೆಲ್ಮೆಟ್ ವಿತರಿಸಿ ಮಾತಾನಾಡಿದರು. ನವೆಂಬರ್ 1 ರಿಂದ ಕಡ್ಡಾಯ ಹೆಲ್ಮೆಟ್ ಧರಿಸುವಿಕೆ ಅಡಿಯಲ್ಲಿ ಯಾವುದೇ ರಾಜಕಾರಣಿಗಳು ಅರಿತುಕೊಂಡು ವಾಹನಗಳನ್ನು ಬಿಡಿಸಲು ದೂರವಾಣಿ ಕರೆ ಮಾಡಿಲ್ಲ. ಇದು ಉತ್ತಮ ಬೆಳವಣಿಗೆ ಎಂದರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಶಿವನಗೌಡ ಗೋರೆಬಾಳ ಮಾತನಾಡಿ, ಬೈಕ್ ಓಡಿಸುವಾಗ ಮೊಬೈಲ್ ಬಳಕೆ ಮಾಡಬೇಡಿ. ಸಂತೋಷ ಅಂಗಡಿ, ಮಾತನಾಡಿದರು. ವನಸಿರಿ ಪೌಂಡೇಶನ್ ಸಂಸ್ಥಾಪಕ ರಾಜ್ಯ ಅದ್ಯಕ್ಷ ಅಮರೇಗೌಡ ಮಲ್ಲಾಪುರ ಪತ್ರಕರ್ತರಿಗೆ ಹೆಲ್ಮೆಟ್ ವಿತರಿಸಿದರು. ಈ ಸಂದರ್ಭದಲ್ಲಿ ಸಂಚಾರಿ ಠಾಣೆ ಪಿಎಸ್ಐ ವೆಂಕಟೇಶ ಚವ್ಹಾಣ, ವನಸಿರಿ ಪದಾಧಿಕಾರಿಗಳಾದ ಬಿ ಎನ್ ಗೌಡ ಗೋನವಾರ, ಚಂದ್ರು ಪವಾಡಶೆಟ್ಟಿ, ಚನ್ನಪ್ಪ ಪತ್ತಾರ, ವೀರಭದ್ರಯ್ಯ ಸ್ವಾಮಿ, ರಾಜು ಪತ್ತಾರ, ದುರಗೇಶ, ಗಿರಿಸ್ವಾಮಿ ಹೆಡಗಿನಾಳ, ಶರಣಬಸವ ಅರಳಹಳ್ಳಿ, ಮುದಿಯಪ್ಪ ಹೊಸಳ್ಳಿ ಕ್ಯಾಂಪ್, ಭೀಮಣ್ಣ ಬೆಳಗುರ್ಕಿ, ದೇವರಾಜ ಸೇರಿದಂತೆ ಪತ್ರಕರ್ತರು ಇದ್ದರು.

@vishwavaninews

ಆರಾಮ

ಚಿತ್ತ ವಿಹಾರ

ಹೊತ್ತಿಸದಿರಿ ದ್ವೇಷದ ಕಿಡಿ!

ನಾವುಗಳೆಲ್ಲ ಒಂದಲ್ಲ ಒಂದು ವಿಧದದಲ್ಲಿ ಸ್ವಾರ್ಥಿಗಳೇ. ಇತರರಿಗೆ ಏನಾದರಾಗಲಿ ತಮಗೆ ಮಾತ್ರ ಒಳಿತಾಗಲೆಂದು ಬಯಸುತ್ತೇವೆ. ಒಂದೊಮ್ಮೆ ನಮ್ಮಿಚ್ಛೆಯಂತೆ ಎಲ್ಲವೂ ಪರವಾದರೆ ಅನೈತಿಕವನ್ನು ನೈತಿಕವೆಂದು, ವಿರೋಧವಾದರೆ ನೈತಿಕತೆಯನ್ನು ಅನೈತಿಕ ಎಂದು ಬೊಬ್ಬಿಡುತ್ತ, ಆರೋಪ ಪ್ರತ್ಯಾರೋಪ ಮಾಡುತ್ತ ಅಶಾಂತಿಯ ವಾತಾವರಣ ನಿರ್ಮಿಸುತ್ತೇವೆ. ತಮ್ಮ ಸ್ವಾರ್ಥ ಸಾಧನೆಗಾಗಿ ಆಕಸ್ಮಿಕ ಘಟನೆಗಳಿಗೂ ಬೇರೆ ಸ್ವರೂಪದ ಕಪೋಲಕಲ್ಪಿತ ಬಣ್ಣ ಬಳಿಯುತ್ತೇವೆ. ಒಂದು ಚಿಕ್ಕ ವಿಚಾರವನ್ನು ದೊಡ್ಡ ವಿವಾದವನ್ನಾಗಿ ಮಾಡುವ ದಡ್ಡರನ್ನು ದೊಡ್ಡವರೆಂದು ಕಾಣುತ್ತಿರುವುದು ಇಂದಿನ ದುರಂತವಾಗಿದೆ. ದ್ರೋಣಾಚಾರ್ಯರು ಹಾಗೂ ದ್ರುಪದ ಇಬ್ಬರೂ ಸ್ನೇಹಿತರು. ಒಮ್ಮೆ ಸಹಾಯ ಯಾಚಿಸಿ, ದ್ರೋಣಾಚಾರ್ಯರು ರಾಜನಾದ ದ್ರುಪದನ ಬಳಿ ಬಂದಾಗ, ತಿರಸ್ಕಾರ ದೃಷ್ಟಿಯಿಂದ ನೋಡುತ್ತ 'ರಾಜನಿಗೂ ಭಿಕ್ಷುಕನಿಗೂ ಏನು ಸಂಬಂಧ' ಎಂದು ಅವಮಾನಿಸಿ ಕಳುಹಿಸುತ್ತಾನೆ. ಮುಂದೊಂದು ದಿನ ದ್ರೋಣಾಚಾರ್ಯರು ಈ ಅವಮಾನಕ್ಕೆ ಪ್ರತೀಕಾರವನ್ನು ಶಿಷ್ಯ ಅರ್ಜುನನಿಂದ ತೀರಿಸಿಕೊಳ್ಳುವುದು. ಇದರಿಂದ ಅವಮಾನಿತನಾದ ದ್ರುಪದನು ದ್ರೋಣಾಚಾರ್ಯರನ್ನು ಕೊಲ್ಲುವಂತಹ ಮಗನನ್ನು ಪಡೆದು ಪರಸ್ಪರ ಪ್ರತಿಕಾರ ತೀರಿಸಿಕೊಂಡರು. ಈ ರೀತಿಯ ದ್ವೇಷ ದಳ್ಳುರಿಯ ಪ್ರಯತ್ನಗಳಂತೆ, ಇಂದಿಗೂ ತಮ್ಮ ಸ್ವಾರ್ಥ ಸಾಧನೆಗಾಗಿ ಮತ್ತೊಬ್ಬರಲ್ಲಿ ದ್ವೇಷದ ಭಾವನೆಯನ್ನು ಕೆರಳಿಸುತ್ತಾ ಸಮಾಜದಲ್ಲಿ ಅಶಾಂತಿಯ ವಾತಾವರಣ ನಿರ್ಮಿಸುತ್ತಿರುವ ಪ್ರಸಂಗಗಳೆಲ್ಲ ನಮ್ಮನ್ನು ಅಣಕಿಸುತ್ತವಲ್ಲವೇ? ಅನೈತಿಕ ಕಾರ್ಯಗಳನ್ನು ಮಾಡಿ ಪರಸ್ಪರ ದ್ವೇಷ ದಳ್ಳುರಿಯ ಕಿಡಿ ಹೊತ್ತಿಸಿ ಅವಸಾನವಾಗುವುದಕ್ಕಿಂತ, ನೈತಿಕ ಕಾರ್ಯಗಳನ್ನು ಮಾಡುತ್ತ ಪರಸ್ಪರ ಪ್ರೀತಿ ಪ್ರೇಮದ ಕುಡಿಯನ್ನು ಚಿಗುರಿಸಿ ಶಾಂತಿ ನೆಮ್ಮದಿಯ ನಂದನವನದಲ್ಲಿ ಚೈತನ್ಯಯುತವಾಗಿ ಬದುಕಿ ಜೀವನಾನಂದವನ್ನು ಪಡೆಯಬಹುದಲ್ಲವೇ ?

• ರವಿ ಕಂಗಳ, ಕೊಂಕಣಕೊಪ್ಪ

ಕಿರುಕಥೆಗಳು

ಪವರ್ ಲಿಫ್ಟಿಂಗ್ ಗ್ರಾಮೀಣ ಪ್ರತಿಭೆ

ದಕ್ಷಿಣ ಕನ್ನಡ ದ ಕಿನ್ನಿಗೋಳಿ ಸಮೀಪದ ದಾಮಸ್‌ಕಟ್ಟೆ ಎಂಬ ಗ್ರಾಮೀಣ ಪ್ರದೇಶದಲ್ಲಿರುವ ಇಂತಹ ಒಂದು ಪ್ರತಿಭೆ, ಪವರ್ ಲಿಫ್ಟಿಂಗ್‌ನಲ್ಲಿ ತನ್ನ ಪರಿಶ್ರಮ ತೋರುತ್ತಿದ್ದಾರೆ. ದಾಮಸ್‌ಕಟ್ಟೆ ನಿವಾಸಿ ಪ್ರವೀಣ್ ಸಾಲ್ಯಾನ್ ಹಾಗೂ ಅಮಿತಾ ಸಾಲ್ಯಾನ್ ದಂಪತಿ ಪುತ್ರಿ, ಸಾತ್ವಿ ಸಾಲ್ಯಾನ್ ಬೆಳೆಯುತ್ತಿರುವ ಆ ಪ್ರತಿಭೆ. ತಾಳಿಪಾಡಿ ಪಾಂಪೈ ಪದವಿ ಪೂರ್ವ ಕಾಲೇಜಿನ ಹನ್ನೊಂದನೇ ತರಗತಿಯ ವಿದ್ಯಾರ್ಥಿನಿಯಾಗಿರುವ ಹದಿನಾರರ ಹರೆಯದ ಬಾಲಕಿ ಈವರೆಗೆ ಪವರ್ ಲಿಫ್ಟಿಂಗ್‌ನಲ್ಲಿ ಕೆಲವಾರು ಪದಕಗಳನ್ನು ಗೆದ್ದುಕೊಂಡಿದ್ದಾಳೆ.

ಕಿನ್ನಿಗೋಳಿ ಶ್ರೀ ವೀರ ಮಾರುತಿ ವ್ಯಾಯಾಮ ಶಾಲೆಯಲ್ಲಿ ತರಬೇತಿ ಪಡೆಯುತ್ತಿರುವ ಈಕೆ ಮೊದಲಿಗೆ, 2023 ರ ಫೆಬ್ರವರಿ 12 ರಂದು ಮಂಗಳೂರಿನಲ್ಲಿ ಜಿಲ್ಲಾ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ. ಮಾರ್ಚ್ 5, 2023 ರಂದು ಕುಮಟಾದಲ್ಲಿ ನಡೆದ ರಾಜ್ಯ ಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ 2ನೇ ಸ್ಥಾನ ಪಡೆದಿದ್ದಾಳೆ. 30.09.2023ರಂದು ಮಂಗಳೂರಿನಲ್ಲಿ ನಡೆದ ರಾಜ್ಯಮಟ್ಟದ ಕ್ಲಾಸಿಕ್ ಬೆಂಚ್‌ಪ್ರೆಸ್ ಚಾಂಪಿಯನ್‌ಶಿಪ್‌ನಲ್ಲಿ 3 ನೇ ಸ್ಥಾನ, 1.10.2023 ನಲ್ಲಿ ನಡೆದ ಬೆಂಚ್‌ಪ್ರೆಸ್ ಚಾಂಪಿಯನ್‌ಶಿಪ್‌ನಲ್ಲಿ 3 ನೇ ಸ್ಥಾನವನ್ನು ಪಡೆದಳು. 20.06. 2024 ರಂದು ಪಟಿಯಾಲಾದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಪವರ್‌ಲಿಫ್ಟಿಂಗ್ ಸ್ಪರ್ಧೆಯ ಬೆಂಚ್‌ಪ್ರೆಸ್‌ನಲ್ಲಿ 2 ನೇ ಮತ್ತು ಒಟ್ಟಾರೆ 5 ನೇ ಸ್ಥಾನವನ್ನು ಪಡೆದುಕೊಂಡಿರುತ್ತಾಳೆ. ಗೋವಾದಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಕ್ಲಾಸಿಕ್ ಬೆಂಚ್‌ಪ್ರೆಸ್ ಚಾಂಪಿ ಯನ್‌ಶಿಪ್‌ನಲ್ಲಿ 1ನೇ ಸ್ಥಾನ, ಸುಸಜ್ಜಿತ ಬೆಂಚ್‌ಪ್ರೆಸ್ ಚಾಂಪಿಯನ್‌ಶಿಪ್‌ನಲ್ಲಿ 3 ನೇ ಸ್ಥಾನವನ್ನು ಗಳಿಸಿದ, ಈಕೆ ಕಳೆದ ತಿಂಗಳು, 24.11.2024 ರಂದು ತಮಿಳುನಾಡಿನ ಸೇಲಂನಲ್ಲಿ ನಡೆದ ರಾಷ್ಟ್ರೀಯ ಮಟ್ಟದ ದಕ್ಷಿಣ ಭಾರತ ಪವರ್ ಲಿಫ್ಟಿಂಗ್ ಚಾಂಪಿ ಯನ್‌ಶಿಪ್ ನಲ್ಲಿ ಮೊದಲನೇ ಸ್ಥಾನವನ್ನು ಗಳಿಸಿ ಕಾಲೇಜು ಮತ್ತು ಗುರುಗಳ ಪಾಲಕರ ಹೆಮ್ಮೆಗೆ ಕಾರಣಳಾಗಿದ್ದಾಳೆ.

• ಎಳಿಂಜೆ ನಾಗೇಶ್

ಇದು ಸಾಧ್ಯವೇ?

ಕೆಲವು ನಾಯಕರ ಘೋಷಣೆ
ವಿಚಿತ್ರ ಆದರೂ
ಅವರ ಪ್ರಕಾರ ಸತ್ಯ
ಇಲ್ಲವಂತೆ ಸ್ವಂತ ಮನೆ ಗಾಡಿ
ಇಂತಹ ವಿಷಯ ನೋಡಿ
ಸುಮ್ಮನಾಗಬೇಕು ನಗಾಡಿ!

• ಮಹಾಂತೇಶ ಮಾಗನೂರ

ನೀವೂ ಬರೆಯಬಹುದು

ನಮ್ಮ ವಿಳಾಸ:

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಗ್ರಾಮೀಣ ಪ್ರತಿಭೆಗಳ ರಜತ ಸಂಭ್ರಮ!

• ಸಿದ್ದೇಶ್ ಹಾರನಹಳ್ಳಿ

ಯಾವುದೇ ಲಿಂಗ ತಾರತಮ್ಯವಿಲ್ಲದೆ, ಜಾತಿ ಭೇದವಿಲ್ಲದೆ, ಬಡವ-ಬಲ್ಲಿದನೆನ್ನದೆ ಎಲ್ಲರಿಗೂ ಸಮಾನ ವಿದ್ಯೆಯನ್ನು ನೀಡುತ್ತಿರುವ ಜ್ಞಾನದೇಗುಲ - ಜವಾಹರ್ ನವೋದಯ ವಿದ್ಯಾಲಯ. ಉತ್ತಮ ಸಮಾಜ ನಿರ್ಮಾಣದಲ್ಲಿ ಜವಾಹರ್ ನವೋದಯ ವಿದ್ಯಾಲಯಗಳ ಕೊಡುಗೆ ಅಪಾರ.

'ಕಾಡಿನಲ್ಲಿ ಅರಳುವ ಮಲ್ಲಿಗೆಯು ಎಷ್ಟೇ ಸುಗಂಧ ಭರಿತವಾಗಿದ್ದರೂ ಅದು ಮುಡಿಗೆ ಅಥವಾ ಗುಡಿಗೆ ಸೇರದೇ ಹೋದರೆ ಅದಕ್ಕೆ ಸಾರ್ಥಕತೆ ಸಿಗುವುದಿಲ್ಲ' ಎಂಬ ಕವಿವಾಣಿಯಿದೆ. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿರುವ ಲಕ್ಷಾಂತರ ಪ್ರತಿಭಾವಂತ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣದ ಜೊತೆಗೆ ವಸತಿಯನ್ನು ನೀಡಿ ಅವರಲ್ಲಿರುವ ಪ್ರತಿಭೆಯನ್ನು ಹೊರತಂದು ಸಾರ್ಥಕ ಜೀವನ ಕಟ್ಟಿಕೊಡುವಲ್ಲಿ ನವೋದಯ ಶಾಲೆಗಳ ಕೊಡುಗೆ ಅನನ್ಯವಾದುದು. ಈ ಶಾಲೆಯಲ್ಲಿ ಶಿಕ್ಷಣ ಪಡೆದುಕೊಂಡ ಅದೆಷ್ಟೋ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಇಂದು ಗುಣಮಟ್ಟದ ಬದುಕು ಕಟ್ಟಿಕೊಂಡು ನಾಗರಿಕ ಸೇವೆಗಳಲ್ಲಿ, ಉದ್ದಿಮೆಗಳಲ್ಲಿ, ಖಾಸಗಿಯಲ್ಲಿ ಉನ್ನತ ಹುದ್ದೆಗಳಲ್ಲಿ ದೇಶ-ವಿದೇಶದಾದ್ಯಂತ ನೆಲೆಸಿದ್ದಾರೆ. ಈ ಶಾಲೆಗಳಿಗೆ ಈಗ ರಜತ ಸಂಭ್ರಮ.

ಪ್ರಾರಂಭ

1986ರಲ್ಲಿ ಭಾರತದ ಪ್ರಧಾನ ಮಂತ್ರಿಯಾಗಿದ್ದ ರಾಜೀವ್ ಗಾಂಧಿಯವರು ಭಾರತದಾದ್ಯಂತ ಉನ್ನತ ಶಿಕ್ಷಣ ಕಾರ್ಯಕ್ರಮಗಳನ್ನು ಆಧುನೀಕರಿಸಲು ಮತ್ತು ವಿಸ್ತರಿಸಲು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಘೋಷಿಸಿದರು. ಈ ನೀತಿಯ ಭಾಗವಾಗಿ ಅವರು ದೇಶದಾದ್ಯಂತ ನವೋದಯ ವಿದ್ಯಾಲಯಗಳನ್ನು ಸ್ಥಾಪಿಸಿದರು; ಇದು ಕೇಂದ್ರ ಸರ್ಕಾರ-ಆಧಾರಿತ ಶಿಕ್ಷಣ ಸಂಸ್ಥೆಯಾಗಿದ್ದು, ಗ್ರಾಮೀಣ ವಿದ್ಯಾರ್ಥಿ ಗಳಿಗೆ ಆರರಿಂದ ಹನ್ನೆರಡನೇ ತರಗತಿಯವರೆಗೆ ಉಚಿತ ವಸತಿ ಸಹಿತ ಶಿಕ್ಷಣವನ್ನು ಒದಗಿಸುತ್ತದೆ.

ಜವಾಹರ್ ನವೋದಯ ವಿದ್ಯಾಲಯಗಳು ಪ್ರಧಾನವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉನ್ನತ ಮಟ್ಟದ ಶಿಕ್ಷಣ ಕೊಡುವ ಕೇಂದ್ರೀಯ ಶಾಲೆಗಳ ವ್ಯವಸ್ಥೆಯಾಗಿದ್ದು, ಆರ್ಥಿಕ, ಸಾಮಾಜಿಕ ಮತ್ತು ಗ್ರಾಮೀಣ ಅನಾನುಕೂಲತೆಗಳಿಂದಾಗಿ ಗುಣಮಟ್ಟದ ಕಲಿಕೆಯಿಂದ ವಂಚಿತರಾದ ವಿದ್ಯಾರ್ಥಿಗಳಿಗೆಂದೇ ಸ್ಥಾಪಿಸಲಾಗಿದೆ. ಪ್ರಾರಂಭದಲ್ಲಿ ಬರೀ 'ನವೋದಯ ವಿದ್ಯಾಲಯ'ಗಳಾಗಿದ್ದ ಈ ಶಾಲೆಗಳು ಭಾರತದ ಮೊದಲ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ್ ನೆಹರುರವರ ಜನ್ಮಶತಾಭಿಯ ವರ್ಷದಲ್ಲಿ 'ಜವಾಹರ ನವೋದಯ ವಿದ್ಯಾಲಯ'ಗಳೆಂದು ಪುನರ್ನಾಮಕರಣಗೊಂಡವು. ಈಗ ಸುಮಾರು 557 ನವೋದಯ ವಿದ್ಯಾಲಯಗಳು ತಮಿಳುನಾಡು ರಾಜ್ಯವನ್ನುಳಿದು ಭಾರತದೆಲ್ಲೆಡೆ ಇವೆ. ಈ ವಿದ್ಯಾಲಯಗಳು ಜಿಲ್ಲಾಮಟ್ಟದಲ್ಲಿ ನಡೆಯುವ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ, ಊಟ ಮತ್ತು ವಸತಿಯನ್ನೊದಗಿಸಿಕೊಡುತ್ತವೆ.

ವಸತಿ ಊಟ ಉಚಿತ

ಜವಾಹರ್ ನವೋದಯ ವಿದ್ಯಾಲಯಗಳಲ್ಲಿ ಶಿಕ್ಷಣ, ವಸತಿ ಮತ್ತು ಊಟ ಉಚಿತ. ಹಾಗೆಂದ ಮಾತ್ರಕ್ಕೆ ಗುಣಮಟ್ಟದಲ್ಲಿ ಕೊರತೆಯಿಲ್ಲ. ವಾರವಿಡೀ ವಿವಿಧ ರೀತಿಯ ಬೆಳಗಿನ ತಿಂಡಿಗಳು, ಭೋಜನಕ್ಕೆ ವಿವಿಧ ತರಕಾರಿಗಳ ಖಾದ್ಯಗಳು, ಸಂಜೆ ಉಪಹಾರ-ಪಾನೀಯಗಳು, ವಾರಾಂತ್ಯದಲ್ಲಿ ಮಾಂಸಾಹಾರ ನವೋದಯ ಶಾಲೆಗಳ ವೈಶಿಷ್ಟ್ಯ.

ಪ್ರವೇಶ ಹೇಗೆ?

ನವೋದಯ ಶಾಲೆಗಳ 6ನೇ ತರಗತಿಯ ಪ್ರವೇಶಕ್ಕಾಗಿ ಆಯ್ಕೆ ಪರೀಕ್ಷೆಯಲ್ಲಿ ಅರ್ಹತೆಯ ಅಗತ್ಯವಿದೆ. ಪ್ರತಿ ಶಾಲೆಗೆ 80 ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು 6ನೇ ತರಗತಿಗೆ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುತ್ತದೆ. ತಮ್ಮ ಐದನೇ ತರಗತಿಯ ಸಮಯದಲ್ಲಿ ಒಮ್ಮೆ ಮಾತ್ರ ಪರೀಕ್ಷೆಗೆ ಅರ್ಜಿ ಸಲ್ಲಿಸಬಹುದು. ಕಳೆದ ವರ್ಷದ ಪ್ರವೇಶ ಪರೀಕ್ಷೆಯಲ್ಲಿ 2,41,7009 ವಿದ್ಯಾರ್ಥಿಗಳು ಹಾಜರಾಗಿದ್ದು, ಕೇವಲ 47,320 ವಿದ್ಯಾರ್ಥಿಗಳು ಮಾತ್ರ ಆಯ್ಕೆಯಾಗಿದ್ದಾರೆ. ಇದರಿಂದ ಆಯ್ಕೆ ಪರೀಕ್ಷೆಯ ಗುಣಮಟ್ಟ ಮತ್ತು ಸ್ಪರ್ಧಾತ್ಮಕತೆಯನ್ನು ಅವಲೋಕಿಸಬಹುದು. ಪರೀಕ್ಷೆಯು ಮಾನಸಿಕ ಸಾಮರ್ಥ್ಯ ಕೌಶಲ್ಯಗಳು, ಗಣಿತ ಮತ್ತು ಪ್ರಾದೇಶಿಕ ಭಾಷೆಗಳನ್ನು ಒಳಗೊಂಡಿರುತ್ತದೆ.

ಮೀಸಲಾತಿ

ಶಾಲೆಗಳ ಪ್ರವೇಶವು ಕೇಂದ್ರ ಸರ್ಕಾರದ ನೀತಿಯ ಪ್ರಕಾರ ಮೀಸಲಾತಿಯನ್ನು ಅನುಸರಿಸುತ್ತಿದ್ದು, ಎಸ್‌ಟಿ, ಎಸ್‌ಸಿ ಮತ್ತು ಒಬಿಸಿಗಳಿಗೆ ಮೀಸಲಾತಿಯನ್ನು ಒಳಗೊಂಡಿರುತ್ತದೆ. ಕನಿಷ್ಠ 75% ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಗರಿಷ್ಠ 25% ನಗರ ಪ್ರದೇಶಗಳಿಂದ, ನಿಗದಿತ 33% ಮಹಿಳಾ ವಿದ್ಯಾರ್ಥಿಗಳಿಗೆ ಮತ್ತು 3% ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿ ಇದೆ.

ವಿದ್ಯಾಭ್ಯಾಸ

ಶಿಕ್ಷಣದಲ್ಲಿ ಉತ್ತಮ ಗುಣಮಟ್ಟಕ್ಕೆಂದೇ ಹೆಸರುವಾಸಿಯಾಗಿರುವ ಜವಾಹರ್ ನವೋದಯ ವಿದ್ಯಾಲಯಗಳು ಬೋಧನೆ ಮತ್ತು ಕಲಿಕಾ ಸಾಮರ್ಥ್ಯದಲ್ಲಿ ಖಾಸಗೀ ಶಾಲೆಗಳನ್ನು ಹಿಂದಿಕ್ಕಿವೆ. ಪಠ್ಯ ಶಿಕ್ಷಣ, ದೈಹಿಕ ಶಿಕ್ಷಣ, ಸಂಗೀತ, ಕಲೆ, ಕ್ರೀಡೆ, ಹೀಗೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಈ ಶಾಲೆಗಳ ಪ್ರಮುಖ ಉದ್ದೇಶ. ಬೆಳಗ್ಗೆ 5 ರಿಂದ ಶುರುವಾಗುವ ವೇಳಾಪಟ್ಟಿ ಕೊನೆಯಾಗುವುದು ರಾತ್ರಿ 10ಕ್ಕೆ. 10 ಮತ್ತು 12ನೆಯ ತರಗತಿಗಳ ಫಲಿತಾಂಶದಲ್ಲಿ ಶೇಕಡಾ 100ರಷ್ಟು ಉತ್ತೀರ್ಣತೆಯಿದೆ. ಈ ಶಾಲೆಗಳಿಂದ ಉತ್ತೀರ್ಣರಾದವರು ವೈದ್ಯಕೀಯ, ಇಂಜಿನಿಯರಿಂಗ್, ಆಡಳಿತ, ರಾಜಕೀಯ, ಸಮಾಜ ಸೇವೆ ಎಂಬ ಮುಂಚೂಣಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ರಜತ ಸಂಭ್ರಮ

1986ರಲ್ಲಿ ನವೋದಯ ವಿದ್ಯಾಲಯಗಳ ಆರಂಭ. ತಾವು ದಾಖಲಾಗಿ 25 ವಸಂತಗಳನ್ನು ಪೂರೈಸಿದ ಆಯಾ ತರಗತಿಯ ವಿದ್ಯಾರ್ಥಿಗಳೆಲ್ಲ ಮರಳಿ ಶಾಲೆಯಲ್ಲಿ ಒಂದುಗೂಡಿ ತಮ್ಮ ಶಾಲೆಯ ದಿನಗಳನ್ನು ಮೆಲುಕು ಹಾಕುವ ಹಬ್ಬವೇ ರಜತ ಸಂಭ್ರಮ. ತಾವು ಕಲಿತ ಶಾಲೆಗೆ ಸ್ಮರಣಪೂರ್ವಕವಾಗಿ ಒಂದು ಕೊಡುಗೆಯನ್ನು ನೀಡಿ ಎರಡು ದಿನ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳೊಂದಿಗೆ ತಮ್ಮ ಶಾಲೆಯ ದಿನಗಳನ್ನು ಮರು ಜೀವಿಸುತ್ತಾರೆ. ಕಲಿಸಿದ ಗುರುಗಳನ್ನೆಲ್ಲ ಒಂದೆಡೆ ಸೇರಿಸಿ ತಮ್ಮ ಭಾವಪೂರ್ಣ ಕೃತಜ್ಞತಾ ನಮನಗಳನ್ನು ಸಲ್ಲಿಸುತ್ತಾರೆ ಹಾಗು ಕಿರಿಯ ವಿದ್ಯಾರ್ಥಿಗಳಿಗೆ ತಮ್ಮ ಜೀವನದ ಕಲಿಕೆಗಳನ್ನು ಬೋಧಿಸಿ ವೃತ್ತಿಪರ ಮಾರ್ಗದರ್ಶನವನ್ನು ನೀಡುತ್ತಾರೆ ಮತ್ತು ವಿವಿಧ ಮನೋರಂಜನಾ ಕಾರ್ಯಕ್ರಮಗಳ ಮೂಲಕ ರಂಜಿಸುತ್ತಾರೆ. ದೇಶದ ಬಹುತೇಕ ನವೋದಯ ಶಾಲೆಗಳಲ್ಲಿ ಈಗ ರಜತ ಸಂಭ್ರಮ ನಡೆಯುತ್ತಿದೆ. ಹಾಸನದ ನವೋದಯ ಶಾಲೆಯಲ್ಲಿ ಡಿ 14-15 ರಂದು ರಜತ ಸಂಭ್ರಮ. ನಾನು ಓದಿದ ಹಾಸನದ ಜವಾಹರ್ ನವೋದಯ ವಿದ್ಯಾಲಯದ 13ನೆಯ ಬ್ಯಾಚಿಗೆ ಈಗ ರಜತ ಸಂಭ್ರಮ. ಈ 2 ದಿನ ನಾವೆಲ್ಲರು ಬಾಲ್ಯಕ್ಕೆ ಮರಳಿ ಹೋಗುತ್ತಿದ್ದೇವೆ. ನಾವು ಓದಿದ, ಓಡಿದ, ಹಾಡಿದ, ಹಾರಿದ, ಹೆದರಿದ, ಗದರಿದ, ಉಂಡಿದ್ದ, ನಕ್ಕಿದ್ದ, ಅತ್ತಿದ್ದ, ಪ್ರೇಮಿಸಿದ್ದ ಜಾಗಗಳನ್ನೊಮ್ಮೆ ಮೆಲುಕು ಹಾಕಲಿದ್ದೇವೆ; ಬನ್ನಿ.

ರಂಗಾರೋಹಣ

ನೃತ್ಯ ವಿದುಷಿ ಡಾ. ಸುಪರ್ಣಾ ವೆಂಕಟೇಶ್ ಅವರ ಶಿಷ್ಯೆ, ಕ್ರಿಯಾಶೀಲ ನರ್ತಕಿ ಶ್ರೀನಿಧಿ ಹೆಗಡೆ ಅವರು ಡಿಸೆಂಬರ್ ಒಂದನೇ ತಾರೀಕಿನಂದು ಭರತನಾಟ್ಯ ರಂಗಾರೋಹಣ ನಡೆಸಿದರು. ವೈಯಾಳಿಕಾವಲಿನಲ್ಲಿರುವ ತೆಲುಗು ವಿಜ್ಞಾನ ಸಮಿತಿಯ ಶ್ರೀ ಕೃಷ್ಣದೇವರಾಯ ರಂಗಮಂದಿರದಲ್ಲಿ ಭಾನುವಾರ ಶ್ರೀನಿಧಿ ಹೆಗಡೆ ರಂಗ ಪ್ರವೇಶಕ್ಕೆ ಹಿರಿಯ ಕಲಾವಿದೆ ಸುನಂದಾದೇವಿ, ಪ್ರಖ್ಯಾತರಂಗ ಕರ್ಮಿ ಪ್ರಸಾದ್, ಕರ್ನಾಟಕ ಸಂಸ್ಕೃತ ವಿವಿ ಡೀನ್ ಪಿ. ವಿನಯ್ ಸಾಕ್ಷಿಯಾಗಲಿದ್ದಾರೆ. ಡಾ. ಮಧುರಾ ಹೆಗಡೆ ಮತ್ತು ಗಂಗಾಧರ ಹೆಗಡೆ, ಗುರು ಸುಪರ್ಣಾ, ತಾಂತ್ರಿಕ ನಿರ್ದೇಶಕ ಸಾಯಿ ವೆಂಕಟೇಶ್ ಮೊದಲಾದ ಗಣ್ಯರು ಸಾಕ್ಷಿಯಾದರು. ಹಿಂದುಸ್ತಾನಿ ಸಂಗೀತ, ಕಥಕ್ ಮತ್ತು ಭರತನಾಟ್ಯ ಕಲೆಗಳ ಯುವ ಸಂಗಮವೇ ಆಗಿದ್ದಾರೆ ಶ್ರೀನಿಧಿ ಹೆಗಡೆ. ಗುರು ಸುಪರ್ಣಾ ಬಳಿ 13 ವರ್ಷದಿಂದ ಭರತನಾಟ್ಯ ಕಲಿತ ಈಕೆ ಕಲಾರಂಗದಲ್ಲಿ ಹಿಂದಿರುಗಿ ನೋಡಲೇ ಇಲ್ಲ. ನೃತ್ಯದ ಪಟ್ಟುಗಳನ್ನು ಸಮರ್ಥವಾಗಿ ಕಲಿತ ನಂತರ ಪ್ರಯೋಗಕ್ಕೆ ಇಳಿದದ್ದು ಶ್ರೀನಿಧಿ ಸಾಧನೆ. ಇವರು ಭರತನಾಟ್ಯ ಕಲಿಕೆಯೊಂದಿಗೆ ಕಥಕ್ ನೃತ್ಯವನ್ನೂ ಕಲಿತಿದ್ದಾರೆ. ಇದರ ಫಲವಾಗಿ ಅಂತರ ಕಾಲೇಜು ಸಂಗೀತ ಮತ್ತು ನೃತ್ಯ ಸ್ಪರ್ಧೆಗಳಲ್ಲಿ ಹತ್ತಾರು ಬಹುಮಾನ ದೊರಕಿವೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ಅನೇಕ ವೇದಿಕೆಗಳಲ್ಲಿ ಗುರುವಿನೊಂದಿಗೆ ಹೆಜ್ಜೆ ಹಾಕಿದ್ದಾರೆ. ಸಾಯಿ ನೃತ್ಯೋತ್ಸವದಲ್ಲಿ ಕಲೆಯನ್ನು ಮೆರೆಸಿದ್ದಾರೆ.

ಗುಣಾತೀತವಾಗಿರುವುದು

ನಿತ್ಯ ಜೀವನದಲ್ಲಿ ಭಗವದ್ಗೀತೆ

ಹಿರಿಯ ಐಎಎಸ್ ಅಧಿಕಾರಿ • ಕೆ.ಶಿವಪ್ರಸಾದ್

ಯಾವುದೇ ಕರ್ಮಕ್ಕೆ ಕರ್ತೃ ಇಲ್ಲವೆಂದು ಕೃಷ್ಣ ಹೇಳುತ್ತಾನೆ. ಪ್ರಕೃತಿಯ ಅಂಶಗಳಾದ ಸತ್ವ, ರಜೋ ಹಾಗೂ ತಮೋ ಗುಣಗಳ ಪರಸ್ಪರ ಪ್ರಕ್ರಿಯೆಯ ಪರಿಣಾಮವೇ ಕರ್ಮವಾಗಿದೆ.

ದುಃಖದಿಂದ ಮುಕ್ತನಾಗಲು ಈ ಗುಣಗಳನ್ನು ಮೀರಿ ನಡೆಯು ವಂತೆ ಕೃಷ್ಣ ಅರ್ಜುನನಿಗೆ ಉಪದೇಶಿಸುತ್ತಾನೆ. ಈ ಗುಣಗಳಿಗೆ ಅತೀತನಾಗಿರುವದು ಹೇಗೆ ಮತ್ತು ಈ ಸ್ಥಿತಿ ತಲುಪಿದಾಗ ವ್ಯಕ್ತಿ ಏನಾಗುತ್ತಾನೆ ಎಂದು ಅರ್ಜುನ ತಿಳಿಯಬಯಸುತ್ತಾನೆ. ಗೀತೆಯಲ್ಲಿ ಪ್ರತಿಪಾದಿಸಲ್ಪಟ್ಟ ದ್ವಂದ್ವಾತೀತ, ದೃಷ್ಟ ಮತ್ತು ಸಮತ್ವ ಈ ಗುಣಗಳ ಬಗ್ಗೆ ನಾವು ಈಗಾಗಲೇ ಚರ್ಚಿಸಿದ್ದೇವೆ. ಈ ಮೂರು ಗುಣಗಳ ಸಂಯೋಜನೆಯೇ ಗುಣಾತೀತವಾಗಿರುತ್ತದೆ ಎಂದು ಕೃಷ್ಣ ಹೇಳಿರುತ್ತಾನೆ.

ಕೃಷ್ಣನ ಪ್ರಕಾರ ಗುಣಗಳೇ ಗುಣಗಳೊಂದಿಗೆ ಪರಸ್ಪರ ಪ್ರಕ್ರಿಯೆಗೆ ಒಳಗಾಗುತ್ತವೆ ಎಂದು ಯಾರು ತಿಳಿಯುತ್ತಾರೋ ಅವರೇ ಗುಣಾತೀತ ಸ್ಥಿತಿಯನ್ನು ಮುಟ್ಟಿರುತ್ತಾರೆ. ಅದರಿಂದಾಗಿ ಅವರು ಸಾಕ್ಷಿಯಾಗಿ ಉಳಿಯುತ್ತಾರೆ. ಅಂತಹವರು ಯಾವುದೇ ಒಂದು ಗುಣಕ್ಕೆ ಹಂಬಲಿಸು ವುದು ಇಲ್ಲ ಅಥವಾ ಮತ್ತೊಂದು ಗುಣವನ್ನು ವಿರೋಧಿಸುವುದು ಇಲ್ಲ.

ಗುಣಾತೀತನಾಗಿರುವುದು, ದ್ವಂದ್ವಾತೀತನಾಗಿರುವುದು ಏಕಕಾಲದಲ್ಲಿ ನಡೆಯುತ್ತದೆ. ನೋವು -ನಲಿವುಗಳ ದ್ವಂದ್ವವನ್ನು ತಿಳಿದ ನಂತರ ಅವನು ಎರಡರಿಂದಲು ತಟಸ್ಥನಾಗಿರುತ್ತಾನೆ. ಹೊಗಳಿಕೆ ಹಾಗೂ ತೆಗಳಿಕೆ ಎರಡಕ್ಕೂ ತಟಸ್ಥನಾಗಿರುತ್ತಾನೆ.

ಯಾಕೆಂದರೆ ಇವು ಮೂರು ಗುಣಗಳ ಪರಿಣಾಮ ಎಂದು ಅವನು ಅರಿತಿರುತ್ತಾನೆ. ಅದೇ ರೀತಿ ಅವನು ಮಿತ್ರರಿಗೂ, ಶತ್ರುಗಳಿಗೂ ತಟಸ್ಥನಾಗಿರುತ್ತಾನೆ. ಯಾಕೆಂದರೆ ನಮಗೆ ನಾವೇ ಮಿತ್ರರೂ ಹೌದು, ಶತ್ರುಗಳೂ ಹೌದೆಂದು ಅವನಿಗೆ ಗೊತ್ತಿದೆ.

ಈ ಭೌತಿಕ ಜಗತ್ತು ಎರಡು ಧ್ರುವಗಳ ಹಾಗೆ ಮತ್ತು ತೂಗು ಯ್ಯಾಲೆಯು ಸ್ವಾಭಾವಿಕವಾಗಿರುತ್ತದೆ. ತೂಗಾಡುವ ಲೋಲಕಕ್ಕೆ ಒಂದು ಸ್ಥಿರಬಿಂದುವಿನ ಅವಶ್ಯಕತೆ ಇದೆ. ಅಂತಹ ಸ್ಥಿರಬಿಂದುವನ್ನು ತಲುಪುವಂತೆ ಕೃಷ್ಣ ನಮಗೆ ಹೇಳುತ್ತಾನೆ. ಅಲ್ಲಿಂದಲೇ ನಾವು ದ್ವಂದ್ವದ ಭಾಗವಾಗಿರದೆ ಆ ತೂಗಾಟದ ಸಾಕ್ಷಿಯಾಗಲು ಸಾಧ್ಯ.

ಗುಣಾತೀತ ಸ್ಥಿತಿಯು ಬಂಗಾರ ಕಲ್ಲು ಮಣ್ಣುಗಳಿಗೆ ಒಂದೇ ಮಹತ್ವ ಕೊಡುತ್ತದೆ. ಅಂತಹ ಗುಣಾತೀತನಾದವನು ಒಂದಕ್ಕೆ ಹೆಚ್ಚು ಬೆಲೆ ಕೊಟ್ಟು ಮತ್ತೊಂದಕ್ಕೆ ಕಡಿಮೆ ಬೆಲೆ ಕೊಡುವುದಿಲ್ಲ ಎಂದು ಈ ರೂಪಕ ಹೋಲಿಕೆಯು ತಿಳಿಸುತ್ತದೆ. ಅಂಥವನು ವಸ್ತುಗಳು ಹೇಗೆ ಇರುವುದೋ ಹಾಗೆ ಅವಕ್ಕೆ ಬೆಲೆ ಕೊಡುತ್ತಾನೆ. ಉಳಿದವರು ಮಾಡಿದ ಹಾಗಲ್ಲ.

ಕರ್ತೃ ಎಂಬ ಭಾವನೆಯನ್ನು ಬಿಟ್ಟವನೇ ಗುಣಾತೀತ ಎಂದು ಕೃಷ್ಣ ಮುಂದುವರಿದು ತಿಳಿಸುತ್ತಾನೆ. ವಸ್ತುಗಳು ಯಾಂತ್ರಿಕವಾಗಿ ನಡೆಯುತ್ತವೆ ಮತ್ತು ಅಲ್ಲಿ ಕರ್ತೃವಿಗೆ ಯಾವುದೇ ಸ್ಥಾನವಿಲ್ಲ ಎಂದು ನಾವು ನಮ್ಮ ಅನುಭವದಿಂದ ತಿಳಿದುಕೊಂಡಾಗ ಇವೆಲ್ಲ ನಡೆಯುತ್ತವೆ.

ಚಳಿಗೆ ಬಿಸಿ ಬಿಸಿ ಕಾಫಿ!

• ವಾಣಿ ಮೈಸೂರು

ಚಳಿಗಾಲವು ತಂಪಾದ ಋತುವಾಗಿದ್ದು ಡಿಸೆಂಬರ್‌ನಿಂದ ಶುರುವಾಗು ತ್ತದೆ. ಸೂರ್ಯ ನಿಧಾನವಾಗಿ ಉದಯಿಸುತ್ತದೆ ಮತ್ತು ದಿನಗಳು ಚಿಕ್ಕದು ಹಾಗೂ ರಾತ್ರಿಗಳು ದೊಡ್ಡದಾಗಿರುತ್ತದೆ. ಚಳಿಗಾಲದ ಋತುಮಾನ ದಲ್ಲಿ ಹಣ್ಣುಗಳು ಮತ್ತು ತರಕಾರಿಗಳು ರುಚಿಕರವಾಗಿರುತ್ತದೆ ಅದು ವಿಶಿಷ್ಟವಾದ ಕಾಲವೇ? ಚರ್ಮದ ಘನೀಕರಣ, ಮರಗಟ್ಟುವಿಕೆಯು ಹೆಚ್ಚಾಗಿ ಕಾಡುತ್ತದೆ ಮತ್ತು ಕೈ ಕಾಲು ಹಾಗೂ ಕೀಲು ನೋವುಗಳು ಹೆಚ್ಚಾಗಿ ಕಾಡುವ ಋತುಮಾನವಾಗಿದೆ.

ಮುಂಜಾನೆಯ ಚುಮು ಚುಮು ಕೊರೆಯುವ ಚಳಿಗೆ ಬೆಚ್ಚಗೆ ಬ್ಲಾಂಕೆಟ್ ಹೊದ್ದು ಮಲಗಲು ಮನ ಸಾಗುವ ಈ ಚಳಿಗಾಲ ಹಿತವೇ ಅನ್ನುವಷ್ಟು ಮನಸು ಗಳು. ಚಳಿಗೆ ನಡುಗುವ ಕಂಪನ ಸಹಿಸಲು ಅಸಾಧ್ಯ ಈ ಚಳಿಗಾಲ ಬೇಗ ಮುಗಿದರೆ ಸಾಕು ಅನ್ನುವಷ್ಟು ಮಂದಿ ಇನ್ನೊಂದು ಕಡೆ. ಚಳಿಗಾಲ ದಲ್ಲಿ ಬೆಚ್ಚಗೆ ಇರುವ ವಾತಾವರಣವನ್ನು ಬಯಸು ವುದು ಹೆಚ್ಚು, ಕಾಗದದ ಚೂರು ಕಟ್ಟಿಗೆ ಹಾಕಿ ಬೆಂಕಿಯಲ್ಲಿ ಬರುವ ಹಿತವಾದ ಬಿಸಿಯನ್ನು ಸವಿದು ಆಹ್ಲಾದಿಸುವುದು ಚಳಿಗಾಲದ ವಿಶೇಷವೇ ಹೌದು. ಬೆಚ್ಚನೆಯ ವಾತಾವರಣಕ್ಕೆ ಸೂರ್ಯನ ಆಗಮನವನ್ನು ಈ ಕಾಲದಲ್ಲಿ ಹೆಚ್ಚು ನಿರೀಕ್ಷಿಸುತ್ತಾರೆ. ಕಾಫಿಗೂ ಚಳಿಗೂ ಹಿತ ವಾದ ನಂಟು ಬೆಸೆದಿದೆ! ಹೆಚ್ಚು ಕಾಫಿ ಸೇವನೆ ಮತ್ತು ಇಷ್ಟ ಪಡುವ ಋತುಮಾನವು ಚಳಿಗಾಲವಾಗಿದೆ. ಸಂಜೆಯ ವಾತಾವರಣದ ಚಳಿಗೆ ಪ್ರಿಯವೇ ಸರಿ ಬಿಸಿ ಬಿಸಿ ಕಾಫಿ ಟೀ ಬೊಂಡ ಬಜ್ಜಿ ಗಳ ಗಮಲು. ಬೆಚ್ಚಗೆ ಮನೆಯಲ್ಲಿ ಸೇರುವ ಭಾವ ಚಳಿಗಾಲದಲ್ಲಿ ಹೆಚ್ಚಾಗಿ ಕಾಡುವುದು ಸಹಜವೇ. ಮೈ ಬಣ್ಣದಲ್ಲಿ ಬದಲಾವಣೆ ಒರಟು ಚರ್ಮ ಹೆಚ್ಚಾಗಿ ಕಾಣುತ್ತದೆ. ತ್ವಚೆ ಯನ್ನು ಕಾಪಾಡಿ ಕೊಂಡು ಬೆಚ್ಚನೆಯ ಬಟ್ಟೆಗಳನ್ನು ಧರಿಸಿ ಬೆಚ್ಚಗೆ ಇರುವಂತೆ ವಾತಾವರಣ ಸೃಷ್ಟಿಸಿ ಕೊಂಡು ಆರೋಗ್ಯ ಕಾಪಾಡಿಕೊಳ್ಳುವುದು ಈ ಚಳಿಗಾಲದಲ್ಲಿ ಒಳಿತು.

ಕೃಷ್ಣನಿಂದ ಶಾಪಗ್ರಸ್ತನಾದ ಅಶ್ವತ್ಥಾಮ!

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

'ಒಂದೊಳ್ಳೆ ಮಾತು' ಈಗ Vishwavani TV Special ಯುಟ್ಯೂಬ್ ಚಾನೆಲ್‌ನಲ್ಲಿ!

ಅಂದು ಕುರುಕ್ಷೇತ್ರ ಯುದ್ಧದ ಹದಿನೆಂಟನೇ ದಿನ. ವೈಶಂಪಾಯನ ಸರೋವರದ ಪಕ್ಕದಲ್ಲಿ ದುರ್ಯೋಧನನು ತೊಡೆ ಮುರಿದು ಅನಾಥನಂತೆ ಮಲಗಿದ್ದನು. ಅವನನ್ನು ಕಾಣಲು ಬಂದ ಅಶ್ವತ್ಥಾಮ, ಕೃಪ ಮತ್ತು ಕೃತವರ್ಮರು ಎದೆ ಒಡೆದು ಶೋಕಿಸಿದರು. ಅಶ್ವತ್ಥಾಮನು-'ನನ್ನ ತಂದೆಯನ್ನು ಮೋಸದಿಂದ ಕೊಂದರು. ನಿನ್ನ ಶತ್ರುಗಳನ್ನು ವಧಿಸಿದಾಗಲೇ ನನಗೆ ಶಾಂತಿ. ನನಗೆ ಅನುಮತಿಯನ್ನು ಕೊಡು. ಅವರನ್ನೆಲ್ಲ ಸಂಹರಿಸಿ ನಿನ್ನ ಋಣದಿಂದ ಮುಕ್ತನಾಗುತ್ತೇನೆ' ಎಂದನು.

ಆ ತಕ್ಷಣ ದುರ್ಯೋಧನನು ಅಶ್ವತ್ಥಾಮನನ್ನು ಸೈನಿಕರೇ ಇಲ್ಲದ ಸೈನ್ಯಕ್ಕೆ ಪ್ರಧಾನ ದಂಡನಾಯಕನನ್ನಾಗಿ ನೇಮಿಸಿದನು. ನಂತರ ಮೂವರೂ ಅಲ್ಲಿಂದ ಹೊರಟು ಕಾಡನ್ನು ಸೇರಿ, ರಾತ್ರಿಯಾಗಿದ್ದುದರಿಂದ ಒಂದು ಆಲದ ಮರದ ಕೆಳಗೆ ತಂಗಿದರು. ಮಧ್ಯರಾತ್ರಿಯ ಹೊತ್ತಿನಲ್ಲಿ ಒಂದು ದೊಡ್ಡ ಗೂಬೆಯು ಬಂದು ಅವರು ಮಲಗಿರುವ ಮರದ ಮೇಲೆ ಮಲಗಿದ್ದ ನೂರಾರು ಕಾಗೆಗಳನ್ನು ಕುಕ್ಕಿ ಕುಕ್ಕಿ ಕೊಂದಿತು. ಗಾಢ ನಿದ್ರೆಯಲ್ಲಿದ್ದುದರಿಂದ ಕಾಗೆಗಳಿಗೆ ಓಡಿ ಹೋಗಲೂ ಸಹ ಸಾಧ್ಯವಾಗಲಿಲ್ಲ. ಇದನ್ನೆಲ್ಲ ಗಮನಿಸಿದ ಅಶ್ವತ್ಥಾಮನಿಗೆ ಪಾಂಡವರನ್ನು ಕೊಲ್ಲುವ ದಾರಿಯು ಕಾಣಿಸಿತು.

ಕೃಪ ಮತ್ತು ಕೃತವರ್ಮರು ಎಷ್ಟೇ ವಿರೋಧಿಸಿದರು ಕೇಳಿದೆ ಅಶ್ವತ್ಥಾಮ ಅವರನ್ನು ಪಾಂಡವರ ಶಿಬಿರಗಳ ಹತ್ತಿರ ಕರೆ ತಂದನು. ಕೃಪ ಮತ್ತು ಕೃತವರ್ಮರು ಹೊರಗಡೆ ನಿಂತರು. ಅಶ್ವತ್ಥಾಮನು ಒಳಗೆ ಪ್ರವೇಶಿಸಿ ದುಷ್ಟದ್ಯುಮ್ನ, ಶಿಖಂಡಿ, ಯುಧಾಮನ್ಯು, ಉಪ ಪಾಂಡವರು ಮುಂತಾದವರನ್ನು ಕೊಲ್ಲಲು ಪ್ರಾರಂಭಿಸಿದನು. ಹೀಗೆ ಪಾಂಡವರ ಶಿಬಿರಗಳಲ್ಲಿದ್ದ ಎಲ್ಲರೂ ಯಮಾಲಯ ಸೇರಿದರು. ನಂತರ ಮೂವರೂ ಶಿಬಿರಗಳಿಗೆ ಬೆಂಕಿಯನ್ನಿಟ್ಟರು. ಈ ಗೊಂದಲದಲ್ಲಿ ಅಲ್ಲಿಂದ ತಪ್ಪಿಸಿಕೊಂಡ ದುಷ್ಟದ್ಯುಮ್ನನ ಸಾರಥಿಯು ಧಾವಿಸಿ ಬಂದು ಓಘವತೀ ತೀರದಲ್ಲಿ ತಂಗಿದ್ದ ಯುಧಿಷ್ಠಿರನಿಗೆ ವಿಷಯವನ್ನು ತಿಳಿಸಿದನು. ಪಾಂಡವರು ಶೋಕ ಸಾಗರದಲ್ಲಿ ಮುಳುಗಿ ಹೋದರು. ದ್ರೌಪದಿಯು ಶೋಕಾರ್ಥಳಾಗಿ- ಅಶ್ವತ್ಥಾಮ ನನ್ನು ವಧಿಸುವ ತನಕ ನಾನು ಪ್ರಾಯೋಪವೇಶ ವ್ರತವನ್ನು ಮಾಡುತ್ತೇನೆ ಎಂದು ಹೇಳಿ ಕುಳಿತು ಬಿಟ್ಟಳು.

ದ್ರೌಪದಿಯ ಶೋಕವನ್ನು ನೋಡಲಾರದೆ ಭೀಮನು ನಕುಲನನ್ನು ಸಾರಥಿಯಾಗಿ ಮಾಡಿಕೊಂಡು ಅಶ್ವತ್ಥಾಮನನ್ನು ಕೊಲ್ಲಲು ಹೊರಟನು. ಆಗ ಕೃಷ್ಣನು- 'ಯುಧಿಷ್ಠಿರ, ಈಗ ಭೀಮನು ದೊಡ್ಡ ಅಪಾಯದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ. ದುರಾತ್ಮನಾದ ಅಶ್ವತ್ಥಾಮನು ತನ್ನ ಪ್ರಾಣವನ್ನು ಉಳಿಸಿಕೊಳ್ಳಲು ಭಯಂಕರವಾದ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸುತ್ತಾನೆ' ಎಂದನು. ನಂತರ ಕೃಷ್ಣ ಮತ್ತು ಮಿಕ್ಕ ಪಾಂಡವರು ಭೀಮನನ್ನು ರಕ್ಷಿಸಲು ಹೊರಟು, ಭೀಮನನ್ನು ಹಿಡಿದರು. ಹೀಗೆ ಎಲ್ಲರೂ ಒಟ್ಟಾಗಿ ಬಂದಿದ್ದನ್ನು ನೋಡಿದ ಅಶ್ವತ್ಥಾಮನು ಜಂಡು ಹುಲ್ಲಿನಲ್ಲಿ ಬ್ರಹ್ಮಶಿರೋಸ್ತ್ರವನ್ನು ಅಭಿಮಂತ್ರಿಸಿ- 'ಈ ಅಸ್ತ್ರದಿಂದ ಪಾಂಡವರು ನಾಶವಾಗಲಿ' ಎಂದು ಸಂಕಲ್ಪಿಸಿ ಅಸ್ತ್ರವನ್ನು ಪ್ರಯೋಗಿಸಿದನು. ಆಗ ಕೃಷ್ಣನ ಸೂಚನೆಯಂತೆ ಅರ್ಜುನನು- 'ಗುರು ಪುತ್ರನಿಗೆ ಮಂಗಳವಾಗಲಿ, ವಿಶ್ವಕ್ಕೆ ಮಂಗಳ 'ವಾಗಲಿ' ಎಂದು ಸಂಕಲ್ಪಿಸಿ ತಾನೂ ಬ್ರಹ್ಮಶಿರೋಸ್ತ್ರವನ್ನು ಪ್ರಯೋಗಿಸಿದನು. ಮುಂದಾಗಬಹುದಾದ ಅನರ್ಥಗಳನ್ನು ತಪ್ಪಿಸಲು ನಾರದರು ಮತ್ತು ವ್ಯಾಸರು ಎರಡು ಅಸ್ತ್ರಗಳ ಮಧ್ಯೆ ನಿಂತು ತಮ್ಮ ತಪೋಬಲದಿಂದ ಅಸ್ತ್ರಗಳನ್ನು ತಡೆದು ನಿಲ್ಲಿಸಿದರು. ಆಗ ವ್ಯಾಸರು ತಮ್ಮ ತಮ್ಮ ಅಸ್ತ್ರಗಳನ್ನು ಉಪಸಂಹರಿಸಿಕೊಳ್ಳುವಂತೆ ಅರ್ಜುನ ಮತ್ತು ಅಶ್ವತ್ಥಾಮರಿಬ್ಬರಿಗೂ ಹೇಳಿದರು. ಜಿತೇಂದ್ರಿಯ ನಾದ ಅರ್ಜುನನು ತನ್ನ ಅಸ್ತ್ರವನ್ನು ಉಪ ಸಂಹರಿಸಿದನು. ಆದರೆ ಜಿತೇಂದ್ರಿಯನಲ್ಲದ ಕಾರಣ ಅಶ್ವತ್ಥಾಮನಿಗೆ ತನ್ನ ಅಸ್ತ್ರವನ್ನು ಉಪ ಸಂಹಾರ ಮಾಡಲು ಸಾಧ್ಯ ವಾಗಲಿಲ್ಲ. ಅಲ್ಲದೆ ಅಶ್ವತ್ಥಾಮನು- 'ಈ ಅಸ್ತ್ರವು ಪಾಂಡವರನ್ನು ನಾಶಮಾಡದಿದ್ದರೂ ಅವರ ಸಂತತಿಯನ್ನು ನಾಶಮಾಡುತ್ತದೆ' ಎಂದು ಹೇಳಿಬಿಟ್ಟನು. ಇದರಿಂದ ಕುಪಿತಗೊಂಡ ಕೃಷ್ಣನು- 'ನಿನ್ನ ಅಸ್ತ್ರವು ಉತ್ತರೆಯ ಗರ್ಭದಲ್ಲಿರುವ ಶಿಶುವನ್ನು ನಾಶಮಾಡಬಹುದು. ಆದರೆ ನಾನು ನನ್ನ ತಪೋಬಲದಿಂದ ಶಿಶುವನ್ನು ಬದುಕಿಸುತ್ತೇನೆ ನೀನು ಮಾತ್ರ ಇನ್ನು ಸಾವಿರಾರು ವರ್ಷಗಳ ಕಾಲ ಹುಚ್ಚನಂತೆ ಭೂಮಂಡಲದಲ್ಲಿ ಅಲೆಯುತ್ತಿರು. ನಿನ್ನ ಮೈ ತುಂಬಾ ಹುಣ್ಣುಗಳಾಗಿ ಅವು ಗಳಿಂದ ದುರ್ಗಂಧದಿಂದ ಕೂಡಿದ ಕೀವು ಸೋರುತ್ತಿದ್ದು, ನಿನ್ನನ್ನು ಯಾರೂ ಹತ್ತಿರ ಸೇರಿಸುವುದಿಲ್ಲ' ಎಂದು ಶಪಿಸಿದನು.

ಗುರು ಪುತ್ರನಾಗಿ ಸಕಲ ಶಕ್ತಿ ಸಾಮರ್ಥ್ಯಗಳಿಂದ ಬದುಕಿದರೂ, ತನ್ನದೇ ದುಡುಕು ಅವಗುಣಗಳಿಂದ ಅಶ್ವತ್ಥಾಮ ಅಧೋಗತಿಗಿಳಿದನು. ಭಗವಂತ ಯೋಗ ಕೊಟ್ಟರೂ ಉಳಿಸಿಕೊಳ್ಳುವ ಯೋಗ್ಯತೆ ನಮಗಿರಬೇಕು.

ಪದಬಂಧ



ಎಡದಿಂದಬಲಕ್ಕೆ

1. ಮನಸ್ಸಿನೊಳಗಿನ ತವಕ (4)
3. ಕೊಡಬೇಕಾದುದನ್ನು ಕೊಡದೆ ಉಳಿಸಿಕೊಂಡವನು (4)
7. ಮತ್ತೊಬ್ಬರನ್ನು ಆಶ್ರಯಿಸಿ ಬದುಕುವಿಕೆ (5)
10. ವಿನಯದಿಂದ ಕೂಡಿದ ಎಂದರ್ಥ (4)
11. ಪತ್ರಿಕೆಯಲ್ಲಿ ಸುದ್ದಿಯನ್ನು ಪರಿಷ್ಕರಿಸುವವನು (4)
13. ಶಿವನ ವಾಹನದಿಂದ ತೊಡಗುವ ಒಂದು ಬಗೆಯ ಬಿಳಿಯ ಹೂವು (5)
16. ನೆಟ್ಟ ಕಣ್ಣಿನಿಂದ ನೋಡುವುದು ಎಂದರ್ಥ (4)
17. ಮದುವೆಗೆ ಸಂಬಂಧಪಟ್ಟ ವಿಷಯ (4)

ಮೇಲಿನಿಂದಕೆಳಕ್ಕೆ

2. ಭಾರವನ್ನು ಹೀಗೆಯೂ ಹೇಳಬಹುದು (2)
4. ಎರಡಕ್ಷರದ ಬಾಯಾರಿಕೆ (2)
5. ಇದು ಜೀವಂತವಾಗಿರುವುದು (3)
6. ಏಕಾಂಗಿಯಾಗಿರುವ ಮದ್ದಾನೆ (5)
7. ಮುಂಜಿ ಅಥವಾ ಬ್ರಹ್ಮೋಪದೇಶ ಕೊನೆಗೆ ಅನುಸ್ವಾರದೊಂದಿಗೆ ಬಂದಿದೆ (5)
8. ಹಾಸ್ಯಾಸ್ಪದವಾಗುವಿಕೆ ಎಂದರ್ಥ (5)
9. ಕೆಲಸಕ್ಕೆ ಬೇಕಾಗುವ ಉಪಕರಣ (5)
12. ಮಾಡಿದ ಕೆಲಸಕ್ಕೆ ತಕ್ಕ ಸಿಕ್ಕಿದ ಪಗಾರ (3)
14. ಹಿಂದೆ ಹೆಚ್ಚು ಪ್ರಚಲಿತವಿದ್ದ ತಂತಿ ವಾರ್ತೆ (2)
15. ಹಾಗಲಕಾಯಿಯ ರುಚಿ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ರಾಜದ್ರೋಹ 4. ಕಾವ್ಯನಾಮ 6. ಲಲಾಟ 8. ವಾನರ 10. ಪದರ 12. ಮರುನುಡಿ 13. ಕಾರಣ 14. ಸನಾದಿ 15. ಪಂಗನಾಮ 7. ಜಿಪುಣ 19. ಯವನ 21. ಗಾಬರಿ 23. ಸಂಕಲನ 24. ಪುರಂದರ

ಮೇಲಿನಿಂದ ಕೆಳಕ್ಕೆ: 2. ಜನನ 3. ಹಲ 4. ಕಾಟ 5. ನಾಯಿಂದ 7. ಲಾಟೀನು 9. ರಮಣ 11. ರಸೀದಿ 13. ಕಾಳಜಿ 14. ಸಮಯ 16. ಗರೀಬ 18. ಪುಷ್ಪಕ 20. ವರದ 21. ಗಾನ 22. ರಿಪು.

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ಸಮಾಚಾರ ಸಣ್ಣದಲ್ಲ

ಡ್ರೋನ್ ತರಬೇತಿಗಾಗಿ ಅರ್ಜಿ ಆಹ್ವಾನ

ಬಳ್ಳಾರಿ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಡ್ರೋನ್ ಆಧಾರಿತ ಫೋಟೋಗ್ರಫಿ ಮತ್ತು ವಿಡಿಯೋಗ್ರಫಿ ಮೂಲಕ ಸಾಮಾಜಿಕ ಜಾಲತಾಣಗಳಲ್ಲಿ ಉದ್ಯೋಗ ಪಡೆಯಲು ಇಚ್ಛಿಸುವ ಪರಿಶಿಷ್ಟ ಪಂಗಡದ ಯುವಕ ಮತ್ತು ಯುವತಿಯರಿಂದ ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.ಆಸಕ್ತ ಅಭ್ಯರ್ಥಿಗಳು ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರಬೇಕು, 18 ರಿಂದ 45 ವರ್ಷ ವಯೋಮಾನದವರಾಗಿರಬೇಕು, ಕುಟುಂಬದ ಆದಾಯ ರು.2.50 ಲಕ್ಷ ಒಳಗಿರಬೇಕು, ಅಲೆಮಾರಿ, ಅರೆ-ಅಲೆಮಾರಿ, ಸೂಕ್ಷ್ಮ, ಅತೀ ಸೂಕ್ಷ್ಮ ಪರಿಶಿಷ್ಟ ವರ್ಗದ ಸಮುದಾಯದ ಯುವಕ ಮತ್ತು ಯುವತಿಯರಿಗೆ ಆದ್ಯತೆ ನೀಡಲಾಗುವುದು.ಅರ್ಜಿಗಳನ್ನು ಬಳ್ಳಾರಿ, ಸಂಡೂರು, ಸಿರುಗುಪ್ಪ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಪಡೆಯಬಹುದು. ಅರ್ಜಿ ಸಲ್ಲಿಸಲು ಡಿ.10 ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ನಲ್ಲಚೇರುವು ಪ್ರದೇಶದ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಗಾರಿ ಪೂರ್ಣಗೊಳಿಸಲು ಸೂಚನೆ

ಬಳ್ಳಾರಿ: ಕುರುಗೋಡು ಪುರಸಭೆ ವ್ಯಾಪ್ತಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರಕಾರದ ವಿವಿಧ ನಗರ ವಸತಿ ಯೋಜನೆಗಳಡಿ ವಸತಿ ಸೌಲಭ್ಯಕ್ಕಾಗಿ ಆಯ್ಕೆಯಾಗಿರುವ ಫಲಾನುಭವಿಗಳು ಕೂಡಲೇ ತಮ್ಮ ಮನೆಯ ಕಟ್ಟಡ ಪೂರ್ಣಗೊಳಿಸಿಕೊಳ್ಳುವಂತೆ ಕುರುಗೋಡು ಪುರಸಭೆ ಮುಖ್ಯಾಧಿಕಾರಿಯವರು ತಿಳಿಸಿದ್ದಾರೆ. ಈಗಾಗಲೇ ಹಲವಾರು ಬಾರಿ ನೋಟಿಸ್ ಜಾರಿ ಮಾಡಲಾಗಿದ್ದು, ಫಲಾನುಭವಿಗಳು ಮನೆಯ ಕಟ್ಟಡವನ್ನು ಡಿ.5 ರೊಳಗೆ ಪೂರ್ಣಗೊಳಿಸಿಕೊಳ್ಳಬೇಕು. ಇಲ್ಲವಾದಲ್ಲಿ ಈಗಾಗಲೇ ಬಿಡುಗಡೆಯಾಗಿರುವ ಪೂರ್ಣ ಪ್ರಮಾಣದ ಕೇಂದ್ರ ಮತ್ತು ರಾಜ್ಯ ಸರಕಾರದ ಸಹಾಯಧನ ಹಿಂದಿರುಗಿಸಲು ಬೆಂಗಳೂರು ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಕಚೇರಿ ಫಲಾನುಭವಿಗಳಿಗೆ ತಿಳಿಸಿ ನೋಟಿಸ್ ಜಾರಿ ಮಾಡುವಂತೆ ತಿಳಿಸಿದೆ. ಇಲ್ಲವಾದಲ್ಲಿ ರಾಜ್ಯ ಮತ್ತು ಕೇಂದ್ರ ಸಹಾಯಧನ ಬಿಡುಗಡೆ ಆಗುವುದಿಲ್ಲ. ಇದಕ್ಕೆ ಪುರಸಭೆಯು ಹೊಣೆಯಾಗಿರುವುದಿಲ್ಲ. ಈ ಕುರಿತು ಮನೆ ನಿರ್ಮಾಣ ವಿಳಂಬಕ್ಕೆ ಮಂಜೂರಾದ ಮನೆ ರದ್ದುಪಡಿಸಲು ಸರ್ಕಾರಕ್ಕೆ ನಿಯಮಾನುಸಾರ ಶಿಫಾರಸ್ಸು ಮಾಡಲಾಗುವುದು ಎಂದು ಕುರುಗೋಡು ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತಿಸಣ್ಣ ಘಟಕ ಸ್ಥಾಪಿಸಲು ಅರ್ಜಿ

ಬಳ್ಳಾರಿ: ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಎಸ್‌ಎಮ್‌ಇ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವೈಯಕ್ತಿಕ ಫಲಾನುಭವಿ, ಪಾಲುದಾರಿಕೆ ಸಂಸ್ಥೆ, ಕಂಪನಿ, ಜವಳಿ ಸಹಕಾರಿ ಸಂಘ-ಸಂಸ್ಥೆಗಳು ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿಸಣ್ಣ ಘಟಕ ಪ್ರಾರಂಭಿಸಲು ಆಸಕ್ತ ಉದ್ದಿಮೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.ಜಿಲ್ಲೆಗೆ ವಿಶೇಷ ಘಟಕ ಯೋಜನೆಯಡಿ ಭೌತಿಕ 3 ಹಾಗೂ ಗಿರಿಜನ ಉಪ ಯೋಜನೆಯಡಿ ಭೌತಿಕ 2 ಸೇರಿ ಒಟ್ಟು 5 ಭೌತಿಕ ಗುರಿಯನ್ನುನಿಗದಿಪಡಿಸಲಾಗಿದ್ದು, ಯಂತ್ರೋಪಕರಣಗಳೊಂದಿಗೆ ಸ್ಥಾಪಿಸುವ ಜವಳಿ ಘಟಕಗಳಿಗೆ ಸರಕಾರದಿಂದ ಶೇ.75 ರಷ್ಟು ಬಂಡವಾಳ ಹೂಡಿಕೆ ಸಹಾಯಧನ ನೀಡಲಾಗುತ್ತದೆ. ಪ್ರಸ್ತಾವನೆ ಸಲ್ಲಿಸಲು ಡಿ.20 ಕೊನೆಯ ದಿನವಾಗಿದೆ. ಎ ಬ್ಲಾಕ್‌ನ ಮೊದಲನೇ ಮಹಡಿಯ ಕೊಠಡಿ ಸಂ.29ರ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಕಚೇರಿ ಅಥವಾ ದೂ.08392-266075 ಗೆ ಸಂಪರ್ಕಿಸಬಹುದು ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೃತ ದೇಹ ಪತ್ತೆ: ಪ್ರಕರಣ ದಾಖಲು

ಬಳ್ಳಾರಿ: ನಗರದ ರೈಲ್ವೇ ನಿಲ್ದಾಣದ ಹಿಂದುಗಡೆಯ ವಸತಿ ಗೃಹದ ಬಳಿಯಲ್ಲಿನ ರೈಲ್ವೇ ಸ್ಕೂಲ್ ಹತ್ತಿರ ದೀರ್ಘಾವಧಿ ಖಾಯಿಲೆಯಿಂದ ಬಳಲುತ್ತಿದ್ದ, ಅಂದಾಜು 45 ರಿಂದ 50 ವರ್ಷದ ಅನಾಮಧೇಯ ವ್ಯಕ್ತಿಯ ಮೃತ ದೇಹವು ನ.26 ರಂದು ದೊರೆತ್ತಿದ್ದು, ಈ ಕುರಿತು ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತನ ವಾರಸುದಾರರ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ. ಮೃತನ ಚಹರೆ: ಎತ್ತರ 5.5 ಅಡಿ, ಕೋಲು ಮುಖ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಕಪ್ಪು ಮತ್ತು ಬಿಳಿ ಕೂದಲು, ಕಪ್ಪು ಬಿಳಿ ಮೀಸೆ ಇರುತ್ತದೆ. ಮೃತನ ವಾರಸುದಾರರ ಬಗ್ಗೆ ಮಾಹಿತಿ ಸಿಕ್ಕಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392-258100, ಗಾಂಧಿನಗರ ಪೊಲೀಸ್ ಠಾಣೆ ದೂ.08392-272192, ಪಿಐ ಮೊ.9480803046 ಗೆ ಸಂಪರ್ಕಿಸಬಹುದು.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ದೇಶದಲ್ಲಿ ರಾಜ್ಯದ ಜಿಡಿಪಿ ನಂಬರ್ ಒನ್ ಆಗಿದೆ. ದೇಶದ ಜಿಡಿಪಿ ಇನ್ನೂ 8 ಇದೆ. ಆದರೆ ರಾಜ್ಯದ ಜಿಡಿಪಿ 10 ಕ್ಕೆ ತಲುಪಿದೆ. ವಿದೇಶಿ ಬಂಡವಾಳ ಆಕರ್ಷಣೆ ಮತ್ತು ಕೇಂದ್ರಕ್ಕೆ ತೆರಿಗೆ ಪಾವತಿಸುವುದರಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇದು ಸಾಧ್ಯವಾಗಿದ್ದು ರಾಜ್ಯದ ಎಲ್ಲ ಜಾತಿ ಮತ್ತು ಎಲ್ಲ ಧರ್ಮದವರ ಒಟ್ಟಾರೆ ಕೊಡುಗೆಯಿಂದ ಆಗಿದೆ.

ಮಕ್ಕಳ ಹಕ್ಕುಗಳ ರಕ್ಷಣೆಗೆ ಎಲ್ಲರೂ ಮುಂದಾಗಲಿ

ಮಕ್ಕಳ ಹಕ್ಕುಗಳ ಹಿತರಕ್ಷಣೆಗೆ ಪ್ರತಿಯೊಬ್ಬರೂ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಿ: ಶಶಿಧರ್ ಕೊಸಂಬೆ

ಬಳ್ಳಾರಿ: ಕಾನೂನಾತ್ಮಕವಾಗಿರುವ ಮಕ್ಕಳ ಹಕ್ಕುಗಳ ಹಿತ ರಕ್ಷಣೆಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೊಸಂಬೆ ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪಂಚಾಯಿತಿನ ನಜೀರ್ ಸಭಾಂಗಣದಲ್ಲಿ ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಐ ಕಾಯ್ದೆ ಹಾಗೂ ಮಕ್ಕಳ ರಕ್ಷಣೆ ಕುರಿತು ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಮಕ್ಕಳ ಮೇಲೆ ದೌರ್ಜನ್ಯವಾದಲ್ಲಿ ಬಾಲ್ಯ ವಿವಾಹ ನಿಷೇಧ, ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, ಪೋಕ್ಸೋ, ಸೇರಿದಂತೆ ಇನ್ನಿತರೆ ಕಾನೂನನಡಿ ಕಠಿಣ ಶಿಕ್ಷೆಯಿದೆ. ಕಳೆದ ಮೂರು ವರ್ಷದಲ್ಲಿ ರಾಜ್ಯದೆಡೆ 10 ಸಾವಿರಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ದಾಖಲಾಗಿದ್ದು, 202 ಪ್ರಕರಣಗಳಿಗೆ ಶಿಕ್ಷೆ ಪ್ರಕಟವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳ ಹಕ್ಕುಗಳ ಹಿತರಕ್ಷಣೆಗೆ ಪ್ರತಿಯೊಬ್ಬರೂ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಬೇಕಿದೆ ಎಂದರು.

ಸಮಾಜದ ಪ್ರತಿಯೊಬ್ಬರೂ ಮಕ್ಕಳ ವಿಷಯದಲ್ಲಿ ಅತ್ಯಂತ ಸೂಕ್ಷ್ಮತೆಯನ್ನು ಪ್ರದರ್ಶಿಸಿ, ಸಂವೇದನಾಶೀಲತೆ ಉಳಿಸಿಕೊಳ್ಳಬೇಕಿದೆ. ಶಿಶು ಮರಣ, ಹಾಗೂ ತಾಯಿ ಮರಣ ಪ್ರಕರಣಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಅಧಿಕಾರಿಗಳು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ಕಾನೂನು ಕಾಯ್ದೆಗಳ ಮನವರಿಕೆ ಮಾಡಿಕೊಳ್ಳಬೇಕು. 18 ವರ್ಷದೊಳಗಿನ ಮಕ್ಕಳು ತಿಳಿದು ಅಥವಾ ತಿಳಿಯದೇ ತಪ್ಪು ಮಾಡಿದ್ದಲ್ಲಿ ಕಠಿಣ, ಅವಮಾನೀಯ ಶಿಕ್ಷೆ ನೀಡಲು ಕಾನೂನಡಿ ಅವಕಾಶವಿರುವುದಿಲ್ಲ ಎಂದರು.

ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ರಾಜೇಶ್.ಎನ್ ಹೊಸಮನೆ ಅವರು ಮಾತನಾಡಿ, ಮಕ್ಕಳ ಹಕ್ಕುಗಳಿಗೆ ಧಕ್ಕೆಯಾಗದಂತೆ ಕಾನೂನಾತ್ಮಕಾವಾಗಿ ಕಾಯುವ ಕೆಲಸವನ್ನು ಸರ್ಕಾರ ಹಾಗೂ ಸರಕಾರವನ್ನು ಪ್ರತಿನಿಧಿಸುವ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಮಕ್ಕಳ ಹಕ್ಕುಗಳ ಕಾಯ್ದೆಗಳ ಕುರಿತು ಆಯೋಜನೆ ಮಾಡಿರುವ ಕಾರ್ಯಾಗಾರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಕೆ.ಹೆಚ್ ಮಾತನಾಡಿ, ಮಕ್ಕಳ ಹಾಗೂ ಮಹಿಳೆಯರ ಪರ ಇರುವ ಕಾನೂನು ಕಾಯ್ದೆಗಳ ಅರಿವು ಮೂಡಿಸಲು ಜಿಲ್ಲೆಯಲ್ಲಿ ಎರಡು-ಮೂರು ತಿಂಗಳಿಗೊಮ್ಮೆ ವಿವಿಧ ಕಾರ್ಯಕ್ರಮ ಮತ್ತು ಕಾರ್ಯಾಗಾರ ಏರ್ಪಡಿಸಲಾಗುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಮಕ್ಕಳ ಸಹಾಯವಾಣಿ-1098 ಹಾಗೂ ಪೋಕ್ಸೋ ಕಾಯ್ದೆಯ ಭಿತ್ತಿ ಪತ್ರ ಬಿಡುಗಡೆಗೊಳಿಸಲಾಯಿತು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಕೊಪ್ಪಳದ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕ ರಾಘವೇಂದ್ರ ಭಟ್ ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಇ. ಕಾಯ್ದೆ ಹಾಗೂ ಮಕ್ಕಳ ರಕ್ಷಣೆ ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರವಿಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮೀ ಮೈದೂರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ ಸೇರಿದಂತೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ, ಸರಕಾರಿ ಮಕ್ಕಳ ಪಾಲನಾ ಸಂಸ್ಥೆಯ ಅಧೀಕ್ಷಕರು ಹಾಗೂ ಇತರರು ಉಪಸ್ಥಿತರಿದ್ದರು.

ನಜೀರ್ ಸಭಾಂಗಣದಲ್ಲಿ ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಐ ಕಾಯ್ದೆ ಹಾಗೂ ಮಕ್ಕಳ ರಕ್ಷಣೆ ಕುರಿತು ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳಿಗೆ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರವನ್ನು ಸದಸ್ಯ ಶಶಿಧರ್ ಕೊಸಂಬೆ ಉದ್ಘಾಟಿಸಿದರು.

ಮಕ್ಕಳಪರ ಕಾಳಜಿ ವಹಿಸಿ

ಸುಸ್ಥಿರ ಅಭಿವೃದ್ಧಿ ಗುರಿಯ 17 ಕಾರ್ಯಕ್ರಮಗಳಲ್ಲಿ 9 ಕಾರ್ಯಕ್ರಮಗಳು ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿಗೆ ಪೂರಕವಾಗಿದ್ದು, ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಎಲ್ಲರೂ ಮಕ್ಕಳಪರ ಕಾಳಜಿ ವಹಿಸಿ ಕೊಂಡು ವ್ಯವಸ್ಥಿತವಾಗಿ ಕೆಲಸ ನಿರ್ವಹಿಸಬೇಕು. ಅಂದಾಗ ಮಾತ್ರ ಸಮಾಜದಲ್ಲಿನ ಅನಿಷ್ಠ ಪದ್ದತಿ-ಪಿಡುಗು ಹೋಗಲಾಡಿಸುವುದಕ್ಕೆ ಸಾಧ್ಯ ಎಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ್ ಕೊಸಂಬೆ ಅಭಿಪ್ರಾಯಪಟ್ಟರು.

> **ಅಧಿಕಾರಿಗಳು ಹಾಗೂ ಪ್ರತಿಯೊಬ್ಬರೂ ನಿಷ್ಠೆಯಿಂದ ಕೆಲಸ ನಿರ್ವಹಿಸುವ ಮೂಲಕ ಬಾಲ್ಯ ವಿವಾಹ, ಪೋಕ್ಸೋ ಕಾಯ್ದೆ, ಶಿಶು ಮರಣ, ಗರ್ಭಿಣಿಯ ಮರಣಗಳ ಪ್ರಕರಣಗಳನ್ನು ಕಡಿಮೆಗೊಳಿಸಲು ಕಾರ್ಯ ಪ್ರವೃತ್ತರಾಗಬೇಕು. ಉತ್ತಮ ಸಮಾಜ ನಿರ್ಮಿಸುವಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು.**
>
> - **ಶಶಿಧರ್ ಕೊಸಂಬೆ,** ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

ವಕೀಲರ ಹುದ್ದೆ ಬಹಳ ಶ್ರೇಷ್ಠ: ಟಿ.ಅಕ್ಷತಾ

ಹೂವಿನಹಡಗಲಿ: ವಕೀಲರ ಹುದ್ದೆ ಬಹಳ ಶ್ರೇಷ್ಠವಾದದ್ದು, ಸಮಾಜದ ಒಳಿತಿಗಾಗಿ ವಕೀಲರು ಶ್ರಮಿಸುತ್ತಾರೆ ಎಂದು ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಟಿ.ಅಕ್ಷತಾ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಬಾಬು ರಾಜೇಂದ್ರ ಪ್ರಸಾದ್‌ರವರ ಹುಟ್ಟಿದ ದಿನದ ಇಂದು ವಕೀಲರ ದಿನಾಚರಣೆಯನ್ನು ಆಚರಿಸಲಾಗುತ್ತದೆ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಕೀಲರದು ಬಹುಪಾಲು ಪಾತ್ರವಿದೆ ಎಂದರು. ಬ್ರಿಟೀಷರ ವಿರುದ್ಧ ಹೋರಾಟ ಮಾಡುವ ಸಂದರ್ಭದಲ್ಲಿ ವಕೀಲರು ಸಮಾಜದ ಜನರಲ್ಲಿ ಜಾಗೃತಿ ಮೂಡಿಸಿ ಹೋರಾಟವನ್ನು ಚುರುಕುಗೊಳಿಸಿದರು ಎಂದರು.

ನ್ಯಾಯಾಂಗ ವ್ಯವಸ್ಥೆಯಲ್ಲಿ ವಕೀಲರು ಮತ್ತು ನ್ಯಾಯಾಧೀಶರು ಸೇರಿ ಸಮಾಜದ ಹಿತಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ತಾಲೂಕು ವಕೀಲರ ಸಂಘದ ಅಧ್ಯಕ್ಷ ಜಿ.ವಸಂತ್ ಕುಮಾರ್ ಮಾತನಾಡಿ ವಕೀಲರು ಸಾಮಾಜಿಕ ಚಟು ಚಟುವಟಿಕೆಗಳಲ್ಲಿ ಸದಾ ತೊಡಗಿಸಿಕೊಂಡು ಜನರ ಸೇವೆಗೆ ಸಿದ್ದರಾಗಿರುತ್ತಾರೆ ಎಂದರು. ನಮ್ಮ ಸೇವೆಯನ್ನ ಸಾರ್ವಜನಿಕರು ಬಳಸಿಕೊಳ್ಳಬೇಕೆಂದು ಮನವಿ ಮಾಡಿದರು.

ಹೂವಿನಹಡಗಲಿ ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ವಕೀಲರ ದಿನಾಚರಣೆ ಕಾರ್ಯಕ್ರಮವನ್ನು ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಧೀಶರಾದ ಟಿ.ಅಕ್ಷತಾ ಉದ್ಘಾಟಿಸಿದರು.

ಸಹಾಯಕ ಸರಕಾರಿ ಅಭಿಯೋಜಕರಾದ ನಿರ್ಮಲ, ಹಿರಿಯ ವಕೀಲರಾದ ಸಿ.ಕೆ.ಎಂ.ಬಸವಲಿಂಗಸ್ವಾಮಿ, ಮಾತನಾಡಿದರು.

ವಕೀಲರ ಸಂಘದ ಉಪಾಧ್ಯಕ್ಷರಾದ ಜ್ಯೋತಿ ಮಲ್ಲಣ್ಣ, ಕಾರ್ಯದರ್ಶಿ ಡಿ.ಸಿದ್ದನಗೌಡ, ಸಹ-ಕಾರ ದರ್ಶಿ ಎಸ್.ಬಸವರಾಜ್, ಖಜಾಂಚಿ ಎಂ.ಪಿ.ಎಂ. ಪ್ರಸನ್ ಕುಮಾರ್, ಮಹಿಳಾ ಪ್ರತಿನಿಧಿ ಎಚ್.ಸುಜಾತ ಉಪಸ್ಥಿತರಿದ್ದರು.

ವಕೀಲರಾದ ವರ್ಷ ಬೆಳಗಾವಿ ಪ್ರಾರ್ಥನೆ ಹಾಡಿದರು ಕಾರ್ಯದರ್ಶಿ ಡಿ.ಸಿದ್ದನಗೌಡ ಸ್ವಾಗತಿಸಿದರು, ವಕೀಲರಾದ ಶಿವಲಿಂಗಪ್ಪ ಸೂರಣಗಿ ನಿರೂಪಿಸಿದರು, ಎಂಪಿಎಂ ಪ್ರಸನ್‌ಕುಮಾರ್ ವಂದಿಸಿದರು. ವಕೀಲರ ದಿನಾಚರಣೆ ಅಂಗವಾಗಿ ನಡೆಸಿದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

> **ಸಂವಿಧಾನದ ರಚನೆಯಲ್ಲಿ ವಕೀಲರ ಪಾತ್ರ ಬಹಳ ಪ್ರಮುಖವಾಗಿದೆ, ಬಿ.ಆರ್. ಅಂಬೇಡ್ಕರ್‌ರವರನ್ನು ಒಳಗೊಂಡಂತೆ ಸಂವಿಧಾನ ರಚನೆಯಲ್ಲಿ ವಕೀಲರು ಕೆಲಸ ಮಾಡಿದ್ದಾರೆ.**
>
> - **ಟಿ.ಅಕ್ಷತಾ, ನ್ಯಾಯಾಧೀಶೆ**

ಸ್ವಾವಲಂಬಿ ಬದುಕಿಗೆ ನರೇಗಾ ನೆರವು

ಕಾನಹೊಸಹಳ್ಳಿ: ಬಡಜನರ ಸ್ವಾವಲಂಬಿ ಬದುಕಿಗೆ ನರೇಗಾ ನೆರವಾಗಿದ್ದು, ಕ್ರಿಯಾ ಯೋಜನೆ ರೂಪಿಸಲು ಸರ್ವಸದಸ್ಯರು ಕೈಜೋಡಿಸಬೇಕೆಂದು ಪಿಡಿಒ ಕೆಂಚಪ್ಪ ಹೇಳಿದರು. ಸಮೀಪದ ನೆಲಬೊಮ್ಮನಹಳ್ಳಿಯಲ್ಲಿ ಗುಂಡುಮುಣುಗು ಗ್ರಾಪಂ ಆಯೋಜಿಸಿದ್ದ ಗ್ರಾಮಸಭೆಯಲ್ಲಿ ಮಾತನಾಡಿದರು. 2025-26ನೇ ಸಾಲಿನ ನರೇಗಾ ಯೋಜನೆಯ ಕ್ರಿಯಾಯೋಜನೆ ರೂಪಿಸುವ ಮತ್ತು ಮಾಡಬೇಕಿರುವ ಕಾಮಗಾರಿ ಪಟ್ಟಿ ನೀಡುವಂತೆ ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಈ ಸಭೆ ಕರೆಯಲಾಗಿದೆ. ಅಲ್ಲದೆ, ಗುಂಪು ಕಾಮಗಾರಿ ಮತ್ತು ವೈಯಕ್ತಿಕ ಹಾಗೂ ಶಾಲಾ ಕಾಂಪೌಂಡ್ ನಿರ್ಮಾಣ ಕಾಮಗಾರಿಗೆ ಹೆಚ್ಚಿನ ಆದ್ಯತೆ ನೀಡಬೇಕು. ನಗರ ಪ್ರದೇಶಕ್ಕೆ ಕೂಲಿ ಕೆಲಸಕ್ಕೆ ಹೋಗುವ ಬದಲಾಗಿ ನರೇಗಾದಲ್ಲಿ ಕೆಲಸ ಮಾಡುವ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು. ಗ್ರಾಪಂ ಎಲ್ಲ ಸದಸ್ಯರು ಗ್ರಾಮದಲ್ಲಿ ಆಗಬೇಕಿರುವ ಕಾಮಗಾರಿ ಹೆಸರಿನೊಂದಿಗೆ ಪಟ್ಟಿ ನೀಡುವಂತೆ ಮನವಿ ಮಾಡಿದರು. ಗುಂಡುಮುಣುಗು ಗ್ರಾಪಂ ಅಧ್ಯಕ್ಷೆ ಭಾಗ್ಯಮ್ಮ ಅಂಜಿನಪ್ಪ, ಸದಸ್ಯರಾದ ಜೀವಪ್ರಕಾಶ್, ಸಾರಪ್ಪ, ಮಂಜುನಾಥ, ರವಿ ಕುಮಾರ್, ಮಾರಕ್ಕ, ಸಿಬ್ಬಂದಿ ಚಿತ್ತರಂಜನ್, ತಿಪ್ಪೇಸ್ವಾಮಿ, ವಿಜಯಕುಮಾರ್, ತಿಪ್ಪೇಶಿ, ಚಂದ್ರಪ್ಪ ಇತರರಿದ್ದರು.

ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

ಹೊಸಪೇಟೆ: ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಡಿಸೆಂಬರ್ 18 ಕೊನೆಯ ದಿನಾಂಕವಾಗಿರುತ್ತದೆ. ಅಪರ ಸರಕಾರಿ ವಕೀಲರ ಹುದ್ದೆಯನ್ನು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಹೊಸದಾಗಿ ನೇಮಕಾತಿ ಮಾಡಲು ಉದ್ದೇಶಿಸಿದ್ದು, 7 ವರ್ಷಗಳ ಕಾಲ ವಕೀಲ ವೃತ್ತಿ ಪೂರೈಸಿದ ಅರ್ಹ ವಕೀಲರು ತಮ್ಮ ಪೂರ್ಣ ಸ್ವವಿವರ ಹಾಗೂ ಸೇವಾ ವಿವರಗಳೊಂದಿಗೆ ನಿಗಧಿತ ನಮೂನೆಯಲ್ಲಿ ಲಿಖಿತ ಅರ್ಜಿಯನ್ನು ದ್ವಿಪ್ರತಿಯಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ತಲುಪು ವಂತೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ಡಿಸೆಂಬರ್ 18ರ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಿದೆ.

ನ್ಯಾಯಾಲಯ ದೇಗುಲವಿದ್ದಂತೆ

ಹರಪನಹಳ್ಳಿ: ಬಾಬು ರಾಜೇಂದ್ರ ಪ್ರಸಾದ್‌ರವರ ಜನ್ಮದಿನದ ಅಂಗವಾಗಿ ವಕೀಲರ ದಿನಾಚರಣೆ ಆಚರಿಸಲಾಗುವುದು ಸ್ವತಂತ್ರ ಪೂರ್ವದಲ್ಲಿ ಏರು ಧ್ವನಿಯ ಪ್ರಮುಖ ಪಾತ್ರ ವಹಿಸುವಲ್ಲಿ ವಕೀಲರ ಕೊಡುಗೆ ಅಪಾರವಿದೆ ಎಂದು ಸಿವಿಲ್ ನ್ಯಾಯಾಧೀಶರಾದ ಮನು ಶರ್ಮ ಎಸ್.ಪಿ. ಹೇಳಿದರು.

ಮಂಗಳವಾರ ತಾಲೂಕು ವಕೀಲರ ಸಂಘದಿಂದ ಆಯೋಜಿಸಲಾಗಿದ್ದ ವಕೀಲರ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನ್ಯಾಯಾಲಯ ನಮ್ಮ ಜ್ಞಾನದೇಗುಲ ಸರಕಾರದ ಕಾನೂನು ಕಾಯ್ದೆಗಳನ್ನು ಸಂಪೂರ್ಣವಾಗಿ ತಿಳಿದು ಈ ದೇಗುಲದಲ್ಲಿ ಸೃಜನಶೀಲ ವಕೀಲರಾಗಿ ಬೆಳೆಯಬೇಕು. ಕಿರಿಯರು ಹಿರಿಯ ಮಾರ್ಗದರ್ಶನದಲ್ಲಿ ನಡೆದಾಗ ಮಾತ್ರ ಉತ್ತಮ ವಕೀಲರಾಗಿ ಯಶಸ್ವಿಯಾಗಲು ಸಾಧ್ಯ ಎಂದರು.

ಹಿರಿಯ ವಕೀಲರಾದ ಕೆ.ಜಗದಪ್ಪ ಮಾತನಾಡಿ, ದೇಶದ ಸ್ವಾತಂತ್ರಕ್ಕಾಗಿ ಹೋರಾಟದ ಮುಂಚೂಣಿಯಲ್ಲಿರುವ ಏಕೈಕ ಶಕ್ತಿಶಾಲಿ ವೃತ್ತಿ ದೋಷಗಳನ್ನು ಹೂಡುಕುವುದು ದೊಡ್ಡತಪ್ಪಲ್ಲ ಕಾನೂನು ಪ್ರಕಾರ ಮಾನವೀಯತೆಯ ಆಧಾರದ ಮೇಲೆ ದೋಷ ಹುಡುಕಿ ಕಕ್ಷಿದಾರರಿಗೆ ನ್ಯಾಯಾಕೂಡಿಸುವ ಕೆಲಸ ಮಾಡಬೇಕು ಎಂದು ಕಿರಿಯ ವಕೀಲರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಕಾರ್ಯದರ್ಶಿಯಾದ ಕೇಶವಮೂರ್ತಿ, ಎಚ್.ಎಂ. ಖಜಾಂಚಿ ಹೂಲೇಪ್ಪ, ಎಂ. ಮೃತಂಜ್ಯಯ, ಬಸವನಗೌಡ ಬಿ.ವಿ. ಕಾರ್ಯಕಾರಣಿ ಮಂಡಳಿ ಸದಸ್ಯರಾದ ಪ್ರಭಾಕಾರ, ಎಂ. ನಳೀನ, ಬಿ.ತಿಪ್ಪೇಶ್, ಸಿ. ಹಾಲೇಶ್, ಕಂಡ್ಯಪ್ಪ, ಕರಿಯಪ್ಪ, ಸೇರಿದಂತೆ ಹಿರಿಯ ಮತ್ತು ಕಿರಿಯ ನ್ಯಾಯವಾದಿಗಳು ಹಾಜರಿದ್ದರು.

ಪಟ್ಟಣದ ವಕೀಲರ ಸಂಘದಲ್ಲಿ ತಾಲೂಕು ವಕೀಲರ ಸಂಘದಿಂದ ಆಯೋಜಿಸಲಾಗಿದ್ದ ವಕೀಲರ ದಿನಾಚರಣೆಯ ಕಾರ್ಯಕ್ರವನ್ನು ಸಿವಿಲ್ ನ್ಯಾಯಾಧೀಶರಾದ ಮನುಶರ್ಮ ಎಸ್.ಪಿ. ಉದ್ಘಾಟಿಸಿದರು.

> **ವಕೀಲ ವೃತ್ತಿ ಬಹಳ ಕಠಿಣವಾದದ್ದು ಬಹಳ ಶ್ರದ್ದೆಯಿಂದ ಅಭ್ಯಾಸ ಮಾಡಿಕೊಂಡು ನ್ಯಾಯಾಲಯಕ್ಕೆ ತೆರಳಿದಾಗ ಕಕ್ಷಿದಾರರಿಗೆ ನ್ಯಾಯಾಕೊಡಿಸಿದ್ದಂತಾಗುತ್ತದೆ. ವಕೀಲರ ಸಂಘಕ್ಕೆ ಸರಕಾರದ ಅನುದಾನದಲ್ಲಿ ವಕೀಲರ ಗ್ರಂಥಾಲಯವನ್ನು ಸ್ಥಾಪಿಸಬೇಕು.**
>
> - **ಬಿ.ಕೃಷ್ಣ ಮೂರ್ತಿ,** ಹಿರಿಯ ವಕೀಲರು

ಶಿಕ್ಷಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ

ಸಂಡೂರು: ತಾಲೂಕು ಸರಕಾರಿ ಶಾಲೆ ಶಿಕ್ಷಕರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದು ಡಿಡಿಪಿಐ ಕಚೇರಿಯ ಶಿಕ್ಷಣಾಧಿಕಾರಿ ಸಿದ್ದಲಿಂಗಮೂರ್ತಿ ಸೂಚಿಸಿದರು.

ಪಟ್ಟಣದ ಬಿಇಒ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಶಿಕ್ಷಣ ಅದಾಲತ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಹೊಸದಾಗಿ ನೇಮಕವಾದ ಶಿಕ್ಷಕರಿಗೆ ಕಳೆದ ನವೆಂಬರ್‌ನಿಂದ ಮಾರ್ಚ್‌ವರೆಗಿನ ವೇತನ ಪಾವತಿಯಾಗಿಲ್ಲ. ಈ ಕುರಿತು ಸರಕಾರದ ಮಟ್ಟದಲ್ಲೇ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಕ್ರಮವಹಿಸಬೇಕು. ವೇತನ ಬಡ್ತಿ ಕಾಲಕಾಲಕ್ಕೆ ನಿಗದಿಪಡಿಸಬೇಕು. ಸೇವಾವಹಿ ಪುಸ್ತಕಗಳಲ್ಲಿ ದಾಖಲಿಸಬೇಕು ಎಂದು ತಿಳಿಸಿದರು.

ಪಟ್ಟಣದ ಬಿಇಒ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಬಿಇಒ ಡಾ.ಐ.ಆರ್.ಅಕ್ಕಿ ಮಾತನಾಡಿ, ಬಾಕಿ ವೇತನ ಸೇರಿದಂತೆ ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಅದಾಲತ್‌ನಲ್ಲಿ ಸಲ್ಲಿಕೆಯಾದ 30 ಅರ್ಜಿಗಳ ಪೈಕಿ ಹತ್ತು ಅಹವಾಲುಗಳನ್ನು ಸ್ಥಳದಲ್ಲಿಯೇ ಪರಿಹರಿಸಲಾಯಿತು. ಉಳಿದ ಅರ್ಜಿಗಳ ವಿಲೇವಾರಿಗೆ 15 ದಿನ ಗಡುವು ನೀಡಲಾಯಿತು.

ರಾಜ್ಯ ಸರಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಸಿದ್ದಣ್ಣ ಳವಾರ, ಅಕ್ಷರ ದಾಸೋಹ ಎಡಿ ಶ್ರೀಧರ್ ಮೂರ್ತಿ, ಪತ್ರಾಂಕಿತ ಸಹಾಯಕ ಚಂದ್ರಕಾಂತ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಚ್. ತಮ್ಮಪ್ಪ, ಸಹ ಶಿಕ್ಷಕರ ಸಂಘದ ಅಧ್ಯಕ್ಷ ಬಂಗಿ ನಾಗರಾಜ, ಜಿಪಿಟಿ ಶಿಕ್ಷಕರ ಸಂಘದ ಅಧ್ಯಕ್ಷ ಶಶಿಧರ್, ಭಾರತಿ ಇತರರಿದ್ದರು.

ಸ್ತ್ರೀಯರ ಶಿಕ್ಷಣ ಮಟ್ಟ ಹೆಚ್ಚದರೂ ಸಮಾಜ ಸುಧಾರಣೆಯಾಗಿಲ್ಲ

ಕಂಪ್ಲಿ: ಹಿಂದಿನ ಶತಮಾನಗಳಲ್ಲಿ ಸ್ತ್ರೀ ಶಿಕ್ಷಣ ಹೆಚ್ಚಳದಿಂದ ಸಮಾಜದಲ್ಲಿ ವಿವಾಹ ವಿಚ್ಛೇದನ ಪ್ರಕರಣಗಳು ಹೆಚ್ಚಾಗುತ್ತಿವೆ. ಹಿಂದಿನ ಶತಮಾನಗಳಲ್ಲಿ ಸ್ತ್ರೀ ಶಿಕ್ಷಣ ಇರಲಿಲ್ಲವೆಂದು ಬಡಬಡಿಸುತ್ತಿದ್ದು, ಸದ್ಯ ಸ್ತ್ರೀ ಶಿಕ್ಷಣ ಹೆಚ್ಚಳಗೊಂಡಿದ್ದರೂ ಸಮಾಜ ಸುಧಾರಣೆಗೊಂಡಿಲ್ಲ ಎಂದು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ನಿರ್ಭಯಾನಂದ ಸರಸ್ವತಿ ಹೇಳಿದರು.

ಸ್ಥಳೀಯ ಬಿಎಸ್‌ವಿ ಶಾಲಾವರಣದಲ್ಲಿ ಆಯೋಜಿಸಿದ್ದ ವಿವೇಕ ಮಂಟಪ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು,

ಬೆಳೆಯುವ ಸಮಾಜದಲ್ಲಿ ಅಲ್ಪ-ಸ್ವಲ್ಪ ಕುಂದುಕೊರತೆಗಳಿರುವುದು ಸಾಮಾನ್ಯ. ಭಾರತ ಇತಿಹಾಸ ರಚಿಸುವಾಗ ಪೂರ್ವಗ್ರಹ ಪೀಡಿತರಾಗಿ ಹೀನಸ್ಥಿತಿಯ ಇತಿಹಾಸ ದಾಖಲಿಸಿದ್ದಾರೆ. ವಿದೇಶಿಗರು ಮಾತ್ರ ಸ್ವರ್ಗವೆಂದು ಬಣ್ಣಿಸಿದ್ದಾರೆ. ಭಾರತ ಕಲಿಯುವ, ಕಲಿಸುವ ರಾಷ್ಟ್ರವಾಗಿದೆ. ಸರಕಾರಕ್ಕೆ ರಘುವಂಶದ ಆಡಳಿತದ ಇತಿಹಾಸ ಪುಸ್ತಕ ಓದಲು ಕೊಡಬೇಕಿದೆ. ಮದ್ಯ ಕುಡಿಸಿ, ಮತ್ತು ಬರಿಸಿ, ಮತಿಗೆಡಿಸಿ ಅಧಿಕಾರಕ್ಕೆ ಬರುವಂತಾಗಿದೆ ಎಂದು ಬೇಸರ ವ್ಯಕ್ತಡಿಸಿದರು.

ಕೆ.ಶ್ರೀನಿವಾಸ್ ಭಕ್ತಿಗೀತೆ ಹಾಡಿದರು ಡಿ.ಮೌನೇಶ್ ತಬಲಾ ಬಾರಿಸಿದರು.

ಸ್ಥಳೀಯ ಬಿಎಸ್‌ವಿ ಶಾಲಾವರಣದಲ್ಲಿ ಆಯೋಜಿಸಿದ್ದ ವಿವೇಕ ಮಂಟಪ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಲ್ಲುಡಿ ವಿಶ್ವನಾಥ, ಡಿ.ವಿ.ಸತ್ಯನಾರಾಯಣ, ಎಸ್.ಎಂ.ನಾಗರಾಜ, ಬಿ.ಎಂ.ಪುಷ್ಪಾ, ಅಮರೇಗೌಡ ಚಿಕ್ಕಜಾಯಿಗನೂರು, ಜಿ.ಎಂ.ಸಿದ್ದಯ್ಯ, ಕೆ.ರಂಗಪ್ಪ, ಎಸ್. ಶಾಮಸುಂದರರಾವ್, ಪ್ರಭುದೇವ, ಕಪ್ಪಗಲ್ ಮತ್ತಿತ್ತರು ಉಪಸ್ಥಿತರಿದ್ದರು.

ಬಾಲ್ಯವಿವಾಹ ತಡೆಗಟ್ಟಲು ಕಾರ್ಯಾಗಾರ ಇಂದು

ಬಳ್ಳಾರಿ: ರೀಡ್ಸ್ ಸಂಸ್ಥೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಮತ್ತು ಸಿಎಸಿಎಲ್-ಕೆ ಇವರ ಸಂಯುಕ್ತಾಶ್ರಯದಲ್ಲಿ ಡಿ.4 ರಂದು ಬೆಳಗ್ಗೆ 10.30 ಗಂಟೆಗೆ ಜಿಪಂ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಹಾಗೂ ಬಾಲ್ಯವಿವಾಹ ತಡೆಗಟ್ಟುವಲ್ಲಿ ಸವಾಲುಗಳು ಸವಾಲುಗಳು ಮತ್ತು ಪರಿಹಾರಗಳು ಕುರಿತು ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ ಏರ್ಪಡಿಸಲಾಗಿದೆ. ಪ್ರದಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಆದ ಕೆ.ಜಿ.ಶಾಂತಿ ಅವರು ಕಾರ್ಯಾಗಾರ ಉದ್ಘಾಟಿಸುವರು. ರೀಡ್ಸ್ ಸಂಸ್ಥೆಯ ಅಧ್ಯಕ್ಷ ಬಿ.ಸಿದ್ದರಾಮಯ್ಯ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಮಕ್ಕಳ ರಕ್ಷಣಾ ನಿರ್ದೇಶನಾಯಲದ ನಿರ್ದೇಶಕರಾದ ಡಾ.ಎಂ.ಆರ್.ರವಿ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ, ಬಳ್ಳಾರಿ ವಲಯ ಪೊಲೀಸ್ ಮಹಾ ನಿರೀಕ್ಷಕರಾದ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್.ಹೊಸಮನೆ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ.ವಿ.ಜೆ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಸೇರಿದಂತೆ ಇತರರು ಇದ್ದರು.

ಬಳ್ಳಾರಿ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ''ಹಕ್ಕುಗಳನ್ನು ಪಡೆಯಲು ಸರಿಯಾದ ಮಾರ್ಗ ಅನಿಸರಿಸೋಣ ನನ್ನ ಆರೋಗ್ಯ ನನ್ನ ಹಕ್ಕು'' ಎಂಬ ಘೋಷವಾಕ್ಯದಡಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿತ್ತು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್.ಎನ್ ಹೊಸಮನಿ ಈ ಜಾಥಾಗೆ ಚಾಲನೆ ನೀಡಿದರು. ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಾಹಕ ಘಟಕದ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಆರೋಗ್ಯ ಅಧಿಕಾರಿ ರಮೇಶ್ ಬಾಬು ಮೊದಲಾದವರು ಇದ್ದರು.

ಅಕಾಡೆಮಿ ಪ್ರಶಸ್ತಿಗೆ ಸಾಧಕರು ಆಯ್ಕೆ

ಬಳ್ಳಾರಿ: ಕರ್ನಾಟಕ ಬಯಲಾಟ ಅಕಾಡೆಮಿಯು ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು ಜಿಲ್ಲೆಯ ಇಬ್ಬರಿಗೆ ಗೌರವ ಪ್ರಶಸ್ತಿ, ಒಬ್ಬರಿಗೆ ವಾರ್ಷಿಕ ಪ್ರಶಸ್ತಿಗೆ ಆಯ್ಕೆಮಾಡಿದೆ. 2023-24ನೇ ಸಾಲಿನ ಗೌರವ ಪ್ರಶಸ್ತಿಗೆ ಬಯಲಾಟ ಕಲಾವಿದೆ ಓಂಕಾರಮ್ಮ, 2024-25 ನೇ ಸಾಲಿನ ಪ್ರಶಸ್ತಿಗೆ ಗೌರವ ಪ್ರಶಸ್ತಿಗೆ ಎಚ್. ಎಂ. ಪಂಪಯ್ಯಸ್ವಾಮಿ, 2024-25ನೇ ಸಾಲಿನ ವಾರ್ಷಿಕ ಪ್ರಶಸ್ತಿಗೆ ತೊಗಲುಗೊಂಬೆ ಕಲಾವಿದ ಕೆ.ಹೊನ್ನೂರಸ್ವಾಮಿ ಅವರನ್ನು ಆಯ್ಕೆಮಾಡಲಾಗಿದೆ. ಪಂಪಯ್ಯ ಸ್ವಾಮಿ ಅವರು ಕರ್ನಾಟಕ ಆಂಧ್ರ ಗಡಿಭಾಗದ ವಂದವಾಗಲಿ ಗ್ರಾಮದವರು,16ನೇ ವಯಸ್ಸಿನಲ್ಲಿಯೇ ಅಭಿಮನ್ಯು ಕಾಳಗ ಬಯಲಾಟದ ಮೂಲಕ ಕಲಾಕ್ಷೇತ್ರ ಪ್ರವೇಶಿಸಿ ಕರ್ನಾಟಕ, ಆಂಧ್ರಪ್ರದೇಶದಲ್ಲಿ 1 ಸಾವಿರಕ್ಕೂ ಹೆಚ್ಚು ಬಯಲಾಟಗಳಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಬಳ್ಳಾರಿಯ ಕೆ.ಹೊನ್ನೂರಸ್ವಾಮಿ ಇವರು ಅಳಿವಿನಂಚಿನಲ್ಲಿರುವ ತೊಗಲುಗೊಂಬೆ ಕಲಾ ಪ್ರಕಾರವನ್ನು ಜೀವಂತವಾಗಿರಿಸಲು ಶ್ರಮಿಸಿದ್ದಾರೆ. ಶ್ರೀಹುಲಿಕುಂಟೆರಾಯ ತೊಗಲುಗೊಂಬೆ ಕಲಾ ತಂಡವನ್ನು ಕಟ್ಟಿ ರಾಜ್ಯದ ನಾನಾ ಕಡೆ ಪ್ರದರ್ಶನ ನೀಡಿ, ರಾಮಾಯಣ, ಕಪ್ಪಗಲ್ ಓಂಕಾರಮ್ಮ ತಾಲೂಕಿನ ಕಪ್ಪಗಲ್ ಗ್ರಾಮದವರು ತಮ್ಮ 18ನೇ ವಯಸ್ಸಿನಲ್ಲಿ ರಂಗಪ್ರವೇಶ ಮಾಡಿ ಕರ್ನಾಟಕ, ಆಂಧ್ರಪ್ರದೇಶದಲ್ಲಿ ಅಭಿಮನ್ಯು ಕಾಳಗ, ಸುಂದೋಪಸುಂದರ, ರಾಮಾಯಣ, ಗಿರಿಜಾಕಲ್ಯಾಣ ಸೇರಿದಂತೆ ಅನೇಕ ಪೌರಾಣಿಕ ಸ್ತ್ರೀ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಪಿ.ವಿ.ಸಿಂಧು ವಿವಾಹ 22ಕ್ಕೆ

ದೆಹಲಿ: ಒಲಿಂಪಿಕ್ ಪದಕ ವಿಜೇತೆ, ಖ್ಯಾತ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಹಸೆಮಣೆ ಏರಲು ಸಜ್ಜಾಗಿದ್ದಾರೆ. ಡಿಸೆಂಬರ್ 22 ರಂದು ಮದುವೆ ನಡೆಯಲಿದ್ದು, ಹೈದಾರಾಬಾದ್ ಮೂಲದ ಹುಡುಗನನ್ನು ಕೈಹಿಡಿಯಲಿದ್ದಾರೆ. ಎರಡು ಕುಟುಂಬಗಳ ಪರಸ್ಪರ ಒಪ್ಪಿಗೆಯಿಂದ ಮದುವೆ ನಡೆಯುತ್ತಿದ್ದು, ಒಟ್ಟು ಐದು ದಿನಗಳ ಕಾಲ ಮದುವೆ ಸಂಭ್ರಮ ನಡೆಯಲಿದೆ. ಉದಯಪುರದಲ್ಲಿ ಮದುವೆ ಕಾರ್ಯಕ್ರಮ ನಡೆಯಲಿದ್ದು, ಆರತಕ್ಷತೆ ಹೈದರಾಬಾದ್‌ನಲ್ಲಿ ನಡೆಸಲು ಕುಟುಂಬಗಳು ತೀರ್ಮಾನಿಸಿವೆ. ಮದುವೆ ಕಾರ್ಯಕ್ರಮಗಳು ಡಿಸೆಂಬರ್ 20ರಂದು ಆರಂಭವಾಗಲಿದ್ದು 22ರಂದು ಮದುವೆ ನಡೆಯಲಿದೆ, ಡಿಸೆಂಬರ್ 24ರಂದು ಹೈದರಾಬಾದ್‌ನಲ್ಲಿ ಆರತಕ್ಷತೆ ನಡೆಯಲಿದೆ. ಎರಡೂ ಕುಟುಂಬಗಳಿಗೆ ಮೊದಲಿನಿಂದಲೇ ಪರಿಚಯವಿದ್ದರೂ ಒಂದು ತಿಂಗಳ ಹಿಂದಷ್ಟೇ ಮದುವೆಯನ್ನು ನಿಗದಿ ಮಾಡಲಾಗಿದೆ. ಜನವರಿಯಲ್ಲಿ ಸಿಂಧು ಹೆಚ್ಚಿನ ಟೂರ್ನಿಯಲ್ಲಿ ಭಾಗವಹಿಸಲಿರುವ ಕಾರಣ ಡಿಸೆಂಬರ್‌ನಲ್ಲಿ ಮದುವೆ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಪಿವಿ ಸಿಂಧು ಅವರ ತಂದೆ ಪಿವಿ ರಮಣ ಪಿಟಿಐಗೆ ತಿಳಿಸಿದ್ದಾರೆ. ಸಿಂಧು ಮದುವೆಯಾಗುತ್ತಿರುವ ಹುಡುಗನ ಹೆಸರು ವೆಂಕಟದತ್ತ ಸಾಯಿ. ಹೈದರಾಬಾದ್ ಮೂಲದವರೇ ಆದರೂ, ಸದ್ಯ ಜೈಪುರದಲ್ಲಿ ನೆಲೆಸಿದ್ದಾರೆ. ಅವರು ಪೊಸಿಡೆಕ್ಸ್ ಟೆಕ್ನಾಲಜೀಸ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ.

ಗ್ಲಾಡಿಯೇಟರ್ಸ್ ಚಾಂಪಿಯನ್ಸ್

ಅಬುಧಾಬಿ: ಇಲ್ಲಿ ನಡೆದ ಟಿ10 ಲೀಗ್‌ನಲ್ಲಿ ಡೆಕ್ಕನ್ ಗ್ಲಾಡಿಯೇಟರ್ಸ್ ತಂಡವು ಚಾಂಪಿಯನ್ ಪಟ್ಟ ಅಲಂಕರಿಸಿದೆ. ಶೇಖ್ ಝೂಯೆದ್ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೋರಿಸ್‌ವಿಲ್ಲೆ ಸ್ಯಾಂಪ್ ಆರ್ಮಿ ಹಾಗೂ ಡೆಕ್ಕನ್ ಗ್ಲಾಡಿಯೇಟರ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಗೆದ್ದ ಡೆಕ್ಕನ್ ಗ್ಲಾಡಿಯೇಟರ್ಸ್ ತಂಡದ ನಾಯಕ ನಿಕೋಲಸ್ ಪೂರನ್ ಮೋರಿಸ್‌ವಿಲ್ಲೆ ಸ್ಯಾಂಪ್ ಆರ್ಮಿ ತಂಡವನ್ನು ಬ್ಯಾಟಿಂಗ್ ಗೆ ಆಹ್ವಾನಿಸಿದರು. ಅದರಂತೆ ಮೊದಲು ಬ್ಯಾಟ್ ಮಾಡಿದ ಸ್ಯಾಂಪ್ ಆರ್ಮಿ ತಂಡವು ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಆರಂಭಿಕ ಆಟಗಾರನಾಗಿ ಕಣಕ್ಕಿಳಿದ ಫಾಫ್ ಡುಪ್ಲೆಸಿಸ್ 23 ಎಸೆತಗಳಲ್ಲಿ 34 ರನ್ ಬಾರಿಸಿದ್ದು ಬಿಟ್ಟರೆ, ಉಳಿದ ಬ್ಯಾಟರ್ ಗಳು ರನ್‌ಗಳಿಸಲು ಪರದಾಡಿದರು. ಪರಿಣಾಮ ಮೋರಿಸ್‌ವಿಲ್ಲೆ ಸ್ಯಾಂಪ್ ಆರ್ಮಿ ತಂಡವು 10 ಓವರುಗಳಲ್ಲಿ 7 ವಿಕೆಟ್ ಕಳೆದುಕೊಂಡು 104 ರನ್ ಗಳಿಸಲಷ್ಟೇ ಶಕ್ತರಾದರು.

ಮುಸ್ತಾಕ್ ಆಲಿ ಕ್ರಿಕೆಟ್ ಪಂದ್ಯ। ಅಂಕಪಟ್ಟಿಯಲ್ಲಿ ಬರೋಡಾಕ್ಕೆ 3, ರಾಜ್ಯಕ್ಕೆ 4ನೇ ಸ್ಥಾನ

ಶ್ರೇಯಸ್ ಹ್ಯಾಟ್ರಿಕ್ ವಿಕೆಟ್ ವ್ಯರ್ಥ ಬರೋಡಾಗೆ ಮಣಿದ ಕರ್ನಾಟಕ

ದೆಹಲಿ: ಶ್ರೇಯಸ್ ಗೋಪಾಲ್ (19ಕ್ಕೆ 4) ಹ್ಯಾಟ್ರಿಕ್ ವಿಕೆಟ್ ಹೊರತಾಗಿಯೂ ಕರ್ನಾಟಕ ತಂಡ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯ ಬರೋಡಾ ವಿರುದ್ಧದ ಪಂದ್ಯದಲ್ಲಿ 4 ವಿಕೆಟ್‌ಗಳ ಸೋಲು ಅನುಭವಿಸಿತು. ಆ ಮೂಲಕ ಕರ್ನಾಟಕ ತಂಡ ಟೂರ್ನಿಯ ಬಿ ಗ್ರೂಪ್ ಪಾಯಿಂಟ್ಸ್ ಟೇಬಲ್‌ನಲ್ಲಿ ನಾಲ್ಕನೇ ಸ್ಥಾನದಲ್ಲಿದೆ.

ಇಂದೋರ್‌ನ ಎಮೆರಾಲ್ಡ್ ಹೈಸ್ಕೂಲ್ ಗ್ರೌಂಡ್‌ನಲ್ಲಿ ಮಂಗಳವಾರ ನಡೆದಿದ್ದ ಪಂದ್ಯದಲ್ಲಿ ಕರ್ನಾಟಕ ತಂಡ ನೀಡಿದ್ದ 170 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಬರೋಡಾ ತಂಡ, ಶಾಶ್ವತ್ ರಾವತ್ (63 ರನ್) ಅವರ ಅರ್ಧ ಶತಕದ ಬಲದಿಂದ 18.5 ಓವರ್‌ಗಳಿಗೆ 172 ರನ್ ಗಳಿಸಿ ಗೆಲುವಿನ ದಡ ಸೇರಿತು. ಈ ಪಂದ್ಯದ ಗೆಲುವಿನ ಮೂಲಕ ಒಟ್ಟು 20 ಅಂಕಗಳನ್ನು ಕಲೆ ಹಾಕಿರುವ ಬರೋಡಾ ತಂಡ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಗುರಿ ಹಿಂಬಾಲಿಸಿದ ಬರೋಡಾ ತಂಡಕ್ಕೆ ಆರಂಭದಲ್ಲಿಯೇ ವಿದ್ಯಾದರ್ ಪಾಟೀಲ್ ಆರಂಭಿಕ ಆಘಾತ ನೀಡಿದರು. ತಂಡದ ಮೊತ್ತ 13 ರನ್ ಇರುವಾಗಲೇ ಅಭಿಮನ್ಯು ಸಿಂಗ್ ರಜಪೂತ್ 6 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಆದರೆ, ಎರಡನೇ ವಿಕೆಟ್‌ಗೆ ಜೊತೆಯಾದ ಶಾಶ್ವತ್ ರಾವತ್ ಮತ್ತು ಭಾನು ಪಾನಿಯಾ ಜೋಡಿ ಮುರಿಯದ ಎರಡನೇ ವಿಕೆಟ್‌ಗೆ 89 ರನ್‌ಗಳನ್ನು ಕಲೆ ಹಾಕಿತು. ಆ ಮೂಲಕ ಬರೋಡಾ ತಂಡಕ್ಕೆ ಭರ್ಜರಿ ಆರಂಭವನ್ನು ತಂದುಕೊಟ್ಟಿತು.

ಶಾಶ್ವತ್ ರಾವತ್ ಅರ್ಧಶತಕ: ಇನಿಂಗ್ಸ್ ಆರಂಭಿಸಿದ ಶಾಶ್ವತ್ ರಾವತ್ ಅವರು ಭರ್ಜರಿ ಬ್ಯಾಟಿಂಗ್ ಪ್ರದರ್ಶನ ತೋರಿದರು. ಆರಂಭದಿಂದಲೂ ಬಿರುಸಿನ ಬ್ಯಾಟಿಂಗ್‌ಗೆ ಕೈ ಹಾಕಿದ ಶಾಶ್ವತ್, ಕೇವಲ 37 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ ಏಳು ಬೌಂಡರಿಗಳೊಂದಿಗೆ 63 ರನ್‌ಗಳನ್ನು ಕಲೆ ಹಾಕಿದರು. ಆ ಮೂಲಕ ಬರೋಡಾ ತಂಡದ ಮೊತ್ತವನ್ನು 100ರ ಗಡಿ ದಾಟಿಸಿದರು. ಇನ್ನೇನು ತಂಡವನ್ನು ಗೆಲ್ಲಿಸುವ ಸಮಯದಲ್ಲಿ ಶಾಶ್ವತ್ ರಾವತ್ ಅವರನ್ನು ಲೆಗ್ ಸ್ಪಿನ್ ಶ್ರೇಯಸ್ ಗೋಪಾಲ್ ಔಟ್ ಮಾಡಿದರು.

ಶ್ರೇಯಸ್ ಗೋಪಾಲ್ ಹ್ಯಾಟ್ರಿಕ್ ವಿಕೆಟ್ ವ್ಯರ್ಥ: ಉತ್ತಮ ಆರಂಭ ಪಡೆದಿದ್ದರ ಹೊರತಾಗಿಯೂ ಬರೋಡಾಗೆ ಶ್ರೇಯಸ್ ಗೋಪಾಲ್ ಹ್ಯಾಟ್ರಿಕ್ ವಿಕೆಟ್ ಆಘಾತ ನೀಡಿದ್ದರು. ಮೊದಲಿಗೆ ಶಾಶ್ವತ್ ರಾವತ್ ಅವರನ್ನು ಔಟ್ ಮಾಡಿದ್ದ ಗೋಪಾಲ್, ನಂತರ ಕ್ರಮವಾಗಿ ಹಾರ್ದಿಕ್ ಪಾಂಡ್ಯ ಮತ್ತು ಕೃನಾಲ್ ಪಾಂಡ್ಯ ಅವರ ವಿಕೆಟ್‌ಗಳನ್ನು ಕಬಳಿಸಿದ್ದರು. ಆದರೆ, ಕೊನೆಯಲ್ಲಿ ವಿಷ್ಣು ಸೋಲಂಕಿ 21 ಎಸೆತಗಳಲ್ಲಿ 28 ರನ್ ಗಳಿಸುವ ಮೂಲಕ ಬರೋಡಾ ತಂಡವನ್ನು ಗೆಲ್ಲಿಸಿದರು. ಶ್ರೇಯಸ್ ಗೋಪಾಲ್ ಹೊರತುಪಡಿಸಿ ವಿದ್ಯಾದರ್ ಪಾಟೀಲ್ ಹಾಗೂ ವೈಶಾಖ್ ವಿಜಯ್‌ಕುಮಾರ್ ತಲಾ ಒಂದೊಂದು ವಿಕೆಟ್ ಪಡದಿದ್ದರು.

169 ರನ್‌ಗಳನ್ನು ಕಲೆ ಹಾಕಿದ ಕರ್ನಾಟಕ: ಇದಕ್ಕೂ ಮೊದಲು ಬ್ಯಾಟ್ ಮಾಡಿದ್ದ ಕರ್ನಾಟಕ ತಂಡ ತನ್ನ ಪಾಲಿನ 20 ಓವರ್‌ಗಳಿಗೆ 8 ವಿಕೆಟ್‌ಗಳ ನಷ್ಟಕ್ಕೆ 169 ರನ್‌ಗಳನ್ನು ಕಲೆ ಹಾಕಿತು. ಆ ಮೂಲಕ ಬರೋಡಾಗೆ 170 ರನ್‌ಗಳ ಗುರಿಯನ್ನು ನೀಡಿತು. ಕರ್ನಾಟಕ ಪರ ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ತೋರಿದ್ದ ಅಭಿನವ್ ಮನೋಹರ್ ಅವರು 34 ಎಸೆತಗಳಲ್ಲಿ 56 ರನ್‌ಗಳನ್ನು ಸಿಡಿಸಿದ್ದರು. ಆದರೆ, ಸ್ಟಾರ್ ಬ್ಯಾಟ್ಸ್‌ಮನ್‌ಗಳಾದ ಮನೀಷ್ ಪಾಂಡೆ, ಮಯಾಂಕ್ ಅಗರ್ವಾಲ್ ಬ್ಯಾಟಿಂಗ್ ವೈಫಲ್ಯ ಅನುಭವಿಸಿದರು.

ಕೆ . ಶ್ರೀಜಿತ್ 9 ಎಸೆತಗಳಲ್ಲಿ 22 ರನ್ ಹಾಗೂ ಸಮರ್ಥ್ 38 ರನ್‌ಗಳನ್ನು ಗಳಿಸಿ ಸಿಕ್ಕ ಉತ್ತಮ ಆರಂಭದಲ್ಲಿ ದೊಡ್ಡ ಮೊತ್ತವನ್ನು ಕಲೆ ಹಾಕುವಲ್ಲಿ ಎಡವಿದರು. ಅಂದ ಹಾಗೆ ಕೊನೆಯಲ್ಲಿ ಶ್ರೇಯಸ್ ಗೋಪಾಲ್ 18 ರನ್‌ಗಳನ್ನು ಕಲೆ ಹಾಕಿದ್ದರು.

ಸ್ಕೋರ್ ವಿವರ

ಕರ್ನಾಟಕ: 20 ಓವರ್‌ಗಳಿಗೆ 169-9 (ಅಭಿನವ್ ಮನೋಹರ್ 56, ಸಮರ್ಥ್ ಆರ್ 38 ರನ್; ಕೃಣಾಲ್ ಪಾಂಡ್ಯ 19 ಕ್ಕೆ 2, ಅತಿಥ್ ಸೇಥ್ 45 ಕ್ಕೆ 2)

ಭಾರತದ ಹಳೆಯ ಸೋಲು ಆಸ್ಟ್ರೇಲಿಯಾ ಕೀಪರ್ ವ್ಯಂಗ್ಯ



ಅಡಿಲೈಡ್: ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಪಿಂಕ್ ಬಾಲ್ ಟೆಸ್ಟ್ ಪಂದ್ಯಕ್ಕಾಗಿ ದಿನಗಣನೆ ಶುರುವಾಗಿದೆ. ಡಿಸೆಂಬರ್ 6 ರಂದು ಇಲ್ಲಿನ ಓವಲ್ ಮೈದಾನದಲ್ಲಿ ನಡೆಯಲಿರುವ ಹೊನಲು ಬೆಳಕಿನ ಈ ಪಂದ್ಯಕ್ಕಾಗಿ ಉಭಯ ತಂಡಗಳು ಭರ್ಜರಿ ಅಭ್ಯಾಸದಲ್ಲಿ ತೊಡಗಿಸಿಕೊಂಡಿದೆ. ಈ ಅಭ್ಯಾಸ ನಡುವೆ ಆಸ್ಟ್ರೇಲಿಯಾ ತಂಡ ವಿಕೆಟ್ ಕೀಪರ್ ಅಲೆಕ್ಸ್ ಕ್ಯಾರಿ ಸುದ್ದಿಗೋಷ್ಠಿಯಲ್ಲಿ ಕಾಣಿಸಿಕೊಂಡಿದ್ದರು. ಈ ವೇಳೆ ಮಾತನಾಡಿದ ಅಲೆಕ್ಸ್ ಕ್ಯಾರಿ, ಟೀಮ್ ಇಂಡಿಯಾ 36 ರನ್‌ಗಳಿಗೆ ಆಲೌಟ್ ಆಗಿರುವುದನ್ನು ನೆನಪಿಸಿದ್ದಾರೆ. 2020ರಲ್ಲಿ ಆಡಿಲೈಡ್‌ನಲ್ಲಿ ಆಡಲಾದ ಪಂದ್ಯದಲ್ಲಿ ಭಾರತ ತಂಡವು ಕೇವಲ 36 ರನ್‌ಗಳಿಗೆ ಆಲೌಟ್ ಆಗಿತ್ತು. ಅದು ನನಗೆ ಇನ್ನೂ ನೆನಪಿದೆ ಎಂದು ಕ್ಯಾರಿ ವ್ಯಂಗ್ಯವಾಡಿದ್ದಾರೆ. ಆಸ್ಟ್ರೇಲಿಯಾ ತಂಡವು ತವರಿನಲ್ಲಿ ಆಡಿದ ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಅತ್ಯುತ್ತಮ ದಾಖಲೆ ಹೊಂದಿದೆ. ಇದರ ಬಗ್ಗೆ ನಮಗೆಲ್ಲರಿಗೂ ಹೆಮ್ಮೆಯಿದೆ. ಹೀಗಾಗಿ ಈ ಪಂದ್ಯವನ್ನು ಗೆದ್ದು ನಾವು ಸರಣಿಯಲ್ಲಿ ಕಂಬ್ಯಾಕ್ ಮಾಡಲಿದ್ದೇವೆ ಎಂದು ಅಲೆಕ್ಸ್ ಕ್ಯಾರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

15.5 ಓವರ್‌ನಲ್ಲಿ 10 ಮೇಡನ್ ವಿಂಡೀಸ್ ವೇಗಿ ಹೊಸ ದಾಖಲೆ

ಕಿಂಗ್‌ಸ್ಟನ್: ಆತಿಥೇಯ ವೆಸ್ಟ್ ಇಂಡೀಸ್ ಮತ್ತು ಬಾಂಗ್ಲಾದೇಶ ನಡುವಿನ 2 ಪಂದ್ಯಗಳ ಟೆಸ್ಟ್ ಸರಣಿಯ ಎರಡನೇ ಪಂದ್ಯ ಶನಿವಾರ ಪ್ರಾರಂಭವಾಗಿದೆ. ಕಿಂಗ್‌ಸ್ಟನ್‌ನಲ್ಲಿ ನಡೆಯುತ್ತಿರುವ ಈ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ಬಾಂಗ್ಲಾದೇಶವನ್ನು 164 ರನ್‌ಗಳಿಗೆ ಆಲೌಟ್ ಮಾಡಿತು. ವಿಂಡೀಸ್ ಬೌಲರ್ 46 ವರ್ಷಗಳಲ್ಲೇ ಅತ್ಯಂತ ಎಕಾನಮಿ ಬೌಲಿಂಗ್ ಮಾಡಿ ದಾಖಲೆ ಬರೆದಿದ್ದಾರೆ. ವೆಸ್ಟ್ ಇಂಡೀಸ್ ವೇಗದ ಬೌಲರ್ ಜೇಡನ್ ಸೀಲ್ಸ್ 15.5 ಓವರ್‌ಗಳಲ್ಲಿ 10 ಮೇಡನ್ ಎಸೆದರು. ಬಾಂಗ್ಲಾದೇಶದ ಬ್ಯಾಟ್ಸ್‌ಮನ್‌ಗಳು ಜೇಡನ್ ಸೀಲ್ಸ್ ಬೌಲಿಂಗ್ ಎದುರಿಸಲು ಸಾಧ್ಯವಾಗಲಿಲ್ಲ. ಸೀಲ್ಸ್ 15.5 ಓವರ್ಗಳಲ್ಲಿ 10 ಮೇಡನ್‌ಗಳನ್ನು ಎಸೆದು ಕೇವಲ 5 ರನ್‌ಗಳನ್ನು ಬಿಟ್ಟುಕೊಟ್ಟರು. ಅಂದರೆ, ಅವರ ಎಕಾನಮಿ 1ಕ್ಕಿಂತಲೂ ಕಡಿಮೆ, ಅಲ್ಲದೆ ಜೇಡನ್ ಸೀಲ್ಸ್ ಬಾಂಗ್ಲಾದೇಶದ 4 ವಿಕೆಟ್ ಪಡೆದರು.

ಅವರ ಈ ಸ್ಪೆಲ್ 47 ವರ್ಷಗಳಲ್ಲಿ ಅತ್ಯಂತ ಕಡಿಮೆ ಎಕಾನಮಿಯುಳ್ಳ ಸ್ಪೆಲ್ ಆಗಿದೆ. 1977ರಲ್ಲಿ ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದಲ್ಲಿ ಮಜೀದ್ ಖಾನ್ 10 ಓವರ್‌ಗಳಲ್ಲಿ ಕೇವಲ 3 ರನ್ ನೀಡಿದ್ದರು. ಆಗ ಅವರ ಎಕಾನಮಿ ರೇಟ್ 0.30 ಆಗಿತ್ತು. ಜೈಡೆನ್ 0.31 ಎಕಾನಮಿ ದರದಲ್ಲಿ ಬೌಲಿಂಗ್ ಮಾಡಿ, ಖಾನ್ ದಾಖಲೆ ಸಮೀಪಕ್ಕೆ ಬಂದರು.

ಭಾರತದ ಬಾಪು ನಾಡಕರ್ಣಿ ಟೆಸ್ಟ್ ಪಂದ್ಯದಲ್ಲಿ ಅತ್ಯಂತ ಮಿತವ್ಯಯದ ಬೌಲಿಂಗ್ ಮಾಡಿದ ದಾಖಲೆ ಹೊಂದಿದ್ದಾರೆ. 1964ರಲ್ಲಿ ಇಂಗ್ಲೆಂಡ್ ವಿರುದ್ಧ ಚೆನ್ನೈನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಅವರು 32 ಓವರ್‌ಗಳಲ್ಲಿ ಕೇವಲ 5 ರನ್ ಬಿಟ್ಟುಕೊಟ್ಟಿದ್ದರು. ನಾಡಕರ್ಣಿ ತಮ್ಮ ಸ್ಪೆಲ್‌ನಲ್ಲಿ 27 ಮೇಡನ್ ಓವರ್ ಮಾಡಿದ್ದರು. ಅವರ ಎಕಾನಮಿ ರೇಟ್ 0.15 ಆಗಿತ್ತು.

ಈ ಪಂದ್ಯದಲ್ಲಿ ಶಮರ್ ಜೋಸೆಫ್ 3 ವಿಕೆಟ್ ಪಡೆದರೆ, ಕೆಮರ್ ರೋಚ್ 2 ವಿಕೆಟ್ ಪಡೆದರು. ಬಾಂಗ್ಲಾದೇಶ ಪರ ಶದ್ಮನ್ ಇಸ್ಲಾಂ 64 ರನ್ ಗಳಿಸಿದರು. ಮೆಹಿದ್ ಹಸನ್ ಮಿರಾಜ್ 36 ರನ್, ಶಾದತ್ ಹುಸೇನ್ 22 ಮತ್ತು ತೈಜುಲ್ ಇಸ್ಲಾಂ 16 ರನ್ ಗಳಿಸಿದರು. ಆದರೆ ವಿಂಡೀಸ್ ಕೂಡ ಮೊದಲ ಇನ್ನಿಂಗ್ಸ್?ನಲ್ಲೂ 146ಕ್ಕೆ ಆಲೌಟ್ ಆಯಿತು. ಕೇಸಿ ಕಾರ್ಟಿ 40 ರನ್ ಗಳಿಸಿ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಬಾಂಗ್ಲಾದೇಶದ ಪರ ನಹೀದ್ ರಾಣಾ 5, ಹಸನ್ ಮಹ್ಮುದ್ 2, ತಸ್ಕಿನ್ ಅಹ್ಮದ್, ತಾಜುಲ್ ಇಸ್ಲಾಮ್ ಹಾಗೂ ಮೆಹಿದಿ ಹಸನ್ ತಲಾ ಒಂದು ವಿಕೆಟ್ ಪಡೆದರು.

ಕಿಂಗ್ ಕೊಹ್ಲಿಗೆ ಗಾಯ?

ಅಡಿಲೇಡ್: ಆಸ್ಟ್ರೇಲಿಯಾ ವಿರುದ್ದ ಅಡಿಲೇಡ್ ಟೆಸ್ಟ್ ಪಂದ್ಯಕ್ಕೂ ಮುನ್ನ ಭಾರತ ತಂಡಕ್ಕೆ ಗಾಯದ ಭೀತಿ ಎದುರಾಗಿದೆ. ಟೀಮ್ ಇಂಡಿಯಾ ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ತಮ್ಮ ಮೊಣಕಾಲಿಗೆ ಬ್ಯಾಡೇಜ್ ಕಟ್ಟಿಕೊಂಡಿರುವುದು ಕಾಣಿಸಿಕೊಂಡಿದೆ, ಆ ಮೂಲಕ ಅಡಿಲೇಡ್ ಟೆಸ್ಟ್ ಪಂದ್ಯಕ್ಕೂ ಮುನ್ನ ಭಾರತ ತಂಡಕ್ಕೆ ಭಾರಿ ಹಿನ್ನಡೆಯಾಗಿದೆ. ಪರ್ತ್ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ 295 ರನ್‌ಗಳ ಭರ್ಜರಿ ಗೆಲುವು ಪಡೆದಿತ್ತು. ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಟೀಮ್ ಇಂಡಿಯಾ 1-0 ಮುನ್ನಡೆ ಪಡೆದಿದೆ. ಈ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ಜೊತೆಗೆ ವಿರಾಟ್ ಕೊಹ್ಲಿ ಕೂಡ ಶತಕವನ್ನು ಸಿಡಿಸಿದ್ದರು. ಈ ಪಂದ್ಯದಲ್ಲಿ ಅವರು 30ನೇ ಟೆಸ್ಟ್ ಶತಕವನ್ನು ಪೂರ್ಣಗೊಳಿಸಿದ್ದರು. ಆ ಮೂಲಕ ಅಡಿಲೇಡ್ ಟೆಸ್ಟ್‌ಗೂ ಮುನ್ನ ವಿರಾಟ್ ಕೊಹ್ಲಿ ಭರ್ಜರಿ ಫಾರ್ಮ್‌ಗೆ ಮರಳಿದ್ದರು. ಇದೀಗ ಅಡಿಲೇಡ್ ತಲುಪಿರುವ ಭಾರತ ತಂಡ, ಡಿಸೆಂಬರ್ 6ರಂದು ಆರಂಭವಾಗಲಿರುವ ಎರಡನೇ ಟೆಸ್ಟ್ ಪಂದ್ಯಕ್ಕೆ ಕಠಿಣ ತಾಲೀಮು ನಡೆಸುತ್ತಿದೆ. ಇದರ ನಡುವೆ ವಿರಾಟ್ ಕೊಹ್ಲಿ ಅವರು ಗಾಯಕ್ಕೆ ತುತ್ತಾಗಿರುವ ರೀತಿ ಕಾಣುತ್ತಿದ್ದಾರೆ. ವಿರಾಟ್ ಕೊಹ್ಲಿ ಅಡಿಲೇಡ್‌ನಲ್ಲಿ ಉತ್ತಮ ಟೆಸ್ಟ್ ದಾಖಲೆಯನ್ನು ಹೊಂದಿದ್ದಾರೆ. ಕೊಹ್ಲಿ ಅಲಭ್ಯರಾದರೆ, ಇದು ತಂಡದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಅದರಲ್ಲಿಯೂ ವಿಶೇಷವಾಗಿ ಅಡಿಲೇಡ್ ಟೆಸ್ಟ್ ಪಿಂಕ್ ಬಾಲ್‌ನಲ್ಲಿ ಆಡುವುದರಿಂದ ಇಲ್ಲಿ ಬ್ಯಾಟ್ ಮಾಡುವುದು ಸವಾಲಾಗಿದೆ.

ಪಾಕ್‌ನ ಮುಖೀಮ್ ದಾಖಲೆ

ದೆಹಲಿ: ಪಾಕಿಸ್ತಾನ ಮತ್ತು ಜಿಂಬಾಬ್ವೆ ನಡುವಣ ಮೂರು ಪಂದ್ಯಗಳ ಸರಣಿಯ ಕೊನೆಯ ಪಂದ್ಯದಲ್ಲಿ ಪಾಕಿಸ್ತಾನದ ಸ್ಪಿನ್ನರ್ ಸುಫಿಯಾನ್ ಮುಖೀಮ್ ತಮ್ಮ ಸ್ಪಿನ್ ಮ್ಯಾಜಿಕ್ ಬಳಸಿ ದಾಖಲೆಯನ್ನು ಬರೆದಿದ್ದಾರೆ. ಮೂರನೇ ಹಾಗೂ ಕೊನೆಯ ಪಂದ್ಯದಲ್ಲಿ ಪಾಕಿಸ್ತಾನ ತಂಡ ಜಿಂಬಾಬ್ವೆಯನ್ನು ಈ ಮೂಲಕ 10 ವಿಕೆಟ್‌ಗಳಿಂದ ಸೋಲಿಸಿದೆ. ಈ ಗೆಲುವಿನೊಂದಿಗೆ ಪಾಕಿಸ್ತಾನ ತಂಡ ಮೂರು ಪಂದ್ಯಗಳ ಸರಣಿಯನ್ನು 2-1 ಅಂತರದಲ್ಲಿ ಗೆದ್ದುಕೊಂಡಿದೆ. ಕೇವಲ 16 ಎಸೆತಗಳಲ್ಲಿ 5 ವಿಕೆಟ್ ಕಿತ್ತ ಸೂಫಿಯನ್: ಸೂಫಿಯಾನ್ ಮುಖೀಮ್ ತನ್ನ ಬಿಗಿಯಾದ ಬೌಲಿಂಗ್‌ನಿಂದ ಅತ್ಯಂತ ಕಡಿಮೆ ರನ್‌ಗಳನ್ನು ನೀಡುವ ಮೂಲಕ ಐದು ವಿಕೆಟ್ ಸಾಧನೆ ಮಾಡಿದರು. ಈ ಪಂದ್ಯದಲ್ಲಿ ಪಾಕಿಸ್ತಾನದ ಪರವಾಗಿ ಸೂಫಿಯಾನ್ ಕೇವಲ 2.4 ಓವರ್‌ಗಳನ್ನು ಅಂದರೆ ಕೇವಲ 16 ಎಸೆತಗಳನ್ನು ಬೌಲ್ ಮಾಡಿದರು, ಇದರಲ್ಲಿ ಅವರು ಪಾಕಿಸ್ತಾನದ ಐವರು ಬ್ಯಾಟ್ಸ್‌ಮನ್‌ಗಳನ್ನು ಔಟ್ ಮಾಡಿದರು, ಅವರು ಎದುರಾಳಿ ಜಿಂಬಾಬ್ವೆ ತಂಡಕ್ಕೆ ಕೇವಲ 3 ರನ್ ಮಾತ್ರ ನೀಡಿದರು.

57 ರನ್‌ಗಳಿಗೆ ಜಿಂಬಾಬ್ವೆ ಆಲ್‌ಔಟ್: ಸೂಫಿಯಾನ್ ಅವರ ಸ್ಪಿನ್ ಮೋಡಿಗೆ ನಲುಗಿದ ಜಿಂಬಾಬ್ವೆ ಕೇವಲ 12.4 ಓವರ್‌ಗಳಲ್ಲಿ ಕೇವಲ 57 ರನ್‌ಗಳಿಗೆ ಆಲ್‌ಔಟ್ ಆಯಿತು. ಇದು ಟಿ20 ಕ್ರಿಕೆಟ್‌ನಲ್ಲಿ ಜಿಂಬಾಬ್ವೆ ತಂಡದ ಅತ್ಯಂತ ಕಡಿಮೆ ಮೊತ್ತ. ಜಿಂಬಾಬ್ವೆ ತಂಡದ ಪರ ಆರಂಭಿಕ ಬ್ಯಾಟ್ಸ್‌ಮನ್ ಬ್ರಿಯಾನ್ ಬೆನೆಟ್ (21 ರನ್) ಹಾಗೂ ಟಿ ಮಾರು ಮಣಿ (16 ರನ್) ಅವರನ್ನು ಹೊರತುಪಡಿಸಿ ಇನ್ನುಳಿದ ಬ್ಯಾಟ್ಸ್‌ಮನ್‌ಗಳು ವೈಯಕ್ತಿಕ ಎರಡಂಕಿ ಮೊತ್ತವನ್ನು ಕಲೆ ಹಾಕುವಲ್ಲಿ ವಿಫಲರಾದರು. ಇದಕ್ಕೆ ಉತ್ತರವಾಗಿ ಪಾಕಿಸ್ತಾನ 5.3 ಓವರ್‌ಗಳಲ್ಲಿ 61 ರನ್ ಗಳಿಸಿ ಪಂದ್ಯವನ್ನು ಗೆದ್ದುಕೊಂಡಿತು. ಟಿ20 ಮಾದರಿಯಲ್ಲಿ ಅತಿ ಹೆಚ್ಚು ಸ್ಕೋರ್ ಮಾಡಿದ ದಾಖಲೆ ಕೂಡ ಜಿಂಬಾಬ್ವೆ ತಂಡದ ಹೆಸರಿನಲ್ಲಿದೆ, ಜಿಂಬಾಬ್ವೆ ಟಿ20 ಪಂದ್ಯವೊಂದರಲ್ಲಿ 344 ರನ್ ಗಳಿಸಿದೆ.

ವಿಟಾಕೀಸ್

ಬೆಳ್ಳಿತೆರೆಗೆ ಸಿಲ್ಕ್‌ಸ್ಮಿತಾ ಬಯೋಪಿಕ್

ಸಿಲ್ಕ್‌ಸ್ಮಿತಾ, ಈ ಹೆಸರು ಕೇಳಿದಾಕ್ಷಣ ಎಂಬತ್ತು, ತೊಂಬತ್ತರ ದಶಕದ ಐಟಂ ಸಾಂಗ್‌ಗಳು ನೆನೆಪಿಗೆ ಬರುತ್ತವೆ. ಅಂದಿನ ಕಾಲದಲ್ಲಿ ಸಿಲ್ಕ್ ಸ್ಮಿತಾ ಎಂದರೆ ಪಡ್ಡೆ ಹುಡುಗರು ಕುಣಿದು ಕುಪ್ಪಳಿಸುತ್ತಿದ್ದರು. ಸ್ಮಿತಾ ಐಟಂ ಸಾಂಗ್‌ನಲ್ಲಿ ಹೆಜ್ಜೆ ಹಾಕುವ ಮೂಲಕ ಪ್ರಸಿದ್ಧಿ ಪಡೆದಿದ್ದರು. ಈಗ ಸಿಲ್ಕ್ ಸ್ಮಿತಾ ಜೀವನ ಚರಿತೆ ತೆರೆಗೆ ಬರಲಿದೆ. ಸಿಲ್ಕ್ ಸ್ಮಿತಾ -ಕ್ವೀನ್ ಆಫ್ ದಿ ಸೌತ್ ಎಂಬ ಶೀರ್ಷಿಕೆಯಲ್ಲಿ ಚಿತ್ರ ಸೆಟ್ಟೇರಿದ್ದು ಮುಂದಿನ ವರ್ಷದ ಆರಂಭದಲ್ಲಿ ಶೂಟಿಂಗ್ ಆರಂಭವಾಗಲಿದೆ. ಸಿಲ್ಕ್ ಸ್ಮಿತಾ ಅವರ ಜನ್ಮದಿನದಂದು ಈ ವಿಶೇಷ ಘೋಷಣೆ ಮಾಡುವ ಮೂಲಕ, ಚಿತ್ರತಂಡ ವಿಡಿಯೊವನ್ನು ಅನಾವರಣಗೊಳಿಸಿದೆ. ಜಯರಾಮ್ ಶಂಕರನ್ ನಿರ್ದೇಶನ ಮಾಡಲಿದ್ದು, ಎಸ್.ಬಿ.ವಿಜಯ್ ಅಮೃತ್‌ರಾಜ್ ಚಿತ್ರ ನಿರ್ಮಾಣ ಮಾಡಲಿದ್ದಾರೆ. ಈ ಚಿತ್ರದಲ್ಲಿ ನಾಯಕಿಯಾಗಿ ಯಾರು ನಟಿಸಲಿದ್ದಾರೆ ಎಂಬ ಕುತೂಹಲವೂ ಇತ್ತು ಅದಕ್ಕೆ ಈಗ ಉತ್ತರವೂ ಸಿಕ್ಕಿದೆ. ಚಂದ್ರಿಕಾ ರವಿ, ಸಿಲ್ಕ್ ಸ್ಮಿತಾ ಅವರ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಸಿಲ್ಕ್ ಸ್ಮಿತಾ -ಕ್ವೀನ್ ಆಫ್ ದಿ ಸೌತ್ ಚಿತ್ರ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಲಿದ್ದು ಪಂಚ ಭಾಷೆಗಳಲ್ಲಿ ಮೂಡಿಬರಲಿದೆ.



ಟೈಗರ್ ಹುಟ್ಟುಹಬ್ಬಕ್ಕೆ ಫಸ್ಟ್‌ಲುಕ್ ಉಡುಗೊರೆ

ಸ್ಯಾಂಡಲ್‌ವುಡ್ ಮರಿ ಟೈಗರ್ ವಿನೋದ್ ಪ್ರಭಾಕರ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ವಿನೋದ್ ಪ್ರಭಾಕರ್ ಹುಟ್ಟುಹಬ್ಬಕ್ಕೆ ನಟ ನಟಿಯರು , ಅಭಿಮಾನಿಗಳು ಶುಭಕೋರಿದ್ದಾರೆ. ಸದ್ಯ ವಿನೋದ್, ಬಲರಾಮನ ದಿನಗಳು ಚಿತ್ರದಲ್ಲಿ ನಟಿಸುತ್ತಿದ್ದಾರೆ. ಮರಿ ಟೈಗರ್ ಬರ್ತ್‌ಡೇ ಪ್ರಯುಕ್ತ ಬಲರಾಮನ ಚಿತ್ರತಂಡ ಫಸ್ಟ್‌ಲುಕ್ ರಿಲೀಸ್ ಮಾಡುವ ಮೂಲಕ ಹುಟ್ಟುಹಬ್ಬಕ್ಕೆ ಶುಭಕೋರಿದೆ. ಇದು ತೊಂಬತ್ತರ ಕಾಲಘಟ್ಟದ ಕಥೆಯಾಗಿದ್ದು, ಆ ಕಾಲಮಾನಕ್ಕೆ ತಕ್ಕಂತ ಗೆಟಪ್‌ನಲ್ಲಿ ವಿನೋದ್ ಪ್ರಭಾಕರ್ ಕಾಣಿಸಿಕೊಂಡಿದ್ದಾರೆ. ಬಾಯಲ್ಲಿ ಸಿಗರೇಟು ಹಿಡಿದು ರಗಡ್ ಲುಕ್‌ನಲ್ಲಿ ಕಂಗೊಳಿಸಿದ್ದಾರೆ. ಟೈಗರ್ ಅವರ ಈ ಲುಕ್ ನೋಡಿ ಅಭಿಮಾನಿಗಳು ಫಿದಾ ಆಗಿದ್ದಾರೆ. ಬಲರಾಮನ ದಿನಗಳು ಭೂಗತ ಲೋಕದ ಕಥೆಯಾಗಿದ್ದು ಆ್ಯಕ್ಷನ್, ಥ್ರಿಲ್ಲರ್ ಅಂಶಗಳು ಚಿತ್ರದ ಕಥೆಯಲ್ಲಿ ಬೆರೆತಿವೆ. ಇದು ಮರಿ ಟೈಗರ್ ಅಭಿನಯದ ಇಪ್ಪತ್ತೈದನೇ ಸಿನಿಮಾವಾಗಿದ್ದು, ಆ ದಿನಗಳು ಖ್ಯಾತಿಯ ಕೆ.ಎಂ.ಚೈತನ್ಯ ನಿರ್ದೇಶನ ಮಾಡುತ್ತಿದ್ದಾರೆ. ಪದ್ಮಾವತಿ ಫಿಲಂಸ್ ಲಾಂಛನದಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರ ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಅಟ್ಟಕತ್ತಿ, ಕಾಲ, ಕಬಾಲಿ, ಭೈರವ, ದಸರಾ, ಕಲ್ಕಿ ಸೇರಿದಂತೆ ಅನೇಕ ಸೂಪರ್ ಹಿಟ್ ಚಿತ್ರಗಳಿಗೆ ಸಂಗೀತ ಸಂಯೋಜಿಸಿರುವ ಜನಪ್ರಿಯ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣನ್ ಈ ಚಿತಕ್ಕೂ ಸಂಗೀತ ನೀಡುತ್ತಿದ್ದಾರೆ. ಇದು ಅವರು ಸಂಗೀತ ಸಂಯೋಜಿಸುತ್ತಿರುವ ಐವತ್ತೊಂದನೇ ಚಿತ್ರವಾಗಿದೆ. ಈಗಾ ಗಲೇ ಸಂಗೀತ ನಿರ್ದೇಶನಕ್ಕೆ ಸಂಬಂಧಿಸಿದ ಕೆಲಸ ಗಳು ಆರಂಭವಾಗಿವೆ. ಬಲರಾಮನ ದಿನಗಳು ಚಿತ್ರಕ್ಕೆ ಬೆಂಗಳೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಮುಕ್ತಾಯವಾಗಿದ್ದು, 2ನೇ ಹಂತದ ಚಿತ್ರೀಕರಣ ಶೀಘ್ರದಲ್ಲಿಯೇ ಆರಂಭವಾಗಲಿದೆ.



ಟಾಕ್ಸಿಕ್ ತಂಡ ಸೇರಿದ ಹುಮಾ ಖುರೇಷಿ

ಯಶ್ ಅಭಿನಯದ ಬಹುನಿರೀಕ್ಷಿತ ಸಿನಿಮಾ ಟಾಕ್ಸಿಕ್ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ. ಟಾಕ್ಸಿಕ್ ಚಿತ್ರದಲ್ಲಿ ಸ್ಟಾರ್ ಕಲಾವಿದರ ದಂಡೇ ಇದೆ. ಮುಂಬೈನಲ್ಲಿ ಚಿತ್ರಕ್ಕಾಗಿ ದೊಡ್ಡ ಸೆಟ್ ನಿರ್ಮಿಸಿದ್ದು, ಶೂಟಿಂಗ್ ನಡೆಸಲಾಗುತ್ತಿದೆ. ಬಾಲಿವುಡ್ ನಟಿ ಹುಮಾ ಖುರೇಷಿ ಈಗ ಟಾಕ್ಸಿಕ್ ತಂಡ ಸೇರಿದ್ದಾರೆ. ಹುಮಾ ಚಿತ್ರೀಕರಣಕ್ಕೆ ತೆರಳುತ್ತಿರುವ ದೃಶ್ಯಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಹುಮಾ ಖುರೇಷಿ ಈ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಮಾ ಜತೆಗೆ ಬಹುಭಾಷಾ ನಟಿ ನಯನ ತಾರಾ ಕೂಡ ಚಿತ್ರದಲ್ಲಿ ನಟಿಸಲಿದ್ದಾರೆ. ಟಾಕ್ಸಿಕ್ , ಡ್ರಗ್ಸ್ ಮಾಫಿಯಾ ಸುತ್ತ ಸಾಗುವ ಕಥೆಯಾಗಿದ್ದು, ಯಶ್ ಭೂಗತ ಲೋಕದ ಡಾನ್ ಆಗಿ ಅಬ್ಬರಿಸಲಿದ್ದಾರೆ. ಈಗಾಗಲೇ ಟಾಕ್ಸಿಕ್ ಪೋಸ್ಟರ್ ರಿಲೀಸ್ ಆಗಿದ್ದು ಕುತೂಹಲ ಮೂಡಿಸಿದೆ. ಮಲೆಯಾಳಂನ ಖ್ಯಾತ ನಿರ್ದೇಶಕಿ ಗೀತು ಮೋಹನ್ ದಾಸ್ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಟಾಕ್ಸಿಕ್ ಹೈಬಜೆಟ್ ಸಿನಿಮಾವಾಗಿದ್ದು ಕನ್ನಡ, ಹಿಂದಿ, ತಮಿಳು, ತೆಲುಗು, ಮಲೆಯಾಳಂ ಸೇರಿದಂತೆ ಹಲವು ಭಾಷೆಗಳಲ್ಲಿ ಮೂಡಿಬರಲಿದೆ.

ಮತ್ತೆ ಬರಲಿದ್ದಾನೆ ಅಯೋಗ್ಯ

ಮತ್ತೆ ಬರಲಿದ್ದಾನೆ ಅಯೋಗ್ಯ 2018ರಲ್ಲಿ ತೆರೆಗೆ ಬಂದ ಅಯೋಗ್ಯ ಸಿನಿಮಾ ಕನ್ನಡ ಚಿತ್ರರಂಗದಲ್ಲಿ ಭರ್ಜರಿ ಯಶಸ್ಸು ಪಡೆಯಿತು. ಗ್ರಾಮೀಣ ಸೊಗಡಿನಲ್ಲಿ ಮೂಡಿಬಂದ ಅಯೋಗ್ಯ, ನೀನಾಸಂ ಸತೀಶ್‌ಗೆ ಬಿಗ್ ಬ್ರೇಕ್ ನೀಡಿತು. ಹಳ್ಳಿ ಹೈದನಾದ ಕೊಟ್ಲೆ ಸತೀಶನನ್ನು ನೋಡಿ ಸಿನಿಪ್ರಿಯರು ಫುಲ್ ಖುಷಿಯಾಗಿದ್ದರು. ಹಳ್ಳಿಯಲ್ಲಿ ನಡೆಯುವ ರಾಜಕೀಯ, ಹುಡುಗರ ತರ್ಲೆ ತುಂಟಾಟ, ನವಿರಾದ ಪ್ರೀತಿ ಇದೆಲ್ಲವೂ ಚಿತ್ರದಲ್ಲಿತ್ತು. ಪ್ರೇಕ್ಷಕರನ್ನು ಸೆಳೆಯಿತು. ಅಯೋಗ್ಯ ತೆರೆಗೆ ಬಂದು ಆರು ವರ್ಷಗಳೇ ಕಳೆದಿವೆ. ಈಗ ಈ ಚಿತ್ರದ ಸೀಕ್ವೆಲ್ ಕೂಡ ಬರಲಿದೆ. ಅಯೋಗ್ಯ 2 ಚಿತ್ರದ ಕಥೆ ಸಿದ್ಧವಾಗಿದ್ದು ಡಿಸೆಂಬರ್ 11 ರಂದು ಚಿತ್ರದ ಮುಹೂರ್ತ ನೆರವೇರಲಿದೆ. ಮಹೇಶ್ ಕುಮಾರ್ ಅವರೇ ಈ ಚಿತ್ರಕ್ಕೂ ಕಥೆ ಬರೆದು ನಿರ್ದೇಶನ ಮಾಡಲಿದ್ದಾರೆ.

ಅಯೋಗ್ಯ ಚಿತ್ರದಲ್ಲಿ ನಟಿಸಿದ್ದ ಕಲಾವಿದರೇ ಈ ಚಿತ್ರದಲ್ಲಿಯೂ ನಟಿಸಲಿದ್ದಾರೆ. ಸತೀಶ್‌ಗೆ ಜತೆಯಾಗಿ ರಚಿತಾ ರಾಮ್ ಬಣ್ಣಹಚ್ಚಲಿದ್ದು, ಮತ್ತೊಮ್ಮೆ ಏನಮ್ಮಿ ಏನಮ್ಮಿ .. ಎಂದು ಹಾಡಿ ಕುಣಿಯಲಿದ್ದಾರೆ. ರವಿಶಂಕರ್ ಮುಂದಿನ ಭಾಗದಲ್ಲಿಯೂ ಖಳನಾಗಿ ಅಬ್ಬರಿಸಲಿದ್ದಾರೆ. ಉಳಿದಂತೆ ತಬಲಾ ನಾಣಿ, ಅರುಣಾ ಬಾಲರಾಜ್, ಸುಂದರ್ ರಾಜ್ ಮುಂತಾದವರು ಈ ಚಿತ್ರದಲ್ಲಿಯೂ ಅಭಿನಯಿಸಲಿದ್ದಾರೆ. ವಿಶೇಷ ಎಂದರೆ ಈ ಚಿತ್ರದಲ್ಲಿ ಸತೀಶ್ ಹೊಸ ಗೆಟಪ್‌ನಲ್ಲಿ ಮಿಂಚಲಿದ್ದಾರೆ. ಚಿತ್ರದ ಫಸ್ಟ್‌ಲುಕ್ ಶೀಘ್ರದಲ್ಲಿಯೇ ರಿಲೀಸ್ ಆಗಲಿದೆ. ಅಯೋಗ್ಯ ಕನ್ನಡದಲ್ಲಿ ಮಾತ್ರ ತೆರೆಗೆ ಬಂದಿತ್ತು, ಆದರೆ ಅಯೋಗ್ಯ 2 ಕನ್ನಡ, ಸೇರಿದಂತೆ ತೆಲುಗು, ತಮಿಳಿನಲ್ಲಿಯೂ ಬಿಡುಗಡೆಯಾಗಲಿದೆ.

ಶಿವಾಜಿ ಪಾತ್ರದಲ್ಲಿ ರಿಷಬ್ ಶೆಟ್ಟಿ

ಕಾಂತಾರ ಚಿತ್ರದ ಮೂಲಕ ಪ್ಯಾನ್ ಇಂಡಿಯಾ ಸ್ಟಾರ್ ಆಗಿ ಹೊರಹೊಮ್ಮಿರುವ ನಟ, ನಿರ್ದೇಶಕ ರಿಷಬ್ ಶೆಟ್ಟಿ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ಹನುಮಾನ್ ಸಿನಿಮಾದ ಮೂಲಕ ಟಾಲಿವುಡ್ ಅಂಗಳಕ್ಕೂ ಎಂಟ್ರಿಕೊಟ್ಟಿರುವ ಕಾಂತಾರದ ಶಿವ, ಈಗ ಮತ್ತೊಂದು ಪ್ಯಾನ್ ಇಂಡಿಯಾ ಸಿನಿಮಾದಲ್ಲಿ ಅಭಿನಯಿಸಲು ಸಮ್ಮತಿಸಿದ್ದಾರೆ. ಹೌದು ರಿಷಬ್ ಶೆಟ್ಟಿ, ದಿ ಪ್ರೈಡ್ ಆಫ್ ಭಾರತ್ ಛತ್ರಪತಿ ಶಿವಾಜಿ ಮಹಾರಾಜ್ ಚಿತ್ರದಲ್ಲಿ ನಟಿಸಲಿದ್ದಾರೆ. ಇತಿಹಾಸದ ಪುಟಗಳಲ್ಲಿ ಛಾಪು ಮೂಡಿಸಿರುವ, ಭಾರತದ ಹೆಮ್ಮೆ, ಮೊಘಲ್ ಸಾಮ್ರಾಜ್ಯದ ಅಪ್ರತಿಮ ಹೋರಾಟಗಾರ ಛತ್ರಪತಿ ಶಿವಾಜಿ ಮಹಾರಾಜ್ ಅವರ ಕಥೆ ಇದೀಗ ಸಿನಿಮಾ ರೂಪದಲ್ಲಿ ತೆರೆಗೆ ಬರಲಿದೆ. ದಿ ಪ್ರೈಡ್ ಆಫ್ ಭಾರತ್ ಛತ್ರಪತಿ ಶಿವಾಜಿ ಮಹಾರಾಜ್ ಸಿನಿಮಾದಲ್ಲಿ ರಿಷಬ್ ಶೆಟ್ಟಿ, ಶಿವಾಜಿ ಮಹಾರಾಜ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರವನ್ನು ಬಾಲಿವುಡ್‌ನ ಸಂದೀಪ್ ಸಿಂಗ್ ನಿರ್ದೇಶನ ಮಾಡಲಿದ್ದಾರೆ. ಇದೀಗ ಈ ಸಿನಿಮಾದ ಫಸ್ಟ್ ಲುಕ್ ಪೋಸ್ಟರ್ ರಿಲೀಸ್ ಆಗಿದ್ದು, ರಿಷಬ್ ಶಿವಾಜಿಯ ಲುಕ್‌ನಲ್ಲಿ ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. ಸದ್ಯ ಈ ಐತಿಹಾಸಿಕ ಸಿನಿಮಾದ ಪ್ರೀ ಪ್ರೊಡಕ್ಷನ್ ಕೆಲಸಗಳು ನಡೆಯುತ್ತಿವೆ. ಹೈಬಜೆಟ್‌ನ ಈ ಸಿನಿಮಾ 2027ರ ಜನವರಿ 21 ರಂದು ಈ ಸಿನಿಮಾ ರಿಲೀಸ್ ಆಗಲಿದೆ. ಹಿಂದಿ, ಕನ್ನಡ, ತೆಲುಗು, ತಮಿಳು, ಮಲೆಯಾಳಂ ಭಾಷೆಗಳಲ್ಲಿ ಸಿನಿಮಾ ರಿಲೀಸ್ ಆಗಲಿದೆ.ಸದ್ಯ ರಿಷಬ್ ಶೆಟ್ಟಿ ಕಾಂತಾರ ಚಾಪ್ಟರ್ 1 ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ಕಾಂತಾರ ಪ್ರೀಕ್ವೆಲ್ ಆಗಿರುವ ಕಾಂತಾರ ಚಾಪ್ಟರ್ 1 ಕದಂಬರ ಕಾಲದ ಐತಿಹಾಸಿಕ ಕಥೆಯನ್ನು ಒಳಗೊಂಡಿದೆ. ಈ ಚಿತ್ರಕ್ಕಾಗಿ ಕುಂದಾಪುರದಲ್ಲಿ ಅದ್ದೂರಿ ಸೆಟ್ ನಿರ್ಮಿಸಿ ಚಿತ್ರೀಕರಣ ನಡೆಸಲಾಗುತ್ತಿದೆ. ಮುಂದಿನ ವರ್ಷದ ಅಕ್ಟೋಬರ್ 2 ರಂದು ಚಿತ್ರ ತೆರೆಗೆ ಬರಲಿದೆ. ಆ ಬಳಿಕ ರಿಷಬ್, ಹನುಮಾನ್ ಚಿತ್ರ ತಂಡವನ್ನು ಸೇರಲಿದ್ದು ಈ ಚಿತ್ರ ಮುಗಿಸಿ ಶಿವಾಜಿ ಅವತಾರ ತಾಳಲಿದ್ದಾರೆ.